ಕರ್ನಾಟಕ ನಾಟಕ ಅಕಾಡೆಮಿ



# ಶತಮಾನದ ಶಕಪುರುಷ

## ಏಣಗಿ ಬಾಳಪ್ಪ

# ಶತಮಾನದ ಶಕಪುರುಷ
## ಏಣಗಿ ಬಾಳಪ್ಪ

ಪ್ರಧಾನ ಸಂಪಾದಕರು
ಎಲ್.ಬಿ. ಶೇಖ (ಮಾಸ್ತರ)

ಸಂಪಾದಕರು
**ಗುಡಿಹಳ್ಳಿ ನಾಗರಾಜ**

**ಕರ್ನಾಟಕ ನಾಟಕ ಅಕಾಡೆಮಿ**
ಬೆಂಗಳೂರು

# SHATAMANADA SHATAPURUSHA
## ENAGI BALAPPA
(A Collection Articles on Enagi Balappa)

Chief Editor
**L.B. Shiek (Master)**

Editor
**Gudihalli Nagaraja**

Published by
**C.H. Bhagya**
Registrar, Karnataka Nataka Academy
Kannada Bhavana, J.C. Road
Bangalore 560 002
Ph. : 080-22237484

© : Writers

First Edition : 2014
Copies : 1000
Pages : xii + 132
Size : Demy 1/8
Paper : N.S. Book Print
Price : Rs. 120/-

Cover page : Siddalingaiah Kanakalamath

Printed at
**Regal Print Service**
Bangalore - 560 026
Mobile : 99643 51655

# ಶತಮಾನದ ಶಕಪುರುಷ
## ಏಣಗಿ ಬಾಳಪ್ಪ
(ಏಣಗಿ ಬಾಳಪ್ಪನವರ ಕುರಿತ ಲೇಖನಗಳು)

ಪ್ರಧಾನ ಸಂಪಾದಕರು
**ಎಲ್.ಬಿ. ಶೇಖ (ಮಾಸ್ತರ)**

ಸಂಪಾದಕರು
**ಗುಡಿಹಳ್ಳಿ ನಾಗರಾಜ**

ಪ್ರಕಾಶಕರು
**ಸಿ.ಹೆಚ್. ಭಾಗ್ಯ**
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨
ದೂ. : ೦೮೦-೨೨೨೩೭೪೮೪

ಹಕ್ಕುಗಳು : ಲೇಖಕರದು

ಮೊದಲ ಮುದ್ರಣ : ೨೦೧೪
ಪ್ರತಿಗಳು : ೧೦೦೦
ಪುಟಗಳು : xii + ೧೩೨
ಆಕಾರ : ಡೆಮಿ ೧/೮
ಕಾಗದ : ಎನ್.ಎಸ್. ಬುಕ್‌ಪ್ರಿಂಟ್
ಬೆಲೆ : ರೂ. ೧೨೦/-

ಮುಖಪುಟ : ಸಿದ್ಧಲಿಂಗಯ್ಯ ಕಣಕಾಲಮಠ

ಮುದ್ರಣ
ರೀಗಲ್ ಪ್ರಿಂಟ್ ಸರ್ವೀಸ್
ಬೆಂಗಳೂರು - ೫೬೦ ೦೨೬
ಮೊಬೈಲ್ : ೯೯೬೪೩ ೫೧೬೫೫

# ನಾಂದಿ

ನಾನು ನಾಟಕ ಅಕಾಡೆಮಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಹೊಸತು. ಕನ್ನಡ ರಂಗಭೂಮಿಯ ನಿರಂತರ ಕ್ರಿಯಾಶೀಲತೆಗೆ ಹೊಸ ಯೋಜನೆಗಳನ್ನು ಕೈಗೊಳ್ಳಬೇಕೆಂಬ ಕನಸುಗಳನ್ನು ಹೊತ್ತಿದ್ದೆ. ಈ ಸಂಬಂಧ ವಾಗಿ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳುವ ಯತ್ನ ನಡೆಸಿದ್ದೆ. ನನ್ನ ಕನಸುಗಳಿಗೆ ಸದಸ್ಯರು ಜೀವ ತುಂಬಿದರು. ನಮ್ಮ ಎಲ್ಲ ಕಾರ್ಯಚಟುವಟಿಕೆಗಳು ಪಾರದರ್ಶಕವಾಗಿರ ಬೇಕು, ಕನ್ನಡ ರಂಗಭೂಮಿಗೆ ಶಾಶ್ವತವಾದ ಕೊಡುಗೆ ಯನ್ನು ನೀಡಬೇಕು ಎಂಬ ಅನಿಸಿಕೆ ಹಲವು ಸದಸ್ಯರ ದಾಗಿತ್ತು. ಹಾಗಾಗಿ ಎಲ್ಲರೂ ಪೂರಕವಾಗಿ ಸ್ಪಂದಿಸಿದರು.

ಹೀಗೆಯೇ ಒಮ್ಮೆ ಅಕಾಡೆಮಿ ಕಚೇರಿಯಲ್ಲಿ ರಿಜಿಸ್ಟ್ರಾರ್ ಸಿ.ಎಚ್.ಭಾಗ್ಯ ಅವರೊಂದಿಗೆ ಮಾತಾಡುತ್ತ ಕುಳಿತಿದ್ದಾಗ ನೂರಾ ಒಂದು ವರ್ಷದ ಏಣಗಿ ಬಾಳಪ್ಪನವರನ್ನು ಯಾಕೆ ಸನ್ಮಾನಿಸಬಾರದು ಎಂಬ ಆಲೋಚನೆ ಹೊಳೆಯಿತು. ರಿಜಿಸ್ಟ್ರಾರ್ ಅವರೇ ಈ ವಿಷಯ ಮೊದಲು ಪ್ರಸ್ತಾಪಿಸಿದರು. ಕನ್ನಡ ರಂಗಭೂಮಿಯ ಭೀಷ್ಮ ಎಂದೇ ಖ್ಯಾತರಾದ ಬಾಳಪ್ಪನವರಿಗೆ ಕನ್ನಡ ರಂಗಭೂಮಿಯ ಬಹುತೇಕ ಎಲ್ಲ ಅತ್ಯನ್ನತ ಪ್ರಶಸ್ತಿಗಳು ಲಭ್ಯವಾಗಿವೆ. ನಾಡಿನಾದ್ಯಂತ ಅವರಿಗೆ ಹಲವು ಸನ್ಮಾನ, ಗೌರವಗಳು ಅರ್ಪಣೆಗೊಂಡಿವೆ.

ಬಾಳಪ್ಪನವರಿಗೆ ನೂರು ತುಂಬಿದ ನೆನಪಿಗೆ 2014ರ ಮಾರ್ಚ್ ತಿಂಗಳಿನಲ್ಲಿ ಬೆಳಗಾವಿಯ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಜ್ಯ ಸರ್ಕಾರದ ಪರವಾಗಿ ಸನ್ಮಾನಿಸಿ ಗೌರವಿಸಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಉಮಾಶ್ರೀ ಅವರೂ ಭಾಗವಹಿಸಿದ್ದರು. ಆ ಸಂದರ್ಭ ದಲ್ಲಿ ನಾಟಕ ಅಕಾಡೆಮಿಗೆ ಅಧ್ಯಕ್ಷ, ಸದಸ್ಯರ ನೇಮಕವಾಗಿರಲಿಲ್ಲ. ಹಾಗಾಗಿ ಕನ್ನಡ ರಂಗಭೂಮಿಯ ಪ್ರಾತಿನಿಧಿಕ ಸಂಸ್ಥೆಯಾದ ನಾಟಕ ಅಕಾಡೆಮಿ ಆಗ ಯಾವುದೇ ಕಾರ್ಯಕ್ರಮ ಮಾಡಲು ಸಾಧ್ಯವಾಗಿರಲಿಲ್ಲ. ಆ ಅವಕಾಶ ಈಗ ನಮಗೆ ಪ್ರಾಪ್ತವಾಯಿತು.

ಕೂಡಲೇ ನಾನು ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಏಣಗಿಗೆ ಹೋಗಿ ಬಾಳಪ್ಪನವರನ್ನು ಭೇಟಿ ಮಾಡಿ ಸನ್ಮಾನಕ್ಕೆ ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿದೆ. ನಾಟಕ ಅಕಾಡೆಮಿಯ ಸನ್ಮಾನ ಎಂಬ ಕಾರಣಕ್ಕೆ ಬಾಳಪ್ಪನವರು ತುಂಬ ಸಂತಸದಿಂದ ಒಪ್ಪಿಕೊಂಡರು. ಪತ್ನಿ ಲಕ್ಷ್ಮೀಬಾಯಿ ದೊಡ್ಡ ಕಲಾವಿದೆ. ಆಕೆಯನ್ನೂ ಕರೆಯಿರಿ. ಜತೆಗೆ ಈಗ ಬದುಕುಳಿದಿರುವ ತಮ್ಮ ಕಲಾವೈಭವ ನಾಟ್ಯ ಸಂಘದ ಎಲ್ಲ ಕಲಾವಿದರನ್ನೂ ಆಹ್ವಾನಿಸಿ ಸನ್ಮಾನಿಸಿರಿ ಎಂದು ಸಲಹೆ ನೀಡಿದರು. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದೆವು.

ಸದಸ್ಯರಾದ ಗುಡಿಹಳ್ಳಿ ನಾಗರಾಜ ಅವರು ಈ ಸಂದರ್ಭಕ್ಕೆ ಒಂದು ಪುಸ್ತಕ ತರೋಣ. ಬಾಳಪ್ಪನವರ ಕುರಿತು ಸಾಕಷ್ಟು ಪುಸ್ತಕಗಳು ಹೊರಬಂದಿವೆ. ಆದರೆ ಈ ಪುಸ್ತಕ ಭಿನ್ನವಾಗಿರಬೇಕು. ಆ ಜವಾಬ್ದಾರಿ ನಾನು ಹೊರುತ್ತೇನೆ ಎಂದು ಮುಂದೆ ಬಂದರು. ಹಾಗಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಸುಂದರವಾದ ಪುಸ್ತಕವನ್ನು ಅವರು ರೂಪಿಸಿದ್ದಾರೆ. ಅವರೊಂದಿಗೆ ಎಲ್ಲ ಸದಸ್ಯರು ಸಹಕರಿಸಿದ್ದಾರೆ. ಬಾಳಪ್ಪನವರನ್ನು ಕುರಿತು ಸಂಕ್ಷಿಪ್ತವಾಗಿ, ಸಾಂದ್ರವಾಗಿ ಪರಿಚಯಿಸಿಕೊಡುವ ಆಕರ ಗ್ರಂಥವಾಗಿ ಇದು ರೂಪುಗೊಂಡಿದೆ. 14 ಜೂನ್ 2014ರಂದು ಧಾರವಾಡದಲ್ಲಿ ಬಾಳಪ್ಪ ನವರನ್ನು ಸನ್ಮಾನಿಸುವ ಈ ಸಂದರ್ಭಕ್ಕೆ ನೆನಪಿನಲ್ಲಿ ಉಳಿಯು ವಂತಹ ಕಾರ್ಯವನ್ನು ಮಾಡಲು ಸಾಧ್ಯವಾದುದದಕ್ಕೆ ನಮಗೆ ಸಂತಸವಾಗಿದೆ. ಬಾಳಪ್ಪನವರ ನೆನಪಿನ ಶಕ್ತಿ ಈಗಲೂ ಕೈಕೊಟ್ಟಿಲ್ಲ. ಇನ್ನೂ ಹಲವು ಕಾಲ ಅವರು ನಮ್ಮೊಂದಿಗೆ ಇರಲಿ. ತಮ್ಮ ಸುದೀರ್ಘ ಅನುಭವ ಗಳನ್ನು ಹಂಚಿಕೊಳ್ಳಲಿ, ಅದರಿಂದ ಕನ್ನಡ ರಂಗಭೂಮಿಗೆ ಒಳಿತಾಗಲಿ.

ಎಲ್.ಬಿ.ಶೇಖ (ಮಾಸ್ತರ)
ಪ್ರಧಾನ ಸಂಪಾದಕರು

14–06–2014

# ತೆರೆ ಏಳುವ ಮುನ್ನ

ಬಾಲನಟರಾಗಿ ರಂಗ ಪ್ರವೇಶಿಸಿ, ಗಾಯಕ ನಟರಾಗಿ ಬೆಳೆದು, ಮೊದಲು ಪಾಲುಗಾರಿಕೆಯಲ್ಲಿ, ನಂತರ ಸ್ವತಂತ್ರ ವಾಗಿ ನಾಟಕ ಕಂಪನಿ ಕಟ್ಟಿ– ನಿರಂತರವಾಗಿ ಎಪ್ಪತ್ತು ವರ್ಷಗಳ ಕಾಲ ವೃತ್ತಿರಂಗಭೂಮಿಯ ಅವಿಚ್ಛಿನ್ನ ಭಾಗವೇ ಆಗಿದ್ದ ಬಾಳಪ್ಪ, ತಮ್ಮ ಕಲಾವೈಭವ ನಾಟ್ಯ ಸಂಘವನ್ನು 1983ರಲ್ಲಿ ಸ್ಥಗಿತಗೊಳಿಸದರಾದರೂ; ನಂತರವೂ ಉಪನ್ಯಾಸ, ಪ್ರಾತ್ಯಕ್ಷಿಕೆ, ರಂಗಗಾಯನ, ನಿರ್ದೇಶನದ ಮೂಲಕ ಒಂದು ಶತಮಾನ ಅವರು ವೃತ್ತಿರಂಗಭೂಮಿ ಗಾಗಿ "ಬಾಳಿ"ದ್ದಾರೆ. ಅವರ ಹಾಡು, ಅಭಿನಯ, ನಿರ್ದೇಶನ, ಸಂಘಟನಾ ಸಾಮರ್ಥ್ಯ ಒಂದು ತೂಕವಾದರೆ, ಅವರ ಸ್ಮರಣ ಶಕ್ತಿಯದೇ ಮತ್ತೊಂದು ತೂಕ. ಉತ್ತರ ಕರ್ನಾಟಕದ ಒಂದು ಶತಮಾನದ ರಂಗ ಚಟುವಟಿಕೆ ಗಳನ್ನು ತಮ್ಮ ಅಗಾಧ ನೆನಪಿನ ಶಕ್ತಿಯಿಂದ ಬಣ್ಣಿಸಬಲ್ಲ ಬಾಳಪ್ಪನವರನ್ನು 'ನಡೆದಾಡುವ ವೃತ್ತಿ ರಂಗಭೂಮಿ' ಎಂದೇ ಕರೆಯಲಾಗುತ್ತದೆ.

ವ್ಯಕ್ತಿಯೊಬ್ಬ ದಂತಕತೆಯಾಗುವುದು, ಗಾದೆಯಾಗು ವುದು ಇತಿಹಾಸದಲ್ಲಿ ವಿರಳ. ಅಂತಹ ವಿರಳಾತಿ ವಿರಳರಲ್ಲಿ

ಒಬ್ಬರು ಬಾಳಪ್ಪ. ಒಂದು ಶತಮಾನ ದಾಟಿಯೂ ನಮ್ಮ ಮಧ್ಯೆ ಅವರು ಕ್ರಿಯಾಶೀಲವಾಗಿ ಬದುಕಿರುವುದೇ ಒಂದು ದಂತಕತೆ.

ಈ ದಂತಕತೆಯ ಸಂಕ್ಷಿಪ್ತ ಪರಿಚಯವನ್ನು ಸಾಂದ್ರವಾಗಿ ಕಟ್ಟಿಕೊಡುವುದೆಂದರೂ, ಅದು ಆಕಾಶವನ್ನು ಅಂಗೈಯಲ್ಲಿಡಿದಿಡುವ ಪ್ರಯತ್ನ. ಹಾಗಾಗಿ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಪ್ರಕಟವಾದ ಲೇಖನಗಳನ್ನು ಮಾತ್ರ ಒಂದೆಡೆ ಸಂಕಲಿಸಿ ಹೊರತರುವುದು ಮೊದಲ ಆಲೋಚನೆಯಾಗಿತ್ತು. ಕೆಲವು ಲೇಖನಗಳನ್ನು ಮುದ್ದಾಂ ಈ ಪುಸ್ತಕಕ್ಕಾಗಿಯೇ ಬರೆಸಬೇಕು ಎಂಬ ಅಂಶ ನಂತರ ಸೇರ್ಪಡೆಯಾಯಿತು. ಸದಸ್ಯ ಮಿತ್ರರಾದ ಕೆ.ಜಗುಚಂದ್ರ ಮತ್ತು ಎಸ್.ಕೆ.ಕೊನೆಸಾಗರ ಅವರು ಈ ವಿಷಯದಲ್ಲಿ ಕೈಗೂಡಿಸಿದರು. ರಂಗಾಸಕ್ತರಿಗೆ ಲೇಖನ ಬರೆಯಲು ಹೇಳಿ ಬೆನ್ನತ್ತಿದರು. ಸಂಗಮೇಶ ಕೋಟಿ ಅವರು ಬಾಳಪ್ಪನವರ ಏಣಗಿಗೇ ಹೋಗಿ ಕೆಲ ಗಂಟೆಗಳ ಕಾಲ ಅವರೊಂದಿಗೆ ಕಳೆದು ಲೇಖನ ಸಿದ್ಧಪಡಿಸಿದರು. ಹಾಗೆಯೇ ಈ ಪುಸ್ತಕಕ್ಕಾಗಿ ಬರೆದ ಪ್ರಕಾಶ ಗರುಡ, ಪ್ರಜ್ಞಾ ಮತ್ತಿಹಳ್ಳಿ, ಡಿ.ಎಸ್.ಚೌಗಲೆ, ಪ್ರೇಮಾ ಬದಾಮಿ, ಹೂಲಿ ಶೇಖರ್, ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ, ಶಿವಾನಂದ ಶೆಟ್ಟರ್, ದೇವದಾಸ ಕಳಸದ ಮುಂತಾದವರ ಲೇಖನಗಳು ಅನೇಕ ಹೊಸ ಅಂಶಗಳಿಂದ ಕೂಡಿವೆ. ಇದುವರೆಗೆ ಪ್ರಕಟವಾಗದ ಹಲವು ವಿಷಯಗಳು ಇಲ್ಲಿವೆ. ಬಾಳಪ್ಪನವರನ್ನು ಒಬ್ಬೊಬ್ಬರೂ ಒಂದೊಂದು ವಿಧದಲ್ಲಿ ಕಂಡಿದ್ದಾರೆ.

ಇನ್ನುಳಿದಂತೆ ಇದುವರೆಗೆ ಏಣಗಿ ಬಾಳಪ್ಪ ಅವರ ಕುರಿತು ವಿವಿಧ ಪತ್ರಿಕೆ, ಪುಸ್ತಕಗಳಲ್ಲಿ ಪ್ರಕಟವಾಗಿರುವ ಲೇಖನಗಳ ಆಯ್ದ ಭಾಗಗಳನ್ನು ತೆಗೆದುಕೊಂಡಿದ್ದೇನೆ. ಒಬ್ಬ ಸಾಧಕನ ಎರಡೆರಡು ಆತ್ಮಕತೆಗಳು ಬಂದಿರುವುದು ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ಖ್ಯಾತಕತೆಗಾರರಾಗಿದ್ದ ದು.ನಿಂ.ಬೆಳಗಲಿ ಅವರು 'ನನ್ನ ಬಣ್ಣದ ಬದುಕು' ಎಂಬ ಆತ್ಮಕತೆಯನ್ನು ಮೊದಲನೆಯದಾಗಿ ರಚಿಸಿದರು, ಪತ್ರಕರ್ತ ಮಿತ್ರ ಗಣೇಶ ಅಮೀನಗಡ ಅವರು 'ಬಣ್ಣದ ಬದುಕಿನ ಚಿನ್ನದ ದಿನಗಳು' ಎಂಬ ಆತ್ಮಕತೆಯನ್ನು ನಂತರ ನಿರೂಪಿಸಿದರು. ಈ ಎರಡು ಆತ್ಮಕತೆಗಳಿಂದ ಸ್ವಾರಸ್ಯಕರವಾದ ಚಿಕ್ಕಚಿಕ್ಕ ಭಾಗಗಳನ್ನು ಎತ್ತಿಕೊಂಡಿದ್ದೇನೆ. ಒಟ್ಟಿನಲ್ಲಿ ಬಾಳಪ್ಪನವರ ಕುರಿತು ಪ್ರಕಟವಾಗಿರುವ ಅಪಾರ ಸಾಹಿತ್ಯರಾಶಿಯನ್ನೆಲ್ಲ ಕಲೆಹಾಕಿಕೊಂಡು ಪ್ರಾತಿನಿಧಿಕವಾಗಿ ಆಯ್ದ ಭಾಗಗಳನ್ನು ಇಲ್ಲಿ ತೆಗೆದುಕೊಂಡಿದ್ದೇನೆ. ಏಣಗಿ ಬಾಳಪ್ಪ ನೆನಪುಗಳಿಂದ... ಎಂಬ ರಾಮಕೃಷ್ಣ ಮರಾಠೆ ಅವರ ಪುಟ್ಟ ಬರಹಗಳನ್ನು ಅಲ್ಲಲ್ಲಿ ಬಳಸಿಕೊಂಡಿದ್ದೇನೆ. ಬಾಳಪ್ಪನವರ ಸಾಹಿತ್ಯದಲ್ಲಿ

ಅಮೂಲ್ಯವಾದ ಕೆಲವು ಸಂಗ್ರಹ ಕಳಿಸಿ ಕೊಡುವಲ್ಲಿ ಬಾಳಪ್ಪನವರ ಪುತ್ರ ಏಣಗಿ ಸುಭಾಷ್ ಅವರು ನೆರವಾಗಿದ್ದಾರೆ.

ಬಾಳಪ್ಪನವರ ಬಹುರೂಪಿ ವ್ಯಕ್ತಿತ್ವವನ್ನು ವಿಶ್ಲೇಷಣಾತ್ಮಕವಾಗಿ ಕಟ್ಟಿಕೊಟ್ಟ ಇಲ್ಲಿನ ಬಹುತೇಕ ಲೇಖನಗಳು ಒಂದು ಆಕರ ಗ್ರಂಥದ ಮೌಲಿಕತೆಯನ್ನು ಹೊಂದಿವೆ. ನಾಟಕ ಅಕಾಡೆಮಿಯೇ ಇಂತಹದೊಂದು ಪುಸ್ತಕವನ್ನು ಹೊಂದಿರಬೇಕು ಎಂಬ ಮಹದಾಸೆಯನ್ನು ಸಾಕಾರಗೊಳಿಸುವ ಪ್ರಯತ್ನ ಇದಾಗಿದೆ. ಸದಸ್ಯರ ಸಹಕಾರದಿಂದ ಇಂತಹದೊಂದು ಪ್ರಯತ್ನ ಯಶಸ್ವಿಯಾಗಿದೆ. ಅಧ್ಯಕ್ಷರಾದ ಶೇಖ ಮಾಸ್ತರ, ಪ್ರಕಟನಾ ಸಮಿತಿಯ ಸಹ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಸಂಪಾದಕೀಯ ನೆರವು ನೀಡಿ ಸಹಕರಿಸಿದ ಏಣಗಿ ಸುಭಾಷ್, ಕೆ.ಜಗುಚಂದ್ರ, ರಿಜಿಸ್ಟ್ರಾರ್ ಸಿ.ಹೆಚ್. ಭಾಗ್ಯ, ಸ್ಥಾಯಿ ಸಮಿತಿ ಸದಸ್ಯರಾದ ಕಲ್ಪನಾ ನಾಗನಾಥ್, ಬಿ.ಎಂ.ರಾಮಚಂದ್ರ, ಎಂ.ಎಸ್.ಗುಣಶೀಲನ್ ಅವರಿಗೆ, ಅಕಾಡೆಮಿಯ ಸ್ವಾಯತ್ತತೆಯಲ್ಲಿ ಹಸ್ತಕ್ಷೇಪ ಮಾಡದ ದಕ್ಷ ಅಧಿಕಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಕೆ.ಎ. ದಯಾನಂದ ಅವರಿಗೆ, ಸಕಾಲಕ್ಕೆ ಬಾಳಪ್ಪನವರ ಚಿತ್ರಗಳನ್ನು ಒದಗಿಸಿಕೊಟ್ಟ ಬಿ.ಎಂ. ಕೇದಾರನಾಥ, ಮಹಾಮನೆ, ಸುಭಾಷ್ ಅವರಿಗೆ, ಅಂದವಾದ ಮುಖಪುಟ ರಚಿಸಿಕೊಟ್ಟ ಸಿದ್ದಲಿಂಗಯ್ಯ ಕಣಕಾಲಮಠ ಅವರಿಗೆ, ತ್ವರಿತವಾಗಿ ಮುದ್ರಿಸಿಕೊಟ್ಟ ರೀಗಲ್ ಪ್ರಿಂಟ್ಸ್‌ನ ವೆಂಕಟೇಶ್ ಅವರಿಗೆ ನೆನೆನಕೆಗಳು.

**ಗುಡಿಹಳ್ಳಿ ನಾಗರಾಜ**
ಸಂಪಾದಕರು

# ಕರ್ನಾಟಕ ನಾಟಕಅಕಾಡೆಮಿ

ಅಧ್ಯಕ್ಷರು

ಎಲ್.ಬಿ.ಶೇಖ (ಮಾಸ್ತರ)

ಸದಸ್ಯರು

ಎನ್.ಕೆ.ರಾಮಕೃಷ್ಣ

ವಿ.ಎನ್.ಅಕ್ಕಿ

ಕಲ್ಪನಾ ನಾಗನಾಥ್

ಬಿ.ಎಂ.ರಾಮಚಂದ್ರ

ಎಂ.ಉಮೇಶ ಸಾಲಿಯಾನ

ಹೆಚ್.ಷಡಾಕ್ಷರಪ್ಪ ಹೊಸಮನಿ

ಎಸ್.ಕೆ.ಕೊನೆಸಾಗರ

ಅನ್ನಪೂರ್ಣ ಸಾಗರ

ಎ.ವರಲಕ್ಷ್ಮಿ

ಹಾಲ್ಕುರಿಕೆ ಶಿವಶಂಕರ್

ರಾಜಪ್ಪಕಿರಗಸೂರು

ಎಂ.ಎಸ್.ಗುಣಶೀಲನ್

ಮುದ್ದಣ್ಣ ರಟ್ಟೆಹಳ್ಳಿ

ಕೆ.ಜಗುಚಂದ್ರ

ಪಿ.ತಿಪ್ಪೇಸ್ವಾಮಿ

ಗುಡಿಹಳ್ಳಿ ನಾಗರಾಜ

ಡಾ.ಶ್ರೀಪಾದ ಭಟ್

ಎಲ್.ಹೆಚ್.ರಂಗನಾಥಪ್ಪ

ಜಂಟಿ ನಿರ್ದೇಶಕರು : ಬಲವಂತರಾವ್ ಪಾಟೀಲ

ರಿಜಿಸ್ಟ್ರಾರ್ (ಪ್ರ) : ಸಿ.ಹೆಚ್.ಭಾಗ್ಯ

ಗೆಜಿಟೆಡ್ ಮ್ಯಾನೇಜರ್ : ಮಹದೇವಪ್ಪ

ಪ್ರಕಟನಾ ಸಮಿತಿ : ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ
ಗುಡಿಹಳ್ಳಿ ನಾಗರಾಜ

ಕಚೇರಿ ಸಿಬ್ಬಂದಿ : ಕೆ.ರೇವಣ್ಣ, ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

ಒಳಗೆ

1. ಶತಮಾನದ ಸಡಗರ / *ಡಾ. ರಾಮಕೃಷ್ಣ ಮರಾಠೆ* / 1

2. ಮಾತುಗಳಲ್ಲಿ ರಂಗಭೂಮಿ ಇತಿಹಾಸ / *ಸಂಗಮೇಶ ಕೋಟಿ* / 7

3. ವಾಸ್ತವ ರಂಗವಿನ್ಯಾಸದ 'ವೈಭವಶಾಲಿ' 'ಕಲಾವೈಭವ'! / *ಡಾ. ದೇವದಾಸ ಕಳಸದ* / 12

4. ನಾಟಕದವರಿಗೆ ಇಷ್ಟೊಂದು ಮನ್ನಣೆಯೆ? / *ಪ್ರೇಮಾ ಬದಾಯಿ* / 21

5. ಏಣಗಿ ಬಾಳಪ್ಪ, ಗಾಂಧೀಜಿ ಹಾಗೂ ಸ್ವಾತಂತ್ರ್ಯ ಚಳುವಳಿ / *ಡಾ. ಶಿವಾನಂದ ಶೆಟ್ಟರ* / 24

6. ವೈವಿಧ್ಯಮಯ, ಬಹುರೂಪಿ ನಟ / *ಡಾ. ಪ್ರಕಾಶ ಗರುಡ* / 30

7. ಅಮೋಘ ಅಭಿನಯದ ಸ್ತ್ರೀ ಪಾತ್ರಗಳು / *ಪ್ರೊ॥ ಬಿ.ಎಸ್. ಗವಿಮಠ* / 36

8. ತಾಕತ್ತಿನ ರಂಗಗಾಯಕ / *ಡಿ.ಎಸ್. ಚೌಗಲೆ* / 38

9. ಅಪ್ಪನ ಹೆಗಲ ಮೇಲೆ ಕೂತು ಬಾಳಪ್ಪನ ನೋಡಿದೆ / *ಹೂಲಿ ಶೇಖರ್* / 43

10. ಶತಮಾನ ಬೆಳಗಿದ ರಂಗಜಗಜ್ಯೋತಿ / *ಪ್ರಜ್ಞಾ ಮತ್ತಿಹಳ್ಳಿ* / 50

11. ಮಧುರ ಕಂಠ, ಕುಗ್ಗದ ದೇಹ, ಮಾಸದ ಅಭಿನಯ / *ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ* / 57

12. ಬಾಳಪ್ಪ ಎಂಬ ಸವ್ಯಸಾಚಿ / *ಡಾ. ಬಸವರಾಜ ಜಗಜಂಪಿ* / 65

13. ನೂರು ವರುಷ ನೂರಾರು ಚಿತ್ರ / *ಬಸವರಾಜ ಹೊಂಗಲ್* / 67

14. ಸೋಲೊಪ್ಪದ ಛಲಗಾರ / *ಎಚ್ಚೆಸ್ಕೆ* / 71

15. ಅವರು ಮರಾಠರ ಬೆದರಿಕೆಗೆ ಜಗ್ಗಲಿಲ್ಲ / *ಎಂ.ಕೆ. ಹೆಗಡೆ* / 73

16. ವೃತ್ತಿ ರಂಗಭೂಮಿಯ ದಿವ್ಯ ಕುತೂಹಲ / *ಮಲ್ಲಿಕಾರ್ಜುನ ಕಡಕೋಳ* / 77

17. ತುಂಬು ಆರೋಗ್ಯದ ರಹಸ್ಯಗಳು / *ವೈ.ಬಿ. ಕಡಕೋಳ* / 80

18. ಈ ಶತಮಾನದ ಸ್ಮರಣೀಯ ವ್ಯಕ್ತಿ / *ಶೂದ್ರ ಶ್ರೀನಿವಾಸ್* / 83

19. ಪರಾಕಯ ಪ್ರವೇಶ ಮಾಡುವ ನಟಸಾಮ್ರಾಟ / *ರಾಜು ಉಸ್ತಾದ್* / 87

20. ಬಣ್ಣದ ಬದುಕಿನ ಲೋಕೂರು ಬಾಳಪ್ಪನವರು / *ಡಾ. ಶಿವಗೌಡಾ ಬಾ. ಪಾಟೀಲ* / 91

21. ಇಂಥ ಪುಣ್ಯಾತ್ಮನಿಗೆ ಇನ್ನೂ ಪದ್ಮಪ್ರಶಸ್ತಿ ಇಲ್ಲ–ದುರಂತ / *ಮಾಸ್ತರ್ ಹಿರಣ್ಣಯ್ಯ* / 94

22. ವೃತ್ತಿ, ಹವ್ಯಾಸಿ ಕೊಂಡಿ 'ಮ್ಯಾಳ' / *ಪ್ರೊ. ಚಂದ್ರಶೇಖರ ಪಾಟೀಲ* / 96

23. ಸಾಷ್ಟಾಂಗ ಮಾಡಿದ ಸ್ವಾಮೀಜಿ! / *ಏಣಗಿ ಬಾಳಪ್ಪ* / 98

24. ಪ್ರಚಾರದಿಂದ ಪರದಾಟ! / *ಏಣಗಿ ಬಾಳಪ್ಪ* / 103

25. ಅಪ್ರತಿಮ ಚೆಲುವೆಯ ಹಿತಮಿತ ಅಭಿನಯ / *ಗುಡಿಹಳ್ಳಿ ನಾಗರಾಜ* / 106

26. ನಟನೆಂದರೆ ನೀನೇ 'ನಟರಾಜ' / *ನಾಗು* / 110

27. ಶಕ ಪುರುಷ ! ಅತೀ ಹರುಷ / *ಕೆ.ಜಗುಚಂದ್ರ* / 114

28. ನಾಡು ಕಂಡ ನಾಟಕರತ್ನ / *ಎಸ್.ಎಸ್. ಚಿಕ್ಕಮಠ* / 115

28. **Tower amid crumbling theatre companies /**
*G.N. Mohan* / 116

29. **The grand old man of Kannada theatre /**
*Shubha Srikanth* / 119

30. **Portrait of the artist as a young woman /**
*Gudihalli Nagaraja* / 124

31. **25 years on, 96-yr-old commands the stage** / 129

32. ಪ್ರಮುಖ ಘಟನಾವಳಿಗಳು / 131

❖ ❖ ❖



# ಶತಮಾನದ ಸಡಗರ

● ಡಾ. ರಾಮಕೃಷ್ಣ ಮರಾಠೆ

> ನಾಟಕ ಆಡಿ ಹಾಳಾದೆ ಎಂದು ಹೇಳುವವರ ಎದುರು, ನಾಟಕ ಆಡಿ ಬೆಳೆದೆ ಎಂದು ಹೇಳಲು ನನಗೆ ಹೆಮ್ಮೆ ಅನಿಸುತ್ತದೆ.

1995 ಏಣಗಿ ಬಾಳಪ್ಪನವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಬಂದ ವರ್ಷ. ಅವರು ಈಗ ತಾನೆ ಎಂಬತ್ತರ ಗಡಿ ದಾಟಿದ್ದ ತರುಣ. ಅವರ ಉತ್ಸಾಹ ಕುಗ್ಗಿರಲಿಲ್ಲ. ರಂಗ ಚಟುವಟಿಕೆಗಳು ನಿಂತಿರಲಿಲ್ಲ. ಆ ಸಂದರ್ಭದಲ್ಲಿ ನಾಡಿನ ಜನರ ಪರವಾಗಿ ಅಭಿನಂದಿಸಬೇಕೆಂದು ಹಿರಿಯ ಸಾಹಿತಿ ಎನ್ಕೆ ಕುಲಕರ್ಣಿಯವರು 'ಬಾಳಪ್ಪ ನೂರು ವರುಷ ಬಾಳಪ್ಪ' ಎಂದು ದೀರ್ಘ ಲೇಖನ ಬರೆದಿದ್ದರು. ಎನ್ಕೆ ಅವರ ಹಾರೈಕೆ ನಿಜವಾಗಿದೆ. ಬಾಳಪ್ಪ ನವರಿಗೆ ಈಗ ನೂರು ದಾಟಿದ ಸಂಭ್ರಮ. ರಂಗಭೂಮಿಯ ಭೀಷ್ಮ, ನಾಟ್ಯಭೂಷಣ, ಗುಬ್ಬಿ ವೀರಣ್ಣ ಪ್ರಶಸ್ತಿ, ಗೌರವ ಡಾಕ್ಟರೇಟ್, ನಾಡೋಜ ಇತ್ಯಾದಿ ಪದವಿ, ಪ್ರಶಸ್ತಿಗಳ ಗೌರವಕ್ಕೆ ಪಾತ್ರರಾದ ಬಾಳಪ್ಪ ಕನ್ನಡ ರಂಗಭೂಮಿಯ ದೊಡ್ಡ ಆಸ್ತಿ. ಅವರ ಗಾಢವಾದ ರಂಗಪ್ರಜ್ಞೆಯಿಂದ, ದೇಶ

ಕಾಲದ ಅಗತ್ಯವಾಗಿ ಅವರ ಕಂಪನಿಯಿಂದ ಮೂಡಿ ಬಂದ ನಾಟಕಗಳಿಂದ, ಅವರೇ ರೂಪಿಸಿದ ನಟ ನಟಿಯರಿಂದ, ರಂಗಸಂಗೀತ ಪುನರುಜ್ಜೀವನಕ್ಕಾಗಿ ಮಾಡಿದ ಚಟುವಟಿಕೆಗಳಿಂದ, ರಂಗಭೂಮಿ ಚರಿತ್ರೆಯ ಅಗಾಧವಾದ ನೆನಪಿನ ಶಕ್ತಿಯಿಂದ ನಮ್ಮ ರಂಗಭೂಮಿಗೆ ಸಾಕಷ್ಟು ಲಾಭವಾಗಿದೆ.

ನಾಟಕಕಲೆ ಅವಲಂಬಿಸಿ ಬದುಕಬೇಕೆನ್ನುವವರಿಗೆ ಅವರು ಅದ್ಭುತ ಸ್ಫೂರ್ತಿ. 'ನಾಟಕದವರು ಇದ್ದರೆ ಹೀಗಿರಬೇಕು' ಎಂದು ತೋರಿಸಲು ಅವರೊಂದು ಮಾದರಿ. ಕಳೆದೆರಡು ದಶಕಗಳ ನಿಕಟ ಸಂಪರ್ಕದಲ್ಲಿ ಅವರ ಶಿಸ್ತಿನ, ನಿಯಮಿತ ದಿನಚರಿ ಕಂಡು ಬೆರಗಾಗಿದ್ದೇನೆ. ಕುಡಿಯಲು ಕಾಸಿ ಆರಿಸಿದ ನೀರೇ ಬೇಕು. ಊಟಕ್ಕೆ ಒಂದು ರೊಟ್ಟಿ ಇಲ್ಲವೆ ಒಂದು ಚಪಾತಿ, ಒಂದು ಬಟ್ಟಲಷ್ಟು ಅನ್ನ, ಸೊಪ್ಪಿನ ಪಲ್ಲೆ. ನಾಟಕದ ಹರಟೆ ಅವರಿಗೆ ರಸಗವಳ. ಬೇಗ ಮಲಗಿ ಬೇಗ ಏಳುವ ದಿನಚರಿ. ಎದ್ದ ಮೇಲೆ ಸಣ್ಣ ವ್ಯಾಯಾಮ. ಹೀಗೆ 'ಹಿತ ಮಿತ' ಸೂತ್ರದ ವ್ಯಕ್ತಿರೂಪವೇ ಅವರು. ಖಾದಿ ಶುಭ್ರವಾದ ಅಂಗಿ, ಅಷ್ಟೇ ಶುಭ್ರವಾದ ಧೋತರ, ತಲೆಗೆ ಒತ್ತಿ ಸುತ್ತಿದ ಗರಿ ಗರಿ ರುಮಾಲು, ಈ ಬಿಳಿ ವೇಷದಲ್ಲಿ ಎದ್ದುಕಾಣುವ ಗುಲಾಬಿ ಮೈಬಣ್ಣ. ನಗುಮುಖ, ತೇಜ ಪುಂಜ ಕಣ್ಣುಗಳು 'ಇವರು ಕಲಾವಿದರೇ ಇರಬೇಕು' ಎಂದು ಯಾರಾದರೂ ಗುರುತಿಸಬಹುದಾದಂಥ ಗತ್ತಿನ ನಡೆ ನುಡಿ. ಹೀಗಿರುವ ಬಾಳಪ್ಪ ನಾಟಕದಲ್ಲಿ ಬಿದ್ದು ಸಂಸಾರ ಮರೆಯಲಿಲ್ಲ. ಸಂಸಾರದಲ್ಲಿ ಇದ್ದು ನಾಟಕ ಮರೆಯಲಿಲ್ಲ. ಎರಡನ್ನೂ ಈಸಿ ಜಯಿಸಿದವರು.

ಬಾಳಪ್ಪ ರಂಗಭೂಮಿಯ ನಟರಾಗಿ ಬೆಳೆದದ್ದು ತೀರಾ ಆಕಸ್ಮಿಕ. ಅವರೇ ಹೇಳಿದ ಮಾತು: ಬಾಲ್ಯದಲ್ಲಿ ನಾನು ನಟನಾಗಬೇಕೆಂದು ಕನಸು ಕಂಡವನಲ್ಲ. ನಟನಾದ ಮೇಲೆ ನಾಟಕ ಕಂಪನಿ ಕಟ್ಟಲು ಪರದಾಡಿದವನೂ ಅಲ್ಲ. ಆದರೆ ಎರಡನ್ನೂ ಮಾಡಿದೆ. ಹೇಗೆಂದರೆ 'ಆಕಸ್ಮಿಕ' ಎಂದೇ ಹೇಳಬೇಕಾಗುತ್ತದೆ. ಹಾಗೆಂದು ಪರಿಸ್ಥಿತಿಗಿರುವ ಹಿನ್ನೆಲೆಯನ್ನು ಅಲ್ಲಗಳೆಯುತ್ತೇನೆಂದು ಅರ್ಥವಲ್ಲ. ಯಾವುದೇ ವಿಷಯದ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮೊದಲಿಗೆ ಪರಿಸ್ಥಿತಿಯೇ ನಿರ್ಣಯಿಸಿ ಬಿಡುತ್ತಿತ್ತು. ಆಗ 'ಪಾಲಿಗೆ ಬಂದದ್ದು ಪಂಚಾಮೃತ' ಎಂದು ಸ್ವೀಕರಿಸಿದ್ದೇನೆ ಅಷ್ಟೆ ಎಂಬ ವಿನೀತ ಭಾವ ಅವರದು.

ಮನೆತನದ ಕರಿಬಸಪ್ಪ–ಬಾಳಮ್ಮ ದಂಪತಿಗಳ ಮೂರನೆಯ ಮಗನಾಗಿ ಜನಿಸಿದರು ಬಾಳಪ್ಪ. ಬಾಲ್ಯ ಸುಖರೂಪವಾಗಿರಲಿಲ್ಲ. ಮೂರನೆ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಆ ಮೇಲೆ ಐದಾರು ವರ್ಷಗಳಲ್ಲಿ ಅಣ್ಣನನ್ನು ಕಳೆದುಕೊಂಡರು. ಇಂಥ ಆಘಾತಗಳಿಂದ ತಾಯಿಯ ಮುಖ ನೋಡುತ್ತ ಮಗ, ಮಗನ ಮುಖ ನೋಡುತ್ತ ತಾಯಿ ಹೇಗೆ ದಿನಗಳನ್ನು ನೂಕಿದರೆಂಬುದು ಕರುಳು ಹಿಂಡುವ ಕಥೆ. ಅಂಥ ಸ್ಥಿತಿಯಲ್ಲಿ ದುಃಖ ಮರೆಯುವುದಕ್ಕಾಗಿಯೇ ಬಾಳಪ್ಪ ತಾಯಿಯ ಮಡಿಲಿನಿಂದ ರಂಗಭೂಮಿ ಅಂಗಳಕ್ಕೇ ಹೆಜ್ಜೆ ಹಾಕಿದರು. ಸುಂದರ ರೂಪ, ಮಧುರ ಕಂಠದಿಂದಾಗಿ ಇವರ ಪಾತ್ರಗಳು

ನೋಡುವವರಿಗೆ ಚೇತೋಹಾರಿಯೆನಿಸಿದವು. 'ಭಕ್ತ ಮಾರ್ಕಂಡೇಯ' ಬಯಲಾಟದಲ್ಲಿ ಗಣಪತಿ, 'ಪಾದುಕಾ ಪಟ್ಟಾಭಿಷೇಕ'ದಲ್ಲಿ ಭರತ ಪಾತ್ರಗಳು ಬಾಲಕ ಬಾಳಪ್ಪನಿಗೆ ನಟನೆಯ ಗುಂಗು ಹಿಡಿಸುವಷ್ಟು ಯಶಸ್ವಿಯಾದವು. ಅಲ್ಲಿಂದ ಬೈಲಹೊಂಗಲದಲ್ಲಿ ಬೀಡು ಬಿಟ್ಟಿದ್ದ ಹುಕ್ಕೇರಿ ನಾಯಕರ ನಾಟಕ ಕಂಪನಿ ಪ್ರವೇಶ. ಅಲ್ಲಿ ಹೆಸರಾಂತ ನಾಟಕಕಾರ, ನಟ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು ಗುರುಗಳಾಗಿ ಸಿಕ್ಕರು. ಅವರ ಗರಡಿಯಲ್ಲಿ ಬಾಳಪ್ಪನವರ ನಟನ ವ್ಯಕ್ತಿತ್ವ ಗರಿಗೆದರಿತು. ನಾಟಕವೇ ಜೀವನದ ಮುಖ್ಯ ಧ್ಯೇಯವಾಗಿ ಪರಿಣಮಿಸಿತು. ಮಗನು ಸಂತೋಷವಾಗಿದ್ದರೆ ಸಾಕು ಎಂದು ತಾಯಿ ಬೆನ್ನು ತಟ್ಟಿದಳು. ಕಂಪನಿಯಿಂದ ಕಂಪನಿಗೆ, ಪಾತ್ರದಿಂದ ಪಾತ್ರಕ್ಕೆ ಬಾಳಪ್ಪನವರ ರಂಗಯಾತ್ರೆ ಪ್ರಾರಂಭವಾಯಿತು.

ಕನ್ನಡ ರಂಗಭೂಮಿ ಹೊರಳು ದಾರಿಯಲ್ಲಿದ್ದ ಕಾಲವದು. ಸಾಗ್ರ ಸಂಗೀತ ನಾಟಕಗಳು ಗದ್ಯಕ್ಕೆ ಮುಖ ಮಾಡಿದ್ದವು. ನಾಟಕವೆಂಬುದು ಬರೀ ಸಂಗೀತ ಪ್ರಧಾನವಲ್ಲ. ಅದು ಅಭಿನಯ ಪ್ರಧಾನ, ಸಂಭಾಷಣೆ ಪ್ರಧಾನ ಎಂಬುದನ್ನು ಗರುಡ ಸದಾಶಿವರಾಯರು ಹೇಳುತ್ತಿದ್ದರು. ಕಂದಗಲ್ಲ ಹನುಮಂತರಾಯರು ಆ ತರಹದ ನಾಟಕಗಳನ್ನು ಬರೆಯುತ್ತಿದ್ದರು. ಆಗ ನಟನಾದವನು ಹಾಡು ಅಭಿನಯ ವಾಚಿಕ ಕರಗತ ಮಾಡಿಕೊಳ್ಳಬೇಕಾಗಿತ್ತು. ನಾಟಕರಂಗ ಪ್ರತಿಭಾವಂತ ನಟರ ಆಡುಂಬೊಲವಾಗಿದ್ದ ಕಾಲವದು. ಬಾಳಪ್ಪನವರು ಚಿಕ್ಕೋಡಿ ಶಿವಲಿಂಗ ಸ್ವಾಮಿಗಳಿಂದ ಅಭಿನಯ, ಬೇವೂರ ಬಾದಶಹಾ ಮಾಸ್ತರರಿಂದ ಸಂಗೀತ ಕಲಿತರು. ಜೊತೆಗೆ ಹಿರಿಯ ರಂಗನಟರಾಗಿದ್ದ ವಾಮನರಾವ್ ಮಾಸ್ತರ್, ಬಸವರಾಜ ಮನಸೂರ, ಹಂದಿಗನೂರ ಸಿದ್ರಾಮಪ್ಪ, ಹಮ್ಮಿಗಿ ನೀಲಕಂಠಪ್ಪ ಅವರ ಪಾತ್ರಗಳನ್ನು ನೋಡುತ್ತ, ಅವರ ನಟನೆಯ ಪಾಠಗಳಿಂದಲೂ ಸಾಕಷ್ಟು ಕಲಿತರು. ಇದರಿಂದ ಸಂಗೀತ, ಅಭಿನಯ, ಸ್ತ್ರೀಪಾತ್ರ, ಪುರುಷಪಾತ್ರ ಯಾವುದೇ ಇರಲಿ ಅದನ್ನು ಚೆನ್ನಾಗಿ ನಿರ್ವಹಿಸುವ ಕಲೆಗಾರಿಕೆ ಸಾಧಿಸಿದರು.

ಕಿತ್ತೂರು ರುದ್ರಮ್ಮ, ಹೇಮರೆಡ್ಡಿ ಮಲ್ಲಮ್ಮ, ಕಡ್ಲಿಮಟ್ಟಿ ಕಾಶೀಬಾಯಿ, ಪತಾಣ ಪಾಶದಲ್ಲಿ ವೃಂದಾ, ಕುಂಕುಮದಲ್ಲಿ ಅಶ್ವಿನಿ ಬಾಳಪ್ಪನವರಿಗೆ ಕೀರ್ತಿ ತಂದುಕೊಟ್ಟ ಪಾತ್ರಗಳು.

ಸ್ತ್ರೀಪಾತ್ರಗಳಲ್ಲಿಯ ಇವರ ನಯ ನಾಜೂಕಿನ ಅಭಿನಯ ಪ್ರೇಕ್ಷಕರನ್ನು ಮರಳು ಮಾಡಿತ್ತು. ಇವರ ಮಲ್ಲಮ್ಮ ಪಾತ್ರದ ಖ್ಯಾತಿ ಎಷ್ಟಿತ್ತೆಂದರೆ ಅದೊಂದೇ ಪಾತ್ರ ಮಾಡುವುದಕ್ಕೆ ಅತಿಥಿ ನಟರಾಗಿ ಕಂಪನಿಯಿಂದ ಕಂಪನಿಗೆ ಅಲೆದಾಡಿದರು. ಗುರುಗಳು ಕಟ್ಟಿದ್ದ ಕಂಪನಿಗಳಲ್ಲದೆ ಜಮಖಂಡಿ ಕಂಪನಿ, ಗೋಕಾಕ ಕಂಪನಿ, ಸಂಪಗಾವಿ ಕಂಪನಿಗಳಲ್ಲಿಯೂ ಪಾತ್ರಗಳನ್ನು ಮಾಡಿದರು. ಬಾಳಪ್ಪನವರು ಶಾಲೆಗೆ ಹೋಗಿ ಕಲಿತದ್ದು ಕಡಿಮೆ. ನಾಟಕ ಕಂಪನಿಗಳಲ್ಲಿ ಕಲಿತದ್ದು ಬಹಳ. ಕಂಪನಿಯಲ್ಲಿ ಕಲಾವಿದನ ಸ್ವಾತಂತ್ರ್ಯ ಕಡಿಮೆ. ನಾಟಕದ ಆಯ್ಕೆ, ಅದರ ನಿರ್ವಹಣೆ, ನಿರ್ದೇಶನದಲ್ಲಿ ಮಾಲೀಕರ ನಿರ್ಣಯವೇ ಮಹತ್ವವಾಗಿರುತ್ತಿತ್ತು. ಕಲಾವಿದನಾಗಿ ಬೆಳೆದಿದ್ದ ಇವರಿಗೆ ಮಾಲೀಕನಾಗುವ, ಆ ಮೂಲಕ ರಂಗಭೂಮಿಗೆ ಏನಾದರೂ ಕೊಡಬೇಕೆನ್ನುವ ಹಂಬಲ ಒಳಗೊಳಗೇ ಬೆಳೆಯಿತು.

ಒಂದು ಸಲ ಚಿಕ್ಕೋಡಿ ಶಿವಲಿಂಗಸ್ವಾಮಿಗಳ ಕಂಪನಿ ನಿಲ್ಲಲು, ಅಲ್ಲಿಯ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಸೂಡಿ ಹುಚ್ಚಪ್ಪ ಎಂಬ ಕಲಾವಿದರನ್ನು ಕರೆದುಕೊಂಡು ಕಂಪನಿ ಕಟ್ಟಿದರು. ಮತ್ತೊಂದು ಸಲ ಮೂವರು ಗೆಳೆಯರನ್ನು ಕೂಡಿಕೊಂಡು 'ವೈಭವಶಾಲಿ' ಹೆಸರಿನಿಂದ ಕಂಪನಿ ಕಟ್ಟಿದರು. ಭಿನ್ನಾಭಿಪ್ರಾಯಗಳಿಂದ ಎರಡೂ ಕಂಪನಿಗಳು ಬಹಳ ದಿನ ನಡೆಯಲಿಲ್ಲ. ಈ ಅನುಭವದಿಂದ ಸ್ವಂತ ಕಂಪನಿ ಕಟ್ಟಬೇಕೆಂದು ನಿರ್ಧರಿಸಿದರು. 1947ರಲ್ಲಿ 'ಕಲಾ ವೈಭವ ನಾಟ್ಯ ಸಂಘ'ವನ್ನು ಪ್ರಾರಂಭಿಸಿದರು. ನಾಟಕ ಕಂಪನಿಗಳ ಮೇಲೆ ಸಮಾಜದ ಋಣ ಬಹಳ. ಅದನ್ನು ತೀರಿಸಲು ಕಂಪನಿಗಳು ಸಮಾಜಕ್ಕೆ ಬೇಕಾಗುವಂಥ ನಾಟಕಗಳನ್ನು ಆಡಬೇಕು ಎಂದು ಗುರು ಚಿಕ್ಕೋಡಿ ಗುರು ಶಿವಲಿಂಗ ಸ್ವಾಮಿಗಳು ಹೇಳುತ್ತಿದ್ದರು. ಅವರ ಮಾತು ಬಾಳಪ್ಪನವರಿಗೆ ಮಂತ್ರ. ಹಾಗಾಗಿ ರಂಗಭೂಮಿ ಮೂಲಕ ಏನೇನು ಮಾಡಬೇಕೆಂದು ಯೋಚಿಸಿದ್ದರೋ ಅವನ್ನೆಲ್ಲ ಸಾಧಿಸಲು ಕಲಾವೈಭವವು ಅವರಿಗೆ ಪ್ರಯೋಗರಂಗ ವಾಯಿತು.

ನಾಟಕ ಕಂಪನಿ ಅನ್ನೋದು ವಿದ್ಯಾಲಯ. ಅಲ್ಲಿ ಶಿಸ್ತು ಇರಬೇಕು, ನೀತಿ ಇರಬೇಕು. ಕಲಾವಿದರ ತಪಸ್ಸು ಇರಬೇಕು ಎಂದು ನಂಬಿದ್ದರು ಬಾಳಪ್ಪ. ಸ್ವತಃ ಅವರು ನಿರ್ವ್ಯಸನಿ, ಆದರ್ಶವಾದಿ. ಕಂಪನಿಯ ಇತರ ಕಲಾವಿದರೂ ಹಾಗೆಯೇ ಇರಬೇಕೆಂದು ಬಯಸುತ್ತಿದ್ದರು. ಕಂಪನಿ ನಾಟಕಗಳು ಕೇವಲ ಮನೋರಂಜನೆ ನೀಡಬಾರದು. ಜೀವನ ಪಾಠಗಳನ್ನು ಬೋಧಿಸಬೇಕು ಎಂಬ ನಿಲುವು ಅವರದು.

ಪಾಲುದಾರಿಕೆ ಸಂಸ್ಥೆ ಇದ್ದಾಗ ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಆಗ ಕಿತ್ತೂರು ಚನ್ನಮ್ಮ, ಚಲೇಜಾವ್ ನಾಟಕಗಳನ್ನಾಡಿ ಹೋರಾಟಗಾರರಿಗೆ ಸ್ಫೂರ್ತಿ ತುಂಬಿದ್ದರು. ಭೂಗತ ಹೋರಾಟಗಾರರಿಗೆ ಕಂಪನಿಯಲ್ಲಿ ಆಸರೆ ಕೊಟ್ಟರು. ಕಲಾವೈಭವ ಹುಟ್ಟುವ ವೇಳೆಗೆ ದೇಶ ಸ್ವತಂತ್ರವಾಗಿತ್ತು. ಆದರೆ, ಏಕೀಕರಣ ಚಳವಳಿ ಜೋರಾಗಿತ್ತು. ಆಗ ಏಕೀಕರಣ ನಾಟಕ ಬರೆಯಿಸಿ ಆಡಿಸಿದರು. ಬೆಳಗಾವಿಗಾಗಿ ಮಹಾರಾಷ್ಟ್ರದವರು ತಕರಾರು ಮಾಡುತ್ತಿದ್ದಾಗ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಕಂಪನಿಯ ಹೆಸರಿರುವ ಫ್ರೇಮಿನ ಮೇಲೆ 'ಕಲಾವೈಭವ ನಾಟ್ಯ ಸಂಘ', ಬೆಳಗಾವಿ (ಕರ್ನಾಟಕ ರಾಜ್ಯ) ಎಂದು ಬರೆಯಿಸಿದ್ದರು. ಅದಕ್ಕಾಗಿ ಕಷ್ಟ ನಷ್ಟ ಅನುಭವಿಸಿದರು. ಕೊಲೆ ಬೆದರಿಕೆಯನ್ನು ಎದುರಿಸಿದರು. ಆದರೆ, ತಮ್ಮ ನಿಲುವು ಬದಲಿಸಲಿಲ್ಲ. ನಾಟಕದ ಮೂಲಕ ಸ್ವಾತಂತ್ರ್ಯ ಚಳವಳಿಗೆ, ನಾಡು-ನುಡಿ ಸೇವೆ ಹೇಗೆ ಮಾಡಬಹುದು ಎಂದು ಬಾಳಪ್ಪ ತೋರಿಸಿ ಕೊಟ್ಟರು.

ಕಲಾವೈಭವ ಕಂಪನಿಗಾಗಿ ತಾವೇ ಕಥೆ ಹೇಳಿ ಹೊಸ ಹೊಸ ನಾಟಕಗಳನ್ನು ಬರೆಯಿಸಿದರು. ಅಂಥವುಗಳಲ್ಲಿ ಶಾಲಾ ಮಾಸ್ತರ, ಗೋರಾ ಕುಂಬಾರ, ಜೈ ಪದ್ಮಾವತಿ, ಮಾವ ಬಂದ್ನಪೋ ಮಾವ, ದೇವರ ಮಗು ಪ್ರಮುಖವಾಗಿವೆ. ಯಾವ ಊರಲ್ಲಿ ಯಾವ

ನಾಟಕ ಆಡಬೇಕು? ಎಂಬುದರ ಲೆಕ್ಕಾಚಾರವೂ ಚೆನ್ನಾಗಿ ಗೊತ್ತಿತ್ತು. ಹೀಗಾಗಿ ಕಲಾ ವೈಭವದ ನಾಟಕಗಳಿಗೆ ಪ್ರೇಕ್ಷಕರ ಕೊರತೆ ಕಾಣಲಿಲ್ಲ. ಕಲಾವೈಭವದ ಮೂಲಕ ಬಾಳಪ್ಪನವರು ಕನ್ನಡ ರಂಗಭೂಮಿಗೆ ಕೊಟ್ಟ ಕೊಡುಗೆಗಳಲ್ಲಿ ಎರಡನ್ನು ಮರೆಯಲು ಸಾಧ್ಯವಿಲ್ಲ. ಒಂದು ಬಸವೇಶ್ವರ ನಾಟಕ. ಎರಡು ಏಣಗಿ ನಟರಾಜ. ಬಸವೇಶ್ವರ ಪಾತ್ರದಲ್ಲಿ ಬಾಳಪ್ಪನವರನ್ನು ಕಂಡ ಪ್ರೇಕ್ಷಕರು ನಿಜ ಜೀವನದಲ್ಲಿಯೂ ಬಸವಣ್ಣ ಎಂದೇ ಕರೆದರು. ಅಂಥ ತನ್ಮಯತೆಯ ಪಾತ್ರವದು. ಬಸವೇಶ್ವರ ನಾಟಕದಿಂದ ಕೀರ್ತಿ, ಸಂಪತ್ತು ಎರಡನ್ನೂ ಗಳಿಸಿದರು. ನಟರಾಜ ಏಣಗಿ ಅವರ ಅಭಿನಯ ನೋಡಿದವರು ಅವರನ್ನು ಮರೆಯಲು ಆಗುವುದಿಲ್ಲ. ಬಾಳಪ್ಪನವರಿಗೆ ಒಂದು ಕೊರಗು ಇತ್ತು. ವೃತ್ತಿ ರಂಗಭೂಮಿ ಸಮಾಂತರವಾಗಿ ಬೆಳೆಯುತ್ತಿದ್ದ ಹವ್ಯಾಸಿ ರಂಗಭೂಮಿಗಾಗಿ ಏನೂ ಮಾಡಲಾಗಲಿಲ್ಲ ಎಂದು. ಆ ಕೊರಗು ತುಂಬಿಕೊಳ್ಳಲು ಮಗನಿಗೆ ನೀನಾಸಂದಲ್ಲಿ ಶಿಕ್ಷಣ ಕೊಡಿಸಿ, ಹವ್ಯಾಸಿ ರಂಗಭೂಮಿಯಲ್ಲಿ ದುಡಿಯಲು ಪ್ರೋತ್ಸಾಹ ಕೊಟ್ಟರು. ಹವ್ಯಾಸಿ ರಂಗಭೂಮಿಯ ಬಗೆಗೂ ತುಂಬ ಗೌರವ ಇವರಿಗೆ. ವೃತ್ತಿರಂಗದ ನಾಟಕಗಳು ಹೃದಯಕ್ಕೆ ಮುಟ್ಟುತ್ತವೆ. ಹವ್ಯಾಸಿ ರಂಗದ ನಾಟಕಗಳು ಬುದ್ಧಿಗೆ ಮುಟ್ಟುತ್ತವೆ ಎಂದು ಎರಡರ ಗುಣಗಾನ ಮಾಡಿದರು. ಕಂಪನಿ ನಾಟಕಗಳನ್ನು ಲೇವಡಿ ಮಾಡುತ್ತಿದ್ದ ಶ್ರೀರಂಗರಿಗೆ ಕಂಪನಿಗಾಗಿಯೇ ನಾಟಕ ಬರೆದು ಕೊಡಲು ಕೇಳಿಕೊಂಡಿದ್ದರು.

ಕಂಪನಿ ಕಷ್ಟದಲ್ಲಿದ್ದಾಗ ಮನೆಯಿಂದ ಹಣ ತಂದು ನಾಟಕಗಳನ್ನು ನಡೆಸಿದ್ದು, ನಾಟಕದಿಂದ ಸಂಪಾದನೆಯಾದರೆ ಮನೆಯ ಏಳಿಗೆಗೆ ತೊಡಗಿಸಿದ್ದು ಬಾಳಪ್ಪನವರ ವಿಶೇಷತೆ ಎನ್ನಬೇಕು. ಜನರಾಡಿಕೊಳ್ಳುವಂತೆ ಅವೆರಡೂ ಕ್ಷೇತ್ರಗಳು ವಿರುದ್ಧವೆನಿಸಲಿಲ್ಲ ಬಾಳಪ್ಪನವರಿಗೆ. ಅವು ಪರಸ್ಪರ ಪೂರಕ ಮತ್ತು ಪ್ರೇರಕ ಎಂಬುದು ಅವರ ಅನುಭವ. ತಮ್ಮ ಗೆಳೆಯರಿಗೆ, ಮನೆ ಮಂದಿಗೂ ಅದನ್ನು ಮಗಾಣಿಸಿದರು. 'ಜಗಜ್ಯೋತಿ ಬಸವೇಶ್ವರ' ನಾಟಕದ ಆದಾಯದಿಂದ ಊರಲ್ಲಿ ಹೊಲ ಖರೀದಿಸಿದರು. ಬಾಳಪ್ಪನವರು ನಾಟಕ ಕಂಪನಿಯ ಜೊತೆಗೇ ಇರುತ್ತಿದ್ದರಿಂದ ಊರಲ್ಲಿನ ಹೊಲ, ಮನೆ, ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಪರಿಶ್ರಮಪಟ್ಟರು ಬಾಳಪ್ಪನವರ ಪತ್ನಿ ಸಾವಿತ್ರಮ್ಮ. ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

ಕಂಪನಿಯ ಏಳಿಗೆಯಲ್ಲಿ ಕಲಾವಿದೆ ಪತ್ನಿ ಲಕ್ಷ್ಮೀಬಾಯಿ, ಮಗ ನಟರಾಜ, ಮಗಳು ಭಾಗ್ಯ ಮತ್ತು ಅನೇಕ ಜನ ನಿಷ್ಠೆಯ ಕಲಾವಿದರ ಕೊಡುಗೆಯೂ ಇದೆ. ಅಂಥದೊಂದು ಪ್ರೇರಕ ಪರಿಸರ ತಮ್ಮ ಬೆನ್ನಿಗಿದ್ದ, ನಾಟಕ ನೋಡಿ ನಲಿದ ರಸಿಕ ಸಮಾಜದ ಬೆಂಬಲ ಸಿಕ್ಕಿದ್ದಕ್ಕೆ ಬಾಳಪ್ಪನವರಿಗೆ ಧನ್ಯತೆ ಇದೆ. ಆ ಬಗ್ಗೆ 'ನಾನೇ ಭಾಗ್ಯವಂತ' ಎಂದು ಹೇಳುತ್ತಾರೆ.

ಸಿನಿಮಾದ ಅತಿಯಾದ ಅನುಕರಣೆಯಿಂದ ರಂಗಭೂಮಿಯ ಹದ ಕೆಡುತ್ತಿದೆಯೆನಿಸಿದಾಗ, ಅದರೊಂದಿಗೆ ಹೊಂದಿಕೊಳ್ಳಲು ಸಾಧ್ಯವಿಲ್ಲ ಎನಿಸಿದಾಗ ನಾಟಕ ಕಂಪನಿ ನಿಲ್ಲಿಸಿದರು. ಕಂಪನಿ ನಿಲ್ಲಿಸಿದರೂ ನಾಟಕ ಚಟುವಟಿಕೆಗಳು ನಿಲ್ಲಲಿಲ್ಲ. ಕಂಪನಿ ನಂತರದ

ಮೂವತ್ತು ವರ್ಷಗಳ ಅವಧಿಯಲ್ಲಿ ಮೊನ್ನೆಯ ತನಕ ಅವರು ರಂಗಭೂಮಿಯ ಜೊತೆಗೆ ಹೇಗೆ ಸಕ್ರಿಯರಾಗಿದ್ದರೆಂಬುದು ಎಲ್ಲರಿಗೂ ಗೊತ್ತು. ಅವರ ರಂಗ ಸಂವೇದನೆ ಅತ್ಯಂತ ಕ್ರಿಯಾಶೀಲವಾದುದು. ಅವರಿದ್ದಲ್ಲಿ ನಾಟಕ ಪರಿಸರ ನಿರ್ಮಾಣವಾಗುವಂತಹದ್ದು. ಹುಬ್ಬಳ್ಳಿ ಧಾರವಾಡ ಮಹಾನಗರಗಳಲ್ಲಿ 'ಮ್ಯಾಳ ತಂಡ' ಹುಟ್ಟಲು ಇವರೇ ಕಾರಣ. ಹಾಗೆಯೇ ಬೆಳಗಾವಿ, ಬೈಲಹೊಂಗಲ, ಸವದತ್ತಿ, ಹುಕ್ಕೇರಿ, ರಾಮದುರ್ಗ ಈ ಪ್ರದೇಶದ ಅನೇಕ ರಂಗ ಚಟುವಟಿಕೆಗಳಿಗೆ, ರಂಗ ಸಂಗೀತ ಕಾರ್ಯಕ್ರಮಗಳಿಗೆ ಬಾಳಪ್ಪನವರೇ ಸ್ಫೂರ್ತಿ. 1996ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಬಂದಾಗ ಅವರ ಅಭಿಮಾನಿ ಬಳಗ ಬೆಳಗಾವಿಯಲ್ಲಿ ಹುಟ್ಟು ಹಾಕಿದ 'ರಂಗಭೂಮಿ ಸಹಕಾರಿ ಸಂಘ'ಕ್ಕೂ ಅವರೇ ರಂಗನಿರಂತರದ ದೀಕ್ಷೆ ಕೊಟ್ಟಿದ್ದಾರೆ.

ರಂಗಸಂಗೀತವು ರಂಗಭೂಮಿಯ ದೊಡ್ಡ ಸಂಪತ್ತು. ಅದನ್ನು ಉಳಿಸಿಕೊಳ್ಳಬೇಕೆಂಬ ಕಳಕಳಿ ಬಾಳಪ್ಪನವರದು. ಅದಕ್ಕಾಗಿ ಧಾರವಾಡ ಆಕಾಶವಾಣಿ, ಬೆಂಗಳೂರಿನ ಅಕಾಡೆಮಿಗಳಿಗೆ ಮನವಿ ಸಲ್ಲಿಸಿ, ನೂರಾರು ರಂಗಗೀತೆಗಳ ಧ್ವನಿಮುದ್ರಣ ನಡೆಸಿಕೊಟ್ಟಿದ್ದಾರೆ. ರಂಗಸಂಗೀತಕ್ಕಾಗಿಯೇ ಒಂದು ಶಾಲೆ ಬೇಕೆಂಬುದು ಅವರ ಒತ್ತಾಸೆ. ಧಾರವಾಡ, ಬೆಳಗಾವಿ ನಗರಗಳಲ್ಲಿಯ ಅನೇಕ ತರುಣರಿಗೆ ರಂಗಸಂಗೀತ ಕಲಿಸಿದ್ದಾರೆ. ಸಭೆ ಸಮಾರಂಭಗಳಲ್ಲಿ ರಂಗಸಂಗೀತ ಹಾಡಬೇಕೆಂದು ಅವರಿಗೆ ಒತ್ತಾಯಿಸಿದ್ದಾರೆ. ಇವತ್ತಿಗೂ ಯಾರಾದರೂ ಭೇಟಿಯಾದರೆ ಅದನ್ನೇ ಪ್ರಸ್ತಾಪಿಸಿದ್ದಾರೆ.

ಬದುಕಿನುದ್ದಕ್ಕೂ ರಂಗಭೂಮಿಗಾಗಿ ದುಡಿ ದುಡಿದು ಹಣ್ಣಾದ ಬಾಳಪ್ಪನವರು, ಕಳೆದ ಒಂದು ವರ್ಷದಿಂದ ನರಗಳ ಸಮಸ್ಯೆಯಿಂದ ಸಣ್ಣ ಪಾರ್ಶ್ವವಾಯು ರೋಗಕ್ಕೆ ಒಳಗಾಗಿದ್ದಾರೆ. ನಡೆದಾಡುವ ಶಕ್ತಿ ಕಳೆದುಕೊಂಡಿದ್ದಾರೆ. ಆದರೆ, ನಾಟಕ ಚಟುವಟಿಕೆಗಳ ಉತ್ಸಾಹ ಮಾತ್ರ ಕಡಿಮೆ ಆಗಿಲ್ಲ. ಶತಮಾನೋತ್ಸವದ ಸಂಭ್ರಮದಲ್ಲಿರುವ ಅವರ ನೆನಪಿನಾಳದಲ್ಲಿ ನೂರಾರು ವರ್ಷಗಳ ರಂಗಭೂಮಿ ಚರಿತ್ರೆ ಇದೆ. ಕೇಳಬೇಕೆನ್ನುವ ಆಸಕ್ತರ ಎದುರು ಅದು ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ. 'ಕುಣಿಯಲು ಬಾರದ್ದಕ್ಕೆ ಅಂಗಳ ಡೊಂಕು ಎಂದು ಹೇಳುವ ಜನ ಬಹಳ. ಹಾಗೆಯೇ ನಾಟಕ ಆಡಿ ಹಾಳಾದೆ ಎಂದು ಹೇಳುವವರ ಎದುರು, ನಾಟಕ ಆಡಿ ಬೆಳೆದೆ ಎಂದು ಹೇಳಲು ನನಗೆ ಹೆಮ್ಮೆ ಅನಿಸುತ್ತದೆ. ರಂಗಭೂಮಿ ಸಾಂಗತ್ಯದಿಂದಾಗಿಯೇ ನೂರು ವರ್ಷಗಳನ್ನು ಸಾರ್ಥಕ ದಿಂದ, ಸಂತೋಷದಿಂದ ಅನುಭವಿಸಿದೆ' ಎಂದು ಭಾವಪೂರ್ಣವಾಗಿ ನುಡಿಯುತ್ತಾರೆ.

ರಂಗಾನುಭವಗಳ ಶ್ರೀಮಂತ ಕಣಜ ರಂಗಭೂಮಿಯ ಈ ಹಿರಿ ಅಜ್ಜನ ಜನ್ಮಶತಮಾನೋತ್ಸವವನ್ನು ನಾಡಿನ ಜನ, ರಂಗಾಸಕ್ತರು ಸಂಭ್ರಮದಿಂದ ಆಚರಿಸಿದ್ದಾರೆ. ರಂಗಚಟುವಟಿಕೆಗಳಿಗೆ ಹೊಸ ಶಕ್ತಿಯನ್ನು ಲಭಿಸುವಂತಾಗಿದೆ.

■



# ಮಾತುಗಳಲ್ಲಿ ರಂಗಭೂಮಿ ಇತಿಹಾಸ

● *ಸಂಗಮೇಶ ಕೋಟಿ*

> ನೂರರ ಗಡಿ ದಾಟಿದ್ದರೂ ಬಾಳಪ್ಪನವರ ರಂಗಭೂಮಿಯ ಮೇಲಿನ ಮಮಕಾರ ಒಂದಿಂಚೂ ಕಡಿಮೆಯಾಗಿಲ್ಲ. ನಾನು ಯಾವುದೇ ವಿಷಯದ ಮಾತು ಆರಂಭಿಸಿದರೂ ಅವರು ಅದನ್ನು ರಂಗಭೂಮಿಯ ಕಡೆಗೆ ವಾಲಿಸುತ್ತಿದ್ದರು.

ಏಣಗಿ ಬಾಳಪ್ಪ ಹಾಗೂ ಕನ್ನಡ ರಂಗಭೂಮಿ ಸುದೀರ್ಘವಾಗಿ ತಳಕು ಹಾಕಿಕೊಂಡ ಮಾಧ್ಯಮಗಳು. ಬಾಳಪ್ಪನವರು ನಟನೆ ಹಾಗೂ ಇತರ ರಂಗ ಚಟುವಟಿಕೆಗಳ ಮುಖಾಂತರ ಒಂದು ಶತಮಾನದಿಂದ ಪ್ರಸಿದ್ಧಿಯ ಹಿಮಾಲಯ ವೇರಿದವರು. ರಂಗಭೂಮಿ ಎಂದೊಡನೆ ಆ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಮಹನೀಯರ ಹೆಸರುಗಳಲ್ಲಿ ನೆನಪಿಗೆ ಬರುವ ಮೊದಲ ಹೆಸರೇ ಏಣಗಿ ಬಾಳಪ್ಪ. ಅವರೊಂದು ರಂಗಭೂಮಿಯ ಜೀವಂತ ವಿಶ್ವಕೋಶ. ಈಗ ಮಲಪ್ರಭೆಯ ಜಠರದಲ್ಲಿ ಮುಳುಗಿಹೋದ ಪುಟ್ಟ ಗ್ರಾಮ ಏಣಗಿಯಲ್ಲಿ ಶತಮಾನದ ಹಿಂದೆ (1914 ಜನವರಿ) ಜನಿಸಿದ ಬಾಳಪ್ಪನವರಿಗೆ ಭಾರತಕ್ಕೆ ಸ್ವತಂತ್ರ ದೊರೆತಾಗ ಬರೋಬ್ಬರಿ ಮೂವತ್ಮೂರು ವರ್ಷ.

ಇಂದು ಶತಕದ ಗಡಿ ದಾಟಿರುವ ಬಾಳಪ್ಪನವರು ಮುಳುಗಡೆಯಿಂದ ಸ್ಥಳಾಂತರಗೊಂಡ ಹೊಸ ಏಣಗಿಯಲ್ಲಿ ತಮ್ಮ ಚಿಕ್ಕ ಹಾಗೂ ಸ್ವಚ್ಛ ಕೊಠಡಿಯೊಂದರಲ್ಲಿ ರಂಗಭೂಮಿಯಲ್ಲಿ ತಾವು ಅನುಭವಿಸಿದ ನೋವು ನಲಿವುಗಳ ಉತ್ಖನನ ನಡೆಸಿದ್ದಾರೆ. ಮೊನ್ನೆ ಮೊನ್ನೆಯವರೆಗೂ ತುಂಬ ಚಲನಶೀಲರಾಗಿದ್ದ ಬಾಳಪ್ಪನವರು 2013 ಮಾರ್ಚ ನಂತರ ತಮ್ಮ ದೇಹದ ಎಡಭಾಗದ ಪಾರ್ಶ್ವವಾಯುವಿನಿಂದಾಗಿ ತಮ್ಮ ಮನೆಯಲ್ಲಿ ಸ್ಥಾವರದ ಸ್ಥಿತಿಯಲ್ಲಿದ್ದಾರೆ.

ವಯೋಮಾನದ ಒಂದೆರಡು ಸಮಸ್ಯೆಗಳನ್ನು ಬಿಟ್ಟರೆ ಬಾಳಪ್ಪನವರು ಈಗಲೂ ಭೇಟಿಯಾಗಲು ಬಂದವರೊಡನೆ ತುಂಬ ಲವಲವಿಕೆಯಿಂದಲೇ ಮಾತನಾಡುತ್ತಾರೆ. ಕಿವಿಗಳು ಕೊಂಚ ಅಸಹಕಾರ ತೋರುತ್ತಿವೆ, ಅದರೆ ಎಪ್ಪತ್ತೈದಕ್ಕೂ ಹೆಚ್ಚು ವರ್ಷಗಳ ಕಾಲ ನಟನೆಯಲ್ಲಿ ತೊಡಗಿಕೊಂಡಿದ್ದ ಅವರು ಎದುರಿನವರು ಏನು ಮಾತನಾಡುತ್ತಿದ್ದಾರೆ ಎಂದು ತುಟಿಗಳ ಚಲನೆಯಿಂದಲೇ ಗುರುತಿಸುತ್ತಾರೆ. ಅವರ ನೆನಪಿನ ಶಕ್ತಿ, ಧ್ವನಿಯಲ್ಲಿಯ ಏರಿಳಿತ, ರಂಗಗೀತೆಗಳನ್ನು ಹಾಡಬೇನ್ನುವ ಅವರ ತುಡಿತ, ಶಬ್ಧ ಪ್ರಯೋಗಗಳ ಸ್ಪಷ್ಟತೆಗಳು ಎದುರಿಗೆ ಕುಳಿತವರನ್ನು ಅಚ್ಚರಿಗೊಳಿಸುತ್ತದೆ.

**ರಂಗಭೂಮಿ ನನ್ನ ಸೇವಾಕ್ಷೇತ್ರ :** ರಂಗಭೂಮಿಯನ್ನು ನನ್ನ ಸಮಕಾಲೀನರು ಹಾಗೂ ಇಲ್ಲಿಯವರೆಗೆ ನಾನು ನೋಡಿದವರಲ್ಲಿ ಅನೇಕರು ಹೊಟ್ಟೆಯ ಉಪಜೀವನಕ್ಕೆ ಹಾಗೂ ಸಾಧ್ಯವಾದರೆ ನಾಲ್ಕು ದುಡ್ಡು ಸಂಪಾದನೆಗೆಂದು ಉಪಯೋಗಿಸಿಕೊಂಡರು. ಬಹುತೇಕರಿಗೆ ರಂಗಭೂಮಿ ಹೊಟ್ಟೆ ತುಂಬ ಊಟ ನೀಡಿತೇ ಹೊರತು ಹಣವನ್ನು ತಂದು ಕೊಡಲಿಲ್ಲ. ನನ್ನ ಆರಂಭದ ದಿನಗಳಿಂದಲೂ ನನ್ನೊಂದಿಗಿರುವವರ ಹೊಟ್ಟೆ ತುಂಬಿದರೆ ಸಾಕು ಅದೇ ದೇವರು ನಮಗೆ ನೀಡುವ ಕೃಪೆ ಎಂದು ಭಾವಿಸಿಕೊಂಡಿದ್ದೆ, ರಂಗಭೂಮಿ ನನ್ನ ಸೇವಾಕ್ಷೇತ್ರವೇ ಹೊರತು ಲಾಭಗಳಿಕೆಯ ಮಾಧ್ಯಮವಲ್ಲ ಎಂದು ಬಲವಾಗಿ ನಂಬಿಕೊಂಡಿದ್ದೆ ಎಂದು ಅವರು ಸ್ಪಷ್ಟವಾಗಿ ಇಂದಿಗೂ ಹೇಳುತ್ತಾರೆ. ಕಂಪನಿಗಳನ್ನು ಕಟ್ಟಿ ತಮ್ಮ ಹೊಲ ಮನೆ ಮಾರಿಕೊಂಡು ನೂರೆಂಟು ಚಟಗಳ ದಾಸರಾಗಿ ಇತಿಹಾಸ ಸೇರಿಹೋದ ಅನೇಕ ಕಂಪನಿಗಳ ಮಾಲೀಕರು ಬಾಳಪ್ಪಜ್ಜನ ಜೀವನಯಾತ್ರೆಯ ಸಹಪ್ರಯಾಣಿಕರು. ಇವರೂ ತಮಗಿದ್ದ ಹೊಲ ಮನೆಗಳನ್ನು ಕಳೆದುಕೊಂಡು ರಂಗಭೂಮಿಗೆ ಧಾರೆ ಎರೆಯುತ್ತಾರೇನೋ ಎಂಬ ಆತಂಕದಲ್ಲಿದ್ದಾಗ ಮನದೊಡತಿ ಸಾವಿತ್ರಮ್ಮ ಏಣಗಿಗೆ ಬಂದು ಬೇರೆ ಬೇರೆಯವರ ಹಿಡಿತದಲ್ಲಿದ್ದ ಎಲ್ಲ ಕೃಷಿ ಭೂಮಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ತಮ್ಮ ಏಳು ಮಕ್ಕಳ ಶಿಕ್ಷಣ ಹಾಗೂ ಶಿಸ್ತಿನ ಬೆಳವಣಿಗೆಯ ಕಡೆಗೆ ಗಮನ ನೀಡುತ್ತಾರೆ. ಅದೇ ಕಾರಣಕ್ಕೆ ಹಿರಿಯ ಮಗ ಬಸವರಾಜ ವೈದ್ಯ, ಇನ್ನೊಬ್ಬ ಮಗ ಸುಭಾಸ ಇಂಜಿನೀಯರ್, ಮತ್ತೊಬ್ಬ ಮಗ ಮೋಹನ ನ್ಯಾಯವಾದಿ ಹಾಗೂ ಸದ್ಯಕ್ಕೆ ಏಣಗಿಯಲ್ಲಿದ್ದು ಕೃಷಿಯ ಜೊತೆಗೆ ತಂದೆಯ ಯೋಗಕ್ಷೇಮವನ್ನು ದೇವರ ಸೇವೆ ಎಂಬಂತೆ ಶ್ರದ್ಧೆಯಿಂದ ಪೋಷಿಸುತ್ತಿರುವ ಮಗ ಅರವಿಂದ ಪೂರೈಸಿದ್ದು ಬಿ.ಎಸ್‌ಸಿ(ಅಗ್ರಿ).

ನೂರರ ಗಡಿ ದಾಟಿದ್ದರೂ ಬಾಳಪ್ಪನವರ ರಂಗಭೂಮಿಯ ಮೇಲಿನ ಮಮಕಾರ ಒಂದಿಂಚೂ ಕಡಿಮೆಯಾಗಿಲ್ಲ. ನಾನು ಯಾವುದೇ ವಿಷಯದ ಮಾತು ಆರಂಭಿಸಿದರೂ ಅವರು ಅದನ್ನು ರಂಗಭೂಮಿಯ ಕಡೆಗೆ ವಾಲಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವ ಅವರಿಗಿದ್ದ ನಾಟಕ ಪ್ರದರ್ಶನಗಳ ತೊಂದರೆಯನ್ನು ಜ್ಞಾಪಿಸಿಕೊಳ್ಳುತ್ತ ಬ್ರಿಟೀಷ್ ಸರ್ಕಾರ ಅವರ ಮೇಲೆ ಹೇರಿದ್ದ ನಿಷೇಧವನ್ನು ನೆನಪಿಸಿಕೊಂಡು ಅಂದು ಅವರ ಸಹಾಯಕ್ಕೆ ನಿಂತ ದೇಶೀಯ ಸಂಸ್ಥಾನಗಳನ್ನು ಪ್ರಾಂಜಲ ಮನಸ್ಸಿನಿಂದ ಇಂದಿಗೂ ಸ್ಮರಿಸುತ್ತಾರೆ. ಮೈಸೂರು, ಕೊಲ್ಹಾಪೂರ, ಜಮಖಂಡಿ, ಸವಣೂರಿನ ಮಹಾರಾಜರುಗಳೆಲ್ಲ ಬಾಳಪ್ಪನವರನ್ನು ಕರೆಸಿ ಕಿತ್ತೂರು ಚೆನ್ನಮ್ಮ ನಾಟಕವನ್ನು ತಮ್ಮ ಸಂಸ್ಥಾನಗಳಲ್ಲಿ ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟು ಕೈ ತುಂಬ ಭಕ್ಷೀಸು ನೀಡಿದ್ದು ಅವರಿಗೆ ಎಂಭತ್ನಾಲ್ಕು ವರ್ಷಗಳ ನಂತರವೂ ನಿನ್ನೆ ಮೊನ್ನೆ ನಡೆದ ಘಟನೆಯಂತೆ ನನ್ನೊಂದಿಗೆ ಹಂಚಿಕೊಂಡರು. ಅದರಲ್ಲೂ ಮೈಸೂರು ಕೃಷ್ಣರಾಜ ಒಡೆಯರ್ ಅವರ ಮುಂದೆ ಪ್ರದರ್ಶಿಸಿದ ನಾಟಕವನ್ನು ಮೆಚ್ಚಿಕೊಂಡ ಮಹಾರಾಜರು ರಾಜ ಪೋಷಾಕು ಹಾಗೂ ಇತರ ಅರಮನೆಯ ಪರಿಕರಗಳನ್ನು ಬಹುಮಾನವಾಗಿ ಕಂಪನಿಗೆ ನೀಡಿದ್ದ ಪ್ರಸಂಗವನ್ನು ವಿವರಿಸುವಾಗ ಅವರ ಕಣ್ಣಲ್ಲಿಯ ಆರ್ದ್ರತೆ ಮನ ಮಿಡಿಯುವಂತಿತ್ತು.

**ರಂಗಗೀತೆಗಳ ಮೇಲಿನ ವ್ಯಾಮೋಹ :** ಬಾಳಪ್ಪನವರೊಡನೆ ಮಾತನಾಡುವಾಗ ಒಂದು ಶತಮಾನದ ರಂಗಭೂಮಿಯ ಆಗುಹೋಗುಗಳು ಅವರ ಬಾಯಿಂದ ಪಟ ಪಟನೆ ಉದುರುತ್ತವೆ. ಅವರು ಹಾಡಿದ ಮೊದಲ ರಂಗಗೀತೆಯಿಂದ ಹಿಡಿದು ಇತ್ತೀಚಿನ ದಿನಗಳಲ್ಲಿ ಭಾಗವಹಿಸುತ್ತಿದ್ದ ಕಾರ್ಯಕ್ರಮದ ಅಂತ್ಯದಲ್ಲಿ ತಪ್ಪದೇ ಅವರು ಹಾಡುತ್ತಿದ್ದ ಜೋಳದರಾಶಿ ದೊಡ್ಡನಗೌಡರು ಬರೆದ ಮನ ಮಿಡಿಯುವ 'ಹೋಗಿ ಬರ್ತೀನ್ರಯ್ಯ ನಮ್ಮೂರಿಗೆ' ಎಂಬ ಗೀತೆ ಕೂಡ ಹಾಡಾಗಿ ಬಂದು ಅವರ ಹಾಗೂ ನನ್ನ ಇಬ್ಬರ ಕಣ್ಣುಗಳನ್ನು ಒದ್ದೆ ಮಾಡಿದವು. ಗೀತೆ ಬರೆದದ್ದು ದೊಡ್ಡನಗೌಡರಾದರೂ ಅದನ್ನು ಜನಪ್ರಿಯಗೊಳಿಸಿದ್ದು ಬಾಳಪ್ಪನವರು. ಸಾಹಿತ್ಯ ಹಾಗೂ ಭಾವಪೂರ್ಣ ಹಾಡುಗಾರಿಕೆ ಸಾರ್ಥಕತೆ ಪಡೆಯುವುದು ಶ್ರೋತೃಗಳ ಕಣ್ಣೀರಿನಲ್ಲಿ ಎಂದು ಅವರು ಹೇಳಿದ್ದು ಮಾರ್ಮಿಕವಾಗಿತ್ತು. ಅವರು ಹಾಡಿದ ಜೋಳದರಾಶಿ ದೊಡ್ಡನಗೌಡರ ಕವನ ಹೀಗಿದೆ.

ಹೋಗಿ ಬರ್ತೀನ್ರಯ್ಯ ನಮ್ಮೂರಿಗೆ
ಎಲ್ಲರಿಗೂ ಶರಣಾರ್ಥಿ ಕಳಿಸಿ ದಯೆತೋರಿ.

ಏಸೋ ಕಾಲದಿಂದ ಊರೂರು ತಿರುಗುತ
ನಿಮ್ಮೂರಿಗೆ ಬಂದೆ ದಿಕ್ಕಿಲ್ಲದೆ ನಾನೊಬ್ಬ
ಹಿಂದಿಲ್ಲ ಮುಂದಿಲ್ಲ ತಂದದ್ದು ಏನಿಲ್ಲ
ಎಲ್ಲಾ ನೀವೇ ನೀಡಿ ನೆರವಾದಿರೀಕೂಸಿಗೆ.

ತಂದೆ ತಾಯಿ ಅಣ್ಣ ತಮ್ಮಂದಿರಾಗುತ
ಹಾಲು ಸಕ್ಕರೆ ಬೆಣ್ಣೆ ಇಕ್ಕಿ ಸಾಕಿದಿರಿ
ಹೆಂಡತಿ ಮಕ್ಕಳೊಂದಿಗೆ ಸಂಸಾರ ಬೆಳೆಸಿದಿರಿ
ಮಮಕಾರವಿದ್ದರೇನು ಬಿಟ್ಟು ಹೋಗಲೇಬೇಕು.

ನಾ ವಾಸವಿದ್ದ ಮನೆಯು ಹಳೆಯದಾಯಿತು
ಇದ್ದಷ್ಟು ಕಾಲವು ಸಂಸಾರಕೆ ನೆರವಾಯಿತು
ನಾ ಹೋದ ಕೂಡಲೆ ಕುಸಿದು ಬೀಳುವುದು
ಯಾರಿಲ್ಲದೀ ಮನೆಯು ಮಣ್ಣು ಪಾಲಾಗುವುದು.

ಬಿಟ್ಟು ಹೋಗುವುದೆಲ್ಲ ನಾ ತಂದದ್ದೇನಲ್ಲ
ನೀವಿತ್ತುದನೆಲ್ಲ ನಿಮಗೆ ಒಪ್ಪಿಸಿದೆನಿಂದು
ಇದ್ದಷ್ಟು ಕಾಲವೇ ಬಳಸಿಕೊಂಡೆ
ನಿಮ್ಮ ಋಣ ತೀರಿತು ಎನ್ನ ಕಾಲವು ಸಂದಿತು.

ಬದುಕಿದ್ದ ಕಾಲವೇ ಏನೇನೋ ಮಾಡಿದೆ
ತಪ್ಪೇನೋ ಒಪ್ಪೇನೋ ಕೃಪೆಇಟ್ಟು ಮನ್ನಿಸಿರಿ
ನಮ್ಮೂರ ರಾಮೇಶ ಕರೆಯಲಟ್ಟಿದನಿಂದು
ಕಣ್ಣೊರೆಸಿಕೊಳ್ಳಿರಿ ಶುಭವಿತ್ತು ಹರಸಿರಿ.

ತುಂಬಿದ ಸಭೆಗಳಲ್ಲಿ ಅತ್ಯಂತ ಭಾವುಕರಾಗಿ ಬಾಳಪ್ಪನವರು ಈ ಹಾಡನ್ನು ಹಾಡಿ ಮುಗಿಸಿದ ಕೂಡಲೇ ಇಡೀ ಸಭೆ ಗದ್ಗದಿತವಾಗುತ್ತಿತ್ತು. ಎಲ್ಲರ ಮನಸನ್ನು ತಟ್ಟುವಂತೆ ಅವರ ಧ್ವನಿಯಲ್ಲಿ ಏರಿಳಿತವಿರುತ್ತಿತ್ತು. ಶಬ್ಧಗಳು ಕೇಳಿದವರ ಮನದಿಂದ ಅಳಿಯಲು ಎಷ್ಟೋ ದಿನಗಳು ಬೇಕಾಗುತ್ತಿತ್ತು. ತಮ್ಮ ನೂರು ವರ್ಷಗಳ ರಂಗಭೂಮಿಯ ಅನುಭವಗಳನ್ನು ತಮಗೆ ಸಹಾಯ ಸಹಕಾರ ನೀಡಿದ ಪ್ರೇಕ್ಷಕ ದೇವರುಗಳಿಗೆ ಈ ಶಬ್ಧಗಳಿಗಿಂತ ಹೆಚ್ಚಿಗೆ ನಾನೇನೂ ಕೊಡಲಾರೆ ಎಂದು ವಿನೀತವಾಗಿ ಅವರು ಹೇಳುತ್ತಿದ್ದರು. ಇಂದು ಅನಾರೋಗ್ಯದ ಸ್ಥಿತಿಯಲ್ಲಿ ಅವರು ಮಲಗಿಕೊಂಡಿದ್ದರೂ ಅವರನ್ನು ನೋಡಲು ಬಂದ ನನ್ನಂತಹವನ ಎದುರಿಗೂ ಈ ಹಾಡನ್ನು ಸುಶ್ರಾವ್ಯವಾಗಿ ಹಾಡಿ ಕಣ್ಣಲ್ಲಿ ನೀರು ಹುಟ್ಟಿಸಿದರು.

**ಬಾಳಪ್ಪನವರ ವಿಶೇಷತೆ :** ನಾಟಕದ ಪಾತ್ರದಾರಿಗಳು ತಾವು ನಿರ್ವಹಿಸುವ ಪಾತ್ರಗಳ ಮೂಲಕ ಗುರುತಿಸಿಕೊಳ್ಳುತ್ತಿದ್ದರು. ಬಾಳಪ್ಪನವರು ಮಾತ್ರ ರಾಮಾಯಣದಲ್ಲಿ ರಾಮನ ಪಾತ್ರ, ಮಹಾಭಾರತದಲ್ಲಿ ಕೃಷ್ಣ ಹಾಗೂ ಹರಿಶ್ಚಂದ್ರನ ಪಾತ್ರವನ್ನು ಲೀಲಾಜಾಲವಾಗಿ ನಿರ್ವಹಿಸುವಂತೆ ಸ್ತ್ರೀ ಪಾತ್ರಗಳಾದ ಸೀತೆ, ದ್ರೌಪದಿ, ತಾರಾಮತಿಯಾಗಿಯೂ ಅವರು

ವಿಜೃಂಬಿಸುತ್ತಿದ್ದರು. ಯಾವುದೇ ಪಾತ್ರಧಾರಿಯ ಅನುಪಸ್ಥಿತಿಯಲ್ಲಿ ತಾಲೀಮು ಇಲ್ಲದೇ ಆ ಪಾತ್ರಗಳನ್ನು ನಿಭಾಯಿಸಿಕೊಂಡು ಹೋಗುತ್ತಿದ್ದರು.

ಸಾವಿರಾರು ರಂಗ ಪ್ರಯೋಗಗಳನ್ನು ಮಾಡಿದ್ದ ಬಾಳಪ್ಪನವರಿಗೆ ಡಾ. ರಾಜಕುಮಾರ ಆದಿಯಾಗಿ ಅನೇಕರು ಸಿನೇಮಾಗಳಲ್ಲಿ ನಟಿಸಲು ಮನವಿ ಮಾಡಿದ್ದರು. ಅತಿಯಾದ ಒತ್ತಡಗಳಿಂದ ಜನುಮದ ಜೋಡಿ ಸೇರಿದಂತೆ ಇವರು ಐದು ಚಲನ ಚಿತ್ರಗಳಲ್ಲಿ ನಟನೆ ಮಾಡಬೇಕಾಗಿ ಬಂದರೂ ಅವುಗಳು ಅವರಿಗೆ ಸಂತೃಪ್ತಿ ನೀಡಲೇ ಇಲ್ಲ ಎಂದು ತಮ್ಮ ಸಿನೇಮಾನುಭವ ಹೇಳುತ್ತಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಡಾ.ಗುಬ್ಬಿ ವೀರಣ್ಣ ಪ್ರಶಸ್ತಿ, ಚಾಲುಕ್ಯ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಇವುಗಳೆಲ್ಲ ಬಾಳಪ್ಪನವರಿಗೆ ದೊರೆತವು ಎನ್ನುವುದಕ್ಕಿಂತ ಅವರಿಗೆ ದೊರೆತು ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡವು ಎನ್ನುವುದು ಸೂಕ್ತ.

**ಸದಾ ಕಾಡುವ ನಟರಾಜನ ನೆನಪು:** ಏಣಗಿ ನಟರಾಜ ಅಪ್ಪನ ಕಲೆಯನ್ನೆಲ್ಲ ಭಟ್ಟಿ ಇಳಿಸಿಕೊಂಡವನಂತೆ ರಂಗಭೂಮಿಯಲ್ಲಿ ಗುರುತಿಸಿಕೊಂಡಿದ್ದ. ಅವನನ್ನು ನಟ ಸಾಮ್ರಾಟನೆಂದೇ ಕರೆಯುತ್ತಿದ್ದ ಬಾಳಪ್ಪನವರು ನಟರಾಜ ರಂಗಭೂಮಿಯ ತಮ್ಮ ರಾಯಭಾರಿಯಾಗುತ್ತಾನೆ ಎಂದು ನಂಬಿಕೊಂಡಿದ್ದರು. ಬಾರದ ವಯಸ್ಸಿನಲ್ಲಿ ಅವನಿಗೆ ಬಂದ ಸಾವು ಬಾಳಪ್ಪನವರನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಕುಗ್ಗಿಸಿಬಿಟ್ಟಿತು. ನಟರಾಜನ ಸಾವು ವೈಯಕ್ತಿಕವಾಗಿ ನನಗೆ ಹಾಗೂ ಸಾಮಾಜಿಕವಾಗಿ ರಂಗಭೂಮಿಗೆ ಬಹುದೊಡ್ಡ ಹಾನಿಯನ್ನು ಮಾಡಿತು ಎಂದು ಆಕಾಶದೆಡೆಗೆ ನೋಡಿದರು.

ಇದು ಬಾಳಪ್ಪನವರ ಜನ್ಮ ಶತಮಾನೋತ್ಸವದ ವರ್ಷ(ಜನೇವರಿ 1914 ಜನನ). ರಂಗಭೂಮಿಗೆ ಉತ್ತೇಜನ ನೀಡುವ ಅನೇಕ ಕಾರ್ಯಕ್ರಮಗಳು ರಾಜ್ಯದ ಎಲ್ಲೆಡೆ ನಡೆಯಬೇಕು, ಭೂತಕಾಲದಲ್ಲಿ ಹೂತು ಹೋದ ರಂಗಕರ್ಮಿ ರತ್ನಗಳನ್ನು ಹೆಕ್ಕಿ ತೆಗೆದು ವರ್ತಮಾನದಲ್ಲಿ ಅವುಗಳು ಹೊಳೆಯುವಂತೆ ಮಾಡಬೇಕು. ಬಾಳಪ್ಪನವರ ಆಶಯದಂತೆ ಪರಿಪೂರ್ಣ ಹಾಗೂ ಪರಿಶುದ್ಧ ರಂಗಭೂಮಿಯ ಮರುಸ್ಥಾಪನೆಯಾಗಬೇಕು. ರಂಗಕರ್ಮಿಗಳೂ ಸಮಾಜದ ದಿಕ್ಕು ತಪ್ಪಿಸುವ ದಾರಿ ಹಿಡಿಯದೇ ತಮ್ಮ ಚಟುವಟಿಕೆಗಳ ಮೂಲಕ ಉತ್ಕೃಷ್ಟ ಸಮಾಜವೊಂದರ ನಿರ್ಮಾಣಕ್ಕೆ ಕಾರಣರಾಗಬೇಕು. ಆಗ ಏಣಗಿ ಬಾಳಪ್ಪನವರ ಜನ್ಮ ಶತಮಾನಕ್ಕೊಂದು ಅರ್ಥ ಬರುತ್ತದೆ.

■



# ವಾಸ್ತವ ರಂಗವಿನ್ಯಾಸದ 'ವೈಭವಶಾಲಿ' 'ಕಲಾವೈಭವ'!

● ಡಾ. ದೇವದಾಸ ಕಳಸದ

ಚಿತ್ರಕಲೆಗೆ ದೊರೆತ ಅಗ್ರಸ್ಥಾನವೂ ಸೇರಿದಂತೆ ಮುಖವರ್ಣಿಕೆ, ವೇಷಭೂಷಣ ಸೃಷ್ಟಿ, ಕಾಷ್ಟ ಶಿಲ್ಪ, ಪ್ಲಾಸ್ಟರ್ ಹಾಗೂ ಕಾಗದ ಮುದ್ದೆ ಶಿಲ್ಪ, ಬಡಿಗತನ, ಹೊಲಿಗೆ ಕಲೆ, ರಂಗಸಜ್ಜಿಕೆ ನಿರ್ಮಾಣ, ಬಣ್ಣ-ಬೆಳಕಿನ ವಿನ್ಯಾಸ, ರಂಗಚಮತ್ಕಾರ ಸೃಷ್ಟಿ, ಹಾರ್ಮೋನಿಯಂ-ತಬಲಾ-ಕೊಳಲು-ಪಿಟೀಲು

ವೃತ್ತಿ ರಂಗಭೂಮಿಯಲ್ಲಿ ಸ್ಥಾನ ಪಡೆದು ಒಟ್ಟು ರಂಗಕಲೆ ಕ್ರಮೇಣ ತನ್ನ ಸ್ವರೂಪವನ್ನೇ ಬದಲಾಯಿಸಿಕೊಂಡಿತು.

19ನೇ ಶತಮಾನದಾದಿಯಲ್ಲಿ ಮೈಸೂರು ಪ್ರಾಂತ್ಯ ಸಾಂಸ್ಕೃತಿಕ ಕ್ಷೇತ್ರದ ರಾಜಧಾನಿಯಾಗಿ ಮೈವೆತ್ತಿತ್ತು! 1880ರ ಪೂರ್ವದಲ್ಲಿ ರಂಗೋದ್ಯಮಾಪೇಕ್ಷಿಯಾಗಿ ಅಲ್ಲಿಗೆ ಒಲಸೆ ಬಂದ ಪಾರ್ಸಿ ಕಂಪನಿಗಳ ಜೊತೆಜೊತೆಗೆ ಮರಾಠಿ ಕಂಪನಿಗಳೂ ಕ್ವಚಿತ್ತಾಗಿ ಆಗಮಿಸಿ ಪ್ರದರ್ಶನಕ್ಕೆ ಮೈಯೊಡ್ಡಿದ್ದವು. ಪಾರ್ಸಿಯವರ ಅದ್ದೂರಿಯ ರಂಗಪ್ರಯೋಗಗಳನ್ನು ಮೈಸೂರಿನ ದೊರೆ ಜಯಚಾಮರಾಜೇಂದ್ರ ಒಡೆಯರೂ ವೀಕ್ಷಿಸಿ ಮೆಚ್ಚಿಕೊಂಡಿದ್ದರಂತೆ. ಅಂತೆಲೇ ಅವರ ಪ್ರೋತ್ಸಾಹದ ಮೇರೆಗೆ 1880 ರಲ್ಲಿ ಅರಮನೆ ನಾಟಕ ಕಂಪನಿ ಹುಟ್ಟಿಕೊಂಡಿತು. ನಂತರ ಬುಳ್ಳಪ್ಪನವರ, ರಂಗಾಚಾರ್ಯರ, ಗುಬ್ಬಿಯವರ ಹೀಗೆ ಅನೇಕ ಕಂಪನಿಗಳು ತಲೆ ಎತ್ತಿದವು. ಆದರೆ, ಅವೆಲ್ಲವುಗಳಿಗಿಂತಲೂ ಸುಮಾರು ಒಂದು ದಶಕ ಪೂರ್ವದಲ್ಲಿ......

ಉತ್ತರ ಕರ್ನಾಟಕದಲ್ಲಿ ಪಾರ್ಸಿ ನಾಟಕಗಳ ಪ್ರದರ್ಶನ ವಿರಳವೆನ್ನುವಂತಿದ್ದರೆ; ಮರಾಠಿ ನಾಟಕಗಳ ಉಪದ್ರವ ಅಧಿಕವಾಗಿತ್ತು. ಆ ಸಂರ್ಭದಲ್ಲಿ ಮರಾಠಿ ರಂಗ ಪ್ರಯೋಗಗಳಿಗೆ ಪ್ರತಿಯಾಗಿ ಕನ್ನಡ ರಂಗಭೂಮಿಯನ್ನು ಆಧುನಿಕವಾಗಿ ಪ್ರಬಲ ಗೊಳಿಸಲು ಹಾಗೂ ಮರಾಠಿ ಮಂಡಳಿಗಳ ಆಕ್ರಮಣಕಾರೀ ನಿಲುವನ್ನು ಹತ್ತಿಕ್ಕಲು ಸುಮಾರು 1869 ರಲ್ಲಿ ಹಲಸಗಿ ಶ್ರೀನಿವಾಸ ಕವಿಗಳ ನಾಟಕ ಮಂಡಳಿ ಹಾಗೂ 1870 ರ ಸುಮಾರಿನಲ್ಲಿ ಗದುಗಿನ ಶಾಂತಕವಿಗಳ ನಾಟಕ ಮಂಡಳಿಗಳು ತಲೆ ಕೊಡವಿಕೊಂಡೆದ್ದವು. ನಂತರ ಹುಟ್ಟಿಕೊಂಡ ಕೊಣ್ಣೂರ ಕಂಪನಿ, ಗರೂಡರ ಕಂಪನಿ, ವಾಮನರಾವ್ ಕಂಪನಿ ಮುಂತಾದವುಗಳು ಆಧುನಿಕವಾಗಿ ನಾಟಕಗಳನ್ನು ಪ್ರದರ್ಶಿಸಿ ಅಲ್ಪಾಯು ಸ್ಥಿತಿಯನ್ನು ಹೊಂದಿದರೂ ಅವೆಲ್ಲ ಉತ್ತರ ಕರ್ನಾಟಕದ ಭಾವೀ ವೃತ್ತಿ ರಂಗೋತ್ಪನ್ನ ಘಟಕಗಳಿಗೆ ಮಾದರಿಯಾಗಿದ್ದವು.

ತತ್ಪರಿಣಾಮವಾಗಿ, ಕರ್ನಾಟಕದಾದ್ಯಂತ ಇತರೇ ನೂರಾರು ಕಂಪನಿಗಳು ಹುಟ್ಟಿಕೊಂಡವು. ಅವುಗಳಲ್ಲಿ ಏಣಗಿ ಬಾಳಪ್ಪನವರ ನಾಟಕ ಕಂಪನಿಗಳು; ಅಂದರೆ– 1941 ರ ಡಿಸೆಂಬರ್ ತಿಂಗಳಿನಲ್ಲಿ ನಾಲ್ಕು ಜನ ಪಾಲುಗಾರಿಕೆ ಮೂಲಕ ರಾಮದುರ್ಗ ತಾಲೂಕಿನ ಕಟಕೋಳ ಗ್ರಾಮದಲ್ಲಿಂದ 'ವೈಭವಶಾಲಿ ನಾಟ್ಯ ಸಂಘ, ಬೆಳಗಾವಿ' ಎಂಬುದಾಗಿ ಪ್ರಾರಂಭವಾಯಿತು. ಮುಂದೆ, ಐದಾರು ವರ್ಷಗಳ ನಂತರ ಅದು ಅಲ್ಪಾಯುವಿನಲ್ಲಿಯೇ ಅಸ್ತಂಗತವಾಗಿ 1947ರಷ್ಟೊತ್ತಿಗೆ ತಾಳೀಕೋಟಿಯಲ್ಲಿ ಬಾಳಪ್ಪನವರ ಸ್ವಂತ ಒಡೆತನದಲ್ಲಿ 'ಕಲಾವೈಭವ ನಾಟ್ಯ ಸಂಘ, ಬೆಳಗಾವಿ' ಎಂಬ ಕಂಪನಿಯು ಶುರುವಾಯಿತು. ಅದು ತನ್ನ ಅಧಿಕಾಯುಷ್ಪೂರ್ತಿ ಅವಿರತವಾಗಿ ದುಡಿದು ಸುಮಾರು ನಾಲ್ಕು ದಶಕಗಳ ಕಾಲಪೂರ್ತಿ ಕಲಾರಸಿಕರಿಗೆ ರಂಗ ರಸದೌತಣವನ್ನು ಉಣಬಡಿಸಿತು.

ಅಷ್ಟೇ ಅಲ್ಲ...! ಆ ಕಂಪನಿಯು ತನ್ನೊಡೆಯನಿಗೆ– "ಬಾಳಾ...! ನಿನ್ನ ನಿಸ್ಪೃಹ ರಂಗಸೇವೆ ತೃಪ್ತಿ ತಂದಿದೆ ಎನಗೆ... ವರ್ಷಗಳು ನೂರು ಮೀರಿ ಬಾಳಿ ಬದುಕು ನೀ... ವೈಭವಶಾಲಿ ಕಲಾವೈಭವದ ಪುನರಪಿ ಸವಿ ನೆನಪಿನಲಿ!" ಎಂದು ಹರಸಿದ ಪರಿಣಾಮವಾಗಿಯೇ ಏನೋ ರಂಗದೊಲವಿನ ಆಳ ಕಾಳಜಿಯಲ್ಲಿ ಇಳಿವಯದ ಬದುಕಿನತ್ತ ನಿರಾಳವಾಗಿ ಸಾಗಿದೆ... ನಾಟ್ಯಭೂಷಣ, ಪದ್ಮಶ್ರೀ, ನಾಡೋಜ, ಶತಾಯುಷಿ ಡಾ. ಏಣಗಿ ಬಾಳಪ್ಪಜ್ಜನವರ ಜೀವನ.

ಸಾಮಾನ್ಯವಾಗಿ ಒಂದೊಂದು ನಾಟಕ ಕಂಪನಿ ಅದ್ಭುತ ರಂಗವಿನ್ಯಾಸ ಪ್ರಧಾನ ವಾಗಿಯೋ, ಅಭಿನಯ ಪ್ರಧಾನವಾಗಿಯೋ, ಸಂಗೀತ ಪ್ರಧಾನವಾಗಿಯೋ, ಹಾಸ್ಯ ಪ್ರಧಾನವಾಗಿಯೋ, ಕಥಾ ಪ್ರಧಾನವಾಗಿಯೋ ಹೆಸರು ಮಾಡಿದ್ದರೆ ಬಾಳಪ್ಪನವರ ನಾಟಕ ಮಂಡಳಿಗಳು ಮಾತ್ರ ಸರ್ವಕಲಾ ಪ್ರಧಾನವಾಗಿ, ವಾಸ್ತವ ರಂಗವಿನ್ಯಾಸೋಪೇತವಾಗಿ ಮೆರೆದವೆಂದು ಹೇಳುವಲ್ಲಿ ಯಾವುದೇ ಸಂದೇಹ, ಸಂಕೋಚ ಬೇಡ. ಹೀಗೊಂದು

ಸಂದರ್ಭದಲ್ಲಿ ರಂಗ ವಿನ್ಯಾಸದ ಬಗೆಗೇ ಮಾತಾಡುತ್ತಿದ್ದಾಗ– "ರಂಗಭೂಮಿಯೊಳಗ ಅದ್ಭುತ, ಆಡಂಬರ ಇವಕ್ಕೆಲ್ಲಾ ಕಿಮ್ಮತ್ತ ಇಲ್ಲ ನನ್ನ ದೃಷ್ಟ್ಯಾಗ. ಕಥಾ ವಸ್ತುವಿನ ಕೂಡ ಸಂಗೀತಕ್ಕ ಮತ್ತ... ವಾಸ್ತವಕ್ಕ ಭಾಳ ಮಹತ್ವಾ ಕೊಡಾವ ನಾ. ಒಟ್ಟ, ಸಂಗೀತಂದ್ರನ... ನಾಟಕಾ, ನಾಟಕಂದ್ರನ... ಸಂಗೀತ ಅನ್ನೂವ್ಹಾಂಗಿರಬೇಕು; ಅವಕ್ಕಂತಾರ್ರಿಪಾ ನಾಟಕಾ ಅಂತ. ಮತ್ತೆ, ನಿಮಗ ಹ್ಯಾಂಗ ಅನಸ್ತೈತೊ ಏನೋ... ಯಾಕಂದ್ರ ನಾವು ಸ್ವಲ್ಪ ನುರತವರು ನೀವು ಭಾಳ ಕಲ್ತವರು; ಇಷ್ಟ... ಫರಕ ನಮಗ ನಿಮಗ. ಕಲತವರಂದ್ರ ಸ್ವಲ್ಪ ಶ್ಯಾಣ್ಯಾರ ಅಲ್ಲೇನರಿಪಾ...?" ಎಂದು ನಗೆಯಾಡಿ "ಅಲ್ಲ! ತಪ್ಪ ತಿಳಕೋಬ್ಯಾಡ್ರ್ಯಾ ಮತ್ತ; ನನ್ನ ಮಾತಿನ ಧಾಟೀನ ಹಿಂಗ" ಎಂದು ಕೈ ಜೋಡಿಸಿ ಗಂಭೀರವಾಗಿದ್ದರು... ವಿನಯಶೀಲತೆ ಯನ್ನೇ ಉಸಿರಾಗಿ ಹಿಡಿದುಕೊಂಡಿದ್ದ ಬಾಳಪ್ಪಜ್ಜನವರು.

ಕರ್ನಾಟಕದಲ್ಲಿ ಮರಾಠಿ ನಾಟಕಗಳ ಹಾವಳಿಯಿಂದ ಕನ್ನಡ ರಂಗ ಕಲೆಗೆ ಕುಂದುಂಟಾಯಿತೆಂಬ ಮಾತನ್ನು ಸಂಪೂರ್ಣವಾಗಿ ಅಲ್ಲಗಳೆದ ಬಾಳಪ್ಪನವರು ಸ್ವಾಭಾವಿಕವಾಗಿಯೇ ಮರಾಠೀ ನಾಟಕಗಳಲ್ಲಿಯ ನಾಟ್ಯ ಸಂಗೀತಕ್ಕೆ ಅತಿಯಾಗಿ ಮಾರು ಹೋಗಿದ್ದರು. ತತ್ಪರಿಣಾಮವಾಗಿಯೇ ತಾವು ಪ್ರದರ್ಶಿಸಿದ ನಾಟಕಗಳಲ್ಲಿ ಮರಾಠೀ ರಂಗ ಮಾದರಿಯ ಚೀಜಗಳನ್ನೇ ಅಳವಡಿಸಿ ಜನಮೆಚ್ಚುಗೆ ಪಡೆದು ಕಲಾವೈಭವ ನಾಟಕ ಮಂಡಳಿಯನ್ನು ಬೆಳೆಸಿಕೊಂಡು ಕರ್ನಾಟಕದ ತುಂಬೆಲ್ಲ ಹಾಗೂ ಮಹಾರಾಷ್ಟ್ರ ಕೆಲವಡೆಗಳಲ್ಲಿಯೂ ಜಯಭೇರಿ ಹೊಡೆಯುವಂತೆ ಶ್ರಮಿಸಿದರಷ್ಟೇ ಅಲ್ಲದೇ ಮರಾಠಿ ರಂಗಸಂಗೀತಕ್ಕೆ ಸದಾ ಋಣಿಯಾಗಿಯೂ ಇದ್ದರು. ಬೈಲಹೊಂಗಲ ತಾಲೂಕಿನ 'ಏಣಗಿ' ಎಂಬ ಪುಟ್ಟ ಗ್ರಾಮದ ನಿವಾಸಿಗಳಾದ ಬಾಳಪ್ಪನವರು ಅಧಿಕ ರಂಗಾಸಕ್ತಿಯ ಕಾರಣದಿಂದಾಗಿ ಬೆಳಗಾವಿ ಪರಿಸರದ ರಂಗದೊಡನಾಟದಲ್ಲಿ ಇದ್ದುಕೊಂಡು, ನಾಟಕ ಕಂಪನಿಗಳ ಮಾಲೀಕತ್ವವನ್ನು ಪಡೆದು, ದಕ್ಷ ರಂಗಾಡಳಿತಗಾರರಾಗಿ, ರಂಗ ನಿರ್ದೇಶಕರಾಗಿ, ರಂಗನಟರಾಗಿ ರಂಗಭೂಮಿಯ ಸೇವೆಗೈದು ಶತಮಾನದಿಂದೀಚೆಯೂ ಅಸಂಖ್ಯಾತ ಪ್ರೇಕ್ಷಕರ ಹೃದಯದಲ್ಲಿ ಹಸಿರಾಗಿಯೇ ಉಳಿದಿದ್ದಾರೆಂಬುದು ಸರ್ವ ಸಮ್ಮತ ಸಂಗತಿ.

"ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್" ಎಂಬ ಕಾಳಿದಾಸನ ಉಕ್ತಿಯಂತೆ ನಾಟಕ ಕಲೆಯು ವಿಭಿನ್ನ ಕಲಾಸಕ್ತರಿಗೆ ಸಮಾನ ರೀತಿಯಲ್ಲಿ ತೃಪ್ತಿ ನೀಡುವ ಕಲೆಯಾಗಿದೆ ಎಂದು ಹೇಳಿದ್ದನ್ನು ರಂಗಸಂಗಾತಿಗಳಾದ ನಾವೆಲ್ಲರೂ ಒಪ್ಪಿಕೊಳ್ಳುವುದಾದರೆ; ಅದು ವೃತ್ತಿರಂಗಭೂಮಿಯ ಕಲೆ ಮಾತ್ರ ಎಂದು ಹೇಳಬಹುದು. ವೃತ್ತಿರಂಗಭೂಮಿಯ ಕಲೆ ಒಂದು ಸಂಕೀರ್ಣ ಕಲೆಯಾಗಿದ್ದು ಅದು ಹಲವಾರು ರೀತಿಯ ಕಲೆಗಳನ್ನು ದುಡಿಸಿಕೊಳ್ಳುತ್ತಾ ಬಂದುದಷ್ಟೇ ಅಲ್ಲದೇ ಆಯಾ ಕಲೆಗೆ ಸಂಬಂಧ ಪಟ್ಟ ಕಲಾವಿದರನ್ನೂ ಪೋಷಿಸುತ್ತ ಬಂದದ್ದು ಸರ್ವವಿಧಿತ. ಒಟ್ಟಾರೆ, ವೃತ್ತಿ ರಂಗಭೂಮಿ ತಾನೂ ಬದುಕಬೇಕು ಇತರ ಕಲೆಗಳೂ ಜೀವಂತವಾಗಿ ಇರಬೇಕು ಎಂಬ ವಿಶಾಲ ಮನೋಭಾವನೆಯನ್ನು ತಳೆದದ್ದಾಗಿದೆ.

ಹೀಗಾಗಿ, ಇದು ಹಲವಾರು ರೀತಿಯ ಕಲೆಗಳನ್ನು ಮೇಳೈಸಿಕೊಂಡು ಬಂದದ್ದು ವಿಶೇಷವಾಗಿತ್ತು. ಅದರಲ್ಲೂ ಚಿತ್ರಕಲೆಗೆ ದೊರೆತ ಅಗ್ರಸ್ಥಾನವೂ ಸೇರಿದಂತೆ ಮುಖವರ್ಣಿಕೆ, ವೇಷಭೂಷಣ ಸೃಷ್ಟಿ, ಕಾಷ್ಟ ಶಿಲ್ಪ, ಪ್ಲಾಸ್ಟರ್ ಹಾಗೂ ಕಾಗದ ಮುದ್ದೆ ಶಿಲ್ಪ, ಬಡಿಗತನ, ಹೊಲಿಗೆ ಕಲೆ, ರಂಗಸಜ್ಜಿಕೆ ನಿರ್ಮಾಣ, ಬಣ್ಣ-ಬೆಳಕಿನ ವಿನ್ಯಾಸ, ರಂಗಚಮತ್ಕಾರ ಸೃಷ್ಟಿ, ಹಾರ್ಮೋನಿಯಂ-ತಬಲಾ-ಕೊಳಲು-ಪಿಟೀಲು ಇತರೆ ವಾದನ ಕಲೆ, ನಾಟಕ ರಚನೆ, ನಿರ್ದೇಶನ, ಅಭಿನಯ, ಸಂಗೀತ, ನೃತ್ಯ, ಸಾಹಸ ಮುಂತಾದ ಕಲೆಗಳು ವೃತ್ತಿ ರಂಗಭೂಮಿಯಲ್ಲಿ ಸ್ಥಾನ ಪಡೆದು ಒಟ್ಟು ರಂಗಕಲೆ ಕ್ರಮೇಣ ತನ್ನ ಸ್ವರೂಪವನ್ನೇ ಬದಲಾಯಿಸಿಕೊಂಡಿತು. ಅತ್ಯಧಿಕ ಜನಾಕರ್ಷಣೆಗೆ ಮೊದಲಾಗಿ ಒಂದು ಅಭೂತಪೂರ್ವ ಇತಿಹಾಸವನ್ನೇ ನಿರ್ಮಿಸಿತು. ನಿಜಕ್ಕೂ ಈಗ ಅದು ಗತ ವೈಭವದ ರಮ್ಯೇತಿಹಾಸವೇ ಸರಿ!

ಈ ಮೇಲಿನ ಸಂಗತಿಗಳಿಗೆ ಸಂಬಂಧಿಸಿ ಸ್ಥೂಲವಾಗಿ ಹೇಳುವುದಾದರೆ_ ಆಕರ್ಷಕ ರಂಗವಿನ್ಯಾಸ, ಶ್ರೇಷ್ಠ ನಾಟಕ ಸಾಹಿತ್ಯ, ಸಮರ್ಥ ಅಭಿನಯ, ಪ್ರೌಢ ಸಂಗೀತ, ಪ್ರಸಾಧನ ಹಾಗೂ ವೇಷಭೂಷಣ ವೈಖರಿ ಮುಂತಾದವುಗಳಿಂದಷ್ಟೇ ಅಲ್ಲದೆ, ಪವಾಡ ಸದೃಶ್ಯ ರಂಗಚಮತ್ಕಾರಗಳು ಮತ್ತು ವರ್ಣರಂಜಿತ ಬಣ್ಣ-ಬೆಳಕಿನ ವಿದ್ಯಮಾನಗಳೂ ವೃತ್ತಿ ರಂಗಭೂಮಿಯ ಸುವರ್ಣಯುಗದ ಸೃಷ್ಟಿಗೆ ಪ್ರಮುಖ ಪಾತ್ರವಹಿಸಿದ್ದವೆಂದು ಹೇಳ ಬಹುದು. ಈ ನಿಟ್ಟಿನಲ್ಲಿ ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘದ ರಂಗೇತಿಹಾಸ ಅವಿಸ್ಮರಣೀಯ!

ಕಲಾವೈಭವಕ್ಕಿಂತಲೂ ಮುಂಚಿತವಾಗಿ ಪ್ರಾರಂಭವಾಗಿದ್ದ ವೈಭವಶಾಲಿ ನಾಟ್ಯ ಸಂಘದ ಪ್ರಥಮ ಆಕರ್ಷಣೆ 'ಪತಾಣ ಪಾಶ' ನಾಟಕ. ಇದರ ನಂತರ 'ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ' 'ಧರ್ಮಪತ್ನಿ' 'ಸಿಂಧೂರ ಲಕ್ಷ್ಮಣ' ಮುಂತಾದ ನಾಟಕಗಳೂ ಪ್ರದರ್ಶಿತವಾದವು. ಆದರೆ ಈ ಎಲ್ಲ ನಾಟಕಗಳಲ್ಲಿ ರಂಗವಿನ್ಯಾಸಕ್ಕೆ ಸಂಬಂಧಿಸಿ ಆಕರ್ಷಣೆ, ವಿಶೇಷತೆ ಏನೂ ಇದ್ದಿರಲಿಲ್ಲ. ರಂಗಮಂಟಪಕ್ಕೆ ಏಕ ಚೌಕಟ್ಟಿನ (Single frame) ಮುಖರಂಗಸಜ್ಜಿಕೆಯನ್ನು (Proscenium Stage) ಮಾತ್ರ ಅಳವಡಿಸಿ ಕೊಂಡು, ಒಳಾಂಗಣಕ್ಕೆ ಒಂದು ರಾಸ್ತಾ, ಒಂದು ಮನೆ ಮತ್ತೊಂದು ಜಂಗಲ್ ಚಿತ್ರಿತ ಪರದೆಗಳನ್ನಷ್ಟೆ ಉಪಯೋಗಿಸಲಾಗುತ್ತಿತ್ತು. ಅಂದಿನ ರಂಗವಿನ್ಯಾಸದ ಪ್ರಮುಖ ಆಕರ್ಷಣೆಗಳಾದ ಈ ಎಲ್ಲವುಗಳನ್ನು ರಾಮಚಂದ್ರ ಡೋಂಗರೆ ಎಂಬ ರಂಗಚಿತ್ರಕಲಾವಿದರು (Painter) ತಯಾರಿಸುತ್ತಿದ್ದರು.

ಡೋಂಗರೆಯವರು ಚಲನಚಿತ್ರ ಖ್ಯಾತ ನಿರ್ದೇಶಕ ವಿ. ಶಾಂತಾರಾಮ ಅವರ ಆತ್ಮೀಯ ನಿಕಟವರ್ತಿಯಾಗಿದ್ದು ಸಿನೇ ಸ್ಟುಡಿಯೋದಲ್ಲಿ ಕೆಲಸ ಮಾಡಿದಂಥವರೂ ಆಗಿದ್ದರು. ಆದರೂ ಇವರು ತಮ್ಮ ಆಸಕ್ತಿಯ ಮೇರೆಗೆ ವೃತ್ತಿ ರಂಗಚಿತ್ರಕಲೆಯಲ್ಲಿ ಸೇವೆ ಸಲ್ಲಿಸಬೇಕೆಂಬ ಹಂಬಲವನ್ನು 1940 ಕ್ಕಿಂತಲೂ ಮೊದಲು ದಾವಣಗೆರೆಯ ಕಂಚಿಗೆರೆ ಶ್ರೀ

ಜಯಲಕ್ಷ್ಮೀ ನಾಟ್ಯ ಸಂಘದಲ್ಲಿ ಪೂರೈಸಿಕೊಳ್ಳಲು ಮುಂದಾದರು. ನಂತರ ವೈಭವಶಾಲಿ ನಾಟಕ ಮಂಡಳಿಗೆ ಬಂದರು. ಮುಂದೆ 1942ರ ಸುಮಾರಿಗೆ ರಾಮಚಂದ್ರ ಸಿರ್ಸಿ ಎಂಬ ಚಿತ್ರಕಲಾಸಕ್ತರು ಈ ಕಂಪನಿಗೆ ಸೇರಿಕೊಂಡು ಡೋಂಗರೆಯವರ ಆಶ್ರಯದಲ್ಲಿ ಅಡಿಯಾಳಾಗಿದ್ದುಕೊಂಡು ರಂಗ ಚಿತ್ರಕಲೆಯನ್ನು ಹೆಚ್ಚಿನ ರೀತಿಯಲ್ಲಿ ರೂಢಿಸಿ ಕೊಂಡರು. ಇವರು ಇದಕ್ಕಿಂತಲೂ ಪೂರ್ವದಲ್ಲಿ ಸೂಡಿ ಹುಚ್ಚಪ್ಪನವರ ಗುರು ಸೇವಾ ಸಂಗೀತ ನಾಟಕ ಮಂಡಳಿ, ಚಿಕ್ಕೋಡಿ. ಇವರ ಕಂಪನಿಯಲ್ಲಿ ಅವರಿವರು ಹೇಳಿದ ಕೆಲಸಗಳನ್ನು ಮಾಡಿಕೊಂಡು ಅಲ್ಲಿದ್ದ ಜನಾರ್ಧನ ರಾಣೆ ಪೇಂಟರಿಂದ ರಂಗಚಿತ್ರಕಲೆಯಲ್ಲಿ ಒಲವನ್ನು ಬೆಳಸಿಕೊಂಡಿದ್ದರು. ಬಾಳಪ್ಪನವರ ಕಂಪನಿಯ ಮತ್ತೊಂದು ಪ್ರಸಿದ್ಧ ನಾಟಕ 'ಶ್ರೀರಾಮ ಪಟ್ಟಾಭಿಷೇಕ' ಇದೇ ನಾಟಕದ ಒಂದು ದೃಶ್ಯವನ್ನು ಕುರಿತು ಜನಾರ್ಧನ ಪೇಂಟರ್ ಬಹಳ ಆಕರ್ಷಣೀಯವಾಗಿ ಅಂಕಪರದೆ ಯನ್ನು ಬರೆದಿದ್ದರಂತೆ. ಅದರಲ್ಲಿ ರಾಣೆಯವರು ತಾವು ಬಿಟ್ಟಂಥ ದೊಡ್ಡ ದೊಡ್ಡ ಮೀಸೆಗಳನ್ನೇ ದಶರಥ ಮಹಾರಾಜನಿಗೂ ಮಾಡಿದ್ದರೆಂದು ಬಾಳಪ್ಪಜ್ಜನವರು ಒಮ್ಮೆ ನಕ್ಕು ನಕ್ಕು ಹೇಳಿದ್ದರು.

ವೈಭವಶಾಲಿಗೆ ಸೇವೆ ಸಲ್ಲಿಸಿದ ಡೋಂಗ್ರೆ ಪೇಂಟರು, ಕಲಾದಗಿ ಪೇಂಟರು ಹಾಗೂ ಸಿರ್ಸಿ ಪೇಂಟರ್‌ಗಳೇ ಬಾಳಪ್ಪನವರ ಸಂಪೂರ್ಣ ಸ್ವಾಮಿತ್ವದ ಕಲಾವೈಭವ ನಾಟ್ಯ ಸಂಘದಲ್ಲೂ ಸೇವೆ ಮುಂದುವರೆಸಿದರು. ಹೊಸದಾಗಿ ಬಂದಿದ್ದ ಇಲಕಲ್ಲಿನ ಮಹಾಂತಪ್ಪ ಮರೋಳ ಪೇಂಟರ್ ಕೂಡ ಇಲ್ಲಿಯೇ ನೆಲೆ ಕಂಡುಕೊಂಡಿದ್ದರು. ಇಲ್ಲಿಂದಲೇ ರಂಗಮಂಟಪವು ಮುಖರಂಗಸಜ್ಜಿಕೆಯು ದ್ವೈಚೌಕಟ್ಟನ್ನು (Double frame) ಪಡೆದು ಸನ್ನಿವೇಶಗಳ ವಾಸ್ತವತೆಯನ್ನು ಎತ್ತಿ ಹಿಡಿಯಲು ಪ್ರಾರಂಭಿಸಿತು. ಸಂಘವು ಈ ಮಾದರಿಯ ರಂಗ ಸಜ್ಜಿಕೆಯಲ್ಲಿ ಸಾಮಾಜಿಕ ನಾಟಕಗಳೂ ಸೇರಿದಂತೆ ಕಿತ್ತೂರು ಚನ್ನಮ್ಮ, ಕಲ್ಯಾಣ ಕ್ರಾಂತಿ, ಶ್ರೀರಾಮ ಪಟ್ಟಾಭಿಷೇಕ, ಹೇಮರಡ್ಡಿ ಮಲಮ್ಮ, ಭಕ್ತ ಕುಂಬಾರ, ಜಗಜ್ಯೋತಿ ಬಸವೇಶ್ವರ ಹೀಗೆ 60–70 ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿತು.

'ಕಿತ್ತೂರ ಚನ್ನಮ್ಮ' ನಾಟಕದ ಕವಿ ಶಿವಲಿಂಗ ಶಾಸ್ತ್ರಿಗಳ ಕಲ್ಪನೆಯ ಮೇರೆಗೆ ವೇಷಭೂಷಣಗಳನ್ನು ಹೊಂದಿಸಿಕೊಂಡು ಪ್ರದರ್ಶಿಸುತ್ತಿದ್ದ ಆ ನಾಟಕದಲ್ಲಂತೂ ಜೀವಂತ ಆನೆಯನ್ನೇ ರಂಗಸ್ಥಳಕ್ಕೆ ಕರೆತಂದು ಮಲ್ಲಪ್ಪ ಶೆಟ್ಟಿಯನ್ನು ಅದರ ಕಾಲಿಗೆ ಹಾಕಿ ತುಳಿಸುವ ಭ್ರಮಾಧೀನ ದೃಶ್ಯ ಅಲ್ಲಿಯ ವಿಶೇಷ ರಂಗವ್ಯವಸ್ಥೆಯಾಗಿತ್ತು. ಆ ಸಂದರ್ಭದ ಬೆಳಕು ಹಾಗೂ ಹಿನ್ನೆಲೆ ಸಂಗೀತ ಬಿಂಬಿಸುವ ಚಾಕಚಕ್ಯತೆ ಪ್ರೇಕ್ಷಕರ ಮೈ ನವಿರೇಳುವಂತೆ ಮಾಡುತ್ತಿದ್ದವು. ಈ ನಾಟಕದಲ್ಲಿ ಕೋಟೆ ಕೊತ್ತಲುಗಳ ಹಾಗೂ ಅರಮನೆ ಸನ್ನಿವೇಶಗಳನ್ನು ವರ್ಣಮಯ ಚಿತ್ರಿತ ದೃಶ್ಯಜೋಡಣೆಗಳ (Settings) ಮೂಲಕ ಬೇಕಾದಷ್ಟು ಅದ್ಭುತವಾಗಿ ಸೃಷ್ಟಿಸಿ ಪ್ರೇಕ್ಷಕರನ್ನು ದಂಗುಬಡಿಸಬಹುದಿತ್ತು. ಆದರೆ, ಅದಕ್ಕೆಲ್ಲಾ ನೀರಿನಂತೆ ದುಡ್ಡು ಖರ್ಚುಮಾಡಲು ಬಾಳಪ್ಪನವರಿಗೆ ಮನಸ್ಸಿರಲಿಲ್ಲ

ಆಡಂಬರವೆಂದರೆ ಅವರಿಗೆ ಅಲರ್ಜಿ. ಹೀಗಾಗಿ ಕೋಟೆ ಪರದೆ, ಅರಮನೆ ಪರದೆ ಮುಂತಾದವುಗಳನ್ನು ಆಕರ್ಷಕ ಬಣ್ಣಗಳಿಂದ ಬರೆಯಿಸಿ ಉಪಯೋಗಿಸುತ್ತಾ ಬಂದಿದ್ದರು. ಕಿತ್ತೂರ ಚನ್ನಮ್ಮ ನಾಟಕಕ್ಕೆ ಸಂಬಂಧಪಟ್ಟ ದೃಶ್ಯಪರದೆಗಳನ್ನು (Sceneries) ಖಿಲ್ಬಲ್ ಗ್ರಾಮದ ರಾಯಚೂರ ಪೇಂಟರು ರಾಯಚೂರು ಕೋಟೆಯ ಯಥಾವತ್ ಪ್ರತಿ ಸೃಷ್ಟಿಯನ್ನೇ ಗೈದಿದ್ದರೆನ್ನಲಾಗಿದೆ. ಅದು ವಿಮರ್ಶಕರ ದೃಷ್ಟಿಯಲ್ಲಿ ಅಭಾಸವೆನಿಸಿದರೂ ಪ್ರೇಕ್ಷಕರಿಗೆ ರಂಜನೀಯವೆನಿಸಿತ್ತು. ಒಟ್ಟಾರೆ, ರಂಗವಿನ್ಯಾಸ ಏನಿದ್ದರೂ ನಟರ ವಾಚಿಕಾಭಿನಯ ಮತ್ತು ಆಂಗಿಕಾಭಿನಯಗಳೇ ನಮ್ಮ ಬಂಡವಾಳ ಎಂದು ಬಾಳಪ್ಪನವರು ಪದೇ ಪದೇ ಹೇಳುತ್ತಿದ್ದರು.

ಬಾಳಪ್ಪನವರ ಕಂಪನಿ ಮೊದಲು ಅ. ನ. ಕೃ ಅವರ 'ಕಲ್ಯಾಣ ಕ್ರಾಂತಿ' ನಾಟಕವನ್ನು ಆಡುತ್ತಿತ್ತು. ಅದು 1956 ರಲ್ಲಿ ಸಿರ್ಸಿ ಕ್ಯಾಂಪ ಮಾಡಿದಾಗ ಅಲ್ಲಿ ಡೋಂಗರೆ ಹಾಗೂ ಸಹ ಚಿತ್ರಕಲಾವಿದರು ಕೂಡಿಕೊಂಡು ಸುಮಾರು ಇಪ್ಪತ್ತು ಅಡಿ ಎತ್ತರದ ಅಶ್ವಾರೂಢ ಬಸವೇಶ್ವರನ ಭವ್ಯ ಕಟೌಟನ್ನು ನಾಟಕದ ಪ್ರಚಾರಾರ್ಥವಾಗಿ ಅಳವಡಿಸಿದ್ದರಂತೆ! ಮಹಾಚುನಾವಣೆಯ ಆ ಸಂದರ್ಭಕ್ಕೆ ಕಾಂಗ್ರೆಸ್ ಪ್ರಚಾರಕ್ಕಾಗಿ ಸಿರ್ಸಿಗೆ ಆಗಮಿಸಿದ್ದ ಜವಾಹರಲಾಲ ನೆಹರೂರವರ ದೃಷ್ಟಿ ಆ ಕಟೌಟನತ್ತ ಹರಿದು ತಕ್ಷಣ ಕಾರ್ ನಿಲ್ಲಿಸಿ ಕ್ಷಣ ಹೊತ್ತು ಸ್ತಂಭೀಭೂತರಾಗಿ ಬಸವಣ್ಣನವರ ಚಿತ್ರಕ್ಕೆ ಕೈಮುಗಿದಿದ್ದರಂತೆ! ಇಂಥಾ ಒಂದು ಅದ್ಭುತ ಚಿತ್ರರಚನಾ ವೈಖರಿಯನ್ನು ಡೋಂಗರೆಯವರು ರೂಢಿಸಿಕೊಂಡಿದ್ದರೆಂಬುದು ಹೆಮ್ಮೆಯ ವಿಷಯ! ಆದರೆ... ಬಹು ವಿಷಾದದ ಸಂಗತಿಯೆಂದರೆ... ಡೋಂಗರೆ ಪೇಂಟರ್ ಅದೇ ಸಿರ್ಸಿ ಕ್ಯಾಂಪಿನಲ್ಲಿದ್ದಾಗ ಅರ್ಧಾಂಗವಾಯುವಿಗೆ ತುತ್ತಾಗಿ ಕಲಾವೈಭವ ಯಾತ್ರೆ ಮುಗಿಸಿ ಕೈಲಾಸವೈಭವ ಜಾತ್ರೆಗೆ ಸಿದ್ಧಗೊಂಡುದು!

ನಂತರದ ದಿನಗಳಲ್ಲಿ– ಅ. ನ. ಕೃ ಮತ್ತು ಹಳಕಟ್ಟಿಯವರ ಸಂಪಾದನೆಗಳನ್ನು ಕ್ರೋಢೀಕರಿಸಿ ಗೋಕರ್ಣದ ಎಸ್. ಎಮ್. ಜೋಶಿಯವರು ಬರೆದ 'ಜಗಜ್ಯೋತಿ ಬಸವೇಶ್ವರ' ನಾಟಕದ ಪ್ರದರ್ಶನಗಳು ಬಹುಪ್ರಯೋಗಗತಿಯಲ್ಲಿ ನಾಡಿನಾದ್ಯಂತ ಜಯಭೇರಿ ಹೊಡೆದವು. ಈ ನಾಟಕದಲ್ಲಿ ಕೈಲಾಸದಿಂದ ನಂದೀಶನು ಮಾದರಸನ ಮನೆಯಲ್ಲಿ ಬಸವೇಶ್ವರನಾಗಿ ಜನಿಸುವುದನ್ನು ದೀಪ ಚಲನೆಯ ಚಮತ್ಕಾರದ ಮೂಲಕ ಸಾಂಕೇತಿಕವಾಗಿ ನಕ್ಷತ್ರವೊಂದು ಕೈಲಾಸದಿಂದ ಭೂಲೋಕಕ್ಕೆ ಇಳಿಯಿತು ಎಂಬಂತೆ ತೋರಿಸಲಾಗುತ್ತಿತ್ತು. ಅದರಂತೆ ಹರಳಯ್ಯ ದಂಪತಿಗಳು ತೊಡೆಯ ಚರ್ಮವನ್ನು ಸುಲಿದು ಪಾದುಕೆ ಮಾಡುವದನ್ನು ನೆರಳು ಬೆಳಕಿನ ಹಿನ್ನೆಲೆಯಲ್ಲಿ ತೋರಿಸುತ್ತಿದ್ದರು. ಹಾಗೆಯೇ, ಬಸವೇಶ್ವರನಿಂದ ಸಿಂಹಾಸನ ನಮಸ್ಕರಿಸಿಕೊಳ್ಳುವಾಗ ಸಿಂಹಾಸನ ಉರಿದೇಳುವ ದೃಶ್ಯವನ್ನು ಅದ್ಭುತವಾಗಿ ತೋರಿಸಿದ್ದರು. ನಿಧಿ ಪತ್ತೆಯ ಪ್ರಸಂಗವೂ ಅಷ್ಟೇ. ಕಲಾವೈಭವ ನಾಟಕ ಮಂಡಳಿಯ ಹೆಸರು ಇತಿಹಾಸದಲ್ಲಿಯೇ ಅಜರಾಮರವಾಗಿ ಉಳಿದುಕೊಂಡು ಬಂದದ್ದು ಇದೇ 'ಬಸವೇಶ್ವರ' ನಾಟಕದಿಂದ. ಈ ನಾಟಕದಲ್ಲಿ

ಬಸವೇಶ್ವರನ ಪಾತ್ರ ವಹಿಸುತ್ತಿದ್ದ ಬಾಳಪ್ಪನವರು ವೇಷಭೂಷಣಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದರು. ಬಸವೇಶ್ವರನ ಪಾತ್ರಧಾರಿಯಾಗಿದ್ದ ಇವರು ಜೀವಂತ ಕುದುರೆ ಏರಿ ರಂಗದ ಮೇಲೆ ಬಂದಾಗ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಹರ್ಷೋದ್ಗಾರಿಸಿ ಭಕ್ತಿ ಶ್ರದ್ಧೆಗಳಿಂದ ಕೈ ಜೋಡಿಸುತ್ತಿದ್ದರು. ಇಲ್ಲಿ, ಪರಿಣಿತ ಪೇಂಟರ್ಸ್ ಕೈಚಳಕದಿಂದ ತಯಾರಿಸಲ್ಪಟ್ಟ ರಾಜ ಬೀದಿಯ ಪ್ರತಿ ಸೃಷ್ಟಿಯನ್ನು ಹೊಂದಿದ ಚಿತ್ರಿತ ಪರದೆಯ ದೃಶ್ಯಾವಳಿಯು ಹಿನ್ನೆಲೆ ಸನ್ನಿವೇಶಕ್ಕೆ ವಾಸ್ತವವನ್ನು ತಂದುಕೊಟ್ಟಿತ್ತೆಂಬ ಸಂಗತಿ ಅಗಾಧವಾದುದಾಗಿತ್ತು! ಅದೇ ಪ್ರಸ್ತುತ ಸನ್ನಿವೇಶಕ್ಕೆ ರಂಗವಿನ್ಯಾಸದ ವಿಶೇಷತೆಯಾಗಿದ್ದಿತು.

ಅಷ್ಟೊತ್ತಿಗಾಗಲೇ ಹೊಸದಾಗಿ ಸೇರಿಕೊಂಡ ಅಪ್ಪುರಾಜ ಪೇಂಟರ್, ಕೃಷ್ಣಾ ಪೇಂಟರ್, ಮರಿಸ್ವಾಮಿ ಪೇಂಟರ್ ಜಾಲಿಹಾಳ ಪೇಂಟರ್ ಮುಂತಾದವರೆಲ್ಲ ರಂಗ ವಿನ್ಯಾಸಕ್ಕೆ ಸಂಬಂಧಿಸಿದ ಎಲ್ಲ ನಮೂನೆಯ ಪರದೆ ಹಾಗೂ ದೃಶ್ಯ ಜೋಡಣೆಗಳನ್ನು ಸೃಷ್ಟಿಸಿದರು. ಪ್ರತ್ಯೇಕ ನಾಟಕಕ್ಕಾಗಿ ಪ್ರತ್ಯೇಕ ದೃಶ್ಯಾವಳಿಗಳನ್ನು ತಯಾರಿಸಿದರು. ಸಂಬಂಧಪಟ್ಟ ಜಾಲರಿ (Short drops) ಕವಾಟು ಅಥವಾ ಬದಿಯ ದೃಶ್ಯನಿಲುವು (Side wings) ಖಾಯಂವಿಂಗ್ಸ್ (Permanent wings) ಮೂಲೆ ಜೋಡಣೆ (Cornice) ಮುಂತಾದವುಗಳನ್ನೆಲ್ಲ ತಯಾರಿಸಿ ಉಪಯೋಗಿಸಿಕೊಂಡು ಪ್ರೇಕ್ಷಕರಿಗೆ ಕಥಾ ಸನ್ನಿವೇಶಗಳ ಸಹಜ ಸ್ಥಿತಿಯನ್ನು ಮನಗಾಣಿಸಲು ಪ್ರಯತ್ನಿಸಿದ್ದರು. ಅಲ್ಲಿಂದ 'ಮಾವ ಬಂದನಪೊ ಮಾವ' ನಾಟಕವನ್ನು ತಿರುಗುವ ರಂಗಸಜ್ಜಿಕೆ (Revolving stage) ಯಲ್ಲಿ ಪ್ರದರ್ಶಿಸಹತ್ತಿದರು. ಈ ಅಳವಡಿಕೆಯ ವ್ಯವಸ್ಥೆಯನ್ನೆಲ್ಲ ಕೃಷ್ಣಾ ಪೇಂಟರ್, ಮರಿಸ್ವಾಮಿ ಪೇಂಟರ್ ಹಾಗೂ ರಾಮಚಂದ್ರ ಸಿರ್ಸಿ ಪೇಂಟರೇ ವಹಿಸಿಕೊಂಡಿದ್ದರು ಎನ್ನಲಾಗಿದೆ. ಈ ವ್ಯವಸ್ಥೆಯಿಂದ ಸನ್ನಿವೇಶಗಳನ್ನು ಕ್ಷಣ ಮಾತ್ರದಲ್ಲಿಯೇ ಬದಲಾವಣೆ ಮಾಡಿಕೊಳ್ಳುವ ಅನುಕೂಲವಿತ್ತು.

ರಾಯಚೂರ ಪೇಂಟರ್ ತಮ್ಮ ರಂಗಚಿತ್ರಕಲಾ ನೈಪುಣ್ಯತೆಯೊಂದಿಗೆ ಉತ್ತಮ ನಾಟಕಕಾರರೂ ಆಗಿದ್ದರು. ಅವರು ಬರೆದ ಮೂರು ನಾಟಕಗಳನ್ನು ಕಲಾವೈಭವ ನಾಟ್ಯ ಸಂಘವು ಬಹು ಪ್ರಯೋಗಾತ್ಮಕವಾಗಿ ಪ್ರದರ್ಶಿಸಿತ್ತು. ಅದರಲ್ಲಿ ಭಕ್ತ ಕುಂಬಾರ ನಾಟಕ ಒಳ್ಳೆಯ ಸಂಪಾದನೆ ಮಾಡಿಕೊಟ್ಟಿತ್ತೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು ಬಾಳಪ್ಪಜ್ಜನವರು. ಕಂಪನಿಯಲ್ಲಿ ಕಲಾದಗಿ ಪೇಂಟರ್ ಹಾಗೂ ಸಿರ್ಸಿ ಪೇಂಟರ್ ಈರ್ವರೂ ಒಳ್ಳೆಯ ಹಾಸ್ಯ ನಟರೂ ಆಗಿದ್ದರು. ಸಿರ್ಸಿ ಪೇಂಟರ್ ಮೊದಲಿನಿಂದಲೂ ವಾಯುಪೀಡಿತರಾಗಿ ಬಳಲುತ್ತಿದ್ದರೂ ಕೂಡ ಪೇಂಟಿಂಗ ಕೆಲಸವನ್ನಾಗಲೀ ಅಭಿನಯಿಸುವುದನ್ನಾಗಲೀ ಬಿಟ್ಟಿರಲಿಲ್ಲ.

ಮಂಡಳಿಯು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯಲ್ಲಿ 'ಕಿತ್ತೂರು ಚನ್ನಮ್ಮ' ನಾಟಕ ಪ್ರಯೋಗವನ್ನು ಮುಗಿಸಿಕೊಂಡು ಗರಗ ಕ್ಯಾಂಪು ಮಾಡಿತು. ಮೊದಲೇ ರೋಗ್ರಸ್ತರಾದ ಪೇಂಟರ್ ಸಿರ್ಸಿಯವರ ಕಾಲುಗಳು ಊದಿಕೊಂಡು ಕೂಡ್ರಲು ಏಳಲು

ಬರುತ್ತಲೇ ಇರಲಿಲ್ಲ. ಅಂಥದಲ್ಲಿಯೇ 'ಬಸವೇಶ್ವರ' ನಾಟಕದ ಭಟ್ಟನ ಪಾತ್ರದಲ್ಲಿ ಕಾಣಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಗಿತ್ತು. ಆ ಪ್ರಸಂಗದಲ್ಲಿ ಪರದೆ ಕೆಳಗಿಳಿದಾಗಲೇ ಸಿರ್ಸಿಯವರನ್ನು ಇಬ್ಬರು ಅನಾಮತ್ತಾಗಿ ಎತ್ತಿಕೊಂಡು ಬಂದು ರಂಗಸಜ್ಜಿಯ ಮೇಲೆ ಬಿಟ್ಟು ಹೋಗುತ್ತಿದ್ದರಂತೆ! ಅದೇ ಸ್ಥಿತಿಯಲ್ಲಿಯೇ ಅವರು ತಮ್ಮ ನಟನಾ ಅಸಾಮರ್ಥ್ಯವನ್ನು ಪ್ರೇಕ್ಷಕರಿಗೆ ತಿಳಿಯಗೊಡದಂತೆ ಅಭಿನಯಿಸುತ್ತಿದ್ದರಂತೆ. ಹೀಗೊಂದು ದಿನ ಅದೇ ಕ್ಯಾಂಪಿನಲ್ಲಿದ್ದಾಗಲೇ ಯಾವುದೋ ಸಂದರ್ಭದಲ್ಲಿ ಕಾಲುಜಾರಿ ಬಿದ್ದ ನೆಪವಾಗಿ ಪೇಂಟರ್ ಸಿರ್ಸಿಯವರು ರಂಗಕಲಾಧೀನರಾದರೆಂದು ಹೇಳುತ್ತ ಕಣ್ಣಂಚನ್ನು ಒರೆಸಿಕೊಂಡಿದ್ದರು ಬಾಳಪ್ಪಜ್ಜನವರು.

ಮೊದಲಿನ ಪೇಂಟರ್ಸ್ ಒಬ್ಬೊಬ್ಬರಾಗಿ ಕಡಿಮೆಯಾಗುತ್ತಿದ್ದಂತೆ ವೀರತ್ತಯ್ಯ ಪೂಜಾರ ಪೇಂಟರ್ ಹಾಗೂ ಇಲಕಲ್ಲಿನ ಅಮೀನ್ ಪೇಂಟರ್ ಕೂಡ ಕೆಲವು ನಾಟಕಗಳಿಗೆ ಪರದೆ ಸೆಟ್‌ಗಳನ್ನು ಬರೆದು ಕೊಟ್ಟಿದ್ದಾರೆ. ಆಕರ್ಷಕ ಬಣ್ಣಗಳಿಂದ ರಮ್ಯವಾಗಿ ಕಾಣುವಂತೆ ಚಿತ್ರಿಸುವಲ್ಲಿ ಇಲಕಲ್ಲಿನ ಅಮೀನ ಪೇಂಟರ್ ಹೆಸರಾಗಿದ್ದರು. ಒಮ್ಮೆ ಅವರು ಪರದೆ ಬರೆಯುವಾಗ ಬಂದು ನೋಡಿದ ಬಾಳಪ್ಪನವರು– "ಥೆ... ಥೆ..ಥೆ...! ಏನಿದು ಪೇಂಟಿಂಗು ಏನು ಬಣ್ಣ... ಎದ್ದು ಕಣ್ಣಿಗೆ ಹೊಡಿಯೂವಂಗ ಐತಲ್ಲೋ ಅಮೀನಸಾಬ..? ಹಿಂಗ 'ಝುಗ್‌ಭಗ್' ಅನ್ನೂದ ಬ್ಯಾಡಪಾ ನಮಗ..., ಮರಾಠೀ ನಾಟಕದ ಪರದೆನ್ನೋಡೀಯಿಲ್ಲೋ? ಎಷ್ಟ ಸೌಮ್ಯ ಬಣ್ಣದಿಂದ ಕೂಡಿರತಾವು ಏನತಾನ...! ನೋಡಾಕ ಎಷ್ಟ ಸ್ವಾಭಾವಿಕ ದೃಶ್ಯ ಅನಸ್ತಾವು... ಹಾಂಗಿರಬೇಕಪಾ! ಒಣಾ ಆಡಂಬರ ಬ್ಯಾಡಪಾ ನಮಗ... ಕೆಲಸದಾಗ ಸಹಜತನಾ ಅನ್ನೂದ ಇರಬೇಕು ಅಷ್ಟ." ಎಂದಾಗ ತಕ್ಷಣ ಅಮೀನ ಪೇಂಟರ್ ಮನಸ್ಸನ್ನು ಮರಾಠೀ ನಾಟಕ ದೃಶ್ಯಾವಳಿಯ ಕಡೆ ಕಳಿಸಿದ್ದರಂತೆ. ಯಾಕಂದರೆ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲೂ ಕೆಲಸ ಮಾಡಿದ ಓರ್ವ ಪರಿಣಿತ ರಂಗ ಚಿತ್ರಕಲಾವಿದರಾಗಿದ್ದರು ಅಮೀನ್.

ಯಾವುದೇ ರೀತಿಯ ಆಡಂಬರ, ಅದ್ಭುತ, ಅದ್ದೂರಿ ಇಲ್ಲದೇ ಹೊಸ ತಂತ್ರಯುಕ್ತ ನಾಟಕವನ್ನು ಆಡಬೇಕೆಂಬ ಬಯಕೆ ಬಹಳವಾಗಿತ್ತು. ಅಂತೆಲೇ ಮಹಾಂತೇಶ ಶಾಸ್ತ್ರಿಗಳಿಂದ 'ಕುಂಕುಮ' ಆರ್. ಡಿ. ಕಾಮತ್‌ರಿಂದ 'ದೇವರಮಗು' ಎಂಬ ಒಂದಂಕಿನ ನಾಟಕಗಳನ್ನು ಬರೆಸಿ ಪ್ರಯೋಗಕ್ಕೆ ತಂದು ಒಳ್ಳೆಯ ಯಶಸ್ಸನ್ನು ಪಡೆದರು. ಇಲ್ಲಿ ಪದೇಪದೇ ಪರದೆ ಪರಿವರ್ತನಾ ಕಾರ್ಯವಿದ್ದಿಲ್ಲ; ದೃಶ್ಯ ಜೋಡಣೆಗಳನ್ನು ಜೋಡಿಸುವ ಗೋಜುಗೊಂದಲವಿದ್ದಿಲ್ಲ. ಏನಿದ್ದರೂ ಸೂಕ್ತ ವೇಷಭೂಷಣಗಳೊಂದಿಗೆ ಪಾತ್ರಧಾರಿಗಳ ಭಾವನಾತ್ಮಕ ಸಂಭಾಷಣೆ, ಸಹಜಾಭಿನಯ, ಸಂಗೀತ, ಹಿನ್ನೆಲೆ ವಾದ್ಯ ಸಂಗೀತಕ್ಕೇ ಒತ್ತುಕೊಡಲಾಗಿತ್ತು.

ಒಟ್ಟಾರೆ, ಬಾಳಪ್ಪನವರ ಕಂಪನಿಯಲ್ಲಿ ಶ್ರೇಷ್ಠ ಹಾರ್ಮೋನಿಯಂ ವಾದಕರಾಗಿ ಕಮತಗಿಯ ಜಂಪಣ್ಣ ಮಾಸ್ತರು. ಚನಬಸಯ್ಯ ಕಲಕೋಟಿ, ಲಿಂಗಯ್ಯ ಸ್ವಾಮಿಗಳು,

ಮುಂತಾದವರಾಗಿದ್ದರೆ ತಬಲಾ ಪಟುಗಳಾಗಿ ಅಮ್ಮಣಿಗಿ ರಾವಸಾಹೇಬ, ಕಾಶೀಮಸಾಬ ಜಮಾದಾರ ಹೀಗೆ ಇನ್ನೂ ಹಲವಾರು ಜನ ಆಗಿ ಹೋಗಿದ್ದರು. ಬಣ್ಣ ಬೆಳಕಿನ ವಿನ್ಯಾಸಕಾರರಾಗಿ ದುಡಿದ ವೇಮಣ್ಣ, ಬಸವರಾಜ ಬೆಲ್ಲದ ಇತ್ಯಾದಿ ಹೆಸರುಗಳು ಕೇಳಿ ಬರುತ್ತವೆ. ಇನ್ನು... ಮಾನ್ವಿ ಅದೃಶ್ಯಪ್ಪ, ಪಂಚಯ್ಯಸ್ವಾಮಿ, ಶಿರೂರ ಗಂಗಪ್ಪ, ಗುರುಸಿದ್ಧಯ್ಯ, ಲಕ್ಷ್ಮೀಬಾಯಿ, ಸುಭದ್ರಮ್ಮ ಮನ್ಸೂರ, ಸುಶೀಲಾ ಕುಂದಾಪೂರ ಮುಂತಾದವರು ಒಳ್ಳೆಯ ನಟನಟಿಯರಾಗಿದ್ದರು. ಒಟ್ಟಾರೆ ಈ ಎಲ್ಲ ರಂಗ ಕಿಂಕರರ ಶ್ರಮದ ಫಲವಾಗಿ ವೈಭವಶಾಲಿ ಕಲಾವೈಭವದ ರಂಗವಿನ್ಯಾಸ ವೈಖರಿ ದಶದಿಕ್ಕುಗಳಲ್ಲೂ ಹಬ್ಬಿತ್ತೆನ್ನಬಹುದು!

■

“1935ರಲ್ಲಿ ಬಾಳಪ್ಪ ಅವರು ಸಾಂಗ್ಲಿಯಲ್ಲಿದ್ದಾಗ ಅವರ ರಂಗಗೀತೆ ಕೇಳಲು ಪ್ರಖ್ಯಾತ ರಂಗಕರ್ಮಿ ದೀನಾನಾಥ ಮಂಗೇಶ್ಕರ ಅವರು ತಮ್ಮ ಪುತ್ರಿಯರಾದ ಆಶಾ ಮತ್ತು ಲತಾ ಮಂಗೇಶ್ಕರ ಅವರನ್ನು ಕರೆದುಕೊಂಡು ಬಂದಿದ್ದರು. ಬಾಳಪ್ಪ ಅವರ ಕಲೆ ಮೆಚ್ಚಿ ಶ್ಲಾಘಿಸಿದ್ದರು. ಜತೆಗೆ ತಾವು ನಿರ್ಮಿಸುತ್ತಿದ್ದ 'ಭಕ್ತ ಪುಂಡಲೀಕ' ಸಿನಿಮಾದಲ್ಲಿ ಒಂದು ಪಾತ್ರ ಮಾಡಲು ಆಹ್ವಾನ ಇತ್ತರು. ಆದರೆ, ಕಾರಣಾಂತರ ಗಳಿಂದ ಅದು ನೆರವೇರಲಿಲ್ಲ.

*(ಏಣಗಿ ಬಾಳಪ್ಪ ನೆನಪುಗಳಿಂದ...)*”



# ನಾಟಕದವರಿಗೆ ಇಷ್ಟೊಂದು ಮನ್ನಣೆಯೆ?

● ಪ್ರೇಮಾ ಬದಾಯಿ

ಪ್ರಕೃತಿಯ ವಿರುದ್ಧ ಜೀವಿಸುವದೇ ನಾಟಕದ ವೃತ್ತಿ.

'ಶತಾಯುಷಿಯಾಗಿ' ನಮ್ಮ ಮುಂದೆ ಇರುವದು ಪವಾಡವೇ ಸರಿ.

ಅಪ್ಪಾಜಿ ಏಣಗಿ ಬಾಳಪ್ಪನವರ ಶತಮಾನದ ಶುಭ ಸಂಭ್ರಮವನ್ನು ಕಾಣುತ್ತಿರುವುದು ನಮ್ಮ ಪುಣ್ಯ ವಿಶೇಷ.

ಶತಮಾನ ದಾಟಿ ಬದುಕಿದವರುಂಟು. ಆದರೆ ನಾಟಕ ಕಲಾವಿದರಾಗಿ ಶತಮಾನವನ್ನು ದಾಟಿದವರು ವಿರಳ. ಆ ಶತಮಾನಕ್ಕೆ ಕಲೆಯ ನಂಟನ್ನು ಬಿಗಿಯಾಗಿ ಹೆಣೆದು ಸಾರ್ಥಕತೆಯನ್ನು ತಂದುಕೊಟ್ಟವರು ಏಣಗಿ ಬಾಳಪ್ಪನವರು. "ವಾಮನ ಮೂರ್ತಿ ಆದರೂ ಕಲೆಯಿಂದ ತ್ರಿವಿಕ್ರಮರು." ಸ್ತ್ರೀ ಪಾತ್ರಧಾರಿಯಾಗಿ, ಪುರುಷ ಪಾತ್ರಧಾರಿಯಾಗಿ ರಂಗದ ಮೇಲೆ ಮಿಂಚಿದವರು. ರಂಗಗೀತೆಗಳಿಂದ ರಂಜಿಸಿದವರು. ಮಾಲೀಕರಾಗಿ 'ಕಾಯಕವೇ ಕೈಲಾಸ' ವೆಂಬ ಬಸವಣ್ಣನವರ ತತ್ವದಂತೆ ಕಂಪನಿ ನಡೆಸಿದವರು. ಧೀಮಂತ ವ್ಯಕ್ತಿತ್ವದಿಂದ

ಅಭಿಮಾನಿಗಳ ಹೃದಯ ಸಿಂಹಾಸನದಲ್ಲಿ ಮೂರ್ತಿಗೊಂಡು ರಾರಾಜಿಸಿದವರು. ನಾಟ್ಯಭೂಷಣ, ನಾಟ್ಯಗಂಧರ್ವ, ಬಸವಶ್ರೀ, ನಾಡೋಜ, ಗುಬ್ಬಿ ವೀರಣ್ಣ, ಕರ್ನಾಟಕ ವಿದ್ಯಾಲಯ ಗೌರವ ಡಾಕ್ಟರೇಟ್, ಆಳ್ವಾಸ್ ನುಡಿಸಿರಿ ಪ್ರಶಸ್ತಿ. ಹೀಗೆ ಯಶಸ್ವಿನ ಏಣಿಯನ್ನು ಏರುತ್ತಲೇ ಹೊರಟವರು. ನಾಟಕದವರಿಗೆ ಇಷ್ಟೊಂದು ಗೌರವ ಮನ್ನಣೆಗಳು ದೊರೆಯುತ್ತವೆಯೇ ಎಂಬ ಪ್ರಶ್ನೆಗೆ ಇಂದು ನಮ್ಮೆಲ್ಲರ ಕಣ್ಮುಂದೆ ಉತ್ತರವಾಗಿ ನಿಂತವರು.

ಪ್ರಾತಃಕಾಲ ಏಳುವದು, ಯೋಗ, ಪ್ರಾಣಾಯಾಮ, ವ್ಯಾಯಾಮ, ವಾಯು ವಿಹಾರ, ಸಾತ್ವಿಕ ಆಹಾರ, ನಿಯಮಿತ ನಿದ್ರೆ ಇವು ದೀರ್ಘಾಯುಷಿಯಾಗಲು ಪ್ರಕೃತಿ ಸಹಜವಾದ ಕ್ರಿಯೆಗಳು. ನಾಟಕದಂಥ ವೃತ್ತಿಯಲ್ಲಿ ಇವುಗಳನ್ನು ಪಾಲಿಸುವದು ಅಸಾಧ್ಯವಾದ ಮಾತು. ಪ್ರಕೃತಿಯ ವಿರುದ್ಧ ಜೀವಿಸುವದೇ ನಾಟಕದ ವೃತ್ತಿ. ಅಂತಹ ವೃತ್ತಿಯಲ್ಲಿ ಅರ್ಧ ಶತಮಾನಕ್ಕೂ ಹೆಚ್ಚು ಸಕ್ರಿಯರಾಗಿದ್ದ ಬಾಳಪ್ಪನವರು 'ಶತಾಯುಷಿಯಾಗಿ' ನಮ್ಮ ಮುಂದೆ ಇರುವದು ಪವಾಡವೇ ಸರಿ.

60ಕ್ಕೆ ಮರವು ಅನ್ನುತ್ತಾರೆ. ಆದರೆ ಶತಮಾನವಾದರೂ ಮರವೆಯನ್ನು ದಾಟಿಸು ವಷ್ಟು ಅರಿವನ್ನು ಅರಳಿಸಿಕೊಂಡಿರುವ ಬಾಳಪ್ಪನವರ ಸ್ಮರಣಾಶಕ್ತಿ ಅತ್ಯಾಶ್ಚರ್ಯ. ಕಾರ್ಯಕ್ರಮಗಳಿಗೆ ಬಂದಾಗ ಅವರ ನೆನಪಿನ ಸುರಳಿ ಬಿಚ್ಚುತ್ತಾ ಹೋಗುತ್ತದೆ. ಇಂದಿನ ವಿಜ್ಞಾನ ಸಿ.ಡಿ.ಯಲ್ಲಾದರು ಸ್ಟಕ್ ಆಗಬಹುದು, ಆದರೆ ಅವರ ನೆನಪಿನ ಸಿ.ಡಿ. ಎಲ್ಲೂ ಸ್ಟಕ್ ಆಗಲಾರದು.

ನಾ ಕಂಡ ಅಪ್ಪಾಜಿಯವರ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ. ಯಾರಿಗೇನು ಕಡಿಮೆಯಲ್ಲ ಎಂಬ ಅತಿರಥ ಮಹಾರಥಿಗಳಂತಹ ಕಲಾವಿದರನ್ನು ರಂಗಭೂಮಿ ಕಂಡಿವೆ. ಆದರೂ 'ಬಾಳಪ್ಪನವರು ಭಿನ್ನ'. ಯಾಕೆಂದರೆ ಬಾಳಪ್ಪನವರು ಸಮಾಜ ಮುಖಿಯಾಗಿ ರಂಗಭೂಮಿಯ ಸೇವೆ ಮಾಡಿದವರು. ಜೋಳಿಗೆ ಹಾಕಿ ಹಣ ಸಂಗ್ರಹಿಸಿ ಬಸವನ ಬಾಗೇವಾಡಿ ದೇವಸ್ಥಾನಕ್ಕೆ ಕೊಟ್ಟವರು. ಕನ್ನಡಕ್ಕಾಗಿ ಹೋರಾಡಿ ಜೈಲು ಕಂಡು ಬಂದವರು. ಕಂಪನಿ ಬೋರ್ಡ್‌ಲ್ಲಿ ಕರ್ನಾಟಕವೆಂದು ಬರಸಿ ಮರಾಠಿಗರ ಕೆಂಗಣ್ಣಿಗೆ ಗುರಿಯಾದವರು. ಶಿಕ್ಷಣ ಸಂಸ್ಥೆಗಳಿಗೆ, ಮಠಮಂದಿರಗಳಿಗೆ ಪ್ರತಿ ಕ್ಯಾಪಿನ ಕೊನೆಗೆ ನಾಟಕವಾಡಿ ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಿದವರು. ಅಂದಿದ್ದನ್ನು ಮಾಡಿ ತೋರಿಸಲೇಬೇಕೆಂಬ ಹಠವಾದಿಗಳು. ಹೀಗೆ ಅವರ ಬಗ್ಗೆ ತುಂಬಾ ಕೇಳಿದ್ದೆ. ಆದರೆ ನೋಡುವ ಸದವಕಾಶ ನನಗೆ ದೊರತಿರಲಿಲ್ಲ.

2006ರಲ್ಲಿ ಇವರ ಪುತ್ರರಾದ ದಿವಂಗತ ನಟರಾಜ ಏಣಗಿ ಅವರ ನಿರ್ದೇಶನದ 'ಕಿನ್ನರಿ' ಧಾರಾವಾಹಿಯಲ್ಲಿ ನಾನು ಅಭಿನಯಿಸುತ್ತಿದ್ದೆ. ಧಾರವಾಡದ ಒಂದು ಮನೆಯಲ್ಲಿ ಶೂಟಿಂಗ್ ನಡೆದಿತ್ತು. ಬಾಳಪ್ಪನವರು ಬಂದಿದ್ದಾರೆ ಅಂತ ಸಹಕಲಾವಿದರು ಹೇಳಿದರು. ನಾನು ಅವರನ್ನು ನೋಡಬೇಕು ಎಂಬ ಕುತೂಹಲದಿಂದ ಅವರಿದ್ದಲ್ಲಿಗೆ ಹೊರಟೆ.

ಮಾಲಕರೆಂದರೆ ಹಾಗೆ, ಹೀಗೆ, ಎಂಬ ಏನೇನೊ ಕಲ್ಪನೆಗಳಿದ್ದವು. ಅವರನ್ನು ಕಂಡಾಗ ಒಂದು ಕ್ಷಣ ನನ್ನ ಮನಸ್ಸೆ ಸ್ಥಬ್ಧವೆನಿಸಿತು. ನನ್ನ ಕಲ್ಪನೆಯ ಚಿತ್ರಗಳೆಲ್ಲ ಮಂಜುಗಡ್ಡೆಯಂತೆ ಕರಗಿಹೋದವು. ಒಂದು ಖುರ್ಚಿಯ ಮೇಲೆ ಶಿಲಾಮೂರ್ತಿಯಂತೆ ಕುಳಿತಿದ್ದರು. ತುಂಬಾ ಸಾದಾ ಸೀದಾ ಬಿಳಿ ಉಡುಪು. ಆದರೂ ಅದು ಎಲ್ಲರನ್ನು ಆಕರ್ಷಿಸುವ ವಿಶೇಷ ಉಡುಪಿನಂತಿತ್ತು. ಅವರ ಮುಖದಲ್ಲಿರುವ ದೈವಿ ತೇಜಸ್ಸು ನನಗೇ ತಿಳಿಯದಂತೆ ಅವರ ಕಾಲು ಮುಟ್ಟಿ ನಮಸ್ಕರಿಸುವಂತೆ ಸೆಳೆದಿತ್ತು. ನಟರಾಜ ಸರ್‌ಗಂತೂ ತಂದೆ ಬಂದಾರೆಂದರೆ ಅಂದು ಹಬ್ಬದ ಸಡಗರವಿದ್ದಂತೆ. ಇನ್ನು ಪತ್ನಿ ಲಕ್ಷ್ಮಮ್ಮ 'ಪತಿಗೆ ತಕ್ಕ ಸತಿ' ಎಂಬ ಮಾತಿಗೆ ಸೂಕ್ತವಾದವರು. ಇವರ ಕುಟುಂಬದಲ್ಲಿ ಮಾತು ತುಂಬಾ ಕಡಿಮೆ, ಪ್ರೀತಿ ಗೌರವಗಳೆಲ್ಲ ಮೌನದಲ್ಲೆ. ಸುಮಾರು ಕಾರ್ಯಕ್ರಮಗಳಲ್ಲಿ ಈ ಜೋಡಿ ನೋಡಿದ್ದೇನೆ. ನೋಡಿದಾಗಲೆಲ್ಲ 'ಭಾಗ್ಯವಂತರು' ಚಲನಚಿತ್ರದ ನೆನಪು.

ರಂಗ ಬದುಕಲ್ಲಿ ಅಪ್ಪನ ಸಂಗಾತಿಯಾಗಿ ಬಂದ ಅಮ್ಮನನ್ನು ಸ್ವೀಕರಿಸುವ ಮಕ್ಕಳನ್ನು ಕಂಡದ್ದು ವಿರಳ. ಇಲ್ಲಿ ಬಾಳಪ್ಪನವರ ಮೊದಲ ಪತ್ನಿ ಸಾವಿತ್ರಮ್ಮನವರ ಮಕ್ಕಳಾದ ಡಾ. ಬಸವರಾಜ ಸರ್, ಸುಭಾಸ್ ಇಂಜಿನೀಯರ್ ಸರ್, ಮೋಹನ ಏಣಗಿ, ಅರವಿಂದ ಏಣಗಿ ಇವರೆಲ್ಲ ಸ್ವತಃ ನಿಂತು ಪ್ರತಿಯೊಂದು ವೇದಿಕೆಯ ಮೇಲೂ ಲಕ್ಷ್ಮಮ್ಮನವರನ್ನು ಕೂಡಿಸಿ ಸಂಭ್ರಮಿಸುವ ಹಿರಿಗುಣವನ್ನು ಎಷ್ಟು ಕೊಂಡಾಡಿದರೂ ಅಲ್ಪವೆ. ಇಂತಹ ಅದೃಷ್ಟ 2ನೇ ಪತ್ನಿಯಾಗಿ ಬಂದ ಯಾವ ರಂಗ ಕಲಾವಿದೆಗೂ ದೊರಕಿರಲಿಕ್ಕಿಲ್ಲ. ಸಂಸಾರದ ಸಂಬಂಧ ಗಳಲ್ಲಿ ಕೂಡಾ ಬಾಳಪ್ಪನವರು ಶಿಸ್ತುಬದ್ಧ ಸಂಸ್ಕಾರದ ಬುನಾದಿ ಹಾಕಿ ಶ್ರೇಷ್ಠ ಮಾದರಿ ಪರಂಪರೆಯ ಕುಟುಂಬವನ್ನಾಗಿಸಿದ್ದಾರೆ.

ಕಲಾವಿದರಾದವರು ಯಾವ ಮಾಯೆ ಮೋಹದ ಜಾಲದಲ್ಲೂ ಸಿಲುಕದೆ, ಹೇಗೆ ನೀತಿ ನಿಯಮಗಳ ಮಧ್ಯೆ ಇರಬೇಕು ಎಂಬುವದನ್ನು, ವೃತ್ತಿಯನ್ನು ಹೇಗೆ ಪಾರದರ್ಶಕವಾಗಿ ನೋಡಬೇಕೆಂಬುದನ್ನು ಈ ಮಹಾನ್ ಕಲಾವಿದರಿಂದ ಕಲಿಯ ಬೇಕಾದದ್ದು ತುಂಬಾ ಇತ್ತು, ನಾವೇನೂ ಕಲಿಯಲಿಲ್ಲ. ಈಗಲೂ ಕಾಲ ಮಿಂಚಿಲ್ಲ. ಬಾಳಪ್ಪನವರು ನಡೆದ ಹೆಜ್ಜೆಯ ಗುರುತುಗಳನ್ನು ಮುಂದಿಟ್ಟುಕೊಂಡು ರಂಗಭೂಮಿಯ ಉನ್ನತಿಗಾಗಿ ಶ್ರಮಿಸೋಣ. ರಂಗಜ್ಞಾನದ ಖಣಿಯಾದ ಶತಾಯು ಬಾಳಪ್ಪನವರು ಉಳಿದ ಆಯುಷ್ಯದ ದಿನಗಳನ್ನು ಅತ್ಯಂತ ಸಂಭ್ರಮದಿಂದ ಪೂರೈಸಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.

ದಿ. ನಟರಾಜ ಸರ್ ನಮ್ಮನ್ನಗಲಿದವರಲ್ಲ ಎಂಬ ಕಹಿ ನೆನಪನ್ನು ಬಿಟ್ಟರೆ, ಅಪ್ಪಾಜಿ ಬಾಳಪ್ಪನವರನ್ನು ಕಂಡ ಅವರೊಂದಿಗೆ ಕೆಲಸ ಮಾಡಿದ ಎಲ್ಲ ನೆನಪುಗಳು ಸಿಹಿ ನೆನಪುಗಳೆ.

■



# ಏಣಗಿ ಬಾಳಪ್ಪ, ಗಾಂಧೀಜಿ ಹಾಗೂ ಸ್ವಾತಂತ್ರ್ಯ ಚಳುವಳಿ

● *ಡಾ. ಶಿವಾನಂದ ಶೆಟ್ಟರ*

ಕಂಪನಿ ನಾಟಕಗಳನ್ನು ಬೇರೆ ಸಾಧ್ಯತೆಗಳುಳ್ಳ ಸಾಹಿತ್ಯ ಪ್ರಕಾರಗಳೊಂದಿಗೆ ತೌಲನಿಕವಾಗಿ ವಿಮರ್ಶಿಸಿ ಹೀಗಳೆಯುವುದು ಅಪಾಯಕಾರಿ ಬೆಳವಣಿಗೆ.

"The greatest artist is he
who lives the finest life".

- *Mahatama Gandhi*

**ಶ**ತಾಯುಷಿ ಏಣಗಿ ಬಾಳಪ್ಪನವರ ಬದುಕನ್ನು ಮೆಲುಕು ಹಾಕುವ ಸಂದರ್ಭದಲ್ಲಿ ನನಗೆ ಗಾಂಧೀಜಿಯವರ ಮೇಲಿನ ಮಾತು ನೆನಪಾಗುತ್ತದೆ. ಬಾಳಪ್ಪನವರು ತಮ್ಮ ವೃತ್ತಿ ಜೀವನ ಹಾಗೂ ಖಾಸಗಿ ಬದುಕನ್ನು ನಿರ್ವಹಿಸಿದ ರೀತಿಯನ್ನು ಸಮೀಪದಿಂದ ನೋಡಿದವರಲ್ಲಿ ನಾನೂ ಒಬ್ಬ. "ಅತ್ಯಂತ ಸುಂದರವಾದ ಜೀವನವನ್ನು ನಡೆಸುವವನೇ ಅತಿದೊಡ್ಡ ಕಲೆಗಾರ" ನೆಂದು ಗಾಂಧೀಜಿ ಹೇಳಿದ ಮಾತು ಬಾಳಪ್ಪನವರ ಬದುಕಿಗೆ ಅನ್ವರ್ಥಕವಾಗಿಯೇ ಹೇಳಿದಂತಿದೆ. ಗಾಂಧೀಜಿ ಇಷ್ಟಪಟ್ಟ ಗೀತಾ ಸಂದೇಶವಾದ "ಸ್ಥಿತಪ್ರಜ್ಞ" ಸ್ಥಿತಿಯನ್ನು ಯಶಸ್ವಿಯಾಗಿ ತಲುಪಿದವರು ಬಾಳಪ್ಪ. ತಮ್ಮ

ರಂಗಜೀವನ ಹಾಗೂ ವೈಯಕ್ತಿಕ ಬದುಕಿನ ಏರಿಳಿತಗಳನ್ನು ಬಾಳಪ್ಪನವರು ನಿಭಾಯಿಸಿದ ರೀತಿ ಈ ಮಾತಿಗೆ ನಿದರ್ಶನ. ಇಂಥ ಅತ್ಯಂತ ಸುಂದರ ಜೀವನ ನಡೆಸಿದ ಈ ಕಲಾತಪಸ್ವಿ ನಮ್ಮ ಇಂದಿನ ಬಹುತೇಕ ಕಲಾವಿದರಿಗೆ ಮಾದರಿಯಾಗಬೇಕು. ಈ ಮಾತನ್ನು ವಿಶೇಷ ಒತ್ತು ಕೊಟ್ಟು ಹೇಳಲು ಸಕಾರಣವಿದೆ. ನಮ್ಮಲ್ಲಿ ಎಷ್ಟೋ ಶ್ರೇಷ್ಠ ಕಲಾವಿದರು ದುರ್ವ್ಯಸನಗಳಿಗೆ ಬಲಿಬಿದ್ದು ಅರ್ಧದಲ್ಲಿಯೇ ಜೀವನ ರಂಗದಿಂದ ನಿರ್ಗಮಿಸಿದ್ದಾರೆ. ಖಯಾಲಿಗಳಿಲ್ಲದೆಯೂ ಕಲಾವಿದನಾಗಿ ಹೇಗೆ ಸುಂದರವಾಗಿ ಬದುಕಬಹುದು ಎಂಬುದಕ್ಕೆ ಬಾಳಪ್ಪ ನಮ್ಮ ಮಧ್ಯದಲ್ಲಿರುವ ಶ್ರೇಷ್ಠ ಉದಾಹರಣೆ.

ಬಾಳಪ್ಪ ಐತಿಹಾಸಿಕ ವ್ಯಕ್ತಿಯಾಗಿ ಕಾಣಲು ಇರುವ ಹಲವು ಕಾರಣಗಳಲ್ಲಿ ಒಬ್ಬ ಕಲಾವಿದನಾಗಿ ಅವರು ರಾಷ್ಟ್ರೀಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಬಗೆ ಹಾಗೂ ಸ್ವಾತಂತ್ರ್ಯಾಂದೋಲನಕ್ಕೆ ಅವರು ಪ್ರತಿಕ್ರಿಯಿಸಿದ ರೀತಿ ಪ್ರಮುಖವಾಗುತ್ತದೆ. ಕಂಪನಿ ನಾಟಕ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲವನ್ನು ಪರಿಗಣಿಸಿ ಸ್ವಾತಂತ್ರ್ಯ ಹೋರಾಟದ ಕಾಲ ಹಾಗೂ ಸ್ವಾತಂತ್ರ್ಯೋತ್ತರ ಕಾಲವೆಂದು ಎರಡು ಘಟ್ಟಗಳನ್ನು ನಾವು ಗುರುತಿಸ ಬಹುದು. ಮೊದಲ ಘಟ್ಟದ ಮೂರ್‍ನಾಲ್ಕು ದಶಕಗಳು ಪೌರಾಣಿಕ, ಐತಿಹಾಸಿಕ ನಾಟಕಗಳಿಗೇ ಮೀಸಲಾಗಿದ್ದ ಕಾಲ. 1900 ರಿಂದ 1947 ರ ವರೆಗಿನ ಈ ಕಾಲಘಟ್ಟ ನಮ್ಮ ಕಂಪನಿ ನಾಟಕದ ಕವಿ, ಕಲಾವಿದರು ಹಾಗೂ ಪ್ರೇಕ್ಷಕರ ಚಿಂತನೆಯನ್ನು ಅಮೂಲಾಗ್ರ ವಾಗಿ ಪಲ್ಲಟಗೊಳಿಸಿದ ಸಮಯವಿದು. ಸ್ವಾತಂತ್ರ್ಯೋತ್ತರ ಘಟ್ಟ ಸ್ವಾತಂತ್ರ್ಯ ಹೋರಾಟದ ಕಾಲದ ಆದರ್ಶಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ನಾಟಕಗಳನ್ನು ಉಚ್ಛ್ರಾಯ ಸ್ಥಿತಿಗೆ ತಲುಪಿಸಿದ ಕಾಲ. ವಿಶೇಷ ವೆಂದರೆ ಈ ಎರಡು ಕಾಲಘಟ್ಟಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ರಂಗಭೂಮಿಯ ಮುಖಾಂತರ ಪ್ರತಿಕ್ರಿಯಿಸಿದವರು ಬಾಳಪ್ಪನವರು.

ರಾಷ್ಟ್ರೀಯ ಚಳುವಳಿಗೆ ತಕ್ಕ ವೇದಿಕೆ ಸಿದ್ಧಪಡಿಸುವಲ್ಲಿ ಕಾರ್ಯೋನ್ಮುಖರಾದ ಪತ್ರಕರ್ತರು, ಸಾಹಿತಿಗಳು ಹಾಗೂ ಜಾನಪದರನ್ನು ಮಾತ್ರ ನಾವು ಹೆಚ್ಚಾಗಿ ನೆನಪಿಸಿಕೊಳ್ಳುತ್ತೇವೆ. ನಾಟಕ ಉಂಟು ಮಾಡುವ ಸಾಫಲ್ಯ-ವೈಫಲ್ಯ ಅದರ ಪ್ರದರ್ಶನ ದಿಂದಲೇ ನಿರ್ಧಾರವಾಗತಕ್ಕದ್ದೆಂಬುದುದನ್ನು ನಾವು ಒಪ್ಪುವುದಾದರೆ ನಾಟಕ ಪ್ರದರ್ಶನನಿಷ್ಠ ಸಾಹಿತ್ಯವೆಂಬುದನ್ನೂ ಒಪ್ಪಬೇಕಾಗುತ್ತದೆ. ಕಂಪನಿ ನಾಟಕಗಳನ್ನು ಬೇರೆ ಸಾಧ್ಯತೆಗಳುಳ್ಳ ಸಾಹಿತ್ಯ ಪ್ರಕಾರಗಳೊಂದಿಗೆ ತೌಲನಿಕವಾಗಿ ವಿಮರ್ಶಿಸಿ ಹೀಗಳೆಯುವುದು ಅಪಾಯಕಾರಿ ಬೆಳವಣಿಗೆ. ಇಂಥ ಅಪಾಯಕ್ಕೆ ಮೊದಲಿನಿಂದಲೂ ಗುರಿಯಾಗುತ್ತ ಬಂದ ಕಂಪನಿ ನಾಟಕಗಳನ್ನು ಇಂದಿಗೂ ಸಾಹಿತ್ಯ ಚರಿತ್ರೆಯ ಹೊರಗಡೆಯೇ ಇವೆಯೆಂಬುದೊಂದು ವಿಪರ್ಯಾಸ. ನಮ್ಮಲ್ಲಿ ಸ್ವಾತಂತ್ರ್ಯ ಯೋಧರನ್ನು ಸನ್ಮಾನಿಸಲು ಸ್ಪರ್ಧೆ ಇದೆಯೇ ವಿನಃ ತಮ್ಮ ನಾಟಕಗಳ ಮುಖಾಂತರ ರಾಷ್ಟ್ರೀಯ ಪ್ರಜ್ಞೆಯನ್ನು ಯಶಸ್ವಿಯಾಗಿ ಬಿಂಬಿಸಿ ನಮ್ಮ ಗ್ರಾಮೀಣ ಭಾಗದಲ್ಲಿ ಸಾವಿರಾರು ಹೋರಾಟಗಾರರನ್ನು ಹುಟ್ಟು ಹಾಕುವಲ್ಲಿ ಸ್ಫೂರ್ತಿ ನೀಡಿದ. ಯಾವ ಕಂಪನಿ ನಾಟಕದ ಕವಿ, ಕಲಾವಿದರೂ

ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಸ್ಥಾನ ಪಡೆಯದೇ ಹೋದ ಮತ್ತೊಂದು ವಿಪರ್ಯಾಸವನ್ನು ನಾವಿಂದು ನೋಡುತ್ತಿದ್ದೇವೆ. ಬಾಳಪ್ಪನವರಂಥ ರಂಗಭೂಮಿಯ ಕಲಾವಿದರ ರಾಷ್ಟ್ರೀಯ, ಸಾಮಾಜಿಕ ಕಳಕಳಿಯ ಸ್ವರೂಪವನ್ನು ನಾವು ದೇಶಿವಾದದ ಹಿನ್ನಲೆಯಲ್ಲಿಯೇ ಹುಡುಕಬೇಕಾಗುತ್ತದೆ. ಮಾರ್ಕ್ಸ್, ಲೋಹಿಯಾ, ಅಂಬೇಡ್ಕರಾದಿಯಾಗಿ ಪಶ್ಚಿಮದ ಸಮಾಜವಾದಿ ಚಳುವಳಿಯಿಂದ ಪ್ರಭಾವಿತವಾದ ಯಾವುದೇ ಸಿದ್ಧಾಂತಗಳಿಗೆ ಭಿನ್ನವಾಗಿ, ಗಾಂಧೀ ತತ್ವಗಳಿಂದ ಪ್ರಭಾವಿತರಾದ ಏಣಗಿ ಬಾಳಪ್ಪನವರು ಮೂಲತಃ ಉದಾರವಾದಿ ಧೋರಣೆ ಹೊಂದಿದವರು. ಆದರ್ಶವಾದಿ ಸಮಾಜ ಸುಧಾರಣಾ ಮಾರ್ಗದಲ್ಲಿ ನಂಬಿಕೆ ಇಟ್ಟವರು. ಗಾಂಧೀಜಿಯವರಂತೆಯೇ ಸಮಾಜದ ಒಳಿತನ್ನು, ಗ್ರಾಮರಾಜ್ಯ, ರಾಮರಾಜ್ಯದ ಸ್ಥಾಪನೆಯಲ್ಲಿಯೇ ಹುಡುಕುವ ಕನಸುಗಾರ. ಗಾಂಧೀ ಹಾಗೂ ಗಾಂಧೀವಾದಿಗಳ ಪ್ರಭಾವ ವಲಯದಲ್ಲಿ ಬಂದ ಕಂಪನಿ ನಾಟಕಕಾರರಲ್ಲಿ ಏಣಗಿ ಬಾಳಪ್ಪ ಪ್ರಮುಖರು. ಸ್ವಾತಂತ್ರ್ಯಾಂದೋಲನದಂತಹ ದುರ್ಗಮ ಕಾಲಘಟ್ಟದಲ್ಲಿ ಅವರು ತಾವೂ ಬದುಕುವುದರೊಂದಿಗೆ ತಮ್ಮ ಸಹ ಕಲಾವಿದರನ್ನೂ ಬದುಕಿಸುವ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡವರು. ಜೈಲು ಮಾರ್ಗ ಅನುಸರಿಸಿದವರಷ್ಟೇ ಸ್ವಾತಂತ್ರ್ಯ ಸೇನಾನಿಗಳೆಂಬ ಕಲ್ಪನೆಯೊಂದು ಸ್ವಾತಂತ್ರ್ಯ ನಂತರದ ತಲೆಮಾರಿಗಿದೆ. ಆದರೆ ಗಾಂಧೀ ಮಾದರಿಯ ವಿಧಾಯಕ ಕಾರ್ಯಕ್ರಮಗಳ ಕುರಿತು ಸಕ್ರಿಯವಾಗಿ ಸ್ಪಂದಿಸಿ ಸ್ವಾತಂತ್ರ್ಯಾಂದೋಲನಕ್ಕೊಂದು ಭೂಮಿಕೆ ಸಿದ್ಧಪಡಿಸಿದ ಗೌರವ ಬಾಳಪ್ಪನಂಥವರಿಗೆ ಸಲ್ಲಬೇಕು. ಪೂರ್ಣ ಸ್ವರಾಜ್ಯದ ಪ್ರಾಪ್ತಿ ಕೇವಲ ರಾಜಕೀಯ ವಿಮೋಚನೆಯಿಂದಷ್ಟೇ ಆಗದೇ ಅದು ಸಾಮಾಜಿಕ ಸಮಸ್ಯೆಗಳಿಗೂ ಪರಿಹಾರ ಹುಡುಕಿದಾಗ ಮಾತ್ರ ಸಾಧ್ಯವೆಂದು ಗಾಂಧೀಜಿ ಹೇಳಿದ ಮಾತನ್ನು ಬಾಳಪ್ಪ ಅಕ್ಷರಶಃ ಪಾಲಿಸಿದರು. ಅವರು ನಾಟಕ ಕಂಪನಿ ಮಾಲಿಕರಾದ ಮೇಲೆ ಊರೂರು ತಿರುಗುವಾಗ ಅನಿವಾರ್ಯವಾಗಿ ಅಲ್ಲಿನ ಮುಖಂಡರ ಪರಿಚಯ ಮಾಡಿಕೊಂಡವರಲ್ಲ. ಬದಲಾಗಿ ಅವರಿಗೆ ದೇಶ ಪ್ರೇಮದ ಬಗೆಗೆ ಉತ್ಕಟ ಭಾವನೆ ಇದ್ದುದರಿಂದ ಅಂದಿನ ಪ್ರಮುಖ ಮುಂದಾಳುಗಳನ್ನು ಸ್ವತಃ ಅವರೇ ಪರಿಚಯ ಮಾಡಿಕೊಂಡವರು. ಅದರಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಸುತಗಟ್ಟಿ ವೀರಪ್ಪನವರು ಹಾಗೂ ಸಂಪಗಾವಿಯ ವಾಲಿ ಚೆನ್ನಪ್ಪನವರು ಪ್ರಮುಖರು. ನಿಷ್ಠಾವಂತ ಗಾಂಧೀ ಅನುಯಾಯಿಯಾಗಿದ್ದ ಸುತಗಟ್ಟಿಯವರಿಂದ ಬಾಳಪ್ಪನವರಿಗೆ ಚಳುವಳಿಯ ಪರಿಚಯವಾಯಿತಲ್ಲದೇ ಅವರಿಂದಲೇ ಬಾಳಪ್ಪನವರಿಗೆ ಖಾದಿ ದೀಕ್ಷೆಯೂ ಆಯಿತು. ಅವರು ಇಂದಿಗೂ ಶ್ವೇತವಸ್ತ್ರ ಖಾದಿದಾರಿ. ಗಾಂಧೀ ಹಾಗೂ ಬಸವಣ್ಣನವರ ನಾಟಕಗಳ ಪ್ರಭಾವದಿಂದ ಅವರು ಚಹಾ ಕೂಡಿಯುವುದನ್ನೂ ಬಿಟ್ಟರು.

ಸ್ವಾತಂತ್ರ್ಯ ಯೋಧ ವಾಲಿ ಚೆನ್ನಪ್ಪನವರು ಸ್ವತಃ ನಾಟಕಗಳನ್ನಾಡಿದವರು. ಬಹುಕಾಲ ಭೂಗತರಾಗಿ ಹೋರಾಡಿದವರು. ಅವರನ್ನು ಹಿಡಿದುಕೊಟ್ಟವರಿಗೆ ಇನಾಂ ಕೊಡುವದಾಗಿ ಬ್ರಿಟಿಶ್ ಸರಕಾರ ಘೋಷಿಸಿತು. ಇಂಥದರಲ್ಲಿ ಒಮ್ಮೆ ಮುಗಟಖಾನ ಹುಬ್ಬಳ್ಳಿ ಜಾತ್ರೆಯಲ್ಲಿ

ಬಾಳಪ್ಪನವರ ಕಂಪನಿ ಮೊಕ್ಕಾಂ ಮಾಡಿದಾಗ ಬಂದೋಬಸ್ತಿಗೆ ಬಂದ ಪೋಲಿಸರ ಬಂದೂಕುಗಳನ್ನು ಕಸಿದುಕೊಳ್ಳುವ ಕಾರ್ಯಕ್ರಮವನ್ನು ಚೆನ್ನಪ್ಪನವರು ಹಮ್ಮಿಕೊಂಡಿದ್ದರು. ಇದರ ಸುಳಿವು ಹಿಡಿದ ಭಾರೀ ಪೋಲಿಸ್ ಪಡೆ ಚೆನ್ನಪ್ಪನವರನ್ನು ಹಿಡಿಯಲು ಬಂದಾಗ ಅವರ ತಂಡದವರೆಲ್ಲ ಬಾಳಪ್ಪನವರ ಥೇಟರಿನಲ್ಲಿ ಹೊಕ್ಕರು. ಅವರು ಪ್ರೇಕ್ಷಕರ ಮಧ್ಯ ಹೋಗದೇ ಗ್ರೀನ್ ರೂಂ ಹೊಕ್ಕಾಗ ಸಂಘದ ನಟ ಶಿರ್ಸಿ ಪೇಂಟರ್ ಅವರಿಗೆಲ್ಲ ಒಂದೊಂದು ರೀತಿ ವೇಷ ತೊಡಿಸಿ ಹಲವರನ್ನು ಸ್ಟೇಜಿಗೆ ಉಳಿದ ಕೆಲವರನ್ನು ಸೀರೆ ಉಡಿಸಿ ಹೆಣ್ಣು ಮಕ್ಕಳ ರಂಗಪಾರ್ಟಿಗೆ ಕಳುಹಿಸಿದರು. ಎಲ್ಲ ಕಡೆ ಹುಡುಕಾಡಿ ಹೆಣ್ಣು ಮಕ್ಕಳ ಗ್ರೀನ್ ರೂಂನಲ್ಲೂ ಹಣಿಕಿಹಾಕಿ ಯಾರನ್ನೂ ಗುರುತಿಸದೇ ಹಿಂದಕ್ಕೆ ಹೋದ ಪೋಲಿಸರ ಕಥೆಯನ್ನು ಬಾಳಪ್ಪನವರ ಬಾಯಿಂದ ಕೇಳುವುದೇ ಒಂದು ರೋಮಾಂಚನಕಾರಿ ಅನುಭವ. ಬ್ರಿಟಿಶ್ ಅಧಿಕಾರಿಗಳು ಲೈಸನ್ಸ ಕೊಡಲು ಸತಾಯಿಸಿದ ಸಂದರ್ಭದಲ್ಲಿ ಬೇರೆ ಹೆಸರಿನಲ್ಲಿಯೂ ಬಾಳಪ್ಪ ನಾಟಕ ಪ್ರದರ್ಶನ ಮಾಡಿದ್ದಾರೆ.

ಹುಚ್ಚಪ್ಪ ಸೂಡಿಯವರ ಪಾಲುದಾರಿಕೆಯಲ್ಲಿ ಬಾಳಪ್ಪ ಮಾಡಿದ ಕಂಪನಿ 1935 ರಲ್ಲಿ ನಿಂತುಹೋಯಿತು. ಆಗ ಸ್ವತಃ ವಾಲಿ ಚೆನ್ನಪ್ಪನವರೇ ಬಾಳಪ್ಪನವರನ್ನು ತಮ್ಮ ಸಂಪಗಾವಿ ನಾಟ್ಯ ಸಂಘದಲ್ಲಿ ಪಾತ್ರವಹಿಸಲು ಒತ್ತಾಯಿಸುತ್ತಾರೆ. ಹಲವು ತಿಂಗಳುಗಳ ಕಾಲ ಅವರ ಕಂಪನಿಯಲ್ಲಿ ಬಾಳಪ್ಪ ನಾಟಕ ಆಡುತ್ತಾರೆ. ಬ್ರಿಟೀಷ್ ಸರಕಾರದ ವಿರುದ್ಧ ಟೀಕೆ ಹೆಚ್ಚಾಗಿರುತ್ತಿದ್ದ ಆ ನಾಟಕಗಳಲ್ಲಿ ರಸ್ತೆ ಪಡದೆಯ ಎದುರು ನಿಂತು ಸಂಭಾಷಿಸುವ ಹಲವು ಹಾಸ್ಯ ಪಾತ್ರಗಳು ಚಳುವಳಿಯವರ ಮೇಲುಗೈ ಹಾಗೂ ಸರಕಾರದವರ ಫಜೀತಿ ಪ್ರಸಂಗಗಳನ್ನು ಮೇಲುಕು ಹಾಕುತ್ತ ಜನರಂಜನೆಯೊಂದಿಗೆ ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಕೆಲಸವನ್ನೂ ಮಾಡಿದವು. 42ರ ಚಲೇಜಾವ್ ಚಳುವಳಿ ಉಗ್ರರೂಪ ತಾಳಿದ ಕಾಲಕ್ಕೆ ಸ್ಥಳೀಯ ಸರಕಾರಿ ಅಧಿಕಾರಿಗಳು ಚಳುವಳಿಗಾರರಿಗೆ ಹೇಗೆ ಅನುಕೂಲಕರವಾಗಿ ವರ್ತಿಸಲು ಪ್ರಾರಂಭಿಸಿದರು ಎಂಬ ಕುತೂಹಲಕಾರಿ ಘಟನೆಗಳನ್ನು ಬಾಳಪ್ಪನವರ ಬಾಯಿಂದಲೇ ಕೇಳಬೇಕು. ಸರಕಾರ ತನ್ನ ಕಾರ್ಯಾಚರಣೆಯ ಮುಖ್ಯಸ್ಥರೆಂದು ಇಂಗ್ಲೀಷ ಅಧಿಕಾರಿಗಳನ್ನು ಕಳಿಸುತ್ತಿತ್ತು. ಹೀಗೆ ಒಮ್ಮೆ ಕನ್ನಡ ಬಾರದ ಪೋಲಿಸ್ ಅಧಿಕಾರಿಯೊಂದಿಗೆ ಬಂದ ಸ್ಥಳೀಯ ಪೋಲಿಸರು ಕೆಲ ಚಳುವಳಿಗಾರರನ್ನು "ನೀವು ಹೊರಗೆ ಹೋಗಿ" ರೆಂದು ಗದರಿಸಿ ಪ್ರಶ್ನಿಸುವ ಧ್ವನಿಯಲ್ಲಿ ಹೇಳಿ ಚಳುವಳಿಗಾರರನ್ನು ಪಾರು ಮಾಡಿದ್ದಿದೆ. ಇವರು ಪ್ರಶ್ನಿಸುತ್ತಿದ್ದಾರೆಂದು ಭಾವಿಸುತ್ತಿದ ಬ್ರಿಟೀಷ್ ಅಧಿಕಾರಿಗಳು ಏನೊಂದೂ ಅರ್ಥವಾಗದೇ ಫಜೀತಿಗೊಳಗಾದ ರಂಜನೀಯ ಪ್ರಸಂಗಗಳನ್ನೂ ಬಾಳಪ್ಪ ಆಗಾಗ ತಮ್ಮ ನೆನಪಿನ ಬುತ್ತಿಯಿಂದ ಬಿಚ್ಚಿಡುತ್ತಾರೆ. ತಮ್ಮ ಜೊತೆಗೇ ಬೇರೆ ಕಂಪನಿಯವರು ಯಾವ ರೀತಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸಿದರು ಎಂಬುದನ್ನೂ ಸ್ವತಃ ಬಾಳಪ್ಪನವರಿಂದಲೇ ಕೇಳಿ ತಿಳಿದುಕೊಳ್ಳಬೇಕು. ಸಧ್ಯಕ್ಕೆ ಇದಕ್ಕೆಲ್ಲ ಸಾಕ್ಷೀಭೂತರಾಗಿ ನಮ್ಮ ಮಧ್ಯದಲ್ಲಿರುವ ಹಿರಿಯ ಜೀವ ಅವರೊಬ್ಬರೇ. ಒಮ್ಮೆ ಅಬ್ಬಿಗೇರಿ ಕಂಪನಿಯವರು 'ಕಿತ್ತೂರು ಚೆನ್ನಮ್ಮ' ನಾಟಕ ಆಡುತ್ತಿದ್ದಾಗ ಅಧಿಕಾರಿಗಳು ವೀಕ್ಷಿಸಲು

ಬರುವ ದಿನದ ಮುನ್ಸೂಚನೆಯನ್ನು ಸ್ಥಳೀಯ ಪೋಲಿಸರಿಂದಲೇ ಪಡೆದು ಆ ದಿನ ಆಕ್ಷೇಪಾರ್ಹ ಸನ್ನಿವೇಶ ಹಾಗೂ ಮಾತುಗಳನ್ನು ಬಿಟ್ಟು ಬಿಡುತ್ತಿದ್ದರು. ಒಮ್ಮೆ ಏಣಗಿಯಲ್ಲೇ ಚಳುವಳಿಗಾರರನ್ನು ಹಿಡಿಯಲು ಬಂದಾಗ ಪೋಲಿಸರೇ ಅವರಿಗೆ ಮಲಪ್ರಭಾ ನದಿಗೆ ಬಿದ್ದು ಈಸಿ ಪಾರಾಗಲು ಸೂಚನೆ ಕೊಟ್ಟದನ್ನು ಬಾಳಪ್ಪ ನೆನಪಿಸಿಕೊಳ್ಳುತ್ತಾರೆ.

ತಮ್ಮ ನಾಟಕಗಳಲ್ಲಿ ದೇಶಾಭಿಮಾನದ ಪ್ರಸಂಗಗಳನ್ನು ಪೋಣಿಸಿದ ಹಲವರಲ್ಲಿ ಬಾಳಪ್ಪನವರು ಮುಂಚೂಣಿಯಲ್ಲಿದ್ದವರು. "ಅಸ್ಪೃಶ್ಯತಾ ನಿವಾರಣೆ" ನಾಟಕದಲ್ಲಿ 'ವೀರಶೈವರು ನೂತ ಬಟ್ಟೆಯನ್ನು ತೊಡಬೇಕು' ಎಂಬ ಬಸವಣ್ಣವರ ಬಾಯಲ್ಲಿ ಬರುವ ಮಾತು ಪರೋಕ್ಷವಾಗಿ ಖಾದಿ, ಸ್ವದೇಶಿ ಪ್ರಚಾರದ ಉದ್ದೇಶದಿಂದಲೇ ಕೂಡಿರುತ್ತಿತ್ತು. ಬಾಳಪ್ಪನವರು ಆಡುತ್ತಿದ ಐತಿಹಾಸಿಕ 'ಜಗಜ್ಯೋತಿ ಬಸವೇಶ್ವರ' ನಾಟಕದ ಮುಕ್ಕಾಲು ಪಾಲು ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳ "ಅಸ್ಪೃಶ್ಯತಾ ನಿವಾರಣೆ" ನಾಟಕದಿಂದಲೇ ತೆಗೆದುಕೊಂಡದ್ದಾಗಿತ್ತು. ಅದರಲ್ಲೆಲ್ಲ ಜಾತಿ ಬೇಧ ಅಳಿಸುವ, ಕನ್ನಡ ನಾಡಿನ ಪ್ರೇಮ ಉಕ್ಕಿಸುವ, ನೂಲುವುದನ್ನೊಳಗೊಂಡ ಸ್ವದೇಶಿ ಚಿಂತನೆಯ ದೃಶ್ಯಗಳೇ ಇರುತ್ತಿದ್ದವು ಬಾಳಪ್ಪನವರಿಗೆ ನಾಟಕ ಬರೀ ಮನರಂಜನೆಯಲ್ಲ. ಅದರಲ್ಲಿ ಒಂದು ಸಾಮಾಜಿಕ ಬದ್ಧತೆಯನ್ನು ಅವರು ಕಾಣುತ್ತಾರೆ. ಅವರು ಆ ಕಾಲಕ್ಕೆ ಆಡುತ್ತಿದ್ದ ಎಚ್. ಟಿ. ಮಹಂತೇಶ ಶಾಸ್ತ್ರಿ ವಿರಚಿತ "ಕುಂಕುಮ" ನಾಟಕ ವಿಧವಾ ವಿವಾಹದ ಸಂದೇಶ ಸಾರುತ್ತಿತ್ತು. ಕರ್ಮಟ ಜಾತಿವಾದಿಗಳ ಕಣ್ಣನ್ನು ಕೆಂಪೇರಿಸಿದ ನಾಟಕವದು. ಏಕಾಂಕ ನಾಟಕವೊಂದು ಸತತ ಮೂರು ಗಂಟೆಗಳ ಕಾಲ ರಂಗದ ಮೇಲೆ ಪ್ರಯೋಗಗೊಂಡದ್ದು ಅಂದಿನ ಕಾಲಕ್ಕೊಂದು ದಾಖಲೆಯೇ ಆಗಿತ್ತು. ಸ್ವಾತಂತ್ರ್ಯ, ಸ್ವರಾಜ್ಯವೆಂದರೆ ಅದು ಬರಿ ಜೈಲು ಸೇರುವುದಲ್ಲ. ಬದಲಾಗಿ ಸಮಾಜದ ಸರ್ವತೋಮುಖ ಬದಲಾವಣೆ ಎಂಬ ಗಾಂಧೀ ಸಂದೇಶ ಬಾಳಪ್ಪನವರ ಅಂತರಾಳಕ್ಕಿಳಿದ ಪರಿಣಾಮವೇ ಅವರ ಎಲ್ಲ ರಂಗ ಪ್ರಯೋಗಗಳಲ್ಲಿ ವ್ಯಕ್ತವಾಗಿದೆ. ಯಾವಾಗ ನಾಟಕ ದ್ವಂದ್ವಾರ್ಥದ ಮನರಂಜನೆಯಾಗಿ ಮಾರ್ಪಟ್ಟಿತೊ ಆಗ ಬಾಳಪ್ಪ ಪರದೆಯಿಂದ ಹಿಂದೆ ಸರಿಯುತ್ತಾರೆ. ಅಗ್ಗದ ಮನರಂಜನೆ ತನಗೆ ಒಗ್ಗಿಬಾರ ದೆಂದು ಸ್ಪಷ್ಟಪಡಿಸುತ್ತಾರೆ. ಇಂಥ ಬೆಳವಣಿಗೆಗಳ ಬಗೆಗೆ ಅವರಲ್ಲಿ ವಿಷಾದ ವಿದೆಯೇ ವಿನಃ ತಾವು ರಂಗಭೂಮಿಯಿಂದ ಹಿಂದೆ ಸರಿದುದಕ್ಕಲ್ಲ.

ಸ್ವಾತಂತ್ರ್ಯ ಬಂದ ಹೊಸತರಲ್ಲಿಯೂ "ಚಲೆಜಾವ್" ಎಂಬ ನಾಟಕವನ್ನು ಬಾಳಪ್ಪ ಆಡಿದ್ದಾರೆ. ಚಳುವಳಿಯ ಅನುಭವ ಹೊಸದಾಗಿದ್ದ ಆ ಕಾಲದಲ್ಲಿ ಅದಕ್ಕೆ ಒಳ್ಳೆ ಪ್ರತಿಕ್ರಿಯೆ ಸಿಕ್ಕು ಅದೊಂದು ಯಶಸ್ವಿ ಪ್ರಯೋಗವೂ ಆಯಿತು. ಒಟ್ಟಾರೆ ಬೆಳಗಾವಿ ಭಾಗದ, ಉತ್ತರ ಕರ್ನಾಟಕ ಎಲ್ಲ ಹಿರಿಯ ಸ್ವಾತಂತ್ರ್ಯ ಯೋಧರೂ ಬಾಳಪ್ಪನವರನ್ನು ಅತ್ಯಂತ ಪ್ರೀತ್ಯಾದರಗಳಿಂದ ಕಂಡಿದ್ದಾರೆ. ಸ್ವಾತಂತ್ರ್ಯಂದೋಲನದ ಜೊತೆಗೇ ಕರ್ನಾಟಕ ಏಕೀಕರಣದ ಕನಸುಗಳನ್ನೂ ಪ್ರೇಕ್ಷಕರಲ್ಲಿ ಬಿತ್ತಿದ ಹಲವು ಮಹನೀಯರಲ್ಲಿ ಬಾಳಪ್ಪ

ಮುಂಚೂಣಿ ವ್ಯಕ್ತಿ. ಹೀಗಾಗಿ ಸ್ವಾತಂತ್ರ್ಯ ಪ್ರಾಪ್ತಿ, ನಾಡು-ನುಡಿಯ ಏಳಿಗೆಗಾಗಿ ಬಾಳಪ್ಪನವರು ನೀಡಿದ ಕೊಡುಗೆ ಅವಿಸ್ಮರಣೀಯವಾದುದು.

ರಂಗದಿಂದ ಅಧಿಕೃತವಾಗಿ ಬಾಳಪ್ಪ ಹಿಂದೆ ಸರಿದಿದ್ದರೂ ಸ್ವಾತಂತ್ರ್ಯ ನಂತರದ ಪೀಳಿಗೆಯ ನನ್ನಂಥ ಹಲವರನ್ನು ಹುರಿದುಂಬಿಸಿ "ಮ್ಯಾಳ" ಹವ್ಯಾಸಿ ತಂಡವನ್ನು ಹುಟ್ಟುಹಾಕಿದರು. ಅವರೇ ನಿರ್ದೇಶಿಸಿದ 'ಕುಂಕುಮ' ನಾಟಕದ ನಾಯಕ ನಟನಾಗಿ ನಟಿಸುವ ಸದವಕಾಶವೊಂದು ನನದೊದಗಿ ಬಂತು. ಒಮ್ಮೆ ಹುಬ್ಬಳ್ಳಿಯ ಸವಾಯಿ ಗಂಧರ್ವ ರಂಗಮಂದಿರದಲ್ಲಿ ಪ್ರಯೋಗ ಮಾಡಬೇಕೆಂದಾಗ ಅನಿವಾರ್ಯ ಕಾರಣ ಗಳಿಗಾಗಿ ನಾಟಕದ ನಾಯಕಿಯೇ ಗೈರು ಹಾಜರಾಗುವ ಪ್ರಸಂಗವೊದಗಿ ಬಂತು. ಯಾವುದೇ ಪೂರ್ವ ತಯಾರಿ ಇಲ್ಲದೇ ಅಂದೇ ಸ್ಟೇಜಿಗೆ ಬಂದು ನನ್ನ ಜೊತೆ 'ಕುಂಕುಮ' ನಾಟಕದ ಅನುರಾಧಾಳ ಪಾತ್ರ ಮಾಡಿದವರು ಸ್ವತಃ ಬಾಳಪ್ಪನವರ ತಾರಾಪತ್ನಿ ಲಕ್ಷ್ಮಿಬಾಯಿಯವರು. ಅವರು ಕರಾರುವಾಕ್ಕಾಗಿ ನಾಟಕದ ಮಾತುಗಳನ್ನು ಪುನರ್ ನೆನಪಿಸಿಕೊಂಡ ರೀತಿ ನನ್ನನ್ನೂ ಅವಕ್ಕಾಗಿಸಿತು. ಅವರೆದುರು ಅಭಿನಯಿಸುವಾಗ ನಾನು ಕಂಪಿಸಿಹೋದೆ. ಅದನ್ನು ಸೂಕ್ಷ್ಮವಾಗಿ ಗ್ರಹಿಸಿದ ಲಕ್ಷ್ಮಿಬಾಯಿಯವರು ತಮ್ಮ ಮಾತುಗಳಿಂದ ನನ್ನನ್ನು ಪ್ರಚೋದಿಸಿ ನಾನೂ ಚೆನ್ನಾಗಿ ಅಭಿನಯಿಸುವಂತೆ ಮಾಡಿದುದನ್ನು ನಾನು ಬದುಕಿನುದ್ದಕ್ಕೂ ಮರೆಯುವಂತಿಲ್ಲ. ಒಟ್ಟಾರೆ ಯಶಸ್ವಿ ಪುರುಷ ಬಾಳಪ್ಪನವರ ಹಿಂದೆ ಲಕ್ಷ್ಮಿಬಾಯಿಯಂಥ ಯಶಸ್ವಿ ಮಹಿಳೆಯೊಬ್ಬರ ಒತ್ತಾಸೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಕೆಲಸಮಾಡಿರಬಹುದೆಂಬುದನ್ನು ನಾನು ಅಂದಿನ ನಾಟಕದ ಪ್ರಯೋಗದ ಕಾಲಕ್ಕೆ ಕಂಡುಕೊಂಡೆ. ಬಾಳಪ್ಪ ಹಾಗೂ ಅವರ ಚಿರಂಜೀವ ನಟರಾಜರ ಸಾಂಗತ್ಯ ಸಿಕ್ಕಿದ್ದಕ್ಕಾಗಿ ಸಂತೋಷ ಪಟ್ಟವರಲ್ಲಿ ನಾನೂ ಒಬ್ಬ. ಅಧಿಕೃತವಾಗಿ ವಿಶ್ವವಿದ್ಯಾಲಯವೊಂದರಲ್ಲಿ ಗಾಂಧೀ ಚಿಂತನೆಯ ಕುರಿತು ಪಾಠ ಮಾಡುವ ನಾನು ಈ ಹಿನ್ನೆಲೆಯಲ್ಲಿ ಬಾಳಪ್ಪನವರ ಬದುಕನ್ನು ಪರಾಮರ್ಶಿಸಲು ಸಿಕ್ಕ ಈ ಅವಕಾಶಕ್ಕಾಗಿಯೂ ಋಣಿಯಾಗಿದ್ದೇನೆ.

■



# ವೈವಿಧ್ಯಮಯ, ಬಹುರೂಪಿ ನಟ

● *ಡಾ. ಪ್ರಕಾಶ ಗರುಡ*

> ಬಾಳಪ್ಪನವರನ್ನು ಕೇವಲ ಬಸವಣ್ಣನ ಪಾತ್ರಕ್ಕೆ ಸೀಮಿತ ಗೊಳಿಸುತ್ತಾ ವ್ಯಕ್ತಿ ಪೂಜೆ ಮಾಡುತ್ತಾ ಹೋದರೆ ಬಾಳಪ್ಪನವರಲ್ಲಿದ್ದ ಜಂಗಮ ಸ್ವರೂಪಿಯ ವೈವಿಧ್ಯಮಯ ನಟನ ಅವರ ನಟನೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ.

**ಸು**ಮಾರು ಒಂದನೂರಕ್ಕೂ ಅಧಿಕ ವರ್ಷದ ಇತಿಹಾಸವುಳ್ಳ ವೃತ್ತಿರಂಗಭೂಮಿಯ ಹಲವಾರು ಏರಿಳಿತಗಳನ್ನು ಕಂಡ ಶತಾಯುಷಿ ನಾಟ್ಯ ಭೂಷಣ, ನಾಡೋಜ ಶ್ರೀ ಏಣಗಿ ಬಾಳಪ್ಪ. ಆ ರಂಗಭೂಮಿಯನ್ನು ಪ್ರತಿನಿಧಿಸುವ ಕೊನೆಯ ಕೊಂಡಿ. ಹಾಗೆ ನೋಡಿದರೆ ಆ ರಂಗಭೂಮಿಯನ್ನು ಸಮರ್ಥವಾಗಿ ಪ್ರತಿನಿಧಿಸಿದ ಹಲವಾರು ಕೊಂಡಿಗಳು ಈಗಾಗಲೇ ಕಳಚಿಬಿದ್ದಿವೆ. ಈಗ್ಗೆ ಎರಡು ಮೂರು ದಶಕಗಳ ಹಿಂದೆ ವೃತ್ತಿ ರಂಗಭೂಮಿಯ ಕುರಿತು ದಾಖಲಿಸಬಹುದಾದಂತಹ ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದ್ದ ಗೋಕಾಕ ಕಂಪನಿಯ ಬಗ್ಗೆಯಾಗಲೀ, ಜಮಖಂಡಿ ಕಂಪನಿ ಇತ್ಯಾದಿ ಕುರಿತಾಗಲೀ ಮತ್ತು ಶಾಂತಕುಮಾರರಂತಹ ಅಭಿಜಾತ ಹಾಸ್ಯ ನಟರ ಬಗ್ಗೆ, ದಿ. ದುರ್ಗಾದಾಸ, ಎಲಿವಾಳ ಸಿದ್ದಯ್ಯರಂತಹ ಮೇರು ನಟರನ್ನು

ಕುರಿತು ಅಧ್ಯಯನ ನಡೆಸಬಹುದಾಗಿತ್ತು. ಆದರೇ ಏಕೋ ಅದು ಸಾಧ್ಯವಾಗಲಿಲ್ಲ. ಇದರಿಂದ ರಂಗಭೂಮಿ ಅಧ್ಯಯನಕ್ಕೆ ಹಾಗೂ ಸಾಂಸ್ಕೃತಿಕ ಲೋಕಕ್ಕಾದ ನಷ್ಟ ಬಹಳ. ಈಗ್ಯೂ ವೃತ್ತಿರಂಗಭೂಮಿಯ ಮೇರು ನಾಟಕಕಾರರಾದ ಕಂದಗಲ್ ಹನುಮಂತರಾಯ, ನಲವಡಿ ಶ್ರೀಕಂಠಶಾಸ್ತ್ರಿ, ಆರ್.ಡಿ. ಕಾಮತ್ ಇವರ ನಾಟಕ ಕೃತಿಗಳು ಸಮಗ್ರವಾಗಿ ಅಧ್ಯಯನಕ್ಕೆ ದೊರೆಯುವುದಿಲ್ಲ. ಕಂದಗಲ್ ಹಾಗೂ ನಲವಡಿಯವರನ್ನು ಕುರಿತು ಮಹಾಪ್ರಬಂಧಗಳೇನೋ ರಚಿಸಲ್ಪಟ್ಟಿವೆ. ಆದರೆ ಕಂದಗಲ್‌ರೇ ತಮ್ಮ ಕೊನೇ ಗಳಿಗೆಯಲ್ಲಿ ಅಳಿವಿನ ಅಂಚಿನಲ್ಲಿದ 'ವೃತ್ತಿರಂಗಭೂಮಿಗೆ', ಮತ್ತೆ ವೈಭವ ಮರಳುವಂತೆ 'ವೀರರಾಣಿ ಕಿತ್ತೂರ ಚೆನ್ನಮ್ಮ' ನಾಟಕವನ್ನು ಸುಳ್ಳದ ದೇಸಾಯಿಯವರ ಕಂಪನಿಗೆ ಬರೆದುಕೊಟ್ಟರು. ದೇಸಾಯರು ಹೆಚ್.ಪಿ. ಸರೋಜಮ್ಮ ಹಾಗೂ ಡಿ. ದುರ್ಗಾದಾಸರಂತಹ ಮೇರು ನಟರನ್ನು ಹಾಕಿಕೊಂಡು ಸಮರ್ಥವಾಗಿ ವೈಭವದಿಂದ ಆ ನಾಟಕವನ್ನು ಆಡಿದರು. ಹಾಗೆ ನಲವಡಿ ಶ್ರೀಕಂಠ ಶಾಸ್ತ್ರಿಗಳು ಬರೆದ 'ಸಂಪೂರ್ಣ ಹೇಮರಡ್ಡಿ' ಮಲ್ಲಮ್ಮ ನಾಟಕವು ಗದುಗಿನ ಶ್ರೀ ಪಂಚಾಕ್ಷರಿ ಗವಯಿಗಳ ಕಂಪನಿಯಿಂದ ಪ್ರದರ್ಶಿಸಲ್ಪಟ್ಟು ಯಶಸ್ವಿ ದಾಖಲೆ ನಿರ್ಮಿಸಿತು. ಒಂದು ಹಂತದಲ್ಲಿ ಗದುಗಿನಲ್ಲಿ ಆ ನಾಟಕ ಸತತವಾಗಿ ಪ್ರದರ್ಶಿಸುತ್ತಿದ್ದ ಥೇಟರ್ ಕಾಲಾಂತರದಲ್ಲಿ ಮಲ್ಲಮ್ಮನ ಥೇಟರ್ ಎಂದೇ ಗುರುತಿಸುವಂತಾಯಿತು ಎಂದೂ ಹೇಳುತ್ತಾರೆ. ಹಾಗೇ ಜಮಖಂಡಿ ಕಂಪನಿಯವರು ಆಡುತ್ತಿದ್ದ 'ಶ್ರೀ ಸತ್ಯನಾರಾಯಣ ವೃತ ಮಹಾತ್ಮೆ' ನಾಟಕವನ್ನು ರಚಿಸಿದವರು ಕನ್ನಡ ಚಿತ್ರರಂಗದ ಸಾಹಸಸಿಂಹ ಬಿರುದಾಂಕಿತ ಚಿತ್ರನಟ ವಿಷ್ಣುವರ್ಧನ ಇವರ ತಂದೆ ಶ್ರೀ ಎಚ್.ಎಲ್. ನಾರಾಯಣರಾವ್. ಈ ನಾಟಕವನ್ನು ವೈಭಯುತವಾಗಿ ಈ ಕಂಪನಿಯವರು ಆಡಿದ್ದಲ್ಲದೇ ಸುಮಾರು ಐವತ್ತು ವರುಷಗಳವರೆಗೆ ಈ ನಾಟಕವು ಗಳಸಿಕೊಡುತ್ತಿದ್ದ ಧನವೇ ಆ ಕಂಪನಿಯ ಅಸ್ತಿತ್ವ ಎನ್ನುವ ಮಟ್ಟಿಗೆ ಆ ನಾಟಕ ಗಲ್ಲಾಪೆಟ್ಟಿಗೆಯ ಯಶಸ್ಸು ಕಂಡಿತ್ತು. ಹಾಗೆ ಗುಬ್ಬಿ ಕಂಪನಿಗೆ ಒಂದು ಕಾಲದಲ್ಲಿ ಸಮರ್ಥವಾಗಿ ಪೈಪೋಟಿ ನೀಡಿದ ಉತ್ತರ ಕರ್ನಾಟಕದ ಗೋಕಾಕ ಕಂಪನಿ ವೈಭವವಾಗಿ ಮೆರೆದಿದೆ. ಅಷ್ಟೇ ಅಲ್ಲ ಕಂದಗಲ್‌ರ ಬಹುತೇಕ ನಾಟಕಗಳನ್ನು ಯಶಸ್ವಿಯಾಗಿ ರಂಗಕ್ಕೆ ತಂದಿದೆ. ಸಂಪತ್ತಿಗೆ ಸವಾಲು, ಚಿಕ್ಕಸೊಸೆ, ಮಲಮಗಳು ಇವರ ಕಂಪನಿಯ ಈಗಲೂ ನೆನಪಿನಲ್ಲಿ ಉಳಿಯುವ ನಾಟಕಗಳು. ಮೇಲೆ ಉಲ್ಲೇಖಿಸಿದ ಬಹುತೇಕ ಕಂಪನಿಗಳು ಹಾಗೂ ಕಂಪನಿ ನಟರು, ನಾಟಕಕಾರರು ಏಣಗಿ ಬಾಳಪ್ಪನವರ ಕಾಲದಲ್ಲೇ ಅವರಂತೇ ವೃತ್ತಿರಂಗಭೂಮಿಯ ನಿಜ ಸ್ವರೂಪದ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ಹೋರಾಡಿದವರು. ಏಕೆಂದರೆ ಅದಾಗಲೇ ವೃತ್ತಿರಂಗಭೂಮಿ ಉತ್ತರ ಕರ್ನಾಟಕದಲ್ಲಿ ಕೊಣ್ಣೂರ ಕಂಪನಿ, ಗರುಡ ಸದಾಶಿವರಾಯರ ಕಂಪನಿ, ಹಲಗೇರಿ ಜೆಟ್ಟೆಪ್ಪನವರ ಕಂಪನಿ ಹಾಗೂ ಆಗಿನ ಇನ್ನುಳಿದ ಇವರ ಸಮಕಾಲೀನ ಕಂಪನಿಗಳ ಪ್ರಯೋಗದಿಂದಾಗಿ 1935ರ ಹೊತ್ತಿಗೆ ವೃತ್ತಿರಂಗಭೂಮಿ ತನ್ನ ಉಚ್ಛ್ರಾಯತೆ ಯನ್ನು ಮೆಟ್ಟಿತ್ತು. ಸರಿಸುಮಾರಾಗಿ ಬಾಳಪ್ಪ ಹಾಗೂ ಅವರ ಸಮಕಾಲೀನರು ಈ ಕಂಪನಿಗಳಲ್ಲೇ ಪಳಗಿದವರು. ಬದಲಾಗುತ್ತಿರುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ

ಸಂದರ್ಭದಲ್ಲಿ ವೃತ್ತಿರಂಗಭೂಮಿಯ ಉಚ್ಛ್ರಾಯತೆ ಮರೆಯಾಗಿ ಆ ರಂಗಭೂಮಿಯ ಅಸ್ತಿತ್ವದ ಪ್ರಶ್ನೆ ಅದರಲ್ಲಿ ತೊಡಗಿಸಿಕೊಂಡವರಿಗೆ ಎದುರಾಯಿತು. ಆಗ ಈ ಕಲಾವಿದರು ಧೈರ್ಯವಾಗಿ ವೃತ್ತಿ ರಂಗಭೂಮಿಯನ್ನು ಉಳಿಸಿಕೊಳ್ಳಲು ಹೋರಾಡಿದರು. ಅವರ ಈ ಹೋರಾಟ ಕೇವಲ ವಿತ್ತ ಗಳಿಕೆಯಾಗಿರದೆ ಕಲಾತ್ಮಕ ಪ್ರಯೋಗಶೀಲತೆಯ ಹೋರಾಟವೂ ಆಗಿತ್ತು. ಬಾಳಪ್ಪನವರು ಈ ಹೋರಾಟದ ಕಲಾವಿದರ ಪಂಕ್ತಿಯಲ್ಲಿ ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ಕನ್ನಡ ಜನತೆ ಅದನ್ನು ಗುರುತಿಸಿ ಅವರಿಗೆ ಹಲವಾರು ಗೌರವ ಪ್ರಶಸ್ತಿ ನೀಡಿ, ಗ್ರಂಥ ಲೇಖನಗಳನ್ನು ಬರೆದು ಅಳಿದ ಅಥವಾ ಕಳೆದುಕೊಂಡ ವೃತ್ತಿರಂಗಭೂಮಿಯ ಉಳಿದ ಸತ್ಯ ಎಂದು ಕೃತಜ್ಞತಾಭಾವದಿಂದ ತನ್ನ ಗೌರವವನ್ನು ಅರ್ಪಿಸಿದೆ. ಶತಾಯುಷಿಯಾದ ಕಲಾವಿದ ಬಾಳಪ್ಪನವರಿಗೆ ತಮಗೆ ದೊರೆತ ಈ ಎಲ್ಲ ಗೌರವ ಮನ್ನಣೆ ತಮ್ಮ ಸಮಕಾಲೀನ ವೃತ್ತಿ ರಂಗಭೂಮಿಯ ಎಲ್ಲ ಪ್ರಯೋಕ್ತೃಗಳಿಗೂ ದೊರೆತದ್ದು ಎಂಬ ವಿನಂಮ್ರ ಧನ್ಯತಾಭಾವವೂ ಇದೆ. ಏಣಗಿ ಬಾಳಪ್ಪನವರ ರಂಗ ಸಾಧನೆ ಕುರಿತಾದ ಪ್ರಸ್ತಾವನೆ ಹೇಳಿಕೆ, ಬರಹಗಳು ಬಂದಾಗಲೆಲ್ಲಾ ನನಗೆ ತತಕ್ಷಣ ಅವರ ಸಮಕಾಲೀನ ವೃತ್ತಿ ರಂಗಕಲಾವಿದರೂ ಕಂಪನಿಗಳೂ ನನ್ನ ಕಣ್ಮುಂದೆ ಬರುವುದನ್ನು ನನಗೆ ತಪ್ಪಿಸಿಕೊಳ್ಳ ಲಾಗುವುದಿಲ್ಲ. ಬಹುಶಃ ಅವರ ಸಮಕಾಲೀನ ಕೆಲ ವೈಭವಯುತ ಕಂಪನಿ ನಾಟಕಗಳನ್ನು ನೋಡಿದ ಆ ಕಾಲದ ಕೆಲ ಅದ್ಭುತ ನಟರ ಅಭಿನಯ ಕಂಡ ನೆನಪೂ ಕಾರಣವಿರ ಬಹುದು. ಈ ಹಿನ್ನೆಲೆಯಲ್ಲಿ ಬಾಳಪ್ಪನವರನ್ನು ಕುರಿತಾದ ನನ್ನ ಕೆಲ ನೆನಪು, ಅನಿಸಿಕೆ ಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನಿಸುತ್ತಿದ್ದೇನೆ.

ಸುಮಾರು 1968ರಲ್ಲಿ ಬಾಳಪ್ಪನವರನ್ನು ನಾನು ಮೊದಲ ಬಾರಿಗೆ ಕಂಡದ್ದು ದೇವರ ಮಗು ನಾಟಕದಲ್ಲಿ. ಆ ನಾಟಕದಲ್ಲಿ ಬಹುಶಃ ಅವರು ಜೀವನ ಕರ್ಮದ ಬ್ರಾಹ್ಮಣನ ಪಾತ್ರ (ಶಾಸ್ತ್ರಿ)ವಹಿಸಿದ್ದಾಗಿ ನನಗೆ ನೆನಪು. ಅವರ ಸಮಕಾಲೀನರೂ ಮತ್ತು ಗೆಳೆಯರಾದ ನನ್ನ ತಂದೆ ಆಗ ಜಮಖಂಡಿ ಕಂಪನಿಯಲ್ಲಿ ನಟರಾಗಿದ್ದರು. ಆ ಕಂಪನಿ ಸಂಕೇಶ್ವರದಲ್ಲಿ ಮುಕ್ಕಾಂಮಾಡಿ 'ಶ್ರೀ ಸತ್ಯನಾರಾಯಣ ವ್ರತ ಮಹಾತ್ಮೆ' ಎಂಬ ನಾಟಕವನ್ನು ಹಲವಾರು ಟ್ರಾನ್ಸಫರ್ ದೃಶ್ಯಗಳನ್ನೊಳಗೊಂಡ ವೈಭವಯುತವಾಗಿ ಆಡುತ್ತಿದ್ದರು. ಬಾಳಪ್ಪನವರ ಕಲಾವೈಭವ ನಾಟ್ಯ ಸಂಸ್ಥೆ ಆಗ ಹುಕ್ಕೇರಿಯಲ್ಲಿ ಕ್ಯಾಂಪ್ ಹಾಕಿತ್ತು. ಜಮಖಂಡಿ ಕಂಪನಿಯವರು ವೈಭವಯುತ ಪ್ರದರ್ಶನಗಳನ್ನು ನೋಡಿದ ನನಗೆ ಬಾಳಪ್ಪನವರು ಆಡುತ್ತಿದ್ದ ಆರ್.ಡಿ. ಕಾಮತ್‌ರ 'ದೇವರ ಮಗು', ನಾಟಕದಲ್ಲಿ ಅಂತಹ ವೈಭವ ಇರದಿದ್ದರೂ ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಒಂದು ಹೆಣ್ಣು ಮಗುವಿನ ಸುತ್ತ ಹೆಣೆಯಲಾದ ಕಥೆ ಹಾಗೂ ಅವರ ತರಹದವರ ಮನೋಜ್ಞ ಅಭಿನಯ ನನ್ನ ಮನದಲ್ಲಿಂದೂ ಹಸಿಯಾಗಿದೆ. ಅದರಲ್ಲಿ ದೇವರ ಮಗುವಿನ ತಾಯಿಯ ಭೂಮಿಕೆಯನ್ನು ಬಾಳಪ್ಪನವರ ಶ್ರೀಮತಿ ಲಕ್ಷ್ಮೀಬಾಯಿ ಏಣಗಿ ಹಾಗೂ ಮಗುವಿನ ಪಾತ್ರವನ್ನೂ ಮಗಳು ಭಾಗ್ಯಮ್ಮ ಮಾಡಿದ್ದು ನನಗೆ ನೆನಪಿದೆ. ಆ ನಾಟಕಕ್ಕೆ ಮಾತ್ರವಲ್ಲ ಬಹಳಷ್ಟು ನಾಟಕಗಳಲ್ಲಿ ಲಕ್ಷ್ಮೀಬಾಯಿ ಹಾಗೂ ಭಾಗ್ಯಮ್ಮ ಪ್ರಮುಖ್ಯ ಪಾತ್ರವಹಿಸಿ ಆ ಕಂಪನಿಗೆ ಒಂದು ನೆಲೆಯಾಗಿದ್ದರು. ಅಂತೆ

ಕನ್ನಡ ಆಧುನಿಕ ರಂಗಭೂಮಿಯು ಕಂಡ ಅಪರೂಪದ ನಟ ಬಾಳಪ್ಪನವರ ಮಗ ಏಣಗಿ ನಟರಾಜನಿಗೂ ಕೂಡಾ ರಂಗಭೂಮಿಯ ಪ್ರಾಥಮಿಕ ಗಟ್ಟಿ ರಂಗನಟನೆಯ ದೀಕ್ಷೆ ಸಿಕ್ಕಿದ್ದು ಬಾಳಪ್ಪನವರ ಕಂಪನಿಯಲ್ಲಿಯೇ. ಕೆಲ ವರುಷಗಳವರೆಗೆ ನಮ್ಮ ತಂದೆ, ಹಾಗೂ ಬಾಳಪ್ಪನವರ ಕಂಪನಿಯ ಇನ್ನೋರ್ವ ಮುಖ್ಯ ನಟ ಸಿರ್ಸಿ ಪೆಂಟರ್ ಎಂಬುವರು ಈ ಕಂಪನಿಯಲ್ಲಿದ್ದು ಸುಮಾರು 1982–83ರಲ್ಲಿ ಕೊನೆಯಲ್ಲಿ ಕಂಪನಿ ಮುಚ್ಚುವ ಸಂದರ್ಭದಲ್ಲಿ ಬಾಳಪ್ಪನವರ ಜೊತೆ ಇದ್ದರೆಂದು ತನ್ನ ತಂದೆಯ ಮೂಲಕ ನನಗೆ ತಿಳಿದು ಬಂದಿದೆ. ಬಾಳಪ್ಪನವರು ಬಹಳ ದಿನಗಳವರೆಗೆ ಆಗಾಗ ಗದುಗಿಗೆ ನನ್ನ ತಂದೆಯನ್ನು ಕಾಣಲು ಬರುತ್ತಿದ್ದರು. ಆಗ ಅವರೀರ್ವರೂ ಬಹುತೇಕ ವೃತ್ತಿರಂಗ ಸಂಗೀತದ ಹಾಡುಗಳನ್ನು ಅದರ ಹಿನ್ನೆಲೆಯನ್ನು ಮೆಲುಕು ಹಾಕುತ್ತಿದ್ದರು. ಅವರೀರ್ವರ ನೆನಪಿನ ಶಕ್ತಿ ಅಗಾಧವಾದದ್ದು. ವೃತ್ತಿ ರಂಗಭೂಮಿಯ ಸಂಗೀತದ ಬಗ್ಗೆ ಬಾಳಪ್ಪನವರು ಕೇವಲ ಆ ಹಾಡುಗಳ ಧಾಟಿ–ಚಾಲ್‌ಗಳು ಕೇವಲ ಮರಾಠೀ ರಂಗ ಸಂಗೀತದ ಪ್ರೇರಣೆ ಪಡೆದದ್ದನ್ನು ಒಪ್ಪಿಕೊಂಡರೂ ಅವರು ಬಹುತೇಕ ಕನ್ನಡ ವೃತ್ತಿರಂಗಭೂಮಿಯ ಪ್ರಸಿದ್ಧ ಹಾಡುಗಳು ಮೂಲ 'ಚೀಜಾ'ಗಳನ್ನೇ ಆಧಾರವಾಗಿ ಪಡೆದಿವೆ ಎಂದೂ ನನ್ನ ಒಂದು ಸಂದರ್ಶನ ಸಂದರ್ಭದಲ್ಲಿ ಹೇಳಿಕೊಂಡಿದ್ದಾರೆ. ಅವರ ಕಂಪನಿಯವರು ಆಡುತ್ತಿದ್ದ ಕನ್ನಡ ನಾಟಕಗಳು ಬಹುತೇಕ ಮುಂಬೈ ಕರ್ನಾಟಕ ಪ್ರಾಂತದ ಅಡಕಟ್ಟು ಬೆಳಗಾವಿ ಪ್ರಾಂತದ ಮರಾಠೀ–ಕನ್ನಡ ಪ್ರದೇಶಗಳಲ್ಲಿ ಪ್ರದರ್ಶನಗೊಂಡು, ಜನಮನ್ನಣೆ ಪಡೆದಿವೆ. ಅಲ್ಲದೇ ಪರೋಕ್ಷವಾಗಿ ಕನ್ನಡದ ಅಸ್ಮಿತೆಯನ್ನೂ ಅವರ ಕಂಪನಿ ನಾಟಕಗಳು ಉಳಿಸಿವೆ.

ಬಾಳಪ್ಪನವರನ್ನು ನಾನು ಮುಖತಃ ಭೇಟಿಯಾದದ್ದು ಏಣಗಿಯ ಅವರ ಮನೆಯಲ್ಲೇ ಸುಮಾರು 1988ರಲ್ಲಿ. ಬಾಳಪ್ಪನವರ ಕಂಪನಿಯ ಮುಖ್ಯ ನಾಟಕವಾದ 'ಜಗಜ್ಯೋತಿ ಬಸವೇಶ್ವರ', ನಾಟಕವನ್ನು ನಮ್ಮ ತಂದೆಯವರು ಕೆಲ ಬದಲಾವಣೆ ಯೊಂದಿಗೆ ಗದುಗಿನ ಕೆಲ ಹವ್ಯಾಸಿ ರಂಗಕಲಾವಿದರಿಗಾಗಿ ಸಿದ್ಧಪಡಿಸಿದ್ದರು. ಆಗ ಆ ನಾಟಕಕ್ಕೆ ವೇಷಭೂಷಣಗಳು ಬೇಕಾಗಿದ್ದವು. ಅವುಗಳನ್ನು ಬಾಳಪ್ಪನವರು ವಾಸಿಸುತ್ತಿದ್ದ, ಏಣಗಿಯಿಂದ ತರುವ ಜವಾಬ್ದಾರಿಯನ್ನು ನನ್ನ ತಂದೆ ನನಗೆ ವಹಿಸಿದ್ದರು. ತಡ ಸಾಯಂಕಾಲ ನಾನು ಅವರ ಏಣಗಿಯ ಮನೆ ತಲುಪಿದೆ. ನನ್ನನ್ನು ಆದರದಿಂದ ಬರಮಾಡಿಕೊಂಡ ಬಾಳಪ್ಪನವರು ಬಸವೇಶ್ವರ ನಾಟಕದ ಎಲ್ಲ ವೇಷಭೂಷಣಗಳನ್ನು ಕೊಟ್ಟಿದ್ದರು. ಬಹಳ ದಿನಗಳವರೆಗೆ ಅವರು ಬಸವೇಶ್ವರ ಪಾತ್ರಕ್ಕಾಗಿ ಹಾಕಿಕೊಳ್ಳುತ್ತಿದ್ದ ವಿಶೇಷ ವಿನ್ಯಾಸದ ಕಿರೀಟ ನನ್ನ ಹತ್ತಿರವಿತ್ತು. ನಮ್ಮ ತಂದೆ ಆ ಕಿರೀಟ ಕಂಡಾಗಲೆಲ್ಲಾ ಬಾಳಪ್ಪನವರ ಕಂಪನಿಯ ಬಸವೇಶ್ವರ ನಾಟಕದ ವೈಭವ ಯುಗ ಪ್ರದರ್ಶನದ ಬಗ್ಗೆ ಹೇಳುತ್ತಿದ್ದರು. ನಮ್ಮ ತಂದೆ ತಾವು ಹವ್ಯಾಸಿ ರಂಗಕಲಾವಿದರಿಗಾಗಿ ಸಿದ್ಧಪಡಿಸಿದ ಬಸವೇಶ್ವರ ನಾಟಕದಲ್ಲಿ ಹಲವಾರು ಆಧುನಿಕ ಮಾರ್ಪಾಟುಗಳನ್ನು ಮಾಡಿದ್ದರು. ಬಾಳಪ್ಪನವರು ಆ ಬದಲಾವಣೆಯನ್ನು ಬೆರಗು ಮತ್ತು ಅನುಮಾನದಿಂದಲೇ ನೋಡಿದ್ದರು. ಹಾಗೆ ಅವರು ಮತ್ತೆ ಮತ್ತೆ ವೃತ್ತಿ–ಹವ್ಯಾಸಿ ರಂಗಭೂಮಿಯ ಬೆಸುಗೆ ಬಗ್ಗೆ

ಹಲವಾರು ಸಂದರ್ಭಗಳಲ್ಲಿ ಪ್ರಸ್ತಾಪಿಸುತ್ತಿದ್ದರೂ. ಅವರಿಗೆ ವೃತ್ತಿರಂಗ ಸಂಗೀತದ ಒಂದು ಪರಂಪರೆ ನಶಿಸುತ್ತಿರುವುದರ ಬಗ್ಗೆ ವಿಷಾದಿಸುತ್ತಿದ್ದರು. ತಮ್ಮ ಇಳಿ ವಯಸ್ಸಿನಲ್ಲೂ ಹಲವಾರು ಯುವ ಸಂಗೀತಾಸಕ್ತರಿಗೆ ನಾಟ್ಯ ಸಂಗೀತವನ್ನು ಕಲಿಸುತ್ತಾ, ಪುಸ್ತಕ, ಕ್ಯಾಸೆಟ್‌ಗಳ ಮುಖಾಂತರ ದಾಖಲಿಸುತ್ತಾ ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ಹಂಬಲವನ್ನು ನಾನು ಸ್ವತಃ ಕಂಡಿದ್ದೇನೆ.

ಬಾಳಪ್ಪನವರ ನೇರ ಶಿಷ್ಯನಾಗುವ ಸೌಭಾಗ್ಯ ನನಗೆ ಎರಡು ನಾಟಕಗಳ ಮುಖಾಂತರ ದೊರಕಿತು. ಒಂದು ಅವರದೇ ಆದ ಜಗಜ್ಯೋತಿ ಬಸವೇಶ್ವರ ನಾಟಕ ಹಾಗೂ ಸಾಗ್ರ ಸಂಗೀತ ಮೃಚ್ಛಕಟಿಕ. ಈ ನಾಟಕಗಳಲ್ಲಿ ಅಭಿನಯಿಸುವ ಅವಕಾಶ ನನಗೆ ದೊರೆತಾಗ ಬಸವೇಶ್ವರ ನಾಟಕದ ತಾವೇ ವಹಿಸುತ್ತಿದ್ದ ಬಸವಣ್ಣನ ಪಾತ್ರವನ್ನು ನನಗೆ ಕಲಿಸಿದರು. ಸಾಗ್ರ ಸಂಗೀತ ಮೃಚ್ಛಕಟಿಕ ನಾಟಕದಲ್ಲಿಯ ಶಕಾರನ ಪಾತ್ರಕ್ಕಾಗಿ ಕೆಲ ಹಾಡುಗಳನ್ನು ನನಗೆ ಕಲಿಸಿದರು. ಸಾಗ್ರ ಸಂಗೀತ ಮೃಚ್ಛಕಟಿಕ ನಾಟಕವು ಬಿ.ವಿ. ಕಾರಂತರ ಆಶಯದಂತೆ ವಿಭಿನ್ನ ಶೈಲಿಯಲ್ಲಿ ಪ್ರೇಮಾ ಕಾರಂತರು ಬೆಂಗಳೂರಿನಲ್ಲಿ ಸುಮಾರು 2002ರಲ್ಲಿ ಆಯೋಜಿಸಿದ್ದರು. ಆ ಸಂದರ್ಭದಲ್ಲಿ ಧಾರವಾಡದಿಂದ ಸಾಗ್ರಸಂಗೀತ ಮೃಚ್ಛಕಟಿಕ ಕಂಪನಿ ಸಂಗೀತ ನಾಟಕದ ಸ್ವರೂಪದಲ್ಲಿ ನಾನು ಹಾಗೂ ಏಣಗಿ ನಟರಾಜ ಸಿದ್ಧಪಡಿಸಿದ್ದೆವು. ನಟರಾಜ ನಾಟಕ ನಿರ್ದೇಶಿಸಿದ್ದ ಹಾಗೂ ನಾಟಕ ರಚನೆಯ ಜವಾಬ್ದಾರಿ ನನ್ನ ಮೇಲಿತ್ತು. ನಾಟ್ಯ ಸಂಗೀತದ ಶೈಲಿಯ ಸಂಗೀತ ಸಂಯೋಜನೆಯನ್ನು ಬಾಳಪ್ಪನವರು ಮಾಡಿದ್ದರು. ತಮ್ಮ ನೆನಪಿನ ಅಗಾಧ ಶಕ್ತಿಯಿಂದ ಬಾಳಪ್ಪನವರು ಸಾಗ್ರ ಸಂಗೀತ ಮೃಚ್ಛಕಟಿಕ ನಾಟಕಕ್ಕೆ ಸಂದರ್ಭಕ್ಕೆ ತಕ್ಕಂತೆ ಧಾಟಿಗಳನ್ನು ಹೆಕ್ಕಿ ಹೆಕ್ಕಿ ಕೊಟ್ಟಿದ್ದನ್ನು ನಾನು ಎಂದೂ ಮರೆಯಲಾರೆ. ಬಾಳಪ್ಪನವರು ಬಸವಣ್ಣನ ಪಾತ್ರವನ್ನು ಅಭ್ಯಾಸ ಮಾಡಿಸುತ್ತಿದ್ದಾಗ ಸಣ್ಣ ಸಣ್ಣ ಗೆಶ್ಚರ್‌ಗಳ ಮೂಲಕ ಪಾತ್ರವನ್ನು ಕಟ್ಟುವ ಬಗೆ, ವಾಚಿಕದಲ್ಲಿ ಸ್ವಂತ ತನವನ್ನು ತರುವ ರೀತಿ ಹೇಳಿ ಕೊಡುತ್ತಿದ್ದಾಗ ರಂಗದ ಮೇಲೆ ವಿಪರೀತ ಚಲನೆ ಹಾಗೂ ಅಬ್ಬರ ವಾಚಿಕಕ್ಕೆ ಒಗ್ಗಿದ ನನ್ನನ್ನೂ ಒಳಗೊಂಡು ಆಧುನಿಕ ನಟರಿಗೆ ಆಶ್ಚರ್ಯವಾಗುತ್ತಿತ್ತು. ಸತತ ಮೂರು ತಿಂಗಳು ಆ ನಾಟಕವನ್ನು ಸುಮಾರು 20 ನಟರಿಗೆ ಅಭ್ಯಾಸ ಮಾಡಿಸಿದರು. ನಾಟಕದ ಮೊದಲ ಪ್ರದರ್ಶನ ಮುಗಿದಾಗ ಅವರ ಮುಖದಲ್ಲಿ ಸಂತೃಪ್ತ ಭಾವವಿತ್ತು. ಮುಂದೆ ಆ ನಾಟಕ ರಂಗಶಂಕರದಲ್ಲಿ ಪ್ರದರ್ಶನಗೊಂಡಾಗ ಅವರು ನಮ್ಮ ಜೊತೆ ಹರಳಯ್ಯನ ಪಾತ್ರ ವಹಿಸಿದ್ದು ನನಗೆ ಸ್ಮರಣೀಯ ಸಂದರ್ಭ.

ಬಾಳಪ್ಪನವರು ಮೇಲಿಂದ ಮೇಲೆ ಸ್ಮರಿಸುತ್ತಿದ್ದುದ್ದು ತಮ್ಮ ಹಿರಿಯ ತಲೆಮಾರಿನವರಾದ ವೃತ್ತಿ ರಂಗಭೂಮಿಯ ಮೇರು ನಟ ನಾಟಕಕಾರ ಅಭಿನಯ ಕೇಸರಿ ಗರುಡ ಸದಾಶಿವರಾಯರನ್ನು. ಅವರು ಗರುಡರ ಶ್ರೀರಾಮ ಪಾದುಕಾ ಪಟ್ಟಾಭಿಷೇಕ ನಾಟಕದ ಪದ್ಯಗಳನ್ನು ಮತ್ತೆ ಮತ್ತೆ ಹಾಡುತ್ತಿದ್ದರು. ಬಸವಣ್ಣನ ಪಾತ್ರವನ್ನು ನಾನು ವಹಿಸಿದಾಗ ಒಂದು ದೃಶ್ಯಕ್ಕಾಗಿ ಬಸವಣ್ಣ ಬಿಳಿ ರುಮಾಲು ಸುತ್ತಿಕೊಂಡು ಸಭೆ

ಪ್ರವೇಶಿಸುತ್ತಾನೆ. ನನಗೆ ರುಮಾಲು ಸುತ್ತಿ ಆ ಪ್ರವೇಶಕ್ಕಾಗಿ ಸಿದ್ಧಪಡಿಸುತ್ತಾ ನನಗೆ 'ಗರುಡರೆ' (ಗರುಡ ಸದಾಶಿವರಾಯರ ಮೊಮ್ಮೊಗ ನಾನೆಂಬ ಕಾರಣ ಅಭಿಮಾನದಿಂದ ಅವರು ನನ್ನಂತಹ ಚಿಕ್ಕವನಿಗೂ ಗರುಡರೇ ಎಂತಲೆ ಕರೆಯುತ್ತಿದ್ದರು) ಈ ರುಮಾಲು ಸುತ್ತುವ ಸ್ಟೈಲ್ ನಿಮ್ಮ ತಾತ ಗರುಡ ಸದಾಶಿವರಾಯರು ಎಚ್ಚಮ ನಾಯಕ ನಾಟಕದಲ್ಲಿ ಸುತ್ತುವ ರೀತಿ ಎಂದು ಗೌರವದಿಂದ ವೃತ್ತಿ ರಂಗಭೂಮಿಯ ಇತಿಹಾಸವನ್ನು ನೆನಪಿಸಿ ಕೊಂಡು ನಮ್ಮನ್ನು ಪುಳಕಿತರನ್ನಾಗಿ ಮಾಡುತ್ತಿದ್ದರು.

ಅಂದು ರಂಗಶಂಕರದಲ್ಲಿ ಬಾಳಪ್ಪನವರು ನಮ್ಮನ್ನೆಲ್ಲಾ ಕಟ್ಟಿಕೊಂಡು ಸಿದ್ಧಪಡಿಸಿದ ಅವರದೇ ನಾಟಕ ಜಗಜ್ಯೋತಿ ಬಸವೇಶ್ವರ ನಾಟಕದ ಸಾಯಂಕಾಲದ ಎರಡನೇ ಪ್ರದರ್ಶನ ಮುಕ್ತಾಯವಾಗಿತ್ತು. ಅವರು ಹರಳಯ್ಯನ ಪಾತ್ರ ವಹಿಸಿದ್ದರು. ನಾನು ಬಸವಣ್ಣನ ಪಾತ್ರ ವಹಿಸಿದ್ದೆ. ಗ್ರೀನ್ ರೂಮಿನಲ್ಲಿ ಮೇಕಪ್ ಒರೆಸಿಕೊಳ್ಳುತ್ತಾ ಹಿರಿಯ ನಟರಾದ ಬಾಳಪ್ಪನವರು ನನಗೆ "ಗರುಡರೆ, ಇವೊತ್ತು ನಾನು ಬಸವಣ್ಣನ ಪಾತ್ರದ ನನ್ನ ಹಕ್ಕು ನಿಮಗೆ ಬಿಟ್ಟುಕೊಟ್ಟಿದ್ದೇನೆ" ಎಂದು ನಗುತ್ತಲೆ, ಅಷ್ಟೇ ಪ್ರೀತಿ ಅಭಿಮಾನದಿಂದ ನುಡಿದರು. ಆ ಮಾತು ಕೇಳಿ ನನಗೆ ಏನು ಉತ್ತರ ಕೊಡಬೇಕೋ ತೋಚಲಿಲ್ಲ. ಅವರು ಕಲಿಸಿದ ಆ ಪಾತ್ರ ನನಗೆ ಅವರಿಂದ ದೊರೆತ ಪ್ರಸಾದ. ನಮ್ಮಂತಹ ಆಧುನಿಕರಿಗೆ ಭಕ್ತಿ ಪರಂಪರೆಯ ಭಕ್ತನ ಸಮರ್ಪಣಾ ಭಾವನೆ ದಕ್ಕಿಲ್ಲ. ಆದರೂ ಆ ಕ್ಷಣ ಅವರ ನುಡಿಗಳನ್ನು ಭಕ್ತನಂತೆ ಕಣ್ಣಿಗೊತ್ತಿ ಸ್ವೀಕರಿಸಿದೆ. ವೃತ್ತಿ ರಂಗಭೂಮಿಯ ಕೆಲ ಪಾತ್ರಗಳು ಹೀಗಿರುತ್ತದಲ್ಲಾ ಅವುಗಳನ್ನು ಒಮ್ಮೆ ಸಮರ್ಥ ನಟ ಹಸ್ತಗತ ಮಾಡಿಕೊಂಡರೆ ಆ ಪಾತ್ರವನ್ನು ಇನ್ನೊರ್ವನಲ್ಲಿ ಕಾಣುವುದು ಕಷ್ಟ. 'ಅಚ್ಚಿನ ಅಭಿನಯ' ಎಂದು ಆಧುನಿಕ ಅಭಿನಯದ ಪರಿಭಾಷೆಯಲ್ಲಿ ಆ ಪಾತ್ರದ ಅನುಸಂಧಾನದ ಪ್ರಕ್ರಿಯೆ ಬಗ್ಗೆ ಹೇಳಿದರು. ಆ ಪಾತ್ರ ಅವರೆ ಅಥವಾ ಪಾತ್ರವೇ ಆತ, ಆತನೇ ಆ ಪಾತ್ರ ಎನ್ನುವ ಮಟ್ಟಕ್ಕೆ ಆ ಪಾತ್ರವನ್ನು ಅವರು ಆ ಮಟ್ಟಕ್ಕೆ ಕೊಂಡು ಹೋಗಿಬಿಡುತ್ತಾರೆ. ಹೀಗಾಗಿ ಬಾಳಪ್ಪನವರು ನಟಿಸುತ್ತಿದ್ದ ಬಸವಣ್ಣನವರ ಪಾತ್ರವು ಅವರದೇ ಅಚ್ಚು. ಆ ಅಚ್ಚು ಅವರ ವ್ಯಕ್ತಿತ್ವವನ್ನು ಆವರಿಸಿಕೊಂಡಿದ್ದೂ ಹೌದು. ಹೀಗಾಗಿ ಆ ಸ್ಥಾನದಲ್ಲಿ ಮತ್ತೊಬ್ಬರನ್ನು ಊಹಿಸುವುದು ಕಷ್ಟ. ನಟ ಬಾಳಪ್ಪನವರನ್ನು ಕೇವಲ ಬಸವಣ್ಣನ ಪಾತ್ರಕ್ಕೆ ಸೀಮಿತಗೊಳಿಸುತ್ತಾ ಅವರ ನಟನೆಯನ್ನು ಬಸವಣ್ಣನ ಪಾತ್ರದಲ್ಲಿ ಸ್ಥಾವರಗೊಳಿಸುತ್ತಾ ವ್ಯಕ್ತಿ ಪೂಜೆ ಮಾಡುತ್ತಾ ಹೋದರೆ ಬಾಳಪ್ಪನವರಲ್ಲಿದ್ದ ಜಂಗಮ ಸ್ವರೂಪಿಯಾ ವೈವಿಧ್ಯಮಯ ನಟನ ಅವರ ನಟನೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಅವರು 'ಶಾಲಾಮಾಸ್ತರ', 'ಮಾವ ಬಂದನಪ್ಪೊ ಮಾವ', ದೇವರ ಮಗು ಮುಂತಾದ ನಾಟಕಗಳಲ್ಲಿ ವೈವಿಧ್ಯಮಯ ಪಾತ್ರ ಮಾಡಿದ್ದಾರೆ. ಅವರ ಹಾಸ್ಯ ಪ್ರಜ್ಞೆ ಸರಿಯಾದದ್ದು. ಇನ್ನಾದರೂ ಅವರನ್ನು ವೈವಿಧ್ಯಮಯ ನಟರಾಗಿ ಮತ್ತು ಓರ್ವ ನಾಟ್ಯ ಸಂಗೀತದ ತಜ್ಞರಾಗಿ ಅವರ ಸಾಧನೆಯನ್ನು ಗ್ರಹಿಸಿದ್ದಲ್ಲಿ ರಂಗಭೂಮಿ ಅಧ್ಯಯನಕ್ಕೆ ಹೊಸ ಆಯಾಮ ದೊರಕುತ್ತದೆ. ■



# ಅಮೋಘ ಅಭಿನಯದ ಸ್ತ್ರೀ ಪಾತ್ರಗಳು

● ಪ್ರೊ|| ಬಿ.ಎಸ್. ಗವಿಮಠ

1950 ರವರೆಗೆ ಬಾಳಪ್ಪನವರು ರಾಣಿ ರುದ್ರಮ್ಮನಾಗಿ, ರಾಣಿ ಚೆನ್ನಮ್ಮನಾಗಿ, ಹೇಮರೆಡ್ಡಿ ಮಲ್ಲಮ್ಮನಾಗಿ, 'ಪಠಾಣಿ ಪಾಶಾ' ನಾಟಕದಲ್ಲಿ ನಾಯಕಿ ವೃಂದಾ ಆಗಿ, ಬಸವೇಶ್ವರದಲ್ಲಿ ನೀಲಾಂಬಿಕೆ ಪಾತ್ರ, ಹಳ್ಳಿ ಹುಡುಗಿಯಾಗಿ ವಿಭಿನ್ನ ಪಾತ್ರಗಳಲ್ಲಿ ನಟಿಸಿದ್ದಾರೆ.

ಸ್ತ್ರೀ ಪಾತ್ರಗಳಿಗೆ ಹೇಳಿ ಮಾಡಿಸಿದಂತಿದ್ದ ಬಾಳಪ್ಪನವರ ರೂಪ ಪ್ರೇಕ್ಷಕರಿಗೆ ಹುಚ್ಚು ಹಿಡಿಸಿದವು. 'ಕಿತ್ತೂರು ರುದ್ರಮ್ಮ' ನಾಟಕದಲ್ಲಿ ಇವರು ರುದ್ರಮ್ಮನಾಗಿ ಮೊಟ್ಟ ಮೊದಲನೆಯ ಸಲ ಸ್ತ್ರೀಪಾತ್ರ ಧರಿಸಿದರು. ವೇ. ಶಿವಲಿಂಗ ಸ್ವಾಮಿಗಳ ಕಂಪನಿ ಹೊನ್ನಾವರದಲ್ಲಿ ಬಿಡಾರ ಹೂಡಿದಾಗ ಅನಿವಾರ್ಯವಾಗಿ ಬಾಳಪ್ಪನವರು 'ರುದ್ರಮ್ಮನ' ಪಾತ್ರವನ್ನು ಅಭಿನಯಿಸಲೇ ಬೇಕಾಯಿತು. ಅವರ ಸ್ತ್ರೀಪಾತ್ರಗಳು ಜನಾಕರ್ಷಣೆ ಯನ್ನು ಗಳಿಸತೊಡಗಿದಾಗ ಮುಂದೆ ಅನೇಕ ನಾಟಕಗಳಲ್ಲಿ ಅವರು ಸ್ತ್ರೀ ಪಾತ್ರಗಳನ್ನು ಅಭಿನಯಿಸಿದರು. ಇವರ ಸ್ತ್ರೀ ಪಾತ್ರಾಭಿನಯ ನೋಡಿದವರು ಪಾತ್ರಧಾರಿ ಗಂಡಸೆಂಬ ಕಲ್ಪನೆ ಯನ್ನು ಮಾಡಲಾರದವರಾಗಿದ್ದರು. ಬಾಳಪ್ಪ ನವರು 'ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ ಅಭಿನಯಿಸಿದ ಮಲ್ಲಮ್ಮನ ಪಾತ್ರ ಇಂದಿಗೂ

ನಾಡವರ ಮನದಲ್ಲಿ ಹಸಿರಾಗಿದೆ. ಅವರು ಮಲ್ಲಮ್ಮನ ಪಾತ್ರವನ್ನು ಅಮೋಘವಾಗಿ ಅಭಿನಯಿಸಿ ಅವಿಸ್ಮರಣೀಯರಾಗಿದ್ದಾರೆ. ಹಾಗೆಯೇ ಚಿಕ್ಕೋಡಿ ಶಿವಲಿಂಗಸ್ವಾಮಿಗಳು ಬರೆದ 'ಗುರುವಿರಕ್ತ ಪ್ರಪಂಚ'ವೆಂಬ ನಾಟಕದಲ್ಲಿಯೂ ಸ್ತ್ರೀ ಪಾತ್ರ ಮಾಡಿದರು. ಬಾಳಪ್ಪನವರ ಸ್ತ್ರೀ ಪಾತ್ರಗಳನ್ನು ಕಂಡು ಕೆಲವರು ಅನೇಕ ಸಲ ಪಾತ್ರಧಾರಿ 'ಗಂಡೋ' 'ಹೆಣ್ಣೋ' ಎನ್ನುವ ಕುತೂಹಲದಿಂದ ಜಿದ್ದು (ಪಂಥ) ಕಟ್ಟಿದ ಪ್ರಸಂಗಗಳೂ ನಡೆದು ಹೋದವು.

ಹೇಮರಡ್ಡಿ ಮಲ್ಲಮ್ಮನ ಪಾತ್ರದಲ್ಲಿ ಶ್ರೀ ಬಾಳಪ್ಪನವರನ್ನು ನೋಡಲೆಂದೇ ಹಳ್ಳಿಗಾಡಿನ ಜನ ಚಕ್ಕಡಿ ಹೂಡಿಕೊಂಡು ತಂಡೋಪತಂಡವಾಗಿ ಬರುತ್ತಿದ್ದರು. ಅಷ್ಟೇ ಅಲ್ಲದೇ ಅವರ ಪಾತ್ರವನ್ನು ಮೆಚ್ಚಿ ತಮ್ಮ ಮನೆಗಳಿಗೆ ಆಮಂತ್ರಿಸಿ, ಸಿಹಿ ಊಟ ಬಡಿಸಿ, ಸೀರೆ–ಕುಪ್ಪಸ ಅಹೇರ ಮಾಡುತ್ತಿದ್ದರೆಂಬುದು ವಿಚಿತ್ರವೆನಿಸಿದರೂ ಸತ್ಯವಾಗಿದೆ. ಬಾಳಪ್ಪನವರು ಹಲವಾರು ನಾಟಕಗಳಲ್ಲಿ 1950ರವರೆಗೆ ಸ್ತ್ರೀಪಾತ್ರಗಳಲ್ಲಿಯೇ ಮಿಂಚಿದರು. ಅಭಿಮಾನಿ ಗಳ ಮನಸ್ಸು ಗೆದ್ದರು. ಯಾವಾಗ ಬಾಳಪ್ಪನವರ ಕಂಪನಿ ಮ್ಯಾನೇಜರರಾಗಿ ಬಳ್ಳಾರಿ ವಿರೂಪಾಕ್ಷಪ್ಪ ಪ್ರವೇಶ ಪಡೆದರೋ ಆಗ ಅವರ ಜತೆಗೆ ಅವರ ಮಗಳು ಲಕ್ಷ್ಮೀಬಾಯಿ ಕೂಡ ಪ್ರವೇಶ ಪಡೆದಳು. ಮಗ ಕೃಷ್ಣ ಬಳ್ಳಾರಿ ಕೂಡ ಕಂಪನಿಯ ಆಕರ್ಷಣೆ ಎನಿಸಿದರು. ಲಕ್ಷ್ಮೀಬಾಯಿ ನಾಟಕಗಳಲ್ಲಿ ಅಭಿನಯಿಸತೊಡಗಿದ ಮೇಲೆ ಬಾಳಪ್ಪನವರು ಸ್ತ್ರೀಪಾತ್ರಗಳನ್ನು ತ್ಯಜಿಸಿದರು. ಪುರುಷ ಪಾತ್ರಗಳಲ್ಲಿ ಅಭಿನಯಿಸತೊಡಗಿದರು. ಬಸವಣ್ಣನ ಪಾತ್ರದಿಂದಾಗಿ ಅವರು ಸ್ತ್ರೀಪಾತ್ರಗಳಿಂದ ಮುಕ್ತಿ ಹೊಂದಿದರು. 1950 ರವರೆಗೆ ಬಾಳಪ್ಪನವರು ರಾಣಿ ರುದ್ರಮ್ಮನಾಗಿ, ರಾಣಿ ಚೆನ್ನಮ್ಮನಾಗಿ, ಹೇಮರೆಡ್ಡಿ ಮಲ್ಲಮ್ಮನಾಗಿ, 'ಪಠಾಣಿ ಪಾಶಾ' ನಾಟಕದಲ್ಲಿ ನಾಯಕಿ ವೃಂದಾ ಆಗಿ, ಬಸವೇಶ್ವರದಲ್ಲಿ ನೀಲಾಂಬಿಕೆ ಪಾತ್ರ, ಹಳ್ಳಿ ಹುಡುಗಿಯಾಗಿ ವಿಭಿನ್ನ ಪಾತ್ರಗಳಲ್ಲಿ ಅಮೋಘ ಅಭಿನಯ ನೀಡಿದ ಬಾಳಪ್ಪನವರು 'ಕುಂಕುಮ' ನಾಟಕದಿಂದ ಕುಂಕುಮ ಹಚ್ಚಿಕೊಳ್ಳುವುದನ್ನು ಬಿಟ್ಟರು. 1958ರಲ್ಲಿ ಕಾರವಾರ ಜಿಲ್ಲೆಯ ಬೈಂದೂರಿಗೆ ನಾಟಕ ಕಂಪನಿ ಬಂದು ನಾಟಕಗಳನ್ನು ಪ್ರದರ್ಶಿಸುತ್ತಿದ್ದ ದಿನಗಳಲ್ಲಿ ನಾಟಕದವರಂತೆ ತಲೆ ತುಂಬ ಕೂದಲು ಬಿಟ್ಟಿದ್ದರು. ಮೊದಲ ಸಲ ಆ ಉದ್ದನೆಯ ಕೂದಲುಗಳನ್ನು ಕತ್ತರಿಸಿ ಬಿಟ್ಟರು. ಪುರುಷ ಪಾತ್ರಗಳಿಗೆ ಅಣಿಯಾದರು.

*('ಏಣಗಿ ಬಾಳಪ್ಪನವರು' ಪುಸ್ತಕದಿಂದ)*



# ತಾಕತ್ತಿನ ರಂಗಗಾಯಕ

● ಡಿ.ಎಸ್. ಚೌಗಲೆ

ನನಗೆ ಬಾಳಪ್ಪಜ್ಜ ಎಂದೂ ಕೇವಲ ವೃತ್ತಿಯವರಷ್ಟೆ ಅಂತ ಅನಿಸಿಯೇ ಇಲ್ಲ. ಅವರು ಅತ್ಯಂತ 'ಕಂಟೆಂಪರರಿ' ಚಿಂತನಾಕ್ರಮವನ್ನು ಹೊಂದಿದವರೆಂದೇ ಭಾವಿಸುತ್ತ ಅವರ ಒಡನಾಟದಲ್ಲಿ ಅನುಭವಿಸುತ್ತ ಬಂದಿದ್ದೇನೆ.

ನಾನು ಏಣಗಿ ಬಾಳಪ್ಪನವರನ್ನು ಮತ್ತು ನಾಟಕಗಳನ್ನು ಮೊಟ್ಟ ಮೊದಲ ಬಾರಿಗೆ ನೋಡಿದ್ದು ನನ್ನ ಹುಟ್ಟೂರು ಚಿಕ್ಕೋಡಿ ತಾಲೂಕಿನ ಬೇಡಕಿಹಾಳದಲ್ಲಿ. ನಮ್ಮೂರು ಮಹಾರಾಷ್ಟ್ರದ ಗಡಿಗೆ ಅಂಟಿಕೊಂಡಿರುವುದರಿಂದ ಮರಾಠಿಯ ತಮಾಷಾಗಳು ಬರುತ್ತಿದ್ದವು. ಮೇಳಾ ಹೆಸರಿನ ಜನಪ್ರಿಯ ಏಕಾಂಕ ಮರಾಠಿ ನಾಟಕ ಮತ್ತು ಸಿನೇಮಾ ಹಾಡಿನ ನೃತ್ಯ ಅಭಿನಯ ಇರುವ ತಂಡಗಳು ಬರುತ್ತಿದ್ದವು. ಸೋಂಗಿ ಭಜನ, ಜಲಸಾಗಳು ಮತ್ತೊಂದು ಕಡೆ. ಶ್ರೀಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯಾ, ಸಣ್ಣಾಟ ಹಾಗೂ ಅನೇಕ ಕಂಪನಿ ನಾಟಕಗಳು ಊರಿನ ಪಕ್ಕದ ಗಳತಗಾ, ಸದಲಗಾದಲ್ಲಿ ಬೇಸಿಗೆಯಲ್ಲಿ ತಳವೂರುತ್ತಿದ್ದವು. ಆಗ ಸೈಕಲ್ಲು ಮತ್ತು ಎತ್ತಿನ ಗಾಡಿಯೇ ನಮ್ಮನ್ನು ಕೊಂಡೊಯ್ಯುವ ವಾಹನಗಳು. ಹೀಗಿರುವ

ನಮ್ಮ ಗಡಿ ಊರುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಅಪರೂಪಕ್ಕೊಮ್ಮೆ ಬಾಳಪ್ಪನವರ ಕಲಾವೈಭವ ನಮ್ಮೂರಿನ ಆಗಿನ ಬಸ್‌ಸ್ಟ್ಯಾಂಡ್ ಪಕ್ಕದ ಮನೋಹರ ಪಾಟೀಲರ ಹೊಲದಲ್ಲಿ ಟೆಂಟ್ ಹಾಕಿತ್ತು. ನಾಟಕಗಳು ಚೆನ್ನಾಗಿಯೆ ನಡೆಯುತ್ತಿರ ಬಹುದು. ನಾನಾಗ ಶಾಲಾ ಬಾಲಕ. ಬಹುಶಃ ಹೈಸ್ಕೂಲು ಓದುತ್ತಿರಬಹುದು. ಏಕಾಏಕಿ ಆ ಬೇಸಿಗೆಯ ಅಡ್ಡಮಳೆ ಮಾಮೂಲಿನಂತಿರಲಿಲ್ಲ. ಬಹು ತೀವ್ರವಾದ ಬಿರುಗಾಳಿ ಮಿಶ್ರಿತ ಮಳೆ. ನನಗೆ ಪಕ್ಕಾ ನೆನಪಿದೆ. ನಾನು ನನ್ನ ಎದುರೇ ಇರುವ ಸಿದ್ಧೇಶ್ವರ ಗುಡಿಯ ದಿಡ್ಡಿ ಬಾಗಿಲ ಬಳಿ ಈ ಬಿರುಮಳೆಗೆ ಆಶ್ರಯ ಪಡೆದಿದ್ದೆ. ಆ ಬಿರುಗಾಳಿ ಮಳೆ ಅದೆಷ್ಟು ಜೋರಾಗಿತ್ತೆಂದರೆ ಮುಖ್ಯ ಪ್ರಾಚೀನ ಗುಡಿಯ ಆಚೆಯ ಮಹಡಿ ಮನೆಯ ಮಂಗಳೂರು ಕೆಂಪು ಹೆಂಚು ನನ್ನ ಎಡಗಾಲಿಗೆ ಬಂದು ಅಪ್ಪಳಿಸಿತ್ತು. ಕಾಲಿನ ಕಿರುಬೆರಳು ಒಡೆದು ರಕ್ತ ಮಳೆಯಲ್ಲಿ ಹರಿದಿತ್ತು.

ಆ ಬಿರುಗಾಳಿ ಮಳೆಗೆ ಅಕ್ಷರಶಃ ಬಾಳಪ್ಪನವರ ತಂಬೂ (ಟೆಂಟು) ನೆಲಕ್ಕುರುಳಿತ್ತು. ನನಗೀಗಲೂ ಅಸ್ಪಷ್ಟ ಆ ಚಿತ್ರಗಳು ಸ್ಮೃತಿಯಲ್ಲಿವೆ. ಬಹುದೊಡ್ಡ ಹಾನಿ ಅದು. ನಂತರ ನಮ್ಮೂರ ಹೈಸ್ಕೂಲು ಆವರಣದಲ್ಲಿ ನಾಟಕಗಳು ನಡೆಯತೊಡಗಿದವು. ನಮ್ಮ ಹಳ್ಳಿ ಜೀವಗಳಿಗೆ ಒಂದು ಕುತೂಹಲ. ರಾತ್ರಿ ಅಂದಚೆಂದ ಕಾಣುವ ಈ ನಟ–ನಟಿಯರು ಹಗಲಲ್ಲೂ ಅಷ್ಟೆ ಚೆಂದವಾಗಿ ಕಾಣತಾರೇನು? ಅಂತ ಆಗಿನ ತಿಳುವಳಿಕೆಯಲ್ಲಿ ಅವರನ್ನು ನೋಡಲು ಅವರಿರೋ ವಾಸದ ಮನೆಗೆ ತೆರಳುತ್ತಿದ್ದೆವು. ಒಮ್ಮೆ ಹೀಗೆಯೇ ಪಾರಿಜಾತದ ಕಲಾವಿದೆ ರುಕ್ಮಿಣಿ ಪಾತ್ರ ನಿರ್ವಹಿಸುತ್ತಿದ್ದರು. ನಮ್ಮೂರಿನ ಸಿದ್ಧೇಶ್ವರನ ದಸರಾ ಹಬ್ಬದಲ್ಲಿ ಒಂದು ವಾರ ಪಾರಿಜಾತ ಆಡಿಸುತ್ತಿದ್ದರು. ಈ ತಂಡಗಳನ್ನು ತನ್ನ ತಂದೆಯೇ ಎಲೆ ಅಡಿಕೆ ಕೊಟ್ಟು ಬಂದು ಒಪ್ಪಿಸಿರುತ್ತಿದ್ದರು. ರತ್ನಪ್ಪ ಮಂಟೂರ ತಂಡದ ಪಾರಿಜಾತ ಜನಪ್ರಿಯವಾಗಿತ್ತು. ರತ್ನಪ್ಪರ ಕೃಷ್ಣ ಮತ್ತು ಕೊರವಂಜಿ ಪಾತ್ರ ಹಾಗೂ ಕಂಚಿನ ಕಂಠದ ಹಾಡುಗಾರಿಕೆ ಮರೆಯಲಾಗದ್ದು. ಸ್ಫುರದ್ರೂಪಿ ರತ್ನಪ್ಪ ಕೃಷ್ಣ–ಕೊರವಂಜಿಗೆ ಹೇಳಿ ಮಾಡಿಸಿದ ವ್ಯಕ್ತಿತ್ವ ಹೊಂದಿದ್ದರು. ಆತನ ಮಡದಿ ಸುಧಾ ರುಕ್ಮಿಣಿ ಪಾತ್ರ ನಿರ್ವಹಿಸುತ್ತಿದ್ದರು. ಅವರೂ ಸುಂದರವಾಗಿದ್ದರು. ರಾತ್ರಿ ಲೈಟಿನ ಹೊಳಪಲ್ಲಿ ಬಹು ಸುಂದರವಾಗಿ ಕಾಣುವ ಅವರನ್ನು ಹಗಲು ಹುಡುಕಿ ನೋಡುವ ಹಂಬಲ ನಮ್ಮಂಥ ಹಳ್ಳಿಗರಿಗೆ ಕುತೂಹಲದ ಚಟ.

ಆಗ ಬಾಳಪ್ಪನವರ ಕಂಪನಿ ಮುರಿದು ಹೋಗಿ ಮತ್ತೆ ಪುನಶ್ಚೇತನ ಪಡಕೊಳ್ಳುವ ಜರೂರಿನಲ್ಲಿತ್ತು. ನಮ್ಮೂರಿನ ಹೈಸ್ಕೂಲಿನ ಆವರಣದಲ್ಲಿ ನಾಟಕ ಪ್ರಯೋಗಗಳು ನಡೆಯುತ್ತಿದ್ದವು. 'ದೇವರ ಮಗು' ಜನಪ್ರಿಯ ನಾಟಕ. ಅದರಲ್ಲಿ ಭಾಗ್ಯ ಅವರು ಮಗುವಿನ ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸುತ್ತಿದ್ದರು. ಶಂಕರಗೌಡ ಪಾಟೀಲ ಮತ್ತು ಹೀರಾಬಾಯಿ ಪಾಟೀಲರ ಮಗ ಪಂ. ಶಿವಾನಂದ ಪಾಟೀಲ, ಏಣಗಿ ನಟರಾಜ ಅವರೂ ಪಾತ್ರ ನಿರ್ವಹಿಸುತ್ತಿದ್ದುದರ ನೆನಪು. ಇವರ ಪಾತ್ರಗಳನ್ನು, ಬಾಳಪ್ಪನವರ ಅಭಿನಯವನ್ನು

ಅಂದು ಮನಸೋ ಇಚ್ಛೆ ಅನುಭವಿಸಿದ್ದೆವು. ಶಿವಾನಂದ ಪಾಟೀಲ ಮತ್ತು ಭಾಗ್ಯ ಅವರನ್ನೂ ರಾತ್ರಿ ಕಂಡದ್ದು ಹಗಲಿನಲ್ಲಿ ಅವರ ಸಹಜ ಬದುಕು, ವ್ಯಕ್ತಿತ್ವ ನೋಡಲು ಯತ್ನಿಸಿದ್ದುಂಟು. ಬಹುಶಃ ಶಿವಾನಂದ ಪಾಟೀಲರು ನನಗೆ ಪರಿಚಯಗೊಂಡು ಆ ಬಳಿಕ ಚಿಕ್ಕೋಡಿಯ ಎಚ್. ಸದಾಶಿವ (ಫೋಟೋ ಸ್ಟುಡಿಯೊ) ಅವರಲ್ಲಿ ಮತ್ತೆ ಮತ್ತೆ ಭೇಟಿಯಾಗಿ ನಮ್ಮ ಸ್ನೇಹವನ್ನು ಗಟ್ಟಿಗೊಳಿಸಿದ್ದೆವು. ಆದರೆ ದುರ್ದೈವ ಶಿವಾನಂದ ಪಾಟೀಲ ಇಂದು ನಮ್ಮೊಂದಿಗಿಲ್ಲ. ಬಾಳಪ್ಪನವರ ಕಂಪನಿಯಲ್ಲಿ ಶಿವಾನಂದರ ತಂದೆ-ತಾಯಿ ಕಲಾವಿದರಾಗಿ ಬಹಳಷ್ಟು ದೀರ್ಘಕಾಲ ಇದ್ದುದರಿಂದ ಬಾಳಪ್ಪನವರ ಮಡಿಲು ಶಿವಾನಂದರಿಗೆ ಸಿಕ್ಕಿತು.

ಬಾಳಪ್ಪನವರು ನಮ್ಮೂರಲ್ಲಿ ನೈಸರ್ಗಿಕ ವಿಕೋಪಕ್ಕೆ ಹಾನಿ ಮಾಡಿಕೊಂಡರೂ ಅವರು ಎದೆಗುಂದಲಿಲ್ಲ. ಅವರಲ್ಲಿ ವ್ಯಾವಹಾರಿಕ ಪ್ರಜ್ಞೆ, ಸಾಮಾಜಿಕ ಮತ್ತು ಧಾರ್ಮಿಕ ವಿಷಯವಾಗಿ ಜಾಗೃತಾವಸ್ಥೆಯಲ್ಲಿರುವಂಥದ್ದು ಎಂದು ನಾನಂದುಕೊಂಡಿದ್ದೇನೆ. ಅವರು ಪ್ರೇಕ್ಷಕರ ಅಭಿರುಚಿಯನ್ನು ಗ್ರಹಿಸಬಲ್ಲವರು. ನಮ್ಮೂರು ಸುತ್ತಲ ಹಳ್ಳಿಗಳಲ್ಲಿ ಜೈನ ಸಮುದಾಯ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರು ತುಸು ಧಾರ್ಮಿಕರು. ದೇವರು-ದಿಂಡರು ಅಂದರೆ ಪ್ರಾಣ. ಆಗ ಬಾಳಪ್ಪನವರು ಭಕ್ತಿ ಪ್ರಧಾನ ನಾಟಕ 'ಜೈ ಪದ್ಮಾವತಿ' ಬರೆಯಿಸಿ ಆಡಿಸಿದರು. ಜನ ಕಿಕ್ಕಿರಿದು ನೋಡಲಾರಂಭಿಸಿದರು. ಸುತ್ತಲಿನ ಹಳ್ಳಿಗಳ ಜನರು ಎತ್ತಿನಗಾಡಿ ಹೊಡಿಕೊಂಡು ಷಬ್ಬದ ಸಡಗರದಂತೆ ಬಂದು ನೋಡತೊಡಗಿದರು. ಯಾವ ನೆಲದಲ್ಲಿ ಪ್ರಕೃತಿ ವಿಕೋಪದಿಂದ ಕಂಪನಿಗೆ ನಷ್ಟವಾಗಿತ್ತೋ ಅದೇ ಮಣ್ಣಿಂದ ಹಣ, ಶಕ್ತಿ-ಸಾಮರ್ಥ್ಯ, ವಿಶೇಷವಾಗಿ ಎಂಥ ಕಷ್ಟ, ತೊಂದರೆ, ಆಘಾತಗಳನ್ನೆದುರಿಸುವ ಬಲಪಡಕೊಂಡರು ಬಾಳಪ್ಪನವರು.

ಅವರ ನಾಟಕಗಳು ಪಕ್ಕದ ಮಹಾರಾಷ್ಟ್ರದ ಇಚಲಕರಂಜಿಯಲ್ಲಿ ಆರು ತಿಂಗಳು - ವರ್ಷಾನುಗಟ್ಟಲೆ ಅವಧಿಗೆ ನಡೆಯುತ್ತಿದ್ದವು. ಇಚಲಕರಂಜಿ ನೂಲಿನ ಗಿರಣಿಗಳಿಗೆ ಮತ್ತು ಮಗ್ಗುಗಳಿಗೆ ಪ್ರಸಿದ್ಧ. ಜವಳಿ ವ್ಯವಹಾರ ಮತ್ತು ನಿರ್ಮಿತಿಗಳಿಗೆ ಆ ರಾಜ್ಯದಲ್ಲೇ ವಿಶಿಷ್ಟ ಸ್ಥಾನ. ಪ್ರತಿಶತ 40 ರಿಂದ 60 ರಷ್ಟು ಕನ್ನಡಿಗರು ಮತ್ತು ಕನ್ನಡ ಬಲ್ಲವರು ಇದ್ದುದರಿಂದ ಬಾಳಪ್ಪನವರು ಮಹಾರಾಷ್ಟ್ರದಲ್ಲೂ ಮನೆಮಾತಾದರು.

ಬಾಳಪ್ಪಜ್ಜ ಜೊತೆಗೆ ಅತ್ಯಂತ ನಿಕಟ ಸಂಬಂಧ ನನಗುಂಟಾದದ್ದು, ನಾನು ನಾಟಕ ಅಕಾಡೆಮಿಗೆ ಸದಸ್ಯನಾದ ಬಳಿಕ. ಅದರ ಪೂರ್ವದಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ವೃತ್ತಿರಂಗಭೂಮಿ ಸಹಕಾರಿ ಸಂಘವನ್ನು ಅವರೇ ಹುಟ್ಟುಹಾಕಿದರು. ಅದಕ್ಕೆ ಬೆಲ್ಲದ ಬಾಗೇವಾಡಿಯ ಬಸವರಾಜ ಕತ್ತಿ ಪೋಷಕರು ಮತ್ತು ಸಂಘದ ಉಪಾಧ್ಯಕ್ಷರೂ ಹೌದು. ಅಲ್ಲಲ್ಲಿ ವಿಚಾರ ಸಂಕಿರಣ, ರಂಗೋತ್ಸವ, ವೃತ್ತಿರಂಗಕ್ಕೆ ಕಾಯಕಲ್ಪ ನೀಡುವ ಕಾರ್ಯ ಚಟುವಟಿಕೆಗಳು ಮತ್ತು ಅವರನ್ನು ತೀವ್ರವಾಗಿ ಕಾಡುವ ಹಂಬಲವಾಗಿದ್ದೆಂದರೆ ಕನ್ನಡ ವೃತ್ತಿರಂಗದ ರಂಗಗೀತೆಗಳು ದಾಖಲೀಕರಣ ಆಗುವುದರೊಟ್ಟಿಗೆ ಮುಂದಿನ ಪೀಳಿಗೆಗೆ

ತಲುಪಿ ಮುಂದುವರಿಯಬೇಕೆನ್ನುವುದು. ಆದಕಾರಣ ತಮ್ಮ ಸಂಘದಿಂದ ರಂಗಗೀತೆ ಗಾಯನ ಕಾರ್ಯಕ್ರಮಗಳನ್ನು ಏರ್ಪಡಿಸಹತ್ತಿದರು. ಆಸಕ್ತ ಯುವಕರಿಗೆ ಹೇಳಿಕೊಡುವ ಯತ್ನ ನಡೆಸಿದರು. ಆದರೆ ಅವರ ಪ್ರಯೋಜನವನ್ನು ಹೆಚ್ಚಿನ ಸಂಖ್ಯೆಯಲ್ಲಿ ಯುವ ಹಾಡುಗಾರರು ಮಾಡಿಕೊಳ್ಳಲಿಲ್ಲ. ಅಪವಾದಕ್ಕೆ ಕೆಲವರು ಕಲಿತು ಹಾಡತೊಡಗಿದರು.

ಒಮ್ಮೆ ಆರ್. ನಾಗೇಶ ಅವರು ಅಕಾಡೆಮಿ ಅಧ್ಯಕ್ಷರಿದ್ದಾಗ ಬೆಳಗಾವಿಗೆ ಬಂದಿದ್ದರು. ಸಂಜೆ ನಾಲ್ಕು ಗಂಟೆಗೆ ಬಾಳಪ್ಪಜ್ಜನವರ ಮನೆಯಲ್ಲಿ ಚಹಾಕೂಟವಿತ್ತು. ಬೆಳಗಾವಿ ಗೆಳೆಯರೆಲ್ಲ ಸೇರಿದ್ದೆವು. ಅಜ್ಜ ನಾಗೇಶರಿಗೆ ಒಂದೇ ಒಂದು ಮನವಿ ಮಾಡಿದರು 'ಈ ಮುದುಕ ಹೋಗೋದರೊಳಗ ನೆನಪಿನ್ಯಾಗಿನ ಒಂದು ಮುನ್ನೂರ ರಂಗಗೀತೆಗಳನ್ನ ದಾಖಲೆ ಮಾಡಿರಿ' ಎಂದು. ಅವರ ಈ ಮಾತು ಕರುಳಿಂದ ಬಂದಿತ್ತು. ಆ ಕರುಳ ಮಾತು ನನ್ನ ಕರುಳು ಚುರಕ್ಕೆನ್ನುವಂತೆ ಮಾಡಿತು. ನಾಗೇಶ ತಾನು ಪ್ರಯತ್ನಿಸುತೀನಿ ಎಂದು ಹೇಳಿ ಹೋದರು. ಆದರೆ ಬಾಳಪ್ಪಜ್ಜರ ತೀವ್ರತೆರನಾದ ರಂಗಗೀತೆಗಳ ಅಳಿವು ಉಳಿವಿನ ಕಾಳಜಿ ಬೆಲೆ ಕಟ್ಟಲಾರದ್ದಾಗಿತ್ತು.

ಶ್ರೀನಿವಾಸ ಜಿ. ಕಪ್ಪಣ್ಣ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಾನೂ ಸದಸ್ಯ. ಆಗ ಧಾರವಾಡದಲ್ಲಿ ನಾಟಕೋತ್ಸವವನ್ನು ಹಮ್ಮಿಕೊಂಡಿದ್ದೆವು. ನಾನು ಕಪ್ಪಣ್ಣನವರ ಸಾಮರ್ಥ್ಯ, ಶಕ್ತಿಯನ್ನು ತಿಳಿದವನು. ಅವರಿಗೆ ಬಾಳಪ್ಪನವರ ಎದೆಯಾಳದ ತೊಳಲಾಟವನ್ನು ಅರುಹಿದ್ದೆ. 'ಸರ್, ನೀವು ಮನಸ್ಸು ಮಾಡಿದರೆ ದೊಡ್ಡದಲ್ಲ!' ಮನವರಿಕೆ ಮಾಡಿಸಿದ್ದೆ. ಆ ಸುದಿನ ಬಂತು. ಧಾರವಾಡದ ರಂಗೋತ್ಸವದ ಒಂದು ರಾತ್ರಿ ಅವರ ಮನೆಗೆ ನಾವಿಬ್ಬರೂ ಹೋದೆವು. ನಟರಾಜನೂ ಇದ್ದ. ಲಕ್ಷ್ಮಮ್ಮನವರಿದ್ದರು. ಕಪ್ಪಣ್ಣ ಒಂದೇ ಏಟಿನಲ್ಲಿ 'ಅಜ್ಜಾರ ನಿಮ್ಮ ನೆನಪಿನ ಬುತ್ತಿಯೊಳಗಿನ ಮುನ್ನೂರು ರಂಗಗೀತೆ ಸಿಡಿ, ಕ್ಯಾಸೆಟ್ ಮಾಡೋ ಜವಾಬ್ದಾರಿ ನಮ್ಮದು. ನೀವು ನಿಶ್ಚಿಂತವಾಗಿ ತಯ್ಯಾರಿ ನಡೆಸಿರಿ'... ಹೇಳಿದರು. ಅಜ್ಜರಿಗೆ ಆದ ಖುಷಿ ಅಷ್ಟಿಷ್ಟಲ್ಲ. ಧಾರವಾಡದಗಲದಷ್ಟು ಅವರ ಮುಖ ಕೆಂಪೇರಿ ಅರಳಿತ್ತು.

ಯುವಕರನ್ನೂ ನಾಚಿಸುವಂಥ ಕರ್ತೃತ್ವದ ಶಕ್ತಿ ಬಾಳಪ್ಪನವರದ್ದು. ತಕ್ಷಣ ಕಾರ್ಯಪ್ರವೃತ್ತರಾದರು. ತೊಂಬತ್ತು ಪ್ಲಸ್ ವಯಸ್ಸಿನ ಹಿರಿಯಜ್ಜ ರಾಜಪ್ರಭು ಧೋತ್ರೆ, ಪಂ. ಶಿವಾನಂದ ಪಾಟೀಲರಿಂದ ಹಿಡಿದು ಹತ್ತರಿಂದ ಹದಿಮೂರು ಗಾಯಕರಿಗೆ 235ಕ್ಕೂ ಹೆಚ್ಚಿನ ರಂಗಗೀತೆಗಳನ್ನು ಕಲಿಸಿಕೊಟ್ಟರು. ಶಿವಾನಂದ ಪಾಟೀಲರನ್ನು ಹೊರತುಪಡಿಸಿ ಎಲ್ಲರೂ ಹೊಸಬರೆ! ವೇಲು ಅವರ ಕಂಪನಿ ಹಾಗೂ ನಾಟಕ ಅಕಾಡೆಮಿ ಸಹಯೋಗದಲ್ಲಿ ಉತ್ತರಾದಿ ನಾಟ್ಯ ಗೀತೆಗಳ ಧ್ವನಿಮುದ್ರಣ ಬಾಳಪ್ಪನವರ ನೇತೃತ್ವದಲ್ಲಿ, ದಕ್ಷಿಣಾದಿ ರಂಗಗೀತೆಗಳದ್ದು ಪರಮಶಿವನ್ ಹಿರಿತನದಲ್ಲಿ ಅರವಿಂದ ಸ್ಟುಡಿಯೋದಲ್ಲಿ ನಡೆಯಿತು. ನನಗಿನ್ನೂ ನೆನಪಿದೆ ಪಂ. ಶಿವಾನಂದ ಪಾಟೀಲ ಎಂಬ ದೈತ್ಯ ಪ್ರತಿಭೆ ಒಂದೇ ದಿನದಲ್ಲಿ 25 ರಂಗಗೀತೆಗಳನ್ನು ಹಾಡಿ ಮುಗಿಸಿದ. ಬಾಳಪ್ಪಜ್ಜ ಸ್ಟುಡಿಯೋದಲ್ಲಿ

ಪ್ರತಿಯೊಬ್ಬರ ಗಾಯನವು ಧ್ವನಿಮುದ್ರಿತಗೊಳ್ಳುವ ತನಕ ಕುರ್ಚಿಬಿಟ್ಟು ಕದಲದೇ ಆಲಿಸುತ್ತ ಅಲ್ಲಲ್ಲಿ ತಿದ್ದುತ್ತ, ತನಗೆ ಹೇಗೆಬೇಕೋ ಹಾಗೆ ಬರುತ್ತಿದೆಯೇ? ಎಂದು ಖಾತ್ರಿಪಡಿಸಿ ಕೊಳ್ಳುತ್ತಿದ್ದರು. ಆ ಸಿಡಿ ಮತ್ತು ಕ್ಯಾಸೆಟ್‌ಗಳು ಧ್ವನಿಮುದ್ರಿತಗೊಂಡು ಹೊರಬಂದಾಗ ಬಾಳಪ್ಪನವರ ಅರಳಿದ ತೇಜೋಪುಂಜ ಮುಖ ನೋಡುವ ಹಾಗಿತ್ತು. ನನಗೂ ಹಾಗೂ ಕಪ್ಪಣ್ಣನವರಿಗೂ ಅಕಾಡೆಮಿಯಿಂದ ಇಂಥದ್ದೊಂದು ನಮ್ಮವಧಿಯಲ್ಲಿ ಸಾಧ್ಯವಾಯಿತಲ್ಲ ಎಂಬ ಹೆಮ್ಮೆಯು ಆನಂದವನ್ನು ದ್ವಿಗುಣಗೊಳಿಸಿತು. ಎಲ್ಲ ಕ್ರೆಡಿಟ್ಟು ಕಪ್ಪಣ್ಣನವರಿಗೆ ಸಲ್ಲಬೇಕು. ಆ ಬಳಿಕ ಮತ್ತು ಮುಂಚೆಯೂ ಅಜ್ಜ ಅನೇಕ ಕಡೆ ಅತ್ಯಂತ ಹುರುಪಿನಿಂದ ರಂಗಗೀತೆಗಳನ್ನು ಹಾಡಿದವರು, ಕಚೇರಿ ಕಟ್ಟಿದವರು ಇನ್ನಷ್ಟು ಉತ್ಸಾಹದಿಂದ ಹಾಡತೊಡಗಿದರು. ಮುಂಬೈ, ನಿಪ್ಪಾಣಿ, ಬೆಳಗಾವಿ, ಹಡಗಲಿ, ಬೈಲಹೊಂಗಲ, ಧಾರವಾಡ, ಬೆಂಗಳೂರು– ಹೀಗೆ ಹತ್ತುಹಲವು ಕಡೆಯಲ್ಲಿ ಅಜ್ಜನವರ ಮತ್ತು ಹೊಸ ತಂಡದ ರಂಗಗೀತೆ ಗಾಯನ ನಡೆಯಹತ್ತಿತು. ನಾನು ಇದ್ದಲ್ಲೆಲ್ಲ ಅಜ್ಜ ಅವರಿಗೆ ಜೋಳದರಾಶಿ ದೊಡ್ಡನಗೌಡರ ಹಾಡು ಹೇಳಲು ಕೇಳಿಕೊಳ್ಳುತ್ತಿದ್ದೆ. ಅವರು ತಮಾಷೆ ಮಾಡತಾನೆ 'ಹೋಗಿ ಬರತಿನರೆವ್ವ ನಮ್ಮೂರಿಗೆ...' ಹಾಡುತ್ತಿದ್ದಂಗನೆ ಕಣ್ಣುಗಳು ತುಂಬಿ ಕರುಳು ಹಿಂಡಿದಂತ ಅನುಭವ. ಇದು ಬಾಳಪ್ಪನವರ ರಂಗಗಾಯನದ ತಾಕತ್ತು.

ಈ ಮಧ್ಯೆ ಅವರು ಒಂದು ಮಕ್ಕಳ ನಾಟಕವನ್ನು ಏಣಗಿಯ ಪುಟಾಣಿಗಳಿಗೆ ಮಾಡಿಸಿದ್ದರು. ಸಂಕೇಶ್ವರದಲ್ಲಿ ಬೆಳಗಾವಿಯ ಹವ್ಯಾಸಿಗರನ್ನು ಸೇರಿಸಿ 'ಸನಾದಿ ಅಪ್ಪಣ್ಣ' ಮಾಡಿಸಿದ್ದರು. ಇದೆಲ್ಲಕ್ಕೂ ಮಿಗಿಲಾಗಿ ಮೊನ್ನೆಮೊನ್ನೆಯ ತನಕ ಪ್ರಕಾಶ ಗರೂಡ, ಏಣಗಿ ನಟರಾಜ ಮತ್ತು ಮೊಮ್ಮಕ್ಕಳನ್ನು ಸೇರಿಸಿ 'ಬಸವೇಶ್ವರ' ನಾಟಕದಲ್ಲೂ ಮುಖಕ್ಕೆ ಬಣ್ಣ ಹಚ್ಚಿದರು. ನನಗೆ ಬಾಳಪ್ಪಜ್ಜ ಎಂದೂ ಕೇವಲ ವೃತ್ತಿಯವರಷ್ಟೆ ಅಂತ ಅನಿಸಿಯೇ ಇಲ್ಲ. ಅವರು ಅತ್ಯಂತ 'ಕಂಟೆಂಪರರಿ' ಚಿಂತನಾಕ್ರಮವನ್ನು ಹೊಂದಿದವರೆಂದೇ ಭಾವಿಸುತ್ತ ಅವರ ಒಡನಾಟದಲ್ಲಿ ಅನುಭವಿಸುತ್ತ ಬಂದಿದ್ದೇನೆ. ಹಳೆಯದರ ಒಟ್ಟಿಗೆ ಹೊಸ ರಂಗಪ್ರಯೋಗಗಳನ್ನು ನೋಡುತ ಬಂದವರು. ಅದಕ್ಕೆ ನಟರಾಜನಿಗೆ ನೀನಾಸಂ ಮೂಲಕ ಆಧುನಿಕ ರಂಗದೀಕ್ಷೆ ದೊರೆಯುವಂತೆ ಮಾಡಿದವರು. ಅವರ ಅನೇಕ ಮಾತಿನ ತುಣುಕುಗಳಲ್ಲಿ ಈ ಸಮಗ್ರ ನೋಟ, ಒಳನೋಟಗಳಿವೆ. ಅದಕ್ಕೆನೆ ಎಂಬತ್ತು ವರ್ಷದ ರಂಗಾನುಭವ ಹೊಂದಿದ ಅವರು ನಡೆದಾಡುವ ವಿಶ್ವಕೋಶವೇ ಸರಿ ಹಾಗೂ ದಂತಕತೆಯೂ ಹೌದು.

■



# ಅಪ್ಪನ ಹೆಗಲ ಮೇಲೆ ಕೂತು ಬಾಳಪ್ಪನ ನೋಡಿದೆ

● ಹೂಲಿ ಶೇಖರ್

> ಎಂಥಾ ಸುಂದರ ಮೂರ್ತಿ ಬಾಳಪ್ಪ. ಬಣ್ಣ ಹಚ್ಚಿಕೊಂಡೇ ಕೂತಿದ್ದಾರೇನೋ ಎಂಬಂತೆ ಮುಖ ಲಕಲಕ ಅನ್ನುತ್ತಿತ್ತು.

ನನಗಿನ್ನೂ ನೆನಪಿದೆ. 1962ನೆಯ ಇಸ್ವಿ. ಆಗ ನಾನು ಕನ್ನಡ ಮೂರನೆಯ ತರಗತಿಯಲ್ಲಿ ಓದುತ್ತಿದ್ದೆ. ತಿಳುವಳಿಕೆ ಮೂಡುತ್ತಿರುವ ವಯಸ್ಸು. ನಮ್ಮೂರಿನ ಅಜ್ಜನವರ ಮಠ ಬಲು ಪ್ರಸಿದ್ಧವಾದದ್ದು. ಬರೀ ಸವದತ್ತಿ ತಾಲೂಕಿನಲ್ಲಿ ಅಷ್ಟೇ ಅಲ್ಲ. ಅದರಾಚೆಗೂ ಹೂಲಿ ಅಜ್ಜನವರ ಮಹಿಮೆ ಪ್ರಸಿದ್ಧವಾಗಿತ್ತು. ಅವ್ವ ಪ್ರತಿ ಸೋಮವಾರ ಬೆಳಗಾರೆ ಎದ್ದು, ಮಠದ ಬಾಗಿಲಿಗೆ ಹೋಗಿ ಹಣೆಯಿಟ್ಟು ಬರುತ್ತಿದ್ದಳು. ಅಪ್ಪ ಆಗಾಗ ಅಜ್ಜನವರ ಸೇವೆಗೆ ಹೋಗುತ್ತಿದ್ದ. ಅವರ ಭಕ್ತಿಯ ಗುಣ ನನ್ನಲ್ಲೂ ಹರಿದು ಬಂದಿತ್ತು. ಹಾಗಾಗಿ ನಾನೂ ಒಂದನೇ ತರಗತಿಯಲ್ಲಿದ್ದಾಗಿನಿಂದ, ಶಾಲೆಗೆ ಹೋಗುವಾಗ ಮೊದಲು ಅಜ್ಜನವರ ಮಠಕ್ಕೆ ಹೋಗಿ ಗದ್ದುಗೆಗೆ ನಮಸ್ಕರಿಸಿ, ಹಣೆಗೆ ಅಂಗಾರ ಹಚ್ಚಿಕೊಂಡು ಮುಂದೆ ಹೋಗುತ್ತಿದ್ದೆ. ಊರಂತೂರೇ ಅಜ್ಜನವರೆಂದರೆ ಸಾಕ್ಷಾತ್ ಪರಮಶಿವನೆಂದು ನಂಬಿಬಿಟ್ಟಿತ್ತು.

ಇಂಥ ಸಂದರ್ಭದಲ್ಲಿ ಅದೊಂದು ಮಧ್ಯಾಹ್ನ ಹೊಲದಿಂದ ಬಂದ ಅಪ್ಪ ಅವ್ವನಿಗೆ ಹೇಳಿದ. 'ಇವತ್ತು ರಾತ್ರಿ ಮಠದಾಗ ಕಾರ್ಯಕ್ರಮ ಐತಿ. ಏಣಗಿ ಬಾಳಪ್ಪಗ ದೊಡ್ಡ ಅಜ್ಜನಾವ್ರು ಸನ್ಮಾನ ಮಾಡತಾರಂತ. ಊರಿನ ದೊಡ್ಡ ಮಂದೆಲ್ಲಾ ಸೇರತಾರಂತ. ಸವದತ್ತಿಯಿಂದ ಮಾಮಲೇದಾರೂ ಬರತಾರಂತ. ಲಗೂ ರೊಟ್ಟೀ ಮಾಡು. ತಿಂದು ನಾನೂ ಹೋಗಿ ಬರತೇನಿ' ಅಂದ. ಅದು ನನ್ನ ಕಿವಿಗೆ ಬಿದ್ದದ್ದೇ ತಡ. ನಾನು ಓಡಿ ಹೋಗಿ ಅಪ್ಪನಿಗೆ ಹೇಳಿದೆ – 'ಯಪ್ಪಾ... ಏಣಗಿ ಬಾಳಪ್ಪ ಅಂದ್ರ ಯಾರು?'

'ನಾಟಕ ಕಂಪಣಿ ಮಾಲಕಲೇ... ದೊಡ್ಡ ಕಲಾವಿದ. ನಾಟಕ ಕಂಪಣಿ ಕಟ್ಯಾರ. ಅವ್ರು ಪಾರ್ಟು ಮಾಡೂ ಜಗಜ್ಯೋತಿ ಬಸವೇಶ್ವರ ನಾಟಕಾ ನೋಡಬೇಕು ನೀನು. ಸಾಕ್ಷಾತ್ ಬಸವೇಶ್ವರನ ಭೂಮಿಗೆ ಬಂದಾನ ಅನಬೇಕು. ಹಂಗ ಮಾಡತಾನು. ಅಂಥಾ ಕಲಾವಿದ. ಅವ್ನೂ ನಮ್ಮ ತಾಲೂಕಿನ ಏಣಗೀಯಾಂವ.'

ನನಗೆ ಕುತೂಹಲ ಇಮ್ಮಡಿಸಿತು. ಒಮ್ಮೆ ನಮ್ಮ ಸಾಲೀ ಮಾಸ್ತರರು ಈ ಹೆಸರು ಹಿಡಿದು ಹೊಗಳಿದ್ದನ್ನು ಕೇಳಿದ್ದೆ. 'ಭಾರೀ ಕಲಾವಿದ. ದೊಡ್ಡ ನಾಟಕ ಕಂಪಣೀನ ಕಟ್ಯಾನ' ಎಂದು ಗುಣಗಾಡಿದ್ದರು. ನನಗೂ ಅವರನ್ನು ನೋಡಬೇಕೆನಿಸಿತು. 'ಯಪ್ಪಾ... ನಾನೂ ಬರಲೀ? ಬಾಳಪ್ಪನ ನೋಡಾಕ?'

ಅಂದೆ. ಕೂಡಲೇ ಅಪ್ಪ ಒಪ್ಪಿಗೆ ಸೂಚಿಸಿದ. ಅವ್ವ ಮೆಲ್ಲಗೆ – 'ಹೆಂಗಸೂರೂ ಬರತಾರೇನು? ನಾನೂ ಬಾಳಪ್ಪನ್ನ ನೋಡತಿದ್ನಿ' ಎಂದು ದನಿಗೂಡಿಸಿದಳು. ಹಳೇ ಕಾಲ. ಹತ್ತು ಜನ ಗಂಡಸರ ಗುಂಪು ಇರುವ ಕಡೆ ಯಾವ ಹೆಣ್ಣು ಮಕ್ಕಳ ಮುಖವೂ ಕಾಣಬಾರದು. ಕಾಣುತ್ತಿರಲಿಲ್ಲ ಆಗ. ಕೂಡಲೇ ಅಪ್ಪ ಸಿಡುಕಿದ.

'ನೀ ಯೇನ ಬರತೀ ತಲೀ? ನಾನೂ ಶೇಕಣ್ಣ ಹೊಂಟೇವಲ್ಲ. ಏನಾತು ಅಂತ ಬಂದು ಹೇಳತೀವಿ. ಲಗೂ ರೊಟ್ಟೀ ಬಡಿದಿಡು.' ಎಂದು ಅವ್ವನ ಆಸೆಗೆ ತಣ್ಣೀರು ಹಾಕಿಬಿಟ್ಟ. ನನಗಂತೂ ಖುಷಿ. ಏಣಗಿ ಬಾಳಪ್ಪನನ್ನು ನೋಡುತ್ತೇನಲ್ಲ ಎಂದು.

ಸಂಜೆ ಹೊತ್ತು ಇಡೀ ಊರು ಎಣ್ಣೆ ಬುಡ್ಡಿಗಳ ದೀಪದಿಂದ ಮಂದವಾಗಿ ಬೆಳಗತೊಡಗಿತು. ಆಗ ನಮ್ಮೂರಿಗೆ ಇನ್ನೂ ಕರೆಂಟು ಬಂದಿರಲಿಲ್ಲ. ಊರಲ್ಲಿ ಏನೇ ಕಾರ್ಯಕ್ರಮ ನಡೆದರೂ ಪೆಟ್ರೋಮ್ಯಾಕ್ಸ ಬೆಳಕಿನಲ್ಲೇ ನಡೆಯಬೇಕಿತ್ತು. ಮೈಕ್ ಬೇಕಿದ್ದರೆ ಮಿನಿ ಜನರೇಟರ್ ತರಿಸಬೇಕಾಗಿತ್ತು. ಅವತ್ತು ಮಠದಲ್ಲಿಯ ಕಾರ್ಯಕ್ರಮಕ್ಕಾಗಿಯೇ ಗುರ್ಲಹೊಸೂರಿನಿಂದ ಜನರೇಟರು ಬರಬೇಕಾಗಿತ್ತು. ಏನು ಕಾರಣವೋ ಅದು ಬರಲಿಲ್ಲ. ಹಾಗಾಗಿ ಚಿಕ್ಕರೆಡ್ಡಿ ರಂಗಪ್ಪನವರು ಐದು ಪೆಟ್ರೋಮ್ಯಾಕ್ಸಗಳನ್ನು ವ್ಯವಸ್ಥೆ ಮಾಡಿ ತಂದಿದ್ದರು.

ನಾನು ಅಪ್ಪನ ಜೊತೆಗೆ ಮಠಕ್ಕೆ ಹೋದಾಗ ಆಗಲೇ ಅಜ್ಜನವರ ಭಕ್ತರು ಹಾಗೂ ಬಾಳಪ್ಪನವರ ಅಭಿಮಾನಿಗಳಿಂದ ಅಲ್ಲಿಯ ಸಭಾಭವನ ತುಂಬಿ ಹೋಗಿತ್ತು. ಆಗಲೇ

ಸನ್ಮಾನ ಕಾರ್ಯಕ್ರಮ ಆರಂಭವಾಗಿತ್ತು. ಊರ ಹಿರಿಯರಾದ ಚಿಕ್ಕರೆಡ್ಡಿ ರಂಗಪ್ಪನವರು ಸ್ವಾಗತ ಭಾಷಣ ಮಾಡಿದ್ದರಂತೆ. ಕರ್ನಾಟಕದ ಗಾಂಧೀ ಎಂದು ಆಗ ಹೆಸರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಹೂಲಿ ವೆಂಕರೆಡ್ಡಿಯವರು ಬಾಳಪ್ಪನವರ ಕಲಾಶಕ್ತಿಯ ಬಗ್ಗೆ ಭಾಷಣ ಮಾಡಿದ್ದರಂತೆ. ಅಲ್ಲಿ ಸೇರಿದವರಲ್ಲಿ ಕೆಲವರು ಅಪ್ಪನಿಗೆ ವರದಿ ಕೊಟ್ಟರು. ನನಗೂ ಕುತೂಹಲ. ಬಾಳಪ್ಪನ ಮಾತು ಕೇಳಿಸಿಕೊಳ್ಳುವ ಅವಕಾಶವಾದರೂ ಇದೆಯಲ್ಲ. ಸುತ್ತ ನಿಂತವರ ಕಾಲ ಸಂದಿಯಲ್ಲಿ ತೂರಿ ಹಣಿಕಿ ನೋಡಿದೆ. ವೇದಿಕೆ ಸರಿಯಾಗಿ ಕಾಣಲಿಲ್ಲ. ಬಾಲಕನಾದ ನಾನು ಹೆಚ್ಚೆಂದರೆ ಆಗ ನಾಲ್ಕು ಅಡಿ ಎತ್ತರವಿರಬೇಕು. ಬಾಳಪ್ಪ ಹೋಗಲಿ ಅಲ್ಲಿ ಯಾರ್ಯಾರು ಸೇರಿದ್ದಾರೆ ಎಂದೂ ಗೊತ್ತಾಗಲಿಲ್ಲ. ಅಪ್ಪನಿಗೆ ಹೇಳಿದೆ 'ಯಪ್ಪಾ ನನಗ ಬಾಳಪ್ಪ ಕಾಣವಲ್ಲ.'

'ತಡೀ... ಎಲ್ಲಾರೂ ಕುಂತಮ್ಯಾಲ ಕಂಡಾನು. ನೋಡಲ್ಲೆ, ಬಿಳೀ ಪಟಗಾ ಸುತುಗೊಂಡು ಕುಂತಾನಲ್ಲ ಕೆಂಪಣ್ಣಾಂವ. ಅವನ ನೋಡು ಬಾಳಪ್ಪ'

'ನನಗ ಕಾಣವಲ್ಲಪೋ...'

'ಹೌದ? ಬಾಳಪ್ಪ ಮೊದಲ ಗಿಡ್ಡ ಮನಿಶಾ. ದಂಡಿನಾಗ ಹೊಕ್ಕ ತ್ವಾಳದಂಥಾಂವ. ತಡೀ ನನ್ನ ಹೆಗಲ ಮ್ಯಾಲ ಹತ್ತಿ ಕುಂಡ್ರು. ಕಾಣತಾನು'

ಅಪ್ಪ ತಡಮಾಡಲಿಲ್ಲ. ಕುಸುಬೀ ಚೀಲವನ್ನು ಎತ್ತಿ ಹೆಗಲ ಮೇಲೆ ಹಾಕಿಕೊಂಡಂತೆ ನನ್ನನ್ನು ಎತ್ತಿ ಹೆಗಲಗೇರಿಸಿಕೊಂಡ. 'ಅಲ್ನೋಡು. ಅಜ್ಜಾರ ಬಾಜೂ ಕುಂತಾನಲ್ಲ ಬಿಳೀ ಪಟಗಾದಾಂವ. ಅವನ ನೋಡು ಏಣಗಿ ಬಾಳಪ್ಪ. ಬೇಕಾದರ ಅಂವಗ ಜಗಜ್ಯೋತಿ ಬಸವೇಶ್ವರ ಅನ್ನು' – ಅಂದ.

ನಾನು ರೆಪ್ಪೆ ಪಿಳುಕಿಸದೆ ನೋಡಿದೆ. ಎಂಥಾ ಸುಂದರ ಮೂರ್ತಿ ಬಾಳಪ್ಪ. ಬಣ್ಣ ಹಚ್ಚಿಕೊಂಡೇ ಕೂತಿದ್ದಾರೇನೋ ಎಂಬಂತೆ ಮುಖ ಲಕಲಕ ಅನ್ನುತ್ತಿತ್ತು. ಟೊಮ್ಯಾಟೋ ಥರ. ನೀಳ ಮೂಗು. ತಲೆಗೆ ಬಿಗಿಯಾಗಿ ಸುತ್ತಿದ್ದ ಅಚ್ಚ ಬಿಳೀ ಪಟಗ. ಒಮ್ಮೆ ನೋಡಿದರೆ ಸಾಕು ಮತ್ತೆ ನೋಡಬೇಕು ಅನ್ನಿಸುವಂಥ ರೂಪ. ಪಕ್ಕದಲ್ಲಿ ಕಾವಿ ಧರಿಸಿದ ಎಂಭತ್ತರ ವಯಸ್ಸಿನ ದೊಡ್ಡ ಅಜ್ಜನವರು ಕಣ್ಣು ಮುಚ್ಚಿ ಕೂತಿದ್ದರು. ಒಮ್ಮೆ ಅವರಿಗೆ ಮನದಲ್ಲಿಯೇ ನಮಸ್ಕರಿಸಿದೆ.

'ಯಪ್ಪಾ... ಬಾಳಪ್ಪ ಕಂಡ. ಅವ್ನೂ ನಿನ್ನ ವಯಸ್ಸಿನಾಂವ ನೋಡು'

'ಹೂಂ... ನಾವಿಬ್ರೂ ಡವಗೀ ಬರದಾಗ ಹುಟ್ಟೇವಿ ಅಂತ ನಿಮ್ಮಜ್ಜ ಹೇಳತಿದ್ದ. ಅವ್ನೂ ಇಲ್ಲೆ ಏಣಗಿ ಊರಾಂವ. ಅಂವಾ ದೊಡ್ಡ ಕಲಾವಿದ ಆದ. ನಾ ರೈತ ಆಗಿ ದನಗಳ ಬಾಲದೊಳಗೆ ಕೈ ಹಕ್ಕೊಂಡು ಕುಂತ್ನಿ. ನೀ ಅಂವಗ ಅಂವಾ–ಇಂವಾ ಅನಬ್ಯಾಡ. ರೀ... ಹಚ್ಚಿ ಮಾತಾಡು'

ಅಂದ. ಆ ಮಾತು ನನಗೆ ಗಲಿಬಿಲಿಯುಂಟು ಮಾಡಿತು. ಅತ್ಯಂತ ಆತ್ಮೀಯರಿಗೆ ರೀ ಹಚ್ಚಿ ಮಾತಾಡುವುದು ನಮ್ಮಷ್ಟಕ್ಕೆ ನಾವೇ ಕಂದಕ ತೋಡಿಕೊಂಡಂತೆ ಎಂಬುದು ನನಗೆ ಆಮೇಲೆ ತಿಳಿದ ಸಂಗತಿ. ಅವ್ವನಿಗೆ ಅವ್ವ, ಅಪ್ಪನಿಗೆ ಅಪ್ಪ, ಅಜ್ಜನಿಗೆ ಅಜ್ಜ ಅಂದರಷ್ಟೇ ಪ್ರೀತಿ ಹೃದಯಕ್ಕೆ ತಟ್ಟುತ್ತದೆ ಎಂದು ಗೊತ್ತಿರಲಿಲ್ಲ. ಆದರೂ ಸುಮ್ಮನೆ ಗೋಣು ಹಾಕಿದೆ. ಬಾಳಪ್ಪನನ್ನು ಅಜ್ಜ, ಇಲ್ಲ ಕಾಕಾ–ದೊಡ್ಡಪ್ಪ ಅಂದರೆ ಮಾತ್ರ ಹತ್ತಿರವಾಗುತ್ತಾನೆ ಎಂದು ಆಗ ನನಗೂ ತಿಳಿದಿರಲಿಲ್ಲ. ಅಪ್ಪನಿಗೂ ತಿಳಿದಿರಲಿಲ್ಲ.

'ಯಪ್ಪಾ... ನಾ ಬಾಳಪ್ಪ ಕಾಕಾನ ಮಾತಾಡಿಸಬೇಕು. ಹತ್ರ ಹೋಗೂಣು?'

'ಹುಚ್ಚ ಅದೀ ನೀ. ಏನಂತ ಮಾತಾಡಿಸ್ತೀ? ಮಾತ್‌ಯಾಕ? ಅವನ ನಾಟಕಾ ನೋಡು. ಬಾಳಪ್ಪ ಏನಂತ ಗೊತ್ತಾಗತೈತಿ. ಒಂದಿನಾ ಅಂವನ್ನ ನಾನ ಮನೀಗೆ ಊಟಕ್ಕ ಕರೀತೀನಿ. ನಿಮ್ಮವ್ವ ಸೀಕರಣಿ–ಹೋಳಿಗಿ ಭಾಳ ಛಲೋ ಮಾಡತಾಳು. ಬಾಳಪ್ಪಗೂ ಹೋಳಿಗಿ ಅಂದರ ಬಲು ಫಸಂದಂತ'

ಅಪ್ಪನ ಮಾತು ನನ್ನನ್ನು ಮತ್ತೊಂದು ಲೋಕಕ್ಕೆ ಕರೆದೊಯ್ದಿತು. ನಾಟಕದ ಬಾಳಪ್ಪ ಕಾಕಾ ಹೋಳಿಗಿ ಸೀಕರಣಿ ಉಣ್ಣೋದಕ್ಕ ನಮ್ಮನೀಗೆ ಬರತಾನು. ಅವ್ವ ಮಾಡಿದ ಹೋಳಿಗಿಗೆ ಬೆಲ್ಲ ಹಾಕುವುದೇ ಬೇಡ. ಅಷ್ಟೊಂದು ರುಚಿಯಾಗಿರುತ್ತದೆ.

ನನಗೆ ಖುಷಿಯೋ ಖುಷಿ. ನಾಟಕದ ಬಾಳಪ್ಪ ನಮ್ಮ ಮನೆಗೆ ಊಟಕ್ಕೆ ಬರುತ್ತಾರೆಂಬ ಸಂತೋಷದಲ್ಲಿ ಅಪ್ಪನ ಹೆಗಲ ಮೇಲೆ ಕೂತು ಮತ್ತೆ ಮತ್ತೆ ನೋಡಿದೆ. ಈಗ ಬಾಳಪ್ಪನವರ ಭಾಷಣ ಸುರುವಾಯಿತು. ಅದು ಭಾಷಣವಲ್ಲ. ಅಚ್ಚ ಕನ್ನಡದ ಸ್ವಚ್ಛ ಮಾತುಗಳು. ನಡುನಡುವೆ ವಚನಗಳ ಹಾಡುಗಳು. ಎಂಥಾ ಧ್ವನಿಯದು. ಈಗಲೂ ನನ್ನ ಕಿವಿಯಲ್ಲಿ ಅಂದಿನ ಅವರ ದನಿ, ಮಾರ್ದನಿಯಾಗುತ್ತಲೇ ಇದೆ.

**ಬಾಳಪ್ಪಗ ನಾಟಕಾನ ಹೋಳಿಗೆ–ಸೀಕರಣಿ**

ಆದರೆ ದುರ್ದೈವ. ಬಾಳಪ್ಪ ಮತ್ತೆ ನಮ್ಮೂರಿಗೆ ಬಂದನೋ ಬಿಟ್ಟನೋ. ಏನೂ ಗೊತ್ತಾಗಲಿಲ್ಲ. ಅಪ್ಪನಿಗೆ ನಾನು ಆಗಾಗ ನೆನಪಿಸುತ್ತಲೇ ಇದ್ದೆ. ಬಾಳಪ್ಪ ಮನೆಗೆ ಬರಲಿಲ್ಲ. ಹೋಳಿಗೆ ಸೀಕರಣೆ ಉಣಲಿಲ್ಲ. ನಾನು ಬಾಯ್ತುಂಬ ಅವನ ಜೊತೆ ಮಾತಾಡಲಿಲ್ಲ ಎಂದು. ಆಗ ಅಪ್ಪ ರೇಗಿದ್ದುಂಟು. ಬಾಳಪ್ಪಗ ನಾಟಕಾನ ಹೋಳಿಗಿ–ಸೀಕರಣಿ. ನೀ ಬಾಳಪ್ಪನ ನೋಡಿ–ಮಾತಾಡಿಸಬೇಕಂದರ ನೀನೂ ಅವನಂಗಾಗು ಅಂದುಬಿಟ್ಟ. ನಾನು ಮತ್ತೆ ಮಾತಾಡಲಿಲ್ಲ. ಅಂತರ್‌ಮುಖಿಯಾಗಿಬಿಟ್ಟೆ, ಬಾಳಪ್ಪ ಗುಂಗೀ ಹುಳವಾಗಿ ಅಂದಿನಿಂದ ನನ್ನನ್ನು ಕೊರೆಯತೊಡಗಿದ.

ಒಂದು ಸಲ ಏಣಗಿ ಊರಿನ ಹತ್ತಿರದ ಆಸುಂಡಿ ಗ್ರಾಮಕ್ಕೆ ಹೋದೆ. ಆಸುಂಡಿ, ಗುರ್ಲಹೊಸೂರು (ಡಾ.ಶಂ.ಬಾ. ಜೋಶಿಯವರ ಹುಟ್ಟೂರು)ಗಳಲ್ಲಿ ನಾಟಕದ ಪರದೆ ಒದಗಿಸುವವರಿದ್ದರು. ಅಲ್ಲೆಲ್ಲ ಬಾಳಪ್ಪ ಕಾಕಾ ಓಡಾಡುತ್ತಾನೆಂದು ನಮ್ಮವರು ಹೇಳಿದ್ದರು.

ಒಂದು ವಾರ ಕಳೆದರೂ ಬಾಳಪ್ಪ ಅಲ್ಲೆಲ್ಲೂ ಸುಳಿಯಲಿಲ್ಲ. ಅವರ ಕಂಪಣಿ ಈಗ ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಕನ್ನಡ ನಾಟಕ ಪ್ರದರ್ಶಿಸುತ್ತಿದೆ ಎಂದು ಯಾರೋ ಹೇಳಿದರು. ಗಡಿನಾಡ ಭಾಗಗಳಲ್ಲೂ ಬಾಳಪ್ಪ ಪ್ರಸಿದ್ಧರಾಗಿದ್ದರು. ನಾನು ನಿರಾಸೆಯಿಂದ ಹೂಲಿಗೆ ವಾಪಸಾಗಿದ್ದೆ.

ಅಷ್ಟರಲ್ಲಿ ನಮ್ಮೂರಿಗೆ ಪಡೇಸೂರು ಕಂಪನಿ, ಬ್ಯಾಡಗಿ ಕಂಪನಿ, ಸೂಡಿ ಕಂಪನಿ, ಜಮಖಂಡಿ ಕಂಪನಿ, ಬೆಳವಣಿಕಿ ಕಂಪನಿಗಳು ಬಂದು ಕ್ಯಾಂಪ ಹಾಕಿದ್ದವು. ಅಪ್ಪನ ಜೊತೆ ಹೋಗಿ ನಾನು ಹಲವಾರು ನಾಟಕಗಳನ್ನೂ ನೋಡಿದ್ದೆ. ಆದರೆ ನನ್ನ ನಾಟಕ ನೋಡುವ ಹುಚ್ಚಿಗೆ ತಡೆ ಹಾಕಿದವರು ಶ್ರೀಗೋ ಗುರುಗಳು. ಬುದ್ಧಿವಂತ ಹುಡುಗ. ನಾಟಕ ನೋಡಿ ಹಾಳಾಗುತ್ತಾನೆ. ಶಾಲೆಯನ್ನು ಬಿಡಿಸಿ ನಾಟಕಕ್ಕೆ ಕರೆದೊಯ್ಯಬೇಡಿ ಎಂದು ಅಪ್ಪನಿಗೆ ಹೇಳಿದರು. ಅಲ್ಲಿಂದ ಮುಂದೆ ನನ್ನ ಮಟ್ಟಿಗೆ ನಾಟಕಗಳು ಪರದೆ ಹಾಕಿಕೊಂಡವು. ಏನಾದರೂ ಬಾಳಪ್ಪನನ್ನು ನೋಡುವ ಹುಚ್ಚು ಮಾತ್ರ ಬಿಡಲಿಲ್ಲ.

**ಆ ದಿನ ಬಂತು....**

ಮುಂದೆ 1965ರ ಹೊತ್ತು. ನನ್ನ ಏಳನೆಯ ತರಗತಿ (ಮುಲ್ಕೀ) ಮುಗಿಯಿತು. ನಮ್ಮೂರಲ್ಲಿ ಹೈಸ್ಕೂಲು ಇರಲಿಲ್ಲ. ಸವದತ್ತಿಗೆ ಹೋಗಬೇಕು. ಆದರೆ ಅಲ್ಲಿ ವಸತಿ ಸೌಕರ್ಯವಿರಲಿಲ್ಲ. ಬಾಡಿಗೆ ರೂಮಿನಲ್ಲಿಟ್ಟು ಓದಿಸಲು ಅಪ್ಪನಿಗೆ ಮನಸ್ಸಿರಲಿಲ್ಲ. ಅದು ಸಾಧ್ಯವೂ ಇರಲಿಲ್ಲ.

'ನಾವು ರೈತರ ಮಕ್ಕಳು. ನಮಗ ಭೂಮೀನ ದೊಡ್ಡ ಸಾಲಿ. ಓದಿನ ಸಾಲಿ ಇಲ್ಲಿಗೆ ಸಾಕು' ಎಂದು ಅಪ್ಪ ಖಡಾ-ಖಂಡಿತ ಹೇಳಿಬಿಟ್ಟ.

ಆದರೆ ನನಗೆ ಇನ್ನೂ ಓದುವ ಹಂಬಲ. ಅದಕ್ಕೆ ನೀರೆರೆದವರು ನನ್ನ ಶಾಲಾ ಗುರುಗಳು. ಅವರೆಲ್ಲರ ಪ್ರಯತ್ನದಿಂದ ನಾನು ಹೈಸ್ಕೂಲು ಓದಲು ನಮ್ಮೂರಿನಿಂದ ಬೆಳಗಾವಿಗೆ ಹೋದೆ. ಅಲ್ಲಿ ನನಗೆ ಹಾಸ್ಟೆಲ್ ವ್ಯವಸ್ಥೆ ಆಗಿತ್ತು. ಅದೇ ಸಂದರ್ಭದಲ್ಲಿ ಬೆಳಗಾವಿಯ ಶಿವಾನಂದ ಥೇಟರ್‌ನಲ್ಲಿ ಏಣಗಿ ಬಾಳಪ್ಪನವರ 'ಕರ್ನಾಟಕ ಕಲಾವೈಭವ ನಾಟ್ಯ ಸಂಘ' ಕ್ಯಾಂಪ್ ಮಾಡಿತ್ತು. ಐದಾರು ವರ್ಷಗಳಿಂದ ನನ್ನನ್ನು ಸದಾ ಕುಟುಕುತ್ತಿದ್ದ ಬಾಳಪ್ಪ ಕಾಕಾನ ನೆನಪು ಇಲ್ಲಿ ಮತ್ತೆ ಗರಿಗೆದರಿತು.

ಅದೊಂದು ರವಿವಾರ ಮುಂಜಾನೆ ಹತ್ತು ಗಂಟೆಗೆ ಕಾಲ್ನಡಿಗೆಯಲ್ಲಿ ಖಡೇಬಾಝಾರ ಮೂಲಕ ಶಿವಾನಂದ ಥೇಟರ ಕಡೆಗೆ ಹೋದೆ. ಥೇಟರ್ ಕಂಡಿತು. ತುಂಬ ಹಳೆಯದಾದ ಥೇಟರ್ ಅದು. ಹಿಂದೆ ಮುಂಬೈಯಿಂದ ಬರುತ್ತಿದ್ದ ಫಾರ್ಶೀ ನಾಟಕಗಳು ಇಲ್ಲಿ ಪ್ರದರ್ಶನಗೊಳ್ಳುತ್ತಿದ್ದವಂತೆ.

ನಾನು ಬಾಗಿಲ ಹತ್ತಿರ ಹೋಗುವುದಕ್ಕೂ, ಎದುರಿಗೆ ಅಲ್ಲೇ ಇದ್ದ ಬಿಳಿ ಅಂಬಾಸಿಡರ್ ಕಾರಿನತ್ತ ಬಾಳಪ್ಪ ಕಾಕಾ ನಡೆದು ಬರುತ್ತಿರುವುದಕ್ಕೂ ಸರಿ ಹೋಯಿತು. ನಾನು ಓಡಿ ಹೋದವನೇ 'ನಮಸ್ಕಾರ ಕಾಕಾರ... ನಾನು ಶೇಕಣ್ಣ ಅಂತರಿ. ಹೂಲಿಯಾಂವ'

ಅಂದೆ. ಅವರು ಅವಸರದಲ್ಲಿದ್ದಂತೆ ಕಂಡಿತು. ನನ್ನ ಮಾತು ಸರಿಯಾಗಿ ಕೇಳಿಸಿಕೊಂಡರೋ ಇಲ್ಲೋ. ನಾನು ಅಲ್ಲಿ ಕೆಲಸ ಕೇಳಲು ಬಂದ ಹುಡುಗ ಅನ್ನಿಸಿರಲೂ ಬಹುದು.

'ಹೂಲಿಯಾಂವನ? ಛಲೋ ಅತು. ನಮಗೂ ಪರದೆ ಎಳಿಯಾಕ ಹುಡುಗುರು ಬೇಕು. ಒಳಗ ಮ್ಯಾನೇಜರ ಅದಾನು. ಅಂವನ್ನ ಭೆಟ್ಟಿಯಾಗು. ಮೊದಲ ಬೋರ್ಡಿಂಗ ಮನೀಗೆ ಹೋಗಿ ಊಟಾ ಮಾಡು. ನಾ ಈಗ ಮಹಾಜನ ಕಮೀಶನ್ನ ಹತ್ರ ಹೊಂಟೇನಿ' ಅಂದು ಹೊರಟೇ ಬಿಟ್ಟ ಬಾಳಪ್ಪ ಕಾಕಾ.

**ಏನದು ಮಹಾಜನ್ ಕಮೀಶನ್ನು?**

ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿ ಜಗಳ ಇಂದು ನಿನ್ನೆಯದಲ್ಲ. ಬೆಳಗಾವಿಯನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ಮರಾಠಿಗರು ಎಂದಿನಿಂದಲೂ ಪ್ರಯತ್ನಿಸುತ್ತಿದ್ದಾರೆ. ಈ ಜಗಳ ಬಗೆಹರಿಸಲು ಕೇಂದ್ರ ಸರಕಾರವು 1964ರಲ್ಲಿ ಏಕವ್ಯಕ್ತಿ ಕಮೀಶನ್ ನೇಮಿಸಿತು. ಮಹಾಜನ ಎಂಬ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಇದನ್ನು ವಹಿಸಿಕೊಂಡಿದ್ದರು. ನ್ಯಾಯಮೂರ್ತಿ ಮಹಾಜನ್ ಅವರು ಬೆಳಗಾವಿ ಯಾವ ರಾಜ್ಯಕ್ಕೆ ಸೇರಬೇಕು ಎಂಬ ವರದಿ ತಯಾರಿಸಲು ಅಮೂಲಾಗ್ರ ತನಿಖೆ ಆರಂಭಿಸಿದರು. ಬೆಳಗಾವಿಯ ಜೊತೆಗೆ ನಿಪ್ಪಾಣಿ, ಉಗಾರ, ಅಥಣಿ,. ಖಾನಾಪುರ, ಲೋಂಡಾಗಳೂ ತಮಗೆ ಸೇರಬೇಕೆಂಬ ಬೇಡಿಕೆ ಮರಾಠಿಗರದು. ಮಹಾಜನ ಕಮೀಶನ್ ಬೆಳಗಾವಿಗೆ ಬಂದು ಇಬ್ಬರ ದೂರೂ ಕೇಳಿತು.

ಈ ಸಂದರ್ಭದಲ್ಲಿ ಏಣಗಿ ಬಾಳಪ್ಪನವರು ಎರಡು ವರ್ಷಗಳ ಕಾಲ ಸತತವಾಗಿ ತಮ್ಮ **ಕಲಾವೈಭವ ನಾಟ್ಯ ಸಂಘ**ದ ಮೂಲಕ ಕನ್ನಡ ನಾಟಕಗಳನ್ನು ಪ್ರದರ್ಶಿಸಿದರು. ಬೆಳಗಾವಿ ಕನ್ನಡ ಪ್ರದೇಶ. ಕನ್ನಡಿಗರೇ ಇಲ್ಲಿಯ ನಿವಾಸಿಗಳು. ಆ ಕಾರಣದಿಂದಲೇ ತಾವು ಎರಡು ವರ್ಷಗಳ ಕಾಲ ಕನ್ನಡ ನಾಟಕಗಳನ್ನು ಪ್ರದರ್ಶಿಸಲು ಸಾಧ್ಯವಾಯಿತು ಎಂದು ಮಹಾಜನ್ ಕಮೀಶನ್ ಎದುರು ಸಾಕ್ಷ್ಯ ನುಡಿದರು. ಅದು ಆಗ ಮಹತ್ವದ ಸಾಕ್ಷ್ಯವಾಗಿ ಪರಿಣಮಿಸಿತು. ಬಾಳಪ್ಪನವರಿಗೆ ಕನ್ನಡವೇ ತಾಯಿಯಾಗಿತ್ತೆಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇರೆ ಬೇಕಿಲ್ಲ.

ಬಾಳಪ್ಪ ಕಾಕಾ ನನ್ನ ಮನಸ್ಸು ತುಂಬಿದರು. ಹೈಸ್ಕೂಲಿನ ಮೊದಲ ವರ್ಷದಲ್ಲಿದ್ದಾಗಲೇ ಖಡೇ ಬಾಝಾರನಲ್ಲಿದ್ದ ಶಿವಾನಂದ ಥೇಟರಿಗೆ ಹೋಗಲು ಸುರು ಮಾಡಿದೆ. ಅವರ ಕಂಪನಿಯಲ್ಲಿ ನಾನು ನೋಡಿದ ಮೊದಲ ನಾಟಕ **ಮಾವ ಬಂದ್ನಪೋ ಮಾವ**. ಅಬ್ಬಾ ಅದರಲ್ಲಿ ಪಾತ್ರ ಮಾಡುತ್ತಿದ್ದ ಲಕ್ಷ್ಮೀಬಾಯಿಯ (ನಟರಾಜ ಏಣಗಿಯ ತಾಯಿ) ಅಭಿನಯ ನನ್ನನ್ನು ಪೂರ್ತಿ ಸೆಳೆದುಬಿಟ್ಟಿತು. ಅದರ ನಂತರ ನಾನು ವಾರಕ್ಕೊಮ್ಮೆ ನಾಟಕ ನೋಡಲು ಆರಂಭಿಸಿದೆ. ಹಳ್ಳಿ ಹುಡುಗಿ, ಕುಂಕುಮ ನಾಟಕಗಳು

ಇವತ್ತಿಗೂ ನನ್ನ ನೆನಪಿನಲ್ಲಿವೆ. ಬಾಳಪ್ಪ ಕಾಕಾ ಆಕಾರದಲ್ಲಿ ಗಿಡ್ಡ ವ್ಯಕ್ತಿಯಾದರೂ ನನ್ನ ಪಾಲಿಗೆ ಎತ್ತರದ ಮನುಷ್ಯ ಆಗಿಹೋದರು. ಆ ಸಂದರ್ಭದಲ್ಲಿ ಅವರೊಂದಿಗೆ ಮಾತನಾಡಲು ಅವಕಾಶಗಳು ಸಿಗಲೇ ಇಲ್ಲ. ಮುಂದೆ ನಾನು ಎಸ್.ಎಸ್.ಎಲ್.ಸಿ ತನಕ ವಾರಕ್ಕೊಮ್ಮೆ ಅವರ ನಾಟಕಗಳನ್ನು ಬಿಟ್ಟೂ ಬಿಡದೆ ನೋಡಿದೆ. ಮೆಟ್ರಿಕ್ ಪರೀಕ್ಷೆಯ ಹಿಂದಿನ ದಿನ ಅವರ ಕಂಪನಿಯ ನಾಟಕ ನೋಡಿಯೇ ಮರುದಿನ ಪರೀಕ್ಷೆ ಬರೆಯಲು ಹೋಗಿದ್ದೆ.

ಬಾಳಪ್ಪನವರ ಕ್ರಿಯಾಶೀಲತೆ, ಶಿಸ್ತು, ಕಾಯಕದಲ್ಲಿಯ ಶ್ರದ್ಧೆ ಇವತ್ತಿಗೂ ನನಗೆ ಗುಂಗು ಹಿಡಿಸಿವೆ.

■

"ಬಸವೇಶ್ವರ ನಾಟಕ ಆಗಿನ ಮಠಾಧೀಶರ ಚಿಂತನೆಯ ಕಟ್ಟುಪಾಡುಗಳನ್ನೇ ಮುರಿಯಿತು. ಅವರೆಲ್ಲ ತಾವು ಥೇಟರಿಗೆ ಹೋಗಬಾರದು ಎಂದುಕೊಂಡಿದ್ದ ನಿಬಂಧನೆಯಿಂದ ಹೊರಬಂದು ನಾಟಕ ನೋಡಿ ಭಾವುಕರಾಗುತ್ತಿದ್ದರು. ಒಮ್ಮೆ ಧಾರವಾಡ ಸಮೀಪದ ಗುಡ್ಡದ ಮಲ್ಲಾಪುರ ಗ್ರಾಮದ ಜಾತ್ರೆಗೆ ಬಂದಿದ್ದ ಮುರಘಾಮಠದ ಮೃತ್ಯುಂಜಯ ಸ್ವಾಮಿಗಳು ನಾಟಕ ನೋಡಿದರು. ಅನುಭವ ಮಂಟಪದ ಸನ್ನಿವೇಶದ ಸಂಧರ್ಭದಲ್ಲಿ ಇರುವಿಕೆಯನ್ನೇ ಮರೆತು ರಂಗಮಂಚಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿದ್ದರು.

*(ಏಣಗಿ ಬಾಳಪ್ಪ ನೆನಪುಗಳಿಂದ...)*"



# ಶತಮಾನ ಬೆಳಗಿದ ರಂಗಜಗಜ್ಯೋತಿ

● ಪ್ರಜ್ಞಾ ಮತ್ತಿಹಳ್ಳಿ

ಏಣಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘ ಕೇವಲ ಕರ್ನಾಟಕದಲ್ಲಷ್ಟೇ ಅಲ್ಲದೇ ಮಹಾರಾಷ್ಟ್ರದಲ್ಲಿ ಕೂಡ ಬಹಳ ಜನಪ್ರಿಯವಾಗಿತ್ತು.

ಹುಬ್ಬಳ್ಳಿಯಲ್ಲಿ ಆ ದಿನ ನಾಟಕ ಥಿಯೇಟರ್ ತುಂಬಿ ತುಳುಕುತ್ತಿತ್ತು. ಮುಂದಿನ ಸಾಲಿನುದ್ದಕ್ಕೂ ಕೇಸರಿ ನಿಲುವಂಗಿಗಳಲ್ಲಿ ರಾರಾಜಿಸುತ್ತಿದ್ದ ಅನೇಕ ಮಠಾಧೀಶರು. ಪ್ರತಿಯೊಬ್ಬರೂ ಉತ್ಕಂಠಿತರಾಗಿ ರಸಸ್ವಾದನೆಯಲ್ಲಿ ಮುಳಗಿಕೊಂಡ ಕ್ಷಣ. ದೃಶ್ಯದಿಂದ ದೃಶ್ಯಕ್ಕೆ ಹೆಚ್ಚುತ್ತಿದ್ದ ತಲ್ಲೀನತೆ. ರಂಗಮಂಚದ ಮೇಲೆ ಅಲ್ಲಮಪ್ರಭು, ಅಕ್ಕಮಹಾದೇವಿಯರಾದಿಯಾಗಿ ಬಸವಣ್ಣನವರು ಕಂಗೊಳಿಸುತ್ತಿದ್ದಾರೆ. ಒಬ್ಬರಿಗಿಂತ ಒಬ್ಬರು ಮಾತು–ನಟನೆ–ಅಭಿನಯಗಳಿಂದ ಹನ್ನೆರಡನೆ ಶತಮಾನವನ್ನು ಭುವಿಗಿಳಿಸಿದ್ದಾರೆ. ಧಾರವಾಡದ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳು ಹೃದಯತುಂಬಿ ಬಂದು ಥಟ್ಟನೆ ಎದ್ದು ನಿಂತು ಸಾಷ್ಟಾಂಗ ನಮಸ್ಕಾರ ಮಾಡಿದರು. ಇದು ಒಂದು ದಿನ ನಡೆದ ಘಟನೆ ಅಲ್ಲ. 1956ರಲ್ಲಿ ಸತತ ನಾಲ್ಕು ತಿಂಗಳು ಪ್ರತಿ ದಿನ ತುಂಬಿ

ತುಳುಕಿದ ಥಿಯೇಟರ್. ಎಲ್ಲೆಲ್ಲಿಂದಲೋ ಬಂದು ನಾಟಕ ನೋಡಿ ಹೋಗುತ್ತಿದ್ದ ಜನ. ಆ ನಾಟಕವನ್ನು ನೋಡುವುದೇ ಒಂದು ಭಾಗ್ಯ ಎಂಬುದಾಗಿ ಉದ್ಘರಿಸುತ್ತಿದ್ದರು. ನಾಡಿನ ಖ್ಯಾತ ಸಾಹಿತಿಗಳು, ಬುದ್ಧಿಜೀವಿಗಳು, ರಾಜಕಾರಣಿಗಳು, ಸಂಗೀತಗಾರರು, ಅನ್ಯ ಭಾಷಿಕ ಕಲಾವಿದರು ಹೀಗೆ ಆ ನಾಟಕವನ್ನು ನೋಡದವರೇ ಇಲ್ಲ ಅನ್ನಬಹುದು. ಆ ನಾಟಕ "ಜಗಜ್ಯೋತಿ ಬಸವೇಶ್ವರ". ಏಣಗಿ ಬಾಳಪ್ಪನವರು ಸ್ವತ: ಬಸವೇಶ್ವರನಾಗಿ ಅಭಿನಯಿಸಿ ಬೆಳಗಾವಿಯಲ್ಲಿ ಸತತ ಒಂದು ವರ್ಷ ಪ್ರಯೋಗ ನಡೆದು 1967ರಲ್ಲಿ ರಾಷ್ಟ್ರ ಮಟ್ಟದ ದಾಖಲೆ ಮಾಡಿದ ನಾಟಕವಿದು. ಈ ನಾಟಕವನ್ನು ರಂಗಕ್ಕೆ ತರುವ ಮುನ್ನ ಏಣಗಿ ಬಾಳಪ್ಪನವರು ಬಸವೇಶ್ವರರ ಜೀವನ ಚರಿತ್ರೆಯನ್ನಾಧರಿಸಿದ ಹಲವಾರು ನಾಟಕಕಾರರ ನಾಟಕಗಳಿಂದ ಮಹತ್ವಪೂರ್ಣವಾದನೇಕ ಸನ್ನಿವೇಶಗಳನ್ನು ಸಂಗ್ರಹಿಸಿಕೊಂಡು ತಮ್ಮ ರಂಗಪಠ್ಯವನ್ನು ತಯಾರಿಸಿಕೊಂಡಿದ್ದರು. ಚಿಕ್ಕೋಡಿಯ ಶಿವಲಿಂಗ ಸ್ವಾಮಿಗಳ ರಾಜಕೀಯ ಧ್ವನಿಯುಳ್ಳ ಅಸ್ಪ್ರಶ್ಯತಾ ನಿವಾರಣೆಯ ಕೆಲವು ಸನ್ನಿವೇಶ, ಜೋಳದರಾಶಿ ದೊಡ್ಡನಗೌಡರ ಕಲ್ಯಾಣಕ್ರಾಂತಿಯ ಕೆಲವು ದೃಶ್ಯಗಳು, ಫ.ಗು.ಹಳಕಟ್ಟಿಯವರ ಅನುಭವ ಮಂಟಪ ಪ್ರಸಂಗ ಇವುಗಳನ್ನೆಲ್ಲ ಸಂಗ್ರಹಿಸಿ ತಯಾರಿಸಿದ ಅಪೂರ್ವ ಕಲಾಕೃತಿಯಾಗಿತ್ತು. ಅಲ್ಲದೇ ವಚನಗಳನ್ನು ರಂಗಗೀತೆಗಳಾಗಿ ಅತ್ಯಂತ ಪರಿಣಾಮಕಾರಿಯಾಗಿ ಹಾಡುತ್ತಿದ್ದರು. ಹಾಗಾಗಿಯೇ ಈ ನಾಟಕ ಒಂದು ಇತಿಹಾಸವನ್ನೇ ನಿರ್ಮಿಸಿತು. ನಾಟಕವೆಂದರೆ ಕೀಳಾಗಿ ಕಾಣುತ್ತಿದ್ದ ಕಾಲದಲ್ಲಿ ಈ ನಾಟಕ ಪ್ರಯೋಗದಿಂದ ನಾಟಕ ಕಲಾವಿದರಿಗೆ ಸಮಾಜ ಗೌರವ ಸ್ಥಾನ ಕೊಡುವಂತಾಯಿತು. ಕನ್ನಡ ವೃತ್ತಿ ರಂಗಭೂಮಿಗೆ ಒಂದು ಘನತೆ ಬಂತು.

ಏಣಗಿ ಬಾಳಪ್ಪನವರು ಇದೊಂದೇ ನಾಟಕಕ್ಕೆ ಇಷ್ಟು ಪರಿಶ್ರಮ ಪಟ್ಟಿದ್ದಲ್ಲ. ಅವರ ಎಲ್ಲ ನಾಟಕಗಳು ತಮ್ಮ ಪ್ರಯೋಗದಲ್ಲಿ ಅನನ್ಯವಾಗಿರುವಂತೆ ಹಾಗೂ ಅವುಗಳಿಗೆ ಅವುಗಳೇ ಸರಿಸಾಟಿ ಅನ್ನಿಸುವಂತೆ ತಯಾರಾಗಿರುತ್ತಿದ್ದವು. ಏಕೆಂದರೆ ನಾಟಕದ ಕುರಿತಾಗಿರುವ ಅವರ ನಂಬಿಕೆಗಳೇ ಅಷ್ಟು ಮೌಲಿಕವಾಗಿವೆ. ಅವರ ಪ್ರಕಾರ ಕೇವಲ ಮನರಂಜನೆಯೇ ನಾಟಕವಲ್ಲ. "ನಾಟಕವೆಂದರೆ ಒಮ್ಮೆ ನೋಡಿ ಮರೆತುಬಿಡುವ ವಿಲಾಸ ಸಾಧನವಲ್ಲ. ಅದರ ಆದರ್ಶ ಭವ್ಯವಾದುದು, ಗುರುತರವಾದುದು. ದೇಶದ ಸಂಸ್ಕೃತಿಯ ವಿಕಾಸಕ್ಕೆ ನಾಟಕ ಕೊಡುವಷ್ಟು ಇಂಬು ಬೇರಾವ ಸಾಧನವೂ ಕೊಡಲಾರದು". ಆದ್ದರಿಂದಲೇ ಅವರು ನೀತಿಬೋಧಕ, ಕಲಾತ್ಮಕ ನಾಟಕಗಳನ್ನೇ ಅಭಿನಯಿಸುತ್ತಿದ್ದರು.. ಅದರಿಂದ ಅವರ ಕಲಾಸಂಘಕ್ಕೆ ಆರ್ಥಿಕ ಹಾನಿಯುಂಟಾದರೂ ಅವರು ಸಮಾಜ ಸುಧಾರಣೆಯ ನಾಟಕ ಪ್ರಯೋಗ ಬಿಡಲಿಲ್ಲ. ಪ್ರತಿ ಊರಿನಲ್ಲಿ ಶಿಕ್ಷಕರನ್ನು ಭೆಟ್ಟಿಯಾಗಿ, ತಿಳಿಹೇಳಿ, ಫ್ರೀ ಪಾಸು ಕೊಟ್ಟು ವಿದ್ಯಾರ್ಥಿಗಳನ್ನು ಕರೆದುಕೊಂಡು ಬನ್ನಿ ಎಂದು ಒತ್ತಾಯಿಸುತ್ತಿದ್ದರು ಅವರು ಹೇಳಿದ್ದೇನೆಂದರೆ "ನಾಟಕದಲ್ಲಿ ಅಚ್ಚಳಿಯದ ಒಂದು ಶಕ್ತಿಯಿದೆ. ಅಲ್ಲಿ ಜೀವ ಸಂಬಂಧದ ಜೀವಂತ ವ್ಯಕ್ತಿಯನ್ನು ಕಾಣಬಹುದು. ಅವನ ರಸಕ್ರಿಯೆಯನ್ನು ನೇರವಾಗಿ ಅನುಭವಿಸಬಹುದು. ಈ ಸಂಬಂಧವೇ ನಾಟಕದ ಜೀವಾಳ". ಈ ಮಾತುಗಳನ್ನು ಆಳವಾಗಿ ನಂಬಿದ್ದರಿಂದಲೇ ಅವರ ನಾಟಕಗಳಲ್ಲಿ ಹೊಸತನ ತುಂಬಿ ತುಳುಕುತ್ತಿತ್ತು. ಆ

ನಾಟಕ ಸಾಮಾಜಿಕವಾಗಿರಲಿ, ಐತಿಹಾಸಿಕವಾಗಿರಲಿ, ಪೌರಾಣಿಕವಾಗಿರಲಿ ಅದು ತನ್ನ ರಂಗಸಜ್ಜಿಕೆ, ರಂಗತಂತ್ರ, ವೇಷಭೂಷಣ, ಸಂಗೀತ, ಬೆಳಕು ಮೊದಲಾದವುಗಳೊಂದಿಗೆ ನವೀನವಾಗಿರುತ್ತಿತ್ತು. ಇದಕ್ಕೆ ಉದಾಹರಣೆಯಾಗಿ ಅವರು ಪ್ರಯೋಗಿಸಿದ ನಾಟಗಳನ್ನು ಗಮನಿಸಬಹುದು. 1947ರಲ್ಲಿ ಆಗಿನ ಪ್ರೇಕ್ಷಕರ ಅಭಿಲಾಷೆಯಂತೆ ಪೌರಾಣಿಕ ನಾಟಕಗಳನ್ನು ಮಾಡುತ್ತಿದ್ದರು. ಕುರುಕ್ಷೇತ್ರ, ಲಂಕಾದಹನ, ಸಂಪೂರ್ಣ ರಾಮಾಯಣ ಗಳ ಪ್ರಯೋಗ ಜನಪ್ರಿಯವಾಗಿತ್ತು. ಆಮೇಲೆ ಕಡ್ಲಿಮಟ್ಟಿ ಸ್ಟೇಶನ ಮಾಸ್ತರ ಎಂಬ ಸಾಮಾಜಿಕ ನಾಟಕ ಆರಂಭಿಸಿ ಬಾಳಪ್ಪನವರು ಕಾಶೀಬಾಯಿಯ ಪಾತ್ರವನ್ನು ಜನಪ್ರಿಯ ಗೊಳಿಸಿದರು. ಪಠಾಣಿ ಪಾಶ ಮಾಡಿ ವೃಂದಾ ಪಾತ್ರವನ್ನು ಹೆಸರುವಾಸಿಯಾಗಿಸಿದರು. ಗತಕಾಲದ ಬದುಕು ಅದರ ಆದರ್ಶ ಹಾಗೂ ಸೋಲು–ಗೆಲುವುಗಳನ್ನೆಲ್ಲ ಸೃಜಿಸಿ ಆ ಜೀವನದ ಅನುಭವ ಸಂಸ್ಕಾರವನ್ನು ರಸಿಕ ಪ್ರೇಕ್ಷಕರಿಗೆ ಕೊಡಲು ಟಿಪ್ಪುಸುಲ್ತಾನ, ಶಹಜಹಾನಗಳನ್ನು ಅಭಿನಯಿಸಿದರು. ಜಿ.ಡಿ.ಸ್ವಾಮಿಯವರಿಂದ ಕಿತ್ತೂರ ಚೆನ್ನಮ್ಮ ನಾಟಕವನ್ನು ಹೊಸ ರೀತಿಯಲ್ಲಿ ಬರೆಯಿಸಿ ಹೊಸ ರಂಗಪರಿಕರಗಳೊಂದಿಗೆ ಪ್ರಯೋಗಿಸಿ ಐತಿಹಾಸಿಕ ನಾಟಕಗಳ ಪ್ರಯೋಗಕ್ಕೆ ಹೊಸತನ ತಂದುಕೊಟ್ಟರು. 1942ರ ಆಂದೋಲನ, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಸಂಭ್ರಮ ಇತ್ಯಾದಿ ಅಂಶಗಳಿದ್ದ ಜಿ.ಜಿ.ಹೆಗಡೆಯವರ ಚಲೇಜಾವ ನಾಟಕವನ್ನು ಪ್ರಯೋಗಿಸಿದಾಗ ಅದು ಮೊತ್ತ ಮೊದಲ ರಾಜಕೀಯ ನಾಟಕವೆಂದು ಹೆಸರು ಮಾಡಿತು. ದುಷ್ಟರ ಬಲೆಯಲ್ಲಿ ನಿಸ್ಸಹಾಯಕವಾದ ಜನತೆಯ ಕಣ್ಣೀರಿನ ಬಾಳು, ಲಂಚದ ಪೆಡಂಭೂತ ದರ್ಶನ ಮುಂತಾದವುಗಳನ್ನು ತೋರಿಸಲು ಜಿ.ಡಿ.ಸ್ವಾಮಿಯವರ ತಪ್ಪಿದ ಹೆಜ್ಜೆ ಪ್ರಯೋಗಿಸಿದರು. ಮನೋವಿಶ್ಲೇಶಣಾತ್ಮಕವಾದ ಡಾಕ್ಟರ್ ಮಾಡಿದಾಗ ಕನ್ನಡ ರಂಗಭೂಮಿಗೆ ಇಂಥ ಪ್ರಯೋಗ ಮೊದಲ ಬಾರಿಯಾಗಿತ್ತು. 1923ರಲ್ಲಿ ಅಚ್ಚಾಗಿದ್ದ ಹಾಸ್ಯವಿಡಂಬನೆಯ ಮೃತ್ಯುಪತ್ರ ಎಂಬ ನಾಟಕ ಮೂಲೆಗುಂಪಾಗಿ ಕಣ್ಮರೆಯಾಗಿ ಹೋಗಿತ್ತು. ಅದನ್ನು ಉತ್ತಮ ರೀತಿಯಲ್ಲಿ ಪ್ರಯೋಗಿಸಿ ಜನಪ್ರಿಯಗೊಳಿಸಿದರು. ಮರಾಠಿಯ ನಾಟಕಕಾರರೊಬ್ಬರು ಮರಾಠಿ ನಿರ್ದೇಶಕ ಮಾಧವ ಪಾಠಕರ ಮನೆಯ ಸತ್ಕಾರ ಕೂಟದಲ್ಲಿ ತನ್ನ ನಾಟಕ ಕನ್ನಡದಲ್ಲಿ ಪ್ರಯೋಗವಾಗಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದಾಗ ಅದನ್ನು ದಾರಿದೀಪ ಅರ್ಥಾತ್ ಶಾಲಾ ಮಾಸ್ತರ ಎಂದು ಅನುವಾದ ಮಾಡಿಸಿಕೊಂಡು ಪ್ರಯೋಗಿಸಿ ಜನಪ್ರಿಯಗೊಳಿಸಿದರು. ಮುಂದೆ ಇದು 1963ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ದೆ ಏರ್ಪಡಿಸಿದಾಗ ಪ್ರಥಮ ಬಹುಮಾನ ಪಡೆದಿತ್ತು. ಮರಾಠಿಯಲ್ಲಿ ಜನಮೆಚ್ಚುಗೆಯೊಂದಿಗೆ ಪ್ರದರ್ಶನಗೊಳ್ಳುತ್ತಿದ್ದ :ಪಾಹ್ಣು ಆಲಾರೇ ಆಲಾ" ನಾಟಕವನ್ನು ಅನುವಾದ ಮಾಡಿಸಿ "ಮಾವ ಬಂದ್ನಪೊ ಮಾವ" ಆಡಿದರು. ಒಂದೇ ದೃಶ್ಯದ ನಾಟಕ ತಂತ್ರದಿಂದ ಪ್ರಭಾವಿತರಾಗಿ ಕುಂಕುಮ ನಾಟಕ ಬರೆಸಿಕೊಂಡು ಆಡಿದರು. ಆಮೇಲೆ ಎರಡು ದೃಶ್ಯಗಳ ಲಗ್ನ ಬಂಧನ ಎಂಬ ನಾಟಕ ಬರೆಸಿಕೊಂಡು ಆಡಿದರು. ಬೆಳಗಾವಿಯನ್ನು ಕೇಂದ್ರವಾಗಿ ಇರಿಸಿಕೊಂಡು ಒಂದೇ ದಿನ ಬೇರೆ ಬೇರೆ ಸ್ಥಳಗಳಲ್ಲಿ

ನಾಟಕ ಮಾಡಿದ ಪ್ರಯೋಗವೂ ಇವರದೇ ಮೊದಲು. ಬೆಳಗಾವಿ ಥಿಯೇಟರಿನಲ್ಲಿ ನಾಟಕ ಮುಗಿಸಿ ಸಂಜೆ ಆರು ಗಂಟೆಗೆ ಅದೇ ವೇಷದಲ್ಲಿ ನಟರೆಲ್ಲರೂ ಕಾರು ಗಾಡಿಗಳಲ್ಲಿ ಖಾನಾಪುರ ನಂದಗಡ ನೇಸರಗಿಗಳಿಗೆ ಹೋಗಿ ಅದೇ ನಾಟಕ ಮಾಡಿ ಬರುತ್ತಿದ್ದರಂತೆ. ಹೀಗೆ ಮಾಡಿ ಕಂಪನಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರಂತೆ. ಒಂದು ಸಲ ಬೆಳಗಾವಿ ಒಂದೇ ಊರಿನಲ್ಲಿ ಮೂರು ಕಡೆ ಏಕ ಕಾಲದಲ್ಲಿ ನಾಟಕ ಮಾಡುತ್ತಿದ್ದರಂತೆ.

ಏಣಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘ ಕೇವಲ ಕರ್ನಾಟಕದಲ್ಲಷ್ಟೇ ಅಲ್ಲದೇ ಮಹಾರಾಷ್ಟ್ರದಲ್ಲಿ ಕೂಡ ಬಹಳ ಜನಪ್ರಿಯವಾಗಿತ್ತು. ಕನ್ನಡ ಬರದಿದ್ದ ಕೊಲ್ಹಾಪುರದ ಜನರು ಹೇಮರೆಡ್ಡಿ ಮಲ್ಲಮ್ಮ ನಾಟಕದ ರಂಗಭೂಮಿಯ ವೈಭವ ನೋಡಲು ಹಾಗೂ ಬಾಳಪ್ಪನವರ ಹಾಡುಗಾರಿಕೆ ಕೇಳಲು ಮುಗಿಬೀಳುವುದನ್ನು ಕಂಡು ಜಿಲ್ಲಾಧಿಕಾರಿ ಶ್ರೀ ದೇಸಾಯಿ ಹೇಳಿದರಂತೆ "ಸ್ವರ್ಗಮಯ ಸಂಗೀತ, ಸದ್ಬೋಧವಾದ ಸಂಭಾಷಣೆ, ಉತ್ಕೃಷ್ಟ ಭೂಮಿಕೆ, ಭವ್ಯವಾದ ದೃಶ್ಯಾವಳಿ ಹೊಂದಿರುವ ಇದೊಂದು ಅಪೂರ್ವ ಅನುಭವ". ಮರಾಠಿ ಚಿತ್ರರಂಗದ ನಟನಟಿಯರು ಬಿಡುವು ಮಾಡಿಕೊಂಡು ಬಂದು ನಾಟಕ ನೋಡಿ ಬಾಳಪ್ಪನವರ ಅಭಿನಯ, ಹಾಡುಗಾರಿಕೆಯನ್ನು ಹೃದಯತುಂಬಿ ಹೊಗಳಿ ವೈಯಕ್ತಿಕವಾಗಿ ಒಂದೊಂದು ಹೂಮಾಲೆ ಹಾಕಿ ಹೋಗುತ್ತಿದ್ದರಂತೆ. ಮೀರಜನ ಹಂಸಪ್ರಭಾ ಥಿಯೇಟರನಲ್ಲಿ ಮಲಿಕಾರ್ಜುನನ ಪಾತ್ರ ನೋಡಿದ ಮರಾಠಿ ಪತ್ರಿಕೆಗಳು ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಕನ್ನಡ ನಾಟಕವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. 1945ರಲ್ಲಿ ಮಹಾರಾಷ್ಟ್ರದ ಕಲಾ ವಿಲಾಸ ನಾಟ್ಯ ಸಂಘ ಕೂಡಿಕೊಂಡು ಒಂದೇ ರಂಗ ಮಂದಿರದಲ್ಲಿ ಒಂದು ದಿನ ಮರಾಠಿ ನಾಟಕ ಒಂದು ದಿನ ಕನ್ನಡ ನಾಟಕವಾಡಿದ ಕೀರ್ತಿಯೂ ಬಾಳಪ್ಪನವರದು. 1960ರಲ್ಲಿ ಇಚಲಕರಂಜಿಯಲ್ಲಿ ಜೂನ ತಿಂಗಳಲ್ಲಿ ನಾಟಕ ಮಾಡಿದಾಗ ಬಿತ್ತುವ ದೃಶ್ಯಕ್ಕಾಗಿ ಎರಡು ಎಳೆ ಹೋರಿಗಳನ್ನು ತರಬೇತಿಗೊಳಿಸಿಕೊಂಡು ಪ್ರಯೋಗಿಸಿದಾಗ ಮಾತು ತಿಳಿಯದಿದ್ದರೂ ಸುತ್ತ ಮುತ್ತಲಿನ ಹಳ್ಳಿಯ ಜನ ಗಾಡಿ ಕಟ್ಟಿಕೊಂಡು ಅದೊಂದೇ ದೃಶ್ಯ ನೋಡಲೆಂದು ತಂಡೋಪ ತಂಡವಾಗಿ ಬಂದು 25 ಪ್ರಯೋಗಗಳು ಭರ್ಜರಿಯಾಗಿ ನಡೆದವಂತೆ. ಪ್ರಖ್ಯಾತ ಮರಾಠಿ ಪತ್ರಕರ್ತ ಶ್ರೀ ಕರಮಕರ ಶಾಲಾಮಾಸ್ತರ ನಾಟಕ ನೋಡಲು ಬಂದವರು ವಿಷ್ಣುಪಂತನ ಹೆಂಡತಿ ಸುಶೀಲಾ ಕ್ಷಯರೋಗದಿಂದ ಬಳಲಿ ಸಾಯುವಾಗ ಕಣ್ಣೀರು ಸುರಿಸಿದರಂತೆ. ಸಾಂಗ್ಲಿಯಲ್ಲಿ ನಾಟಕ ನಡೆದಾಗ ಅದರ ಜನಪ್ರಿಯತೆ ತಿಳಿದು ಮರಾಠಿ ನಟ–ನಟಿಯರು ಬಿಡುವು ಮಾಡಿಕೊಂಡು ಬಂದು ನೋಡಿ ಹೋಗುತ್ತಿದ್ದರಂತೆ. ಒಂದು ಸಲ ಖ್ಯಾತ ಗಾಯಕ ದೀನಾನಾಥ ಮಂಗೇಶ್ಕರ್ ಬಂದು ಕಿತ್ತೂರು ಚೆನ್ನಮ್ಮ ನಾಟಕ ನೋಡಿ ಅದರಲ್ಲಿ ಮಲ್ಲಸರ್ಜನಾದ ಬಾಳಪ್ಪನವರ ಗಾಯನ ಕೇಳಿ ಮರುಳಾಗಿ ಒನ್ಸ ಮೋರ್ ಹೇಳಿ ಹಾಡಿಸಿ ಸಂತೋಷ ಪಟ್ಟರಂತೆ.

ಕಲೆ, ಸಾಹಿತ್ಯ, ಮೌಲ್ಯಗಳು ನಾಟಕದ ಉಸಿರೆಂದು ತೋರಿಸಿ ಕೊಟ್ಟ ಕೆಲವೇ ಜನ

ಕನ್ನಡ ಕಲಾವಿದರಲ್ಲಿ ಏಣಗಿ ಬಾಳಪ್ಪನವರು ಒಬ್ಬರು. ನಾಟಕಗಳಿಲ್ಲದ ಸಮಾಜ ತನ್ನನ್ನು ತಾನು ಕಳೆದುಕೊಳ್ಳುತ್ತದೆ ಎಂದು ಪ್ರಾಮಾಣಿಕವಾಗಿ ನಂಬಿದ್ದ ಬಾಳಪ್ಪನವರು ಸಮಾಜದ ಲೋಪ-ದೋಷಗಳನ್ನು ಸೂಚ್ಯವಾಗಿ ತೋರಿಸಿ ಮಾರ್ಗದರ್ಶನ ಮಾಡಿ, ಹದಗೆಟ್ಟು ಹೋಗುತ್ತಿರುವ ಸಮಾಜವನ್ನು ಹತೋಟಿಗೆ ತರುವ, ಸುಧಾರಿಸುವ ನಾಟಕಗಳನ್ನು ಪ್ರಯೋಗಿಸಿದರು. ಎಂದೂ ಕಳಪೆಯಾದ ನಾಟಕಗಳನ್ನು ಅಭಿನಯಿಸಲಿಲ್ಲ. ಪ್ರೇಕ್ಷಕರು ದುಡ್ಡು ಕೊಡುತ್ತಾರೆ ಮೂರು ತಾಸು ರಂಗದ ಮೇಲೆ ಏನಾದರೂ ತೋರಿಸಿದರಾಯಿತು ಎನ್ನುವ ಮನೋವೃತ್ತಿ ಎಂದೂ ಅವರದಲ್ಲ. ಅವರು ಅಭಿನಯಿಸುತ್ತಿದ್ದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ರಾಜಕೀಯ ನಾಟಕಗಳು ಸ್ತ್ರೀ-ಪುರುಷ, ಬಾಲಕ-ವೃದ್ಧ, ಸುಶಿಕ್ಷಿತ-ಅಶಿಕ್ಷಿತ ಇತ್ಯಾದಿ ಎಲ್ಲ ವರ್ಗದ ಜನರಿಗೂ ಮನರಂಜನೆ ನೀಡುವುದರ ಜೊತೆಗೆ ಒಳ್ಳೆಯ ಜ್ಞಾನವನ್ನು ನೀಡಿ ಸಮಾಜವನ್ನು ಸುಧಾರಿಸುವ ಸಾಧನಗಳಾಗಿದ್ದವು. ಅವರ ಪ್ರೇಕ್ಷಕರು ಅಭಿಮಾನದಿಂದ "ಬಾಳಪ್ಪನವರ ನಾಟಕ ನೋಡಿ ಕಲಿಯಬೇಕು" ಎನ್ನುತ್ತಿದ್ದರಂತೆ. ನಾಟಕ ಸಂಘಗಳು ಚಲಿಸುವ ವಿಶ್ವ ವಿದ್ಯಾಲಯಗಳು ಅವು ತಮ್ಮ ನಾಟಕಗಳ ಮೂಲಕ ಜೀವನದಲ್ಲಿ ನಿತ್ಯ ನಡೆಯುವ ಘಟನೆಗಳನ್ನು ರಂಗಭೂಮಿಯ ಮೇಲೆ ಯಥಾವತ್ತಾಗಿ ಚಿತ್ರಿಸುವುದರೊಂದಿಗೆ ಪ್ರೇಕ್ಷಕರ ಮನಸ್ಸಿನ ಮೇಲೆ ಪರಿಣಾಮ ಬೀರಿ ವಿದ್ಯೆಯನ್ನು ಒದಗಿಸಬಲ್ಲವು ಎಂದು ತಮ್ಮ ದೀರ್ಘವಾದ ರಂಗಭೂಮಿಯ ಅನುಭವದಿಂದ ಅರಿತಿದ್ದ ಬಾಳಪ್ಪನವರು ಕಲಾತ್ಮಕ, ಆದರ್ಶ ನಾಟಕ ಪ್ರಯೋಗಿಸಿ ರಂಗ ರಸಿಕರ ಮೆಚ್ಚುಗೆ ಪಡೆದು ಇತರ ನಾಟಕ ಕಂಪನಿಗಳಿಗಿಂತ ಭಿನ್ನವಾಗಿ ದಾಖಲಾದರು. ಅವರ ಮಾವ ಬಂದ್ನಪೊ ಮಾವ ನಾಟಕದ ರಜತ ಮಹೋತ್ಸವದ ಅತಿಥಿಗಳಾಗಿದ್ದ ವರಕವಿ ಬೇಂದ್ರೆಯವರು ಭಾಷಣದಲ್ಲಿ ಹೀಗೆ ಹೇಳಿದರಂತೆ. "ನಾಟಕ ನೋಡುವವರ ಬುದ್ಧಿ ಬದಲಾಗಬೇಕಾದರೆ ನಾಟಕ ಮಾಡುವವರ, ಬರೆಯುವವರ ಬುದ್ಧಿ ಬದಲಾಗಬೇಕು. ನಾಟಕ ನೋಡುವವರ ಬುದ್ಧಿ ಬದಲಾಗುವ ತನಕ ಪರಿವರ್ತನಾ ಉದ್ದೇಶವುಳ್ಳ ನಾಟಕ ಅಭಿನಯಿಸಲ್ಪಡುತ್ತಲೇ ಇರಬೇಕು. ಅಂದರೆ ನೂರಾರು ವರ್ಷಗಳಲ್ಲಿ ತಿಳಿಯದ ನೀತಿಪಾಠಗಳನ್ನು ನಾಟಕದ ಮೂಲಕ ಮೂರು ತಾಸುಗಳಲ್ಲಿ ತಿಳಿಯುತ್ತೇವೆ. ಇಡೀ ಜೀವನದಲ್ಲಿ ಕಲಿಯದ್ದನ್ನು ನಾಟಕದಲ್ಲಿ ಕಲಿಯುತ್ತೇವೆ". ತಮ್ಮ ರಂಗಭೂಮಿಯ ಜೀವನದುದ್ದಕ್ಕೂ ಕನ್ನಡ ರಂಗಭೂಮಿಯನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ಪ್ರಯತ್ನಿಸಿದ ಇವರು ಇಂದಿನ ನಾಟಕ ಮಾಲಕರ ಕುರಿತು ಹೀಗೆ ಹೇಳುತ್ತಾರೆ "ರಂಗಭೂಮಿಯ ಬಗ್ಗೆ ನಮ್ಮ ಹಿರಿಯರು ಇಟ್ಟುಕೊಂಡಿದ್ದ ಭಕ್ತಿ, ಶ್ರದ್ಧೆಗಳನ್ನು ನಮ್ಮವರು ತಮ್ಮ ದೃಷ್ಟಿಯಲ್ಲಿರಿಸಿಕೊಂಡು ರಂಗಭೂಮಿಯ ಪಾವಿತ್ರ್ಯತೆ ಕಾಯ್ದುಕೊಳ್ಳಬೇಕು. ಗೌರೀಶ ಕಾಯ್ಕಿಣಿ ಹೀಗೆ ಹೇಳುತ್ತಾರೆ. "ಸಾಮಾನ್ಯವಾಗಿ ಕನ್ನಡ ನಾಟಕ ಕಂಡ ಮಾಲಕರಲ್ಲಿ ಇವರಷ್ಟು ಸದ್ವರ್ತನೆಯ ಸೌಜನ್ಯಮೂರ್ತಿಯನ್ನು ನಾನು ಕಂಡಿಲ್ಲ. ಅವರೊಬ್ಬ ಸವ್ಯಸಾಚಿ ನಟ"

ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ ಅಭಿನಯಕ್ಕೆ, ಸಂಗೀತಕ್ಕೆ, ರಂಗತಂತ್ರಕ್ಕೆ ಮೇಲಾಗಿ ಕಲಾತ್ಮಕವಾದ ನಾಟಕಗಳನ್ನು ಪ್ರಯೋಗಿಸುವುದಕ್ಕೆ ಪ್ರಸಿದ್ಧಿ ಪಡೆದಿತ್ತು. ಆದರೆ ಅದಕ್ಕಿಂತ ಮುಖ್ಯವಾಗಿ ಅಲ್ಲಿ ಒಬ್ಬ ಶ್ರೇಷ್ಠ ಕಲಾವಿದನಿಂದ ಹಿಡಿದು ಒಬ್ಬ ದ್ವಾರಪಾಲಕನ ತನಕ ಎಲ್ಲರಿಗೂ ಒಂದೇ ತೆರನಾದ ಸಹಜವಾದ ರಂಗತರಬೇತಿಯನ್ನು ನೀಡಲಾಗುತ್ತಿತ್ತು. ಬಾಳಪ್ಪನವರು ಎಂದೂ ಸಾಲ ಮಾಡುತ್ತಿರಲಿಲ್ಲ. ಆರ್ಥಿಕ ತೊಂದರೆ ಯಾದಾಗ ತಮ್ಮ ಸ್ವಂತ ಹೊಲ-ಮನೆ ಒತ್ತೆಯಿಡುತ್ತಿದ್ದರು ಹೊರತು ಹೊರಗಿನವರಲ್ಲಿ ಕೇಳುತ್ತಿರಲಿಲ್ಲ. ಆದರೆ ಅವರ ನಾಟಕದ ಅಭಿಮಾನಿಗಳು ಸ್ವ ಇಚ್ಛೆಯಿಂದ ಅವರ ಕಷ್ಟಗಳನ್ನು ತಮ್ಮವೆಂದೇ ಭಾವಿಸಿ ಸ್ಪಂದಿಸುತ್ತಿದ್ದರು. ಎಷ್ಟೋ ಸಲ ನಷ್ಟವಾದಾಗ ಕಾಳು-ಕಡಿ ನೀಡುತ್ತಿದ್ದರು. ಒಮ್ಮೆ ಸರ್ಕಾರ ಅಪಾರ್ಥದಿಂದ ಲೈಸನ್ಸು ರದ್ದು ಪಡಿಸಿದಾಗ ಊರಿನವರೆಲ್ಲ ಹೋರಾಟ ಮಾಡಿ ತಿರುಗಿ ಕೊಡಿಸಿದರು. ಲಕ್ಷ್ಮೇಶ್ವರ ಕ್ಯಾಂಪಿನಲ್ಲಿ ಸಾಲ ತೀರಿಸಲು ಕಷ್ಟವಾಗಿದ್ದಾಗ ಆಗಂತುಕಭಿಮಾನಿ ವ್ಯಾಪಾರಿಯೊಬ್ಬರು ಆಳು ಹುಡುಗನನ್ನು ಕಳಿಸಿ ಅಂಗಡಿಗೆ ಕರೆಸಿಕೊಂಡು ಹಣ ಕೊಟ್ಟು ತಾನಾಗಿಯೇ ಕೇಳುವ ತನಕ ತಿರುಗಿ ಕೊಡದಿರುವಂತೆ ಆಗ್ರಹಿಸಿ ಆಮೇಲೆ ಎಂದೂ ಹಿಂತಿರುಗಿ ಕೇಳದೇ ಇದ್ದ ಪ್ರಸಂಗವನ್ನು ದೈವಕೃಪೆಯೆನ್ನುವಷ್ಟು ಬೆರಗು ಮೂಡಿಸುತ್ತದೆ. ತಮ್ಮ ನಾಟಕದ ಪ್ರೇಕ್ಷಕರ ಕುರಿತಾಗಿ ಬಾಳಪ್ಪನವರೂ ಕೂಡ ಅಪಾರ ಪ್ರೀತಿ-ಕಾಳಜಿ ವಹಿಸುತ್ತಿದ್ದರು. ಕುಂದಾಪುರದಲ್ಲಿ ಅಸಹನೀಯ ಸೆಕೆ ಇರುವುದನ್ನು ಗಮನಿಸಿ ಖುರ್ಚಿಗೆ ಒಂದೊಂದು ಬೀಸಣಿಕೆ ಇಡುವ ವ್ಯವಸ್ಥೆ ಮಾಡಿದ್ದರಂತೆ. ದಾವಣಗೆರೆಯಲ್ಲಿ ಹಮಾಲನೊಬ್ಬ ದಿನಾಲೂ ಬಂದು ನಾಟಕ ನೋಡುತ್ತಿರುವುದನ್ನು ಗಮನಿಸಿ ನೂರಾ ಇಪ್ಪತ್ತೈದನೆ ಪ್ರಯೋಗದ ದಿನ ಅವನಿಗೆ ಮಾಲೆ ಹಾಕಿ ಅಷ್ಟೂ ದಿನದ ಹಣ ಕೊಟ್ಟು ಗೌರವಿಸಿದರಂತೆ. ಹುಬ್ಬಳ್ಳಿ ಕ್ಯಾಂಪಿನಲ್ಲಿ ಚೆನ್ನಾಗಿ ಲಾಭವಾದಾಗ ಗಾಡಿ ಕಟ್ಟಿಕೊಂಡು ಬರುವ ಹಳ್ಳಿ ಪ್ರೇಕ್ಷಕರಿಗಾಗಿ ಪಕ್ಕದಲ್ಲೇ ಶೆಡ್ಡು ಕಟ್ಟಿಸಿ ಊಟಕ್ಕೆ-ಮಲಗಲಿಕ್ಕೆ ಅನುಕೂಲವಾಗುವಂತೆ ನೋಡಿಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರಂತೆ.

ಒಂದು ನಾಡಿನ ಕಲೆ ಹಾಗೂ ಸಂಸ್ಕೃತಿಯನ್ನು ತಿಳಿಸಲು ಆ ನಾಡಿನ ಮಾತೃ ಭಾಷೆಯೇ ಸಾಕು ಎಂಬ ತತ್ವವನ್ನು ಅನುಷ್ಠಾನಕ್ಕೆ ತಂದಿದ್ದ ಬಾಳಪ್ಪನವರು ಅನೇಕ ಇಕ್ಕಟ್ಟಿನ ಪ್ರಸಂಗಗಳಲ್ಲಿಯೂ ತಮ್ಮ ಕನ್ನಡಾಭಿಮಾನವನ್ನು ಮೆರೆದಿದ್ದಾರೆ. ಬೆಳಗಾವಿ ಯಲ್ಲಿ ನವೆಂಬರ್ ಒಂದರಂದು ಅಲ್ಲಿನ ಮರಾಠಿ ಸಂಘಟನೆಗಳ ಬೆದರಿಕೆಗೆ ಮಣಿದು ಚಲನಚಿತ್ರ ಮಂದಿರಗಳು ಸಹ ಪ್ರದರ್ಶನ ರದ್ದುಪಡಿಸಿದಾಗ ಇವರು ಮಾತ್ರ ಸ್ಥಳೀಯ ಅಭಿಮಾನಿಗಳ ಸಹಾಯ ಪಡೆದು ನಾಟಕ ನಡೆಸಿದರು. ಮರಾಠಿ ಭಾಷಿಕರ ಸಂಘಟನೆಗಳು ಅವರಿಗೆ ಕನ್ನಡದ ಬೋರ್ಡ ಬದಲಾಯಿಸುವಂತೆ ಮತ್ತು ಕರ್ನಾಟಕ ಎಂಬ ಶಬ್ದ ತೆಗೆದು ಹಾಕುವಂತೆ ಬಹಳ ಒತ್ತಡ ತಂದರೂ ಅವರು ಬಗ್ಗಲಿಲ್ಲ. ಅಳಣಾವರದಲ್ಲಿ ಬೆದರಿಕೆ ಪತ್ರ ಬಂದರೂ ಹೆದರದೆ ನಾಟಕ ಮಾಡಿ ಕೊನೆಯ ದೃಶ್ಯದಲ್ಲಿ ಭಾಷಣ ಮಾಡಿದರಂತೆ "ಕನ್ನಡದ ಸಲುವಾಗಿ ನನ್ನ ಕೊಲೆಯಾದರೆ ನನ್ನ ಜನ್ಮ ಸಾರ್ಥಕ.

ಕನ್ನಡದ ಒಬ್ಬ ಕಲಾವಿದನಿಗೆ ಅಪಮಾನವಾದರೆ ಅದು ಕನ್ನಡದ ಪ್ರೇಕ್ಷಕರೆಲ್ಲರಿಗೂ ಆಗುವ ಅಪಮಾನ."

ಕನ್ನಡ ವೃತ್ತಿ ರಂಗಭೂಮಿ ಬೆಳೆಯಬೇಕು, ಅದು ಬೆಳೆಯಬೇಕಾದರೆ ನಾಟಕ ಸಂಘಗಳ ಸಂಘಟನೆಯಾಗಬೇಕು ಎಂದು ಚಿಂತಿಸಿ 1950ರಲ್ಲಿ ಶ್ರೀರಂಗರ ಮುಖಂಡತ್ವದಲ್ಲಿ ನಾಟಕ ಸಂಘಗಳ ಸಂಘಟನಾ ಕಾರ್ಯ ಆರಂಭಿಸಿದರು. ಸದಸ್ಯತ್ವ ವಂತಿಗೆ 15 ರೂ ನಿಗದಿ ಮಾಡಿದರು. ಹುಬ್ಬಳ್ಳಿಯನ್ನು ಮುಖ್ಯ ಕಾರ್ಯಾಲಯ ಮಾಡಿಕೊಂಡು ಸಭೆಗಳನ್ನು ನಡೆಸಿದರು. ಅವರು ಆಗ ಮಾಡಿದ ಯೋಜನೆಗಳು ಬಹಳ ಚೆನ್ನಾಗಿದ್ದವು. ಎರಡು ನಾಟಕ ಕಂಪನಿಗಳ ವಾಸ್ತವ್ಯದ ಕನಿಷ್ಠ ಅಂತರ ನಲವತ್ತು ಮೈಲಿಯಿರಬೇಕು. ಜಾತ್ರೆ ಹೊರತು ಪಡಿಸಿ ಒಂದೇ ಸ್ಥಳದಲ್ಲಿ ಎರಡು ಕಂಪನಿಗಳು ಉಳಿಯಬಾರದು. ಒಬ್ಬನ ಯಶಸ್ವೀ ನಾಟಕವನ್ನು ಬೇರೊಂದು ಕಂಪನಿ ಪ್ರಯೋಗಿಸ ಬಾರದು. ಬೇರೊಂದು ಸಂಘದ ನಟ-ನಟಿಯರನ್ನು ತಮ್ಮ ಸಂಘಕ್ಕೆ ಸೇರಿಸಿಕೊಳ್ಳುವಾಗ ಹಿಂದಿನ ಕಂಪನಿಯ ಒಡೆಯರ ಒಪ್ಪಿಗೆ ಪತ್ರ ತರಬೇಕು. ಹೀಗೆ ಅನೇಕ ಪರಿಣಾಮಕಾರಿ ವಿಚಾರಗಳನ್ನು ಹಾಕಿಕೊಂಡಿದ್ದರು. ಮೊದಲನೆ ಎರಡನೆ ಸಭೆಗಳಿಗೆ ಕೆಲ ಮಾಲಕರು ಬಂದರಾದರೂ ಮೂರನೆಯ ಸಭೆಗೆ ಯಾರೂ ಬರದೆ ಅವರ ಯೋಜನೆ ಚಿಗುರಿ ನಲ್ಲಿಯೇ ಚಿವುಟಿ ಹೋಗಿದ್ದು ನಮ್ಮ ವೃತ್ತಿ ರಂಗಭೂಮಿಗಾದ ದೊಡ್ಡ ನಷ್ಟ.

■

**"ಸ್ವಾತಂತ್ರ್ಯ ಹೋರಾಟಗಾರರಿಗೆ ಬಾಳಪ್ಪನವರ ನಾಟಕ ಕಂಪನಿ ಆಶ್ರಯ ತಾಣ. ಬ್ರಿಟಿಷ್ ಪೋಲೀಸರು ಬೆನ್ನು ಹತ್ತಿದರೆ ಅವರೆಲ್ಲ ಬಾಳಪ್ಪನವರ ನಾಟಕ ಕಂಪನಿಗೆ ಹೊಕ್ಕು ಬಣ್ಣ ಬಳಿದು, ಗಡ್ಡ-ಮೀಸೆ ಹಚ್ಚಿಕೊಂಡು ಸಂಕಷ್ಟದಿಂದ ಪಾರಾಗುತ್ತಿದ್ದರು. ಹೀಗಾಗಿ ಬ್ರಿಟಿಷ್ ಸರ್ಕಾರದ ಕಣ್ಣು ಇವರ ಮೇಲಿತ್ತು."**

*(ಏಣಗಿ ಬಾಳಪ್ಪ ನೆನಪುಗಳಿಂದ...)*



# ಮಧುರ ಕಂಠ, ಕುಗ್ಗದ ದೇಹ, ಮಾಸದ ಅಭಿನಯ

● ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ

> ಸಂಗಮನಾಥನ ಸ್ವರೂಪವೇ ಬಸವ. ಬಸವ ಎನಗೊಲಿಯೋ ಎಂದು ಹಾಡು ಹಾಡುತ್ತಾ. ಸಭಾಂಗಣದಲ್ಲಿದ್ದ ಅಷ್ಟೋ ರಂಗಪ್ರಿಯರೂ ಎದ್ದು ನಿಂತು ಬಾಳಪ್ಪನವರಿಗೆ ಗೌರವ ಸೂಚಿಸಿತು.

ಅದಾವುದೊ ಒಳತುಡಿತ, ಕಾಲದ ಅನಿವಾರ್ಯತೆ, ರಂಗದೊಳಗೆ ಮಹತ್ತರವಾದದನ್ನು ಸಾಧಿಸಬೇಕೆಂಬ ಛಲ, ವಿಭಿನ್ನ, ವಿಶಿಷ್ಟ ದಾರಿಯಲ್ಲಿ ಸಾಗಬೇಕಾದ ತುರ್ತು. ವರ್ತಮಾನ ತಂದೊಡ್ಡುತ್ತಿರುವ ಅವಾಂತರಗಳು, ಆತಂಕಗಳಿಗೆ ಪರ್ಯಾಯವನ್ನು ರಂಗಭೂಮಿಯಲ್ಲಿ ಹುಡುಕುವ ಪ್ರಯತ್ನ. ರಂಗಭೂಮಿ ತನ್ನೊಳಗೆ ಹೊಸತನ್ನು ತುಂಬಿಕೊಳ್ಳಬೇಕಾದ ಅನಿವಾರ್ಯತೆ, ಹಿಂದಿನವರ, ಹಿರಿಯರ, ಅನುಭವಗಳನ್ನು ಮುಂದಿಟ್ಟುಕೊಂಡು ಹೊಸದರ ಅನ್ವೇಷಣೆ ರಂಗಭೂಮಿಯಲ್ಲಿ ಆಗಬೇಕೆಂಬ ಆಶಯ. ಹೊಸ ಸಾಧ್ಯತೆ, ಹೊಸ ಸಂಪನ್ಮೂಲ, ಹೊಸ ಚಿಂತನೆ, ಹೊಸ ಉಸಿರು, ಹೊಸ ಬಣ್ಣ ಇವು ನುಗ್ಗಿ ಬರುವ ಸವಾಲುಗಳನ್ನು ಮೆಟ್ಟಿನಿಲ್ಲಲು ಆಧಾರ... ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸುವ ರಂಗಸಂಸ್ಥೆಯ ಅಗತ್ಯವನ್ನು ಮನಗಂಡು,

ಅಧ್ಯಯನ, ಸಂಶೋಧನೆ, ಮಾಹಿತಿ ಸಂಗ್ರಹ, ಗ್ರಂಥ ಪ್ರಕಟಣೆ, ರಂಗಕೋಶದ ಪ್ರಕಟಣೆ, ರಂಗಚರಿತ್ರೆಯ ನಿರ್ಮಾಣ, ಕಲಾವಿದರ ಕ್ಷೇಮಾಭಿವೃದ್ಧಿ, ಇಂತಹ ಹಲವು ಅಕಾಡಮಿಕ್ ಹಾಗೂ ನಾನ್ ಅಕಾಡಮಿಕ್ ವಿಷಯಗಳ ಚಿಂತನೆ ಹಾಗೂ ಚಾಲನೆ-ಪಾಲನೆಯ ಅನಿವಾರ್ಯತೆ ಇರುವ ಕಾರಣ, ಸರ್ಕಾರದೊಡನೆ ಈ ಎಲ್ಲಾ ವಿಚಾರಗಳಿಗೆ ಮುಖ, ಮುಖಿಯಾಗಬಲ್ಲ ಶಕ್ತಿಯನ್ನು ಇಂತಹ ಸಂಸ್ಥೆಗೆ ತುಂಬಿ ಆ ಮೂಲಕ ರಂಗಕ್ರಿಯೆಯನ್ನು ವಿಸ್ತರಿಸಬಹುದೆಂಬ ಕಾರಣದಿಂದ ಸದಾ ರಂಗದೆಡೆಗೆ ತುಡಿಯುವ ಗೆಳೆಯರು ಹಾಗೂ ಹಲವು ರಂಗತಂಡಗಳು ಒಗ್ಗೂಡಿ 2005ರ ಸಮಯಕ್ಕೆ ರಂಗಜಾಗೃತಿ ವೇದಿಕೆಯನ್ನು ಸೃಷ್ಟಿಸಿ ಕೆಲಸ ಮಾಡಲು ತೊಡಗಿದ್ದು, ನಂತರ 2009ರ ವೇಳೆ ವೇದಿಕೆಯನ್ನು ವಿಸ್ತರಿಸಿ ಕರ್ನಾಟಕ ರಂಗಜಾಗೃತಿ ಪರಿಷತ್ತನ್ನು ಸ್ಥಾಪಿಸಿ 'ನಾಟಕ ಕರ್ನಾಟಕ 2009 ರಂಗ ಸಮ್ಮೇಳನ'ವನ್ನು 27-01-2009ರಿಂದ 10-02-2009ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದು, ರಂಗಪರಿಷತ್ತಿನ ಇತಿಹಾಸವೂ ಹೌದು. ಹಾಗೆಯೆ ರಂಗಭೂಮಿ ಇತಿಹಾಸದ ಒಂದು ಭಾಗವೂ ಹೌದು.

ಇಂತಹ ಒಂದು ಅಭೂತಪೂರ್ವವಾದ ಸಮ್ಮೇಳನಕ್ಕೆ ಒಬ್ಬ ಹಿರಿಯ, ಅನುಭವಿ, ಸಮರ್ಥ, ಸರ್ವರೂ ಒಪ್ಪಬಹುದಾದ ರಂಗದಿಗ್ಗಜನು ಬೇಕೆಂಬ ಹುಡುಕಾಟ ನಮ್ಮದಾಯಿತು. ಗೆಳೆಯರಾದ ಜಿ.ವಿ. ಪ್ರಸನ್ನ ಕುಮಾರ್, ಎಸ್. ರಾಜಗೋಪಾಲ್, ಬಿ.ಎಸ್. ಕುಮಾರಿ, ಪ್ರೊ॥ ರಾಜ್ ಹಾಗೂ ಇನ್ನಿತರರು ಸಭೆ ಸೇರಿ ಆಲೋಚನೆಗೆ ತೊಡಗಿದಾಗ ನನಗೆ ಹೊಳೆದ ಹೆಸರು ಏಣಗಿ ಬಾಳಪ್ಪ. ಇವರ ಹೆಸರನ್ನು ಗೆಳೆಯರೊಡನೆ ಪ್ರಸ್ತಾಪ ಮಾಡಿದೆ. ವಯೋವೃದ್ಧರು, ಜ್ಞಾನವೃದ್ಧರು, ರಂಗಭೀಷ್ಮರೂ ಆದ ಬಾಳಪ್ಪನವರ ಹೆಸರನ್ನು ಎಲ್ಲರೂ ಒಪ್ಪಿಕೊಂಡರು. ನನ್ನ ಸೂಚನೆಗೆ ಸಮ್ಮತಿಸಿದರು. ಆದರೆ ಅವರನ್ನು ಸಂಪರ್ಕಿಸುವುದು ಹೇಗೆ, ಅವರನ್ನು ಒಪ್ಪಿಸುವುದು ಹೇಗೆ. ನಮಗಾರಿಗೂ ಅವರ ಸ್ನೇಹವಿಲ್ಲ, ನಿಕಟತೆಯಿಲ್ಲ, ಕೊನೆಗೆ ಪರಿಚಯವೂ ಇಲ್ಲ. ನಾನಾಗ ಅಕಾಡಮಿಯ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ 3-4 ಬಾರಿ ಕಂಡಿದ್ದೆನಷ್ಟೆ. ಅವರ ಬಗ್ಗೆ ಕೇಳಿದ್ದು, ತಿಳಿದದ್ದು, ಓದಿದ್ದಷ್ಟೆ ನಮ್ಮ ಬಂಡವಾಳ.

ನನಗೆ 1982ರಿಂದಲೇ ಏಣಗಿ ನಟರಾಜನ ಪರಿಚಯವಿತ್ತು. ಅವನ ನಿನಾಸಂ ತಿರುಗಾಟದ ವಿಗಡ ವಿಕ್ರಮರಾಯ. ಇಡೀ ರಂಗಭೂಮಿಯಲ್ಲಿ ಬಹಳ ಸುದ್ದಿ ಮಾಡಿತ್ತು. ಅಪಾರ ರಂಗಾಭಿಮಾನಿಗಳನ್ನು ತನ್ನೆಡೆಗೆ ಸೆಳೆದಿದ್ದ ನಟರಾಜ. ಅವನ ಅಭೂತಪೂರ್ವ ಅಭಿನಯ ಎಲ್ಲರನ್ನೂ ನಿಬ್ಬೆರಗಾಗಿಸಿತ್ತು. ನನ್ನ ಅವನ ಪರಿಚಯ ಸ್ನೇಹವಾಗಿ ತಿರುಗಿತ್ತು. ಆಗಾಗ ಬೆಂಗಳೂರಿಗೆ ಬಂದಾಗ ಅಥವಾ ಯಾವುದಾದರೂ ರಂಗ ಸಂದರ್ಭಗಳಲ್ಲಿ ಭೇಟಿಯಾಗುತ್ತಿದ್ದೊ. ಇವನ ಮೂಲಕವೇ ನನಗೆ ಏಣಗಿ ಬಾಳಪ್ಪನವರ ಇರುವಿಕೆ ಗೊತ್ತಾಗಿದ್ದು, ಏಣಗಿ ಬಾಳಪ್ಪನವರ ಮಗ ಏಣಗಿ ನಟರಾಜ ಅಲ್ಲ. ನಮಗೆ ಏಣಗಿ ನಟರಾಜನ ಅಪ್ಪ ಏಣಗಿ ಬಾಳಪ್ಪ ಹಾಗೆ ಮಗನ ಮೂಲಕ ಅಪ್ಪ ನಮಗೆ ಗೊತ್ತಾಗಿದ್ದು. ಇವರಿಬ್ಬರಲ್ಲಿ ನಟನೆಯಲ್ಲಿ, ರಂಗಬದ್ಧತೆಯಲ್ಲಿ, ರೂಪದಲ್ಲಿ ಸಾಮ್ಯತೆ ಇರಬಹುದೇನೂ

ಆದರೆ ವ್ಯಕ್ತಿತ್ವದಲ್ಲಿ ಅಜಗಜಾಂತರ. ನಟರಾಜ ಬೋರ್ಗರೆವ, ದುಮ್ಮಿಕ್ಕುವ ಜಲಪಾತ. ಆದರೆ ಬಾಳಪ್ಪನವರು ಶಾಂತ ಸಾಗರ, ನಟರಾಜ ಅಶಾಂತ ಸಾಗರ, ಬಾಳಪ್ಪನವರು ಪ್ರಶಾಂತಿಯ ಆಗರ.

ಸರಿ, ನಟರಾಜನಿಗೆ ವಿಚಾರ ತಿಳಿಸಿ ಫೋನ್ ಮಾಡಿದೆ. 'ನಾನೂ ಫೋನ್ ಹಚ್ತಿನಿ.. ನೀನೂ ಹಚ್ಚು. ಒಂದ್ವಾಳೆ ಒಪ್ಪಿದರೆ ಅಗವಲ್ಲದ್ಯಾಕೆ' ಎಂದ. ಆಗ ಬಾಳಪ್ಪನವರು ಬೆಳಗಾವಿಯಲ್ಲಿದ್ದರು. ಬೆಳಗಾವಿಯ ಗೆಳೆಯ ಡಿ.ಎಸ್. ಚೌಗಲೆಗೆ ವಿಷಯ ತಿಳಿಸಿ ನೀನು ಬಾಳಪ್ಪನವರನ್ನು ರಂಗ ಪರಿಷತ್ತಿನ ಅಧ್ಯಕ್ಷತೆಗೆ ಒಪ್ಪಿಸು ಮಾರಾಯ ಎಂದೆ. ವಿಚಾರ ಮಾಡಿ ಹೇಳ್ತೀನಿ ದೋಸ್ತ. ಎರ್ಡದಿನ ಟೈಮ್ ಕೊಡು. ಯಾಕೆ ಹೇಳ್ಳೀನಿ ಅಂದ್ರ, ಅವರ ಆರೋಗ್ಯ ಆರಾಮ ಎತ್ತಿಲ್ಲೊ ತಿಳಿಲಿಲ್ಲ. ಅವರು ಬರಾಕಾಗ್ತದ ಇಲ್ಲೊ ವಿಚಾರ ಮಾಡ್ತೀನಿ. ನೀ ಒಂದು ಕೆಲಸ ಮಾಡ್ ಮತ್ತ.. ಒಂದು ನಂಬರ್ ಬರಕೋ... ನಾ ಮಾತಾಡಿದಮ್ಯಾಲೇ ನೀ ಇವರ ಜೋಡಿ ಮಾತಾಡುವಂತೆ ಎಂದು ಬಾಳಪ್ಪನವರ ಹಿರಿಯ ಮಕ್ಕಳಲ್ಲಿ ಒಬ್ಬರಾದ ಡಾ॥ ಸುಭಾಷ್‌ರವರ ನಂಬರ್ ಕೊಟ್ಟ. 'ನೋಡ... ಮಹಾಮನಿ ನೀ ಅಜ್ಜವರ ಜೋಡಿ ಮಾತಾಡುವಾಗ್ಗ ಸ್ವಲ್ಪ ಜೋರ್ ಮಾತಾಡು ತಿಳಿತಿಲ್ಲೊ... ಅವ್ರಗ ಅಷ್ಟಾಗಿ ಕೇಳ್ಸೋಂಗಿಲ್ಲ ನೋಡಮತ್ತ...' ಎಂಬುದನ್ನು ಹೇಳಲು ಮರೆಯಲಿಲ್ಲ. ಅಂತ ದೊಡ್ಡ ಕಲಾವಿದರ ಹತ್ತಿರ ನಾನು ಹೇಗೆ ಮಾತಾಡುವುದು ಎಂಬ ಹಿಂಜರಿಕೆಯಿಂದ ನಾನು ಬಾಳಪ್ಪನವರಿಗೆ ಫೋನ್ ಮಾಡಲಿಲ್ಲ. ಆದರೆ ಸುಭಾಷ್‌ರವರಿಗೆ ಫೋನ್ ಮಾಡಿದೆ. ಚೌಗಲೇರು ಹೇಳ್ಯಾರ... ಹೇಳ್ಯಾರ ನಾನೂ ಅಪ್ಪವರ ಜೋಡಿ ಮಾತಾಡಿನಿ... ನೀವೂ ಒಮ್ಮೆ ಮಾತಾಡ್ರಲ' ಎಂದು ಸುಭಾಷ್ ಹೇಳಲಾಗಿ... ನಾನು ಬಾಳಪ್ಪಜ್ಜರವರಿಗೆ ಫೋನ್ ಅಚ್ಚಿದೆ. ಚೌಗಲೆ ಹೇಳಿದಂಗೆ ಜೋರಾಗಿ ಮಾತಾಡಲು ಪ್ರಾರಂಭಿಸಿದೆ. ನನ್ನ ಒಂದೆರಡು ಮಾತು ಕೇಳಿದರು... ಆಮೇಲೆ ಸ್ವಲ್ಪ ಮೆಲ್ಲಗೆ ಮಾತಾಡ್ರಿ... ನನಗೆ ಚಲೋ ಕೇಳ್ತದ... ಹಾಂ ಈಗೇಳ್ರಿ...' ಎಂದು ಮೆಲು ದನಿಯಲ್ಲಿ ಹೇಳಿದರು. ಚೌಗಲೆ ಮಾತು ಕೇಳ್ಕೊಂಡು ನಾನು ತಪ್ಪು ಮಾಡಿಬಿಟ್ಟನೇನೂ ಎಂಬ ಅಳುಕಿನಿಂದಲೇ ನನ್ನದು ಉದ್ದಟತನವಾಯಿತೆ ಎಂಬ ಅನುಮಾನದಿಂದಲೂ ಇಂತಹ ನನ್ನ ನಡೆಯಿಂದ ಅಜ್ಜ ಅವರು ಎಲ್ಲಿ ಅಧ್ಯಕ್ಷತೆ ಪದವಿ ನಿರಾಕರಿಸಿ ಬಿಡುತ್ತಾರೆನೋ ಎಂಬ ಆತಂಕದಿಂದಲೂ ಮಾತು ಮುಂದುವರಿಸಿದೆ. ಆದರೆ ನನ್ನ ಆತಂಕಗಳನ್ನೆಲ್ಲ ದೂರಮಾಡಿದಂತೆ ಅವರು ಅಧ್ಯಕ್ಷರಾಗಲು ಒಪ್ಪಿಕೊಂಡರು ಹಾಗೂ ನಾನು ಬೆಂಗಳೂರಿಗೆ ಬರುವವನಿದ್ದೇನೆ ಅಲ್ಲಿ ವಿವರವಾಗಿ ಮಾತಾಡೋಣ ಎಂಬ ಮಾತನ್ನು ಹೇಳಿದರು. ನಾವು ಸಿಕ್ಕ ಭರವಸೆಯಿಂದ ರಂಗಸಮ್ಮೇಳನದ ಮುಂದಿನ ಸಿದ್ಧತೆಗೆ ತೊಡಗಿದೆವು.

ಅವರ ಮಗಳ ಮನೆ ಬೆಂಗಳೂರಿನ ರಾಜಾಜಿನಗರದ ಒಂದನೇ ಬ್ಲಾಕ್‌ನಲ್ಲಿದೆ. ಅಲ್ಲಿಗೆ ಆಗಾಗ ಬರುವುದು ವಾಡಿಕೆ. ಅಲ್ಲಿಗೆ ಬಂದಿದ್ದರು. ನಾನು, ಬಿ.ವಿ. ಪ್ರಸನ್ನ ಕುಮಾರ್, ಎಸ್. ರಾಜಗೋಪಾಲ್, ಪ್ರೊ॥ ರಾಜ್ ಆ ಮನೆ ತಲುಪಿದೊ. ನಾವು ಬರುವುದು ಮೊದಲೆ ತಿಳಿದಿತ್ತು. ಅಜ್ಜನವರು ಮಗಳು ಆದರದಿಂದ ನಮ್ಮನ್ನು ಬರಮಾಡಿಕೊಂಡರು.

ಅಜ್ಜನವರು ಬರುತ್ತಾರೆ ಕುಳಿತಿರಿ ಎಂದರು. ನಾವು ಕೊಠಡಿಯಲ್ಲಿ ಕುಳಿತೆವು. ಬೆಳ್ಳನೆಯ ಕಚ್ಚೆ, ಬೆಳ್ಳನೆಯ ಜುಬ್ಬ, ಬೆಳ್ಳನೆಯ ರುಮಾಲು, ಕಪ್ಪನೆ ಫ್ರೇಮಿನ ಕನ್ನಡಕ, ಬೆಳ್ಳನೆಯ ಹೆಗಲ ವಸ್ತ್ರ ಧರಿಸಿದ ತೆಳ್ಳನೆಯ, ಕುಳ್ಳನೆಯ ಬೆಳ್ಳನೆಯ ಬೆಳಕೊಂದು ಬಾಳಪ್ಪನವರ ರೂಪದಲ್ಲಿ ಪ್ರವೇಶವಾಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದೆ ನಾನು. ನಾವು ಕಂಡಿದ್ದ ಬಾಳಪ್ಪನವರು ಸದಾ ಹಾಗೆ ಇರುವುದೂ ಸಹ. ಆದರೆ ಅಂದು ಅವರು ಬಹಳ ಸಾಧಾರಣವಾಗಿದ್ದರು. ಒಂದು ಸಾದಾ ಬಿಳಿ ದೋತಿ, ಬಿಳಿ ಅಂಗಿ ರುಮಾಲಿಲ್ಲದ ಬೋಳು ತಲೆ, ಹಣೆಯ ಅಲಂಕರಿಸಿದ್ದು ವಿಭೂತಿ, ಕನ್ನಡಕವಿಲ್ಲದ ಮುಖ, ತೀಕ್ಷ್ಣ ಕಣ್ಣುಗಳು, ತುಸು ಹೆಚ್ಚೇ ಎನಿಸಿದ್ದ ಹುಬ್ಬುಗಳು, ಪುಟ್ಟ ಮುಖದೊಳಗೆ ಎದ್ದು ಕಾಣುವ ಮೂಗು, ತುಂಬ ತುಂಬಾ ಅಪರೂಪ ಚಿತ್ರ ಅದು ನನ್ನ ಪಾಲಿಗೆ. ಬಾಳಪ್ಪನವರು ಹಾಗಿರುತ್ತಾರೆಂದು ನಾನು ಕಲ್ಪಿಸಿರಲಿಲ್ಲ. ಸರಳತೆಯಲ್ಲಿ ಸರಳತೆ.

ನಾವೆಲ್ಲ ಅವರಿಗೆ ಶರಣು ಬಿದ್ದೆವು. ಬಾಡ್ರಪ್ಪ–ಬ್ಯಾಡ್ರಿ.. ಇದೆಲ್ಲ ಬ್ಯಾಡ್ರಿ ಎನ್ನುತ್ತಾ ನಮಗೆ ಆಶೀರ್ವಾದ ಮಾಡಿದರು. ನಾವು ನಮ್ಮ ನಮ್ಮ ಪರಿಚಯ ಮಾಡಿಕೊಂಡ್ಯೋ. ಚೌಗಲೆ ಹೇಳ್ಯಾರ... ನೀವು ಅವರೂ ಅಕಾಡಮಿಲೆ ಜೋಡಿ ಇದ್ದರಂತಲ್ಲ. ನಿಮ್ಮ ಅವಧಿ ಬಾಳಾ ಕೆಲ್ಸ ಆತ್ರಪ್ಪ. ಬಾಳ ಚಲೋ ಕೆಲ್ಸ ಮಾಡಿರಿ... ಅಂದರು. ನಾನು ನಟರಾಜ ಪರಿಚಯ, ಗೆಳೆತನ ಹೇಳಿದೆ. ಅಜ್ಜ ಅವರು ಗೆಲುವಾದರು. ಆ ಪ್ರಶಾಂತ ಮುಖದೊಳಗೆ ತುಸು ನಗೆ ಕಂಡಿತು. ಎಲ್ಲವನು ಕಂಡುಂಡವನ ನಿರ್ಭಾವಕ ನಗೆ ಅದು. ಅದು ಬುದ್ಧ ನಗೆ. ಅವ ಬಚ್ಚಾನ್ ನೋಡ್ರಿ ನನ್ನ ವೃತ್ತಿ ಮುಂದುವರಿಸಿದವ. ಎಲ್ಲಾರೂ ಅಂತಾರ... ಚಲೋ ಆಕ್ಟ್ ಮಾಡ್ತಾನ ಅಂತ. ನಿಮ್ಮ ಹೆಸರ ಉಳಿಸ್ತಾನಂತ. ಎಲ್ಲ ಅವನಿಚ್ಚೆ... ಎಂದು ಮತ್ತೆ ನಕ್ಕರು... ಹೂಂ ಈಗ ಹೇಳ್ರೀ... ಆ ಅಧ್ಯಕ್ಷ ಪದವಿ ಸ್ವೀಕರಿಸಬೇಕೆಂದು ನಾವು ಸಿದ್ಧಪಡಿಸಿಕೊಂಡು ಹೋಗಿದ್ದ ಪತ್ರವನ್ನು ಅವರಿಗೆ ಕೊಟ್ಟೆವು. ನೋಡಿದರು. ಒಂದು ಕ್ಷಣ ಮೌನ, ಗಂಭೀರವಾದರು. ಮೃದು ಧ್ವನಿ ಹೊರಬಿತ್ತು. ಬಹಳ ದೊಡ್ಡ ಕೆಲಸ... ಬಹಳ ದೊಡ್ಡ ಕೆಲಸ... ಹದಿನೈದು ದಿನ ಉತ್ಸವ ಅಂದ್ರೆ ಕಮ್ಮಿ ಮಾತಲ್ರಿ, 36 ನಾಟಕಗಳು, ಕವಿಗೋಷ್ಠಿ, ರಂಗಗೀತೆ, ಚಿತ್ರಕಲಾ ಶಿಬಿರ, ವಿಚಾರಗೋಷ್ಠಿ... ಒಂದು ಸಮ್ಮೇಳನ ನಡದೈತೆಲ್ರಪ್ಪ... ಒಂದು ಪ್ರಶ್ನಾ ನಾ ನಿಮಗ ಕೇಳೋಣಿದಿನಿ... ಮತ್ತೆ ಮೌನ... ನಾನು ಅಧ್ಯಕ್ಷ ಪದವಿಗೆ ಸಲ್ತೀನೇನ್ರಪ್ಪ... ಮೌನ ನಾ ಕಲ್ತವನಲ್ಲ–ಹ್ಯಾಂಗ... ವಿಚಾರ ಮಾಡಿದ್ದಿರೇನು?...' ನಿಮ್ಮಂತ ಹಿರಿಯರಲ್ಲದೆ ಮತ್ಯಾರಾಗಬೇಕು... ನಾವು ಕಲಾವಿದರೊಬ್ಬರು ಅಧ್ಯಕ್ಷರಾಗಬೇಕೆಂದು ಬಯಸಿದ್ದೇವೆ' ಎಂದು ನಾನೆಂದು ತಾವು ಅಧ್ಯಕ್ಷರಾಗಿ ಸಮ್ಮೇಳನವನ್ನು ನಡೆಸಿಕೊಡಬೇಕೆಂದು ನಾವೆಲ್ಲರೂ ಮತ್ತೆ ಕೇಳಿಕೊಂಡೆವು. ನಮ್ಮ ಒತ್ತಾಯಕ್ಕೆ ಒಪ್ಪಿದರು... ಬಾಳಾ ದೊಡ್ಡ ಯೋಜನೆ ಹ್ಯಾಗೆ ನಡಸ್ತಿರ... ಯಾಕೆಂದರೆ... ಎಂದು ಮಾತು ಮುಂದುವರಿಸಿವ ಮುನ್ನವೆ, ನಮ್ಮಲ್ಲಿ ಆಸಕ್ತಿ–ಬದ್ಧತೆ, ನಂಬಿಕೆ ಇದೆ. ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದೀವಿ. ನಾವು ಸಮ್ಮೇಳನವನ್ನೂ ನಡೆಸೇ ನಡೆಸುತ್ತೇವೆ ಎಂದೆವು... ನಕ್ಕರು... ;ಆಗಲಿ... ನಿಮ್ಮಲ್ಲಿ ನಿಮಗೆ

ವಿಶ್ವಾಸ ಇದ್ದರೆ ಕೆಲಸ ಆಗ್ತದ... ನಾ ನಿಮ್ಮ ಜೋಡಿ ಇರ್ತೀನಿ' ಅಂದರು. 'ನೀವು ವಿಲಾಸಿಗಳು ನನ್ನಂತೋನನ್ನು ಕರೆದದ್ದು ಅಲ್ಲದೆ ಪೌರಾಣಿಕ ನಾಟಕ, ವರತ್ತಿರಂಗದ ನಾಟಕ ಎಲ್ಲಾನು ಆಡ್ಯಕತ್ತಿರ. ಈ ಕೆಲಸ ನನಗ ಹಿಡಿಸ್ತು. ವಿಲಾಸಿ ಬೇರೆ–ವೃತ್ತಿ ಬ್ಯಾರ್ಬೇರೆ ಅಲ್ಲ ಅದು ಎರಡೂ ಒಂದಾ... ನಾವು ಅನುಕೂಲಕ್ಕೆ ಮಾಡ್ಕೊಂಡುದ್ದು ನೋಡ್ರಿ ಅದು.. ಏನಂತೀರಿ...' ಒಮ್ಮೆ ನಮ್ಮೆಲ್ಲರನ್ನು ನೋಡಿದರು– ನನಗೂ ಅವರು ಹೇಳಿದ ಮಾತು ಸರಿ ಎನಿಸಿತು. ನಾನೂ ಸಹ ಅದೇ ನಿಲಿವಿನಲ್ಲೆ ಇದ್ದವನು. 96 ವಯಸ್ಸಿನ ಅವರು ರಂಗಭೂಮಿಯ ಕುರಿತು, ಸಮ್ಮೇಳನ ಕುರಿತು ಸುಮಾರು ಒಂದು ಗಂಟೆಗಳ ಕಾಲ ಕುಳಿತು ಮಾತಾಡಿದ್ದೋ. ಬಳಲಿಕೆಯಾಗಲಿ, ನಿರುತ್ಸಾಹವಾಗಲಿ, ಬೇಸರಿಕೆಯಾಗಲಿ ಎಲ್ಲೂ ಕಾಣಲಿಲ್ಲ. ಅವರು ಉತ್ಸಾಹ ಚಿಲುಮೆಯಾಗಿದ್ದರು... ಲವಲವಿಕೆಯಿಂದ ಮಾತಾಡಿದರು. ಅವರು ತಮ್ಮ ಮಾತುಗಳ ಮೂಲಕ ನಮ್ಮೊಳಗೊಂದು ಶಕ್ತಿಯನ್ನು ಹರಿಯಬಿಟ್ಟರು, ಭರವಸೆ ಮೂಡಿಸಿದರು. ಜವಾಬ್ದಾರಿಯನ್ನು ಹೆಚ್ಚಿಸಿದರು. ನಾವು ಹುಡುಗರಷ್ಟೆ ಹೋಗಿದ್ದದ್ದು. ಯಾವ ರಂಗ ಐಕಾನ್‌ಗಳಾಗಲಿ, ಅತಿರಥ ಮಹಾರಥರಾಗಲಿ ನಮ್ಮ ಜೊತೆ ಇರಲಿಲ್ಲ. ಯಾವ ಪ್ರಭಾವಳಿಯಾಗಲಿ... ಯಾವ ಶಿಫಾರಸ್ಸಾಗಲಿ ನಮ್ಮ ಬಳಿ ಇರಲಿಲ್ಲ. ಅಂತಹ ದೊಡ್ಡ ಕಲಾವಿದ ನಮ್ಮಂತಹ ಹುಡುಗರು ಹೋಗಿ ಕರೆದಾಗ ಒಪ್ಪಿದ್ದು ಅವರ ದೊಡ್ಡತನ ಎಂದು ಭಾವಿಸುತ್ತೇನೆ.

ರಂಗ ಸಮ್ಮೇಳನ ನಡೆಯುವ ಒಂದು–ಒಂದುವರೆ ತಿಂಗಳ ಮುಂಚಿತವಾಗಿಯೆ ಅವರನ್ನು ಕಂಡು ಮಾತಾಡಿದ್ದು ನಮಗೆ ಶಕ್ತಿ ತುಂಬಿತ್ತು. ಆಗಾಗ ನಮಗೆ ಅಜ್ಜ ಅವರು ಅವರ ಮಗಳ ಮನೆಯಲ್ಲಿ ಸಿಗುತ್ತಿದ್ದರು. ಉತ್ಸವದ ವಿಚಾರವಾಗಿ, ಅದರ ಸಿದ್ಧತೆಯ ವಿಚಾರವಾಗಿ ಅವರ ಸಲಹೆಗಳನ್ನು ಪಡೆಯುತ್ತಿದ್ದೊ. ಒಮ್ಮೆ ಭೆಟ್ಟಿಯಾದಾಗ ತಮ್ಮ 'ಬಸವೇಶ್ವರ' ನಾಟಕವನ್ನು ತಾವು ಸಮ್ಮೇಳನದಲ್ಲಿ ಪ್ರದರ್ಶಿಸಬೇಕಲ್ಲ ಎಂಬ ವಿಷಯ ಮುಂದಿಟ್ಟೊ 'ನಟರಾಜ' ಒಪ್ಪಿದರೆ ನಾನು ಸಿದ್ಧ ಎಂದರು. ಕಲಾವಿದರ ಬಿಡುವು ಇತರ ಕಮಿಟ್‌ಮೆಂಟ್‌ಗಳನ್ನು ತಿಳಿದು ನಟರಾಜ ದಿನಾಂಕ ಗೊತ್ತುಮಾಡಿದ. ರಂಗ ಸಮ್ಮೇಳನವನ್ನು ಕುರಿತು ಕನ್ನಡದ ಎಲ್ಲಾ ಪತ್ರಿಕೆಗಳು, ಟಿ.ವಿ. ಮಾಧ್ಯಮಗಳು ಹೆಚ್ಚಿನ ಪ್ರಚಾರ ಕೊಟ್ಟವು. ಬಾಳಪ್ಪನವರ ಬಗ್ಗೆ ವಿಶೇಷ ಲೇಖನಗಳನ್ನು ಬರೆದವು. ಸಂದರ್ಶನ ಮಾಡಿದವು. ಆ ಇಳಿ ವಯಸ್ಸಿನಲ್ಲಿ ಈ ಎಲ್ಲಾ ಕ್ರಿಯೆಗಳಿಗೂ ಸಕಾರಾತ್ಮಕವಾಗಿ ಹಾಗೂ ಬಹಳ ಹುಮ್ಮಸ್ಸಿನಿಂದ ಪ್ರತಿಕ್ರಿಯಿಸುತ್ತಿದ್ದರು ಬಾಳಪ್ಪ. ಸಮ್ಮೇಳನದ ದಿನ ಬಂದೇ ಬಂತು. ನಿಗದಿತ ವೇಳೆಗಿಂತ ತುಸು ಮೊದಲೇ ಶ್ವೇತ ವಸ್ತ್ರಧಾರಿಗಳಾಗಿ, ತಮ್ಮ ಮತ್ತದೇ 'ಬುದ್ಧ ನಗೆ'ಯೊಡನೆ ರವೀಂದ್ರ ಕಲಾಕ್ಷೇತ್ರಕ್ಕೆ ಬಂದೇಬಿಟ್ಟರು. ಅವರೊಡನೆ ಅವರ ಇಡೀ ಕುಟುಂಬ ವರ್ಗ ಅವರ ಜೊತೆ ಬಂದಿತ್ತು. ಮಹಾನಗರ ಪಾಲಿಕೆಯ ಮುಂಭಾಗದಲ್ಲಿರುವ ಕೆಂಪೇಗೌಡ ಪ್ರತಿಮೆಗೆ ಹಾರಹಾಕಿಸಿ, ಬಾಳಪ್ಪನವರನ್ನು ಜನಪದ ಮೇಳಗಳು ಪೂರ್ಣಕುಂಭ, ನಾಗಸ್ವರ ಹೀಗೆ ಅಪಾರ ಕಲಾ ಪ್ರಿಯರ ಸಮ್ಮುಖದಲ್ಲಿ ಮೆರವಣಿಗೆಯ ಮೂಲಕ ರವೀಂದ್ರ ಕಲಾಕ್ಷೇತ್ರಕ್ಕೆ ಬರಮಾಡಿಕೊಳ್ಳಲಾಯಿತು. ರಂಗ

ಸಮ್ಮೇಳನದ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮಾಡಬೇಕಾಗಿತ್ತು. ಅಂದು ಅವರಿಗೆ ತುರ್ತು ರಾಜಕಾರ್ಯ ವಿದ್ದದ್ದರಿಂದ ಅವರು ಬರಲಾಗಲಿಲ್ಲ. ಆ ಕಾರಣದಿಂದ ಉದ್ಘಾಟನೆಯನ್ನು ಬಾಳಪ್ಪನವರಿಂದಲೆ ಮಾಡಿಸಿದೋ. ಸಭಿಕರಾಧಿಯಾಗಿ ಅತಿಥಿಗಳಾಧಿಯಾಗಿ ಎಲ್ಲರಿಗೂ ಆಶ್ಚರ್ಯ, ಪರದೆ ಸರಿಸಿದಂತೆ ಇನ್ನೊಬ್ಬ... ಅಲ್ಲ.. ಅಲ್ಲ.. ಇನ್ನೊಬ್ಬಳು ಏಣಗಿ ಬಾಳಪ್ಪ. ಗಂಭೀರ ವದನೆ, ಸುಂದರಿ... ನವ ಯುವತಿ... ತಲೆಯ ಮೇಲೆ ಸೆರಗೊದ್ದು ಹೆಣ್ಣಿನ ಚಿತ್ರ... ಹೆಣ್ಣು ವೇಷದ ಬಾಳಪ್ಪ... 96ರ ಹರಯದ ಬಾಳಪ್ಪನವರನ್ನೂ ಚಕಿತಗೊಳಿಸಿದ್ದಳು. ನೋಡುಗರನ್ನು ಆ ಚಿತ್ರ ಬೆರಗುಗೊಳಿಸಿತ್ತು.

ರಂಗ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಬಾಳಪ್ಪಜ್ಜನವರು ಕೆಲವು ವಿಶೇಷ ಮಾತುಗಳನ್ನು ತಮ್ಮ ಭಾಷಣದಲ್ಲಿ ಆಡಿದರು. ನಾನು ಅವುಗಳನ್ನು ಇಲ್ಲಿ ದಾಖಲೆ ಮಾಡಲೇಬೇಕಾದ ಅನಿವಾರ್ಯತೆ ಇದೆ.

ಬದಲಾಗುತ್ತಿರುವ ಇಂದಿನ ನವ್ಯ ಸಂಸ್ಕೃತಿಯಲ್ಲಿ ರಂಗಭೂಮಿಯನ್ನು ಉಳಿಸಿ ಬೆಳೆಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಬೇಕಿದೆ. ಈ ರಂಗದಿಂದ ವಿಮುಖ ವಾಗುತ್ತಿರುವ ಪ್ರೇಕ್ಷಕ ವರ್ಗವನ್ನು ಹೊಸದಾಗಿ ಕಟ್ಟಬೇಕಿದೆ. ಇಂದು ಕನ್ನಡ ರಂಗಭೂಮಿ ವೃತ್ತಿನಿರತ ಹಾಗೂ ಹವ್ಯಾಸಿ ಎಂದು ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದರೂ ಅವರೆಡರ ಗುರಿ ಒಂದೇ. ರಂಗಕಲೆಯ ಮೂಲಕ ಬದುಕನ್ನು ಪುನರುಜ್ಜೀವನ ಗೊಳಿಸುವುದು. ಇದನ್ನು ಸಾಧ್ಯವಾಗಿಸಲು ನನ್ನ ಕೆಲವು ಸಲಹೆಗಳು ಇಂತಿವೆ.

* ಪ್ರಾಥಮಿಕ ಶಾಲಾ ಹಂತದಿಂದ ಮಕ್ಕಳಲ್ಲಿ ರುಚಿ, ಅಭಿರುಚಿಯನ್ನು ಮೂಡಿಸುವ ಅಗತ್ಯ.
* ರಂಗಭೂಮಿಯ ಪುನಶ್ಚೇತನಕ್ಕೆ ಸಾರ್ವಜನಿಕ ಸಂಸ್ಥೆ, ಸರಕಾರ, ಬುದ್ಧಿಜೀವಿಗಳು ಚಿಂತನೆ ನಡೆಸಬೇಕಿದೆ.
* ಹೋಬಳಿ, ತಾಲೂಕು, ನಗರ ಪ್ರದೇಶಗಳಲ್ಲಿ ಸುಸಜ್ಜಿತ ರಂಗ ಮಂದಿರಗಳು ನಿರ್ಮಾಣವಾಗುವ ಮೂಲಕ ರಂಗ ಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ಸರಕಾರ ಕಾಳಜಿ ವಹಿಸಬೇಕಿದೆ.
* ಸಾಮಾನ್ಯರಿಗೂ ನಿಲುಕುವಂತಹ ರಂಗಶಾಲೆಗಳನ್ನು ಆರಂಭಿಸುವುದು.
* ಅಭಿನಯ ಪರಂಪರೆ ಹಾಗೂ ರಂಗವೈಭವವನ್ನು ಕುರಿತ ಕೃತಿಗಳನ್ನು ಪ್ರಕಟಗೊಳಿಸುವುದು.
* ರಂಗಭೂಮಿಯನ್ನು ಕುರಿತು ವೆಬ್‌ಸೈಟನ್ನು ಸೃಷ್ಟಿಸುವುದು.
* ರಂಗ ಕಲೆಯನ್ನು ಉದ್ದಿಮೆಯನ್ನಾಗಿ ಅಭಿವೃದ್ಧಿಪಡಿಸಿ ಆಸಕ್ತ ಪ್ರತಿಭಾವಂತರನ್ನು ರಂಗಭೂಮಿಯತ್ತ ಆಕರ್ಷಿಸುವುದು.
* ಕಲಾವಿದರಿಗೆ ಪ್ರೋತ್ಸಾಹ ನೀಡಿ ಸೂಕ್ತ ಸ್ಥಾನಮಾನಗಳನ್ನು ಒದಗಿಸುವುದು.

* ಪ್ರತಿ ವರ್ಷ ರಾಜ್ಯ ಮಟ್ಟದಲ್ಲಿ ಕಮ್ಮಟ, ಗೋಷ್ಠಿ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ ರಂಗಭೂಮಿಯ ಕುರಿತು ಚಿಂತನೆ ನಡೆಸುವುದು.

ಬನ್ನಿ, ಇವುಗಳನ್ನು ಸಾಧಿಸಲು ನಾವು-ನೀವೂ ಇಂದಿನಿಂದಲೇ ಮೊದಲ ಹೆಜ್ಜೆಯನ್ನಿಡೋಣ ಎಂದು ದಿನಾಂಕ 27-01-2009ರಂದು ನಾಡೋಜ ಡಾ॥ ಏಣಗಿ ಬಾಳಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದ ಮೂಲಕ ಕರೆಯನ್ನು ಕೊಡುತ್ತಾರೆ.

ದಿನಾಂಕ 08-02-2009ರ ಭಾನುವಾರ ಸಂಜೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಕಿಕ್ಕಿರಿದ ಜನ. ಅಂದು ಧಾರವಾಡದ ಕಲಾವೈಭವ ನಾಟ್ಯ ಸಂಘದಿಂದ ನಾಡೋಜ ಏಣಗಿ ಬಾಳಪ್ಪನವರು ಪರಿಕಲ್ಪಿಸಿ ರಚಿಸಿದ, ಏಣಗಿ ನಟರಾಜ ನಿರ್ದೇಶಿಸಿದ ನಾಟಕ ಶ್ರೀ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶನ. ಬಾಳಪ್ಪನವರು ಹರಳಯ್ಯ ವೇಷದಲ್ಲಿದ್ದರು. ಅವರ ಶ್ರೀಮತಿ ಲಕ್ಷ್ಮೀಬಾಯಿ ಅವರು ಕಲ್ಯಾಣಮ್ಮನ ವೇಷ ಹಾಕಿದರು. ಮಗ ನಟರಾಜ ಭಟ ಪಾತ್ರದಲ್ಲಿ, ಮೊಮ್ಮಗ ನಟರಾಜನ 2ನೇ ಮಗ ಆದೇಶ ಪಾತ್ರದಲ್ಲಿ ಹೀಗೆ ಮೂರು ತಲೆಮಾರಿನ, ಒಂದೇ ಕುಟುಂಬದ ಕಲಾವಿದರು ರಂಗದ ಮೇಲೆ. ರವೀಂದ್ರ ಕಲಾಕ್ಷೇತ್ರದಲ್ಲಿ ಮಿಂಚು ಸಂಚರಿಸಿದ ಗಳಿಗೆ. ಒಂದು ಇತಿಹಾಸ ನಿರ್ಮಾಣ, ಈ ಇತಿಹಾಸ ನಿರ್ಮಿತಿಗೆ ತಾವೆಲ್ಲ ಕಾರಣರಾಗುತ್ತೆವಲ್ಲ ಎಂಬ ಪುಳಕ ನಮ್ಮೊಳಗೆ. ತುದಿಗಾಲ ಮೇಲೆ ನಿಂತಿತ್ತು ಇಡೀ ಸಭಾಂಗಣ. ಎವೆಯನ್ನೂ ಅಲಿಗಸದೆ ಕಾಯ್ದಿದರು. ಅವರ ಬರುವಿಕೆಗಾಗಿ ಇಡೀ ಕಲಾಭಿಮಾನಿಗಳು. ಎನಗೋಲಿಯೊ ಬಸವ ಸಂಗನ ಬಸವ ಎನಗೊಲಿಯೋ. ಭಸಿತ ರುದ್ರಾಕ್ಷಿಯ, ಕೊರಳಲಿ ಧರಿಸಿರುವ, ಸಂಗಮನಾಥನ ಸ್ವರೂಪವೇ ಬಸವ, ಬಸವ ಎನಗೊಲಿಯೋ ಎಂದು ಹಾಡು ಹಾಡುತ್ತಾ. ಸಭಾಂಗಣದಲ್ಲಿದ್ದ ಅಷ್ಟೋ ರಂಗಪ್ರಿಯರೂ ಎದ್ದು ನಿಂತು ಬಾಳಪ್ಪನವರಿಗೆ ಗೌರವ ಸೂಚಿಸಿತು. ಮಧುರ ಕಂಠ, ನಲುಗದ ಧನಿ, ಕುಗ್ಗದ ದೇಹ, ಮಾಸದ ಅಭಿನಯ ಚಾತುರ್ಯ... ಮಂತ್ರಮುಗ್ಧಗೊಳಿಸಿತು. ಶರಣು ಎಂದಿತು ಪ್ರೇಕ್ಷಕ ವರ್ಗ... ಇನ್ನೂ ನೂರ್ಕಾಲ 'ಬಾಳಪ್ಪ' ಎಂದು ಹರಸಿತು ರಂಗದೇವತೆ. ಬಸವರಸದಲ್ಲಿ ಮಿಂದರು ಸಹೃದಯರು. ನಾಟಕ ಮುಗಿಯಿತು. ಮುತ್ತಿಕೊಂಡರು ಅಭಿಮಾನಿಗಳು. ಕೆಲವರು ಕಾಲಿಗೆ ಬಿದ್ದರು, ಕೆಲವರು ಕೈಕುಲುಕಿದರು. ಜೊತೆಗೆ ಕೆಲವರು, ಫೋಟೊ ತೆಗೆಸಿಕೊಳ್ಳಲು ತವಕಿಸಿದರು. ಎಲ್ಲರೊಡನೆಯೂ ಸಾವಕಾಶವಾಗಿ ಬೆರೆತರು. ದಣಿವು ಎನ್ನಲಿಲ್ಲ ವಿರಾಮ ಬಯಸಲಿಲ್ಲ. ಕುಗ್ಗದ ಚೈತನ್ಯ. ಇನ್ನೂ ನೂರು ನಾಟಕ ಮಾಡೇನು... ಸಾವಿರ ಹಾಡೇನು ಎಂಬ ಉಕ್ಕುವ ಉತ್ಸಾಹ ಬಾಳಪ್ಪನವರಲ್ಲಿ, ಪುನೀತವಾದೆವು ನಾವು.

10-02-2009ರಂದು ಸಂಜೆ ರಂಗ ಸಮ್ಮೇಳನದ ಸಮಾರೋಪ. ಅಂದು ಬಾಳಪ್ಪನವರಿಂದ ರಂಗಗೀತೆ ಕಾರ್ಯಕ್ರಮ. ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ರಂಗಗೀತೆಗಳನ್ನು ಹಾಡಿದರು. ಟಿಪ್ಪು ಸುಲ್ತಾನ, ಕಿತ್ತೂರು ಚನ್ನಮ್ಮ, ಕುರುಕ್ಷೇತ್ರ, ಬಸವೇಶ್ವರ, ಭಕ್ತ ಗೋರಕುಂಬಾರ ಹಾಗೂ ಇನ್ನೂ ಮುಂತಾದ ನಾಟಕಗಳ

ಹಾಡುಗಳನ್ನು ಹಾಡಿದರು. ಕೊನೆಗೆ ಅಭಿಮಾನಿಗಳ ಒತ್ತಾಯದ ಮೇರೆಗೆ ಜೋಳನರಾಶಿ ದೊಡ್ಡನಗೌಡರು ಕಲಾವಿದರ ಬಗ್ಗೆ ಬರೆದಿರುವ ಗೀತೆಯನ್ನು ಹಾಡಿದರು–

ಹೋಗಿ ಬರ್ತೀನ್ರಯ್ಯ ನಮ್ಮೂರಿಗೆ
ಎಲ್ಲರಿಗೂ ಶರಣಾರ್ತಿ
ದಯದೋರಿ ಕಳುಹಿಸಿರಿ
ಏನೋ ಕಾಲದಿಂದ ಊರೂರು ತಿರುಗುತ
ನಿಮ್ಮೂರಿಗೆ ಬಂದೆ ಕಲಾವಿದನಾಗಿ
ಹಿಂದಿಲ್ಲ ಮುಂದಿಲ್ಲ
ನಾ ತಂದದ್ದು ಏನಿಲ್ಲ
ಎಲ್ಲಾ ನೀವೆ ನೀಡಿ ನೆರವಾದಿರಿ ನಮಗೆ
ಹೋಗಿ ಬರ್ತೀನ್ರಯ್ಯ.....

ಚಪ್ಪಾಳೆಗಳ ಸುರಿಮಳೆ. ಮಂತ್ರ ಮುಗ್ಧಗೊಳಿಸುವ, ಗಾನ ಲೋಕಕ್ಕೆ ಕೊಂಡೊಯ್ದ ಅಪರೂಪದ ರಂಗಗೀತೆಗಳನ್ನು ಹಾಡಿದ ಕಲಾವಿದನಿಗೆ ಸಹೃದಯರು ಎದ್ದು ನಿಂತು ಗೌರವ ತೋರಿತು. ರಂಗ ಸಮ್ಮೇಳನ ಅದ್ದೂರಿಯಾಗಿ ಜರುಗಿತು. ಬಾಳಪ್ಪನವರ ಅಮೋಘ ಹಾಡುಗಾರಿಕೆಯಿಂದ ಸಕೃತಗೊಂಡಿತು.

ಕರ್ನಾಟಕ ರಂಗ ಜಾಗೃತಿ ಪರಿಷತ್ತು ಮತ್ತು ಕರ್ನಾಟಕ ರಂಗ ತಂಡಗಳ ಒಕ್ಕೂಟವು 2013ರ ಜನವರಿ ಮತ್ತು ಫೆಬ್ರವರಿಯಲ್ಲಿ ಏಣಗಿ ಬಾಳಪ್ಪ 100, ರವೀಂದ್ರ ಕಲಾಕ್ಷೇತ್ರ 40, ಸಂಸ 40ರ ಸಂಭ್ರಮದ ಆಚರಣೆಗಾಗಿ 'ರಂಗ ಭಂಡಾರ' ಉತ್ಸವವನ್ನು 21 ದಿನಗಳ ಕಾಲ ಹಮ್ಮಿಕೊಂಡೆವು. ಆ ಸಂದರ್ಭದಲ್ಲಿ ಡಾ॥ ಏಣಗಿ ಬಾಳಪ್ಪನವರಿಗೆ ಬರೋಬರಿ 100ರ ಹರೆಯ. ಡಾ॥ ಚಂದ್ರಶೇಖರ ಕಂಬಾರ ಘನ ಅಧ್ಯಕ್ಷತೆಯಲ್ಲಿ ಅಭೂತಪೂರ್ವವಾಗಿ ನಡೆದ ರಂಗೋತ್ಸವ, ಆ ಸಂದರ್ಭಕ್ಕೆ ಬಾಳಪ್ಪನವರು ಬರುತ್ತಾರೊ ಇಲ್ಲವೋ ಎಂಬ ಆತಂಕ ಬಾಳಪ್ಪನವರಿಗೆ 'ರಂಗ ಭಂಡಾರಿ' ಬಿರುದು ನೀಡುವ ಮಹೋದ್ದೇಶ ನಮ್ಮದಾಗಿತ್ತು. ಅವರೂ ಒಪ್ಪಿದ್ದರು. ಆದರೆ ಕಾರ್ಯಕ್ರಮಕ್ಕೆ ಒಂದೆರಡು ದಿನ ಹಿಂದೆ ಅವರಿಗೆ ಆರೋಗ್ಯ ಕೈಕೊಟ್ಟಿತ್ತು. ಕಾರ್ಯಕ್ರಮದ ದಿನವೂ ಅವರಿಗೆ ಆರೋಗ್ಯ ಸರಿ ಇಲ್ಲ ಎಂಬ ಸುದ್ದಿ. ಆದರೆ ಆ ಜ್ವರದ ತಾಪದಲ್ಲೂ ಬಾಳಪ್ಪನವರು ಬಂದರು. ಕಾರ್ಯಕ್ರಮ ಮುಗಿಯುವವರಿಗೂ ಕುಳಿತರು, ಮಾತನಾಡಿದರು, ಹಾಡಿದರು – ಅಭಿಮಾನಿಗಳ ಜೊತೆ ಫೋಟೋ ತೆಗೆಸಿಕೊಂಡರು. ನಾವು ಕೂಡ ಮಾಡಲು ಬಯಸಿದ್ದ 'ರಂಗಭಂಡಾರಿ' ಬಿರುದನ್ನು ಸ್ವೀಕರಿಸಿದರು.

ನಮ್ಮನ್ನು ಬಹಳ ಆತ್ಮೀಯವಾಗಿ ನೋಡಿದರು, ನಮ್ಮ ಹುಡುಗರ ಗುಂಪನ್ನು ಹರಸಿದರು. ಆ ನೋಟದಲ್ಲೊಂದು ಪುನೀತ ಭಾವವಿತ್ತು. ಆ ಸ್ಪರ್ಶದಲ್ಲೊಂದು ಸಂತಸ ಇತ್ತು. ಆ ಮೌನದೊಳಗೆ ಮಾಗಲಾರದ ಎಲ್ಲವೂ ಇತ್ತು.

■



# ಬಾಳಪ್ಪ ಎಂಬ ಸವ್ಯಸಾಚಿ

● ಡಾ. ಬಸವರಾಜ ಜಗಜಂಪಿ

ಸ್ತ್ರೀ ಹಾಗೂ ಪುರುಷ ಪಾತ್ರಗಳ ನಿರ್ವಹಣೆಗೆ ಅಗತ್ಯವಾಗಿದ್ದ ಅಭಿನಯ ಕೌಶಲ ಹಾಗೂ ಮೈಕಟ್ಟನ್ನು ಹೊಂದಿದ್ದು ಬಾಳಪ್ಪನವರ ಯಶಸ್ಸಿನ ಗುಟ್ಟು.

**ಬಾ**ಳಪ್ಪನವರು ಕನ್ನಡ ವೃತ್ತಿ ರಂಗಭೂಮಿ ಕಂಡ ಕೆಲವೇ ಅಪರೂಪದ ಕಲಾವಿದರಲ್ಲಿ ಒಬ್ಬರು. ಅಭಿನಯದ ಸೂಕ್ಷ್ಮ ತಂತ್ರಗಳನ್ನೆಲ್ಲ ಕರಗತ ಮಾಡಿಕೊಂಡ ಶ್ರೇಯಸ್ಸು ಅವರದು. ಸಾಹಿತ್ಯ ಹಾಗೂ ಅಭಿನಯದ ಅರಿವಿಲ್ಲದೆ 'ನಟ' ಎನಿಸಿಕೊಂಡ ಕಲಾವಿದರು ನಮ್ಮಲ್ಲಿ ಬೇಕಾದಷ್ಟಿದ್ದಾರೆ. ಆದರೆ ಬಾಳಪ್ಪನವರು ತಮ್ಮ ಸ್ಫುರದ್ರೂಪ, ಪ್ರಮಾಣಬದ್ಧ ಮೈಕಟ್ಟು ಹಾಗೂ ಕಂಠಶ್ರೀಗೆ ಕಳಸವಿಟ್ಟಂತೆ ಅಭಿಜಾತ ಅಭಿನಯ ಕಲೆಯಿಂದ ವೃತ್ತಿ ರಂಗದಲ್ಲಿ ಭದ್ರವಾದ ಸ್ಥಾನ ಪಡದುಕೊಂಡವರು. ವೃತ್ತಿ ರಂಗಭೂಮಿಯ ಬಹುತೇಕ ಕಲಾವಿದರು ಎಲ್ಲ ಹಿರಿಯ ಪಾತ್ರಗಳಿಗೆ ಹೊಂದಿಕೊಳ್ಳುವ ಮೈಕಟ್ಟನ್ನು ಪಡೆದಿರುವುದಿಲ್ಲ. ಅವರ ಅಭಿನಯದಲ್ಲಿ ಸಹಜತೆಯೂ ಇರುವುದಿಲ್ಲ. ಸ್ತ್ರೀ ಹಾಗೂ ಪುರುಷ ಪಾತ್ರಗಳ ನಿರ್ವಹಣೆಗೆ ಅಗತ್ಯವಾಗಿದ್ದ

ಅಭಿನಯ ಕೌಶಲ ಹಾಗೂ ಮೈಕಟ್ಟನ್ನು ಹೊಂದಿದ್ದು ಬಾಳಪ್ಪನವರ ಯಶಸ್ಸಿನ ಗುಟ್ಟು. ಅಂತೆಯೇ ಅವರೊಬ್ಬ ಸವ್ಯಸಾಚಿ. ಸಾಹಿತ್ಯ ಹಾಗೂ ಅಭಿನಯಗಳ ಹದವಾದ ಬೆರಕೆಯಿಂದ ರಂಗ ಸಂಗೀತಕ್ಕೆ ಮಿತಿ ಹೇರಿ, ವೃತ್ತಿರಂಗದಲ್ಲಿ ಹೊಸ ಹಾದಿ ತುಳಿದ ಬಾಳಪ್ಪನವರು ಅಪರೂಪದ ಯಶಸ್ಸು ಪಡೆದರು. ರಂಗಋುಷಿ ಗರುಡ ಸದಾಶಿವರಾಯರ ಗದ್ಯಾಭಿನಯ ಪರಂಪರೆಯನ್ನು ಮುಂದುವರಿಸಿದ ಕೀರ್ತಿಗೂ ಪಾತ್ರರಾದರು.

ಬಯಲಾಟದ ಪಾತ್ರದಿಂದ ಆರಂಭಗೊಂಡ ಬಾಳಪ್ಪನವರ ರಂಗಯಾತ್ರೆ ವೃತ್ತಿ ರಂಗದ ಶಿಖರ ತಲುಪಿದ ಕಥೆ ಬೆರಗಿನದು. ನೂರರ ತುಂಬು ಪ್ರಾಯದಲ್ಲೂ ಅವರು ಉತ್ಸಾಹದ ಬುಗ್ಗೆ. ಅವರ ರಂಗಾನುಭವ ಕೊರತೆಗಾಣದ ಒರತೆ. ಯಾರೆಷ್ಟು ಮೊಗೆದರೂ ತೀರದ ಅಕ್ಷಯಪಾತ್ರೆ. ಎರಡು ಶತಮಾನಗಳ ಕೊಂಡಿಯಾಗಿ ಕನ್ನಡ ವೃತ್ತಿ ರಂಗವನ್ನು ಸಮರ್ಥವಾಗಿ ಮುನ್ನಡೆಸಿದ ಬಾಳಪ್ಪನವರು ಅಭಿನಯ ಸಂಗೀತಗಳಲ್ಲಿ ಸವ್ಯಸಾಚಿ. ಅವರ ಸಾಧನೆ ಬಣ್ಣದ ಬದುಕಿನವರಿಗೆ ಮಾದರಿ. ರಂಗ ಸಂಸಾರದಂತೆ ಲೌಕಿಕ ಸಂಸಾರದಲ್ಲೂ ಅವರು ಯಶಸ್ವಿ. ರಂಗಚರಿತ್ರೆಯನ್ನು ರಕ್ತಗತವಾಗಿಸಿಕೊಂಡ ಬಾಳಪ್ಪ ನವರು 'ಚಲಿಸುವ ರಂಗಕೋಶ'.

ಕನ್ನಡ ನಾಡಿನ ಸಾಹಿತ್ಯ, ಸಂಗೀತ, ಸಂಸ್ಕೃತಿ ಹಾಗೂ ಅಭಿನಯ ಕಲೆಗಳನ್ನು ನಾಟಕ ಕಂಪನಿ ಮೂಲಕ ಪ್ರಸಾರಗೊಳಿಸಿದ ಬಾಳಪ್ಪನವರು 350 ಪ್ರಸಿದ್ಧ ರಂಗಗೀತೆಗಳನ್ನು ಧ್ವನಿಸುರುಳಿ ಸಿದ್ಧಪಡಿಸಿ ರಕ್ಷಿಸಿದ್ದಾರೆ.

■

> **ಬಾಳಪ್ಪನವರು ಆಯಾ ಕಾಲದ ಸನ್ನಿವೇಶಗಳ ಮೇಲೆ ಪ್ರಭಾವ ಬೀರಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭ ದಲ್ಲಿ 'ಕಿತ್ತೂರು ಚನ್ನಮ್ಮ' ಮತ್ತು 'ಚಲೇಜಾವ್', ಕರ್ನಾಟಕ ಏಕೀಕರಣ ಹೋರಾಟದಲ್ಲಿ 'ಏಕೀಕರಣ' ನಾಟಕ ಆಡಿದ್ದಾರೆ.**
>
> *(ಏಣಗಿ ಬಾಳಪ್ಪ ನೆನಪುಗಳಿಂದ...)*



# ನೂರು ವರುಷ ನೂರಾರು ಚಿತ್ರ

● *ಬಸವರಾಜ ಹೊಂಗಲ್*

ವಿದೇಶಿ ಮಹಿಳೆಯೊಬ್ಬಳು ಗ್ರೀನ್ ರೂಮಿನತ್ತ ಧಾವಿಸಿ ಓಡಿ ಬಂದು ಆ ನಟನನ್ನು ಜೋರಾಗಿ ತಬ್ಬಿಕೊಂಡು... ಕಾಲಿಗೆ ಹಣೆ ಹಚ್ಚಿ ನಮಸ್ಕರಿಸಿ... ಗಳ ಗಳನೇ ಅತ್ತುಬಿಟ್ಟಳು.

ಅದು 1957ನೇ ಇಸ್ವಿ. ಬೈಲಹೊಂಗಲ ತಾಲೂಕಿನ ಹಳ್ಳಿಯೊಂದರಲ್ಲಿ ನಾಟಕ ಪ್ರದರ್ಶನ. ನಾಟಕದುದ್ದಕ್ಕೂ ಜನರು ಶಿಳ್ಳೆ ಚಪ್ಪಾಳೆ ಯಾವುದೂ ಇಲ್ಲದೇ ದಿವ್ಯ ಮೌನದಿಂದ ಮಂತ್ರಮುಗ್ಧರಾಗಿ ಶುದ್ಧವಾದ ಕಂಠಸಿರಿಯಲ್ಲಿ ಬರುತ್ತಿದ್ದ ನುಡಿ ಮುತ್ತುಗಳನ್ನು ಕೇಳಿ ಆನಂದಿಸಿದ್ದಾಯಿತು. ನಾಟಕ ಮುಗಿಯುವ ಮುಂಚೆಯೇ ಆ ನಟನ ದಾರಿ ಕಾಯುತ್ತ ನಿಂತಿದ್ದರು ಪ್ರೇಕ್ಷಕರು. ಆಟೋಗ್ರಾಫ್‌ಗಾಗಿ ಅಲ್ಲ. ಬದಲಿಗೆ ಆ ನಟನ ಕಾಲಿಗೆ ನಮಸ್ಕರಿಸಲು.

ಹಾಗೇನೇ, 2007ನೇ ಇಸ್ವಿ, ಬೆಂಗಳೂರಿನ ರಂಗಶಂಕರದಲ್ಲಿ ಒಂದೇ ವೇದಿಕೆಯಲ್ಲಿ ಒಂದೇ ಕುಟುಂಬದ ಮೂರು ತಲೆಮಾರು. ಅಜ್ಜ, ಮಗ ಮತ್ತು ಮೊಮ್ಮಗ ನಟಿಸಿದ ಅದೇ ನಾಟಕ. ನಾಟಕ ಮುಗಿಯುತ್ತಿದ್ದಂತೆ ವಿದೇಶಿ ಮಹಿಳೆ

ಯೊಬ್ಬಳು ಗ್ರೀನ್ ರೂಮಿನತ್ತ ಧಾವಿಸಿ ಓಡಿ ಬಂದು ಆ ನಟನನ್ನು ಜೋರಾಗಿ ತಬ್ಬಿಕೊಂಡು... ಕಾಲಿಗೆ ಹಣೆ ಹಚ್ಚಿ ನಮಸ್ಕರಿಸಿ... ಗಳ ಗಳನೇ ಅತ್ತುಬಿಟ್ಟಳು.

ಈ ಎರಡೂ ಘಟನೆಗಳ ಮಧ್ಯೆ ಬರೊಬ್ಬರಿ ಅರ್ಧಶತಮಾನದ ಅಂತರವಿದ್ದರೂ ಏಣಗಿ ಬಾಳಪ್ಪರ ಮತ್ತು ಪ್ರೇಕ್ಷಕರ ಅಭಿಮಾನಕ್ಕೆ ಒಂದಿಷ್ಟು ಧಕ್ಕೆಯಾಗಿರಲಿಲ್ಲ. ಅಂತಹ ಮಹಾನ್ ನಟ ಬಾಳಪ್ಪನವರು.

ಹೌದು. ಕರ್ನಾಟಕ ಮತ್ತು ಮಹಾರಾಷ್ಟ್ರದ ದಕ್ಷಿಣದ ಜಿಲ್ಲೆಗಳಲ್ಲಿನ ಮನೆಮನೆಯಲ್ಲೂ ಏಣಗಿ ಬಾಳಪ್ಪನವರ ಅಭಿಮಾನಿಗಳಿದ್ದಾರೆ. ಒಂದು ಕಾಲಕ್ಕೆ ಸ್ಟಾರ್ ಸಿನಿಮಾ ನಟರಿಗಿಂತಲೂ ಹೆಚ್ಚು ವರ್ಚಸ್ಸು ಹೊಂದಿದ್ದ ಬಾಳಪ್ಪನವರು ತಮ್ಮ ಸದ್ಗುಣಗಳಿಂದಲೇ ಜನಮಾನಸದಲ್ಲಿ ಹಾಸುಹೊಕ್ಕಾಗಿದ್ದಾರೆ. 50ರಿಂದ 70ರ ದಶಕದವರೆಗೂ ಅವರು ಅಭಿನಯಿಸಿದ ಜಗಜ್ಯೋತಿ ಬಸವೇಶ್ವರ ನಾಟಕದಿಂದಾಗಿ ಅವರು ಜನರಿಂದಲೇ ಅಭಿನವ ಅಣ್ಣ ಬಸವಣ್ಣ ಎಂದೇ ಕರೆಸಿಕೊಂಡರು. ಹಳೇ ತಲೆಗಳನ್ನು ಈಗಲೂ ಕೇಳಿದರೆ ಏಣಗಿ ಬಾಳಪ್ಪನವರ ಮೂಲಕ ಬಸವೇಶ್ವರ ದರ್ಶನ ಆಯಿತು ಎನ್ನುತ್ತಾರೆ ಭಕ್ತಿಯಿಂದ.

ಈ ಜಗಜ್ಯೋತಿ ಬಸವೇಶ್ವರ ಸಾವಿರಾರು ಶೋಗಳಾಗಿವೆ. ಬಾಳಪ್ಪನವರ ಬದುಕಿನ ಪುಟಗಳು ಕಲರ್‌ಫುಲ್. ಕಡಿಮೆ ಎಂದರೂ ಜೀವನದಲ್ಲಿ 50 ಸಾವಿರಕ್ಕೂ ಹೆಚ್ಚು ಪ್ರದರ್ಶನಗಳು ನೀಡಿದ್ದಾರೆ. ಅಂದರೆ ಅಷ್ಟು ಸಾವಿರ ಸಲ ಬಣ್ಣಬಳಿದುಕೊಂಡ ಹೆಗ್ಗಳಿಕೆ.

ಹುಟ್ಟಿದಾಗಿನಿಂದಲೂ ರಂಗಭೂಮಿಯಲ್ಲೇ ಬದುಕು ಕಟ್ಟಿಕೊಂಡ ಬಾಳಪ್ಪನವರಿಗೆ ಸಿನಿಮಾ ಕ್ಷೇತ್ರದ ಬಗ್ಗೆ ಆಸಕ್ತಿ ಕಡಿಮೆ. ಹೀಗಾಗಿ ವರನಟ ಡಾ॥ ರಾಜ್‌ಕುಮಾರ್ ಆದಿಯಾಗಿ ಅನೇಕರು ಅವರನ್ನ ಸಿನಿಮಾ ರಂಗಕ್ಕೆ ಕರೆದರೂ ಅವರು ಅತ್ತ ಸುಳಿಯಲಿಲ್ಲ. ಅನೇಕ ಚಲನಚಿತ್ರಗಳಲ್ಲಿ ಅಭಿನಯಿಸಲು ಅವರಿಗೆ ಅವಕಾಶಗಳು ಬಂದಾಗಲೂ ಅವುಗಳನ್ನು ನಯವಾಗಿ ತಿರಸ್ಕರಿಸಿದರು. ಆದರೆ ಸಿನಿಮಾ ರಂಗದಲ್ಲಿ ಅವಕಾಶ ಸಿಕ್ಕದೇ ಹೊಟ್ಟೆ ಪಾಡಿಗಾಗಿ ಪರಿಪಾಟಲು ಪಡುತ್ತಿದ್ದ ನೂರಾರು ಸಿನಿಮಾ ಕಲಾವಿದರನ್ನು ತಮ್ಮ ಕಂಪನಿಯಲ್ಲಿ ಇರಿಸಿಕೊಂಡು ಅವರಿಗೆ ಅನ್ನ ಹಾಕಿದರು. ವರನಟ ಡಾ॥ ರಾಜ್‌ಕುಮಾರ್ ಅವರು ಏಣಗಿ ಬಾಳಪ್ಪನವರ ಬಸವೇಶ್ವರ ನಾಟಕದ ಅಭಿನಯ ಕಂಡು ತಲೆದೂಗಿದ್ದರು. ಗುಬ್ಬಿ ವೀರಣ್ಣನವರು ಶಹಭಾಷಗಿರಿ ಕೊಟ್ಟಿದ್ದರು. ಹೀಗಾಗಿ ಕನ್ನಡದಲ್ಲಿನ ಅನೇಕ ಮಹಾನ್ ನಟರೆನಿಸಿಕೊಂಡವರು ಬಾಳಪ್ಪನವರನ್ನು ಇಂದಿಗೂ ಸ್ಮರಿಸುತ್ತಾರೆ.

### ಕನ್ನಡ ಕಟ್ಟಿದ ಕಲಾವಿದ

1930ರ ನೆನಪು ಬಾಳಪ್ಪರ ತಲೆಯಲ್ಲಿ ಇನ್ನೂ ಹಸಿರಾಗಿದೆ. ಕಿತ್ತೂರು ಚೆನ್ನಮ್ಮ ನಾಟಕವನ್ನು ಪ್ರದರ್ಶನ ಮಾಡಬೇಕು. ಆದರೆ ಅಂದಿನ ಬ್ರಿಟಿಷ್ ಸರ್ಕಾರ ಬಾಳಪ್ಪನವರಿಗೆ ಅನುಮತಿ ನೀಡಲೇ ಇಲ್ಲ. ಅಬ್ಬಿಗೇರಿ ಕಂಪನಿಗೆ ಬ್ರಿಟಿಷರಿಂದ ಎಚ್ಚರಿಕೆ ಬಂತು. ನಾಟಕವನ್ನು ಎಲ್ಲೆಂದರಲ್ಲಿ ಪ್ರದರ್ಶನ ಮಾಡುವುದನ್ನು ನಿಲ್ಲಿಸುವ ಸ್ಥಿತಿ ಎದುರಾಯಿತು.

ಬಾಳಪ್ಪನವರು ನಾಟಕದಲ್ಲಿ ಪಾತ್ರಧಾರಿಯಾಗಿದ್ದರು. ಭಾಗೀರಥಿ ಬಾಯಿ ಅವರು ಚೆನ್ನಮ್ಮನ ಪಾತ್ರ ಮಾಡುತ್ತಿದ್ದರು. ಬ್ರಿಟಿಷ್ ಸರ್ಕಾರ ನಾಟಕದ ಬಗ್ಗೆ ಕ್ಯಾತೆ ತೆಗೆದಿದ್ದರಿಂದ ದೇಶೀಯ ಸಂಸ್ಥಾನಗಳಲ್ಲಿ ಈ ನಾಟಕವನ್ನು ಪ್ರದರ್ಶನ ಮಾಡಲಾರಂಭಿಸಿದರು.

ಮೈಸೂರು, ಕೊಲ್ಲಾಪುರ, ಜಮಖಂಡಿ, ಸವಣೂರು ಹೀಗೆ ಅನೇಕ ರಾಜ ಮಹಾರಾಜರ ಆಸ್ಥಾನದಲ್ಲಿ ಚೆನ್ನಮ್ಮ ನಾಟಕ ಪ್ರದರ್ಶನಗೊಂಡಿತು. ಮೈಸೂರಿನ ಕೃಷ್ಣರಾಜ ಒಡೆಯರ್ ಅವರ ಎದುರು ಈ ನಾಟಕ ಪ್ರದರ್ಶನಗೊಂಡಾಗ, ಇದನ್ನು ಮೆಚ್ಚಿಕೊಂಡು ಅವರು ತಮ್ಮ ರಾಜಪೋಷಾಕುಗಳು ಮತ್ತು ಅರಮನೆಯಲ್ಲಿನ ಕೆಲವು ಬಟ್ಟೆ ಮತ್ತು ಪರಿಕರಗಳನ್ನು ಕಂಪನಿಗೆ ದಾನವಾಗಿ ನೀಡಿದರಂತೆ. ಇದನ್ನು ಮೆಚ್ಚಿಕೊಂಡ ಕಂಪನಿ ಅವರ ಬಗ್ಗೆಯೇ ಧನ್ಯ... ಧನ್ಯ... ಕುವರ... ಧನ್ಯ ಚಾಮರಾಜ ಕುವರ... ಎನ್ನುವ ಹಾಡನ್ನು ಹಾಡಿ ಅವರಿಗೆ ಕೃತಜ್ಞತೆ ಸಲ್ಲಿಸಿತು. ಈ ಹಾಡನ್ನು ಚೆನ್ನಮ್ಮ ನಾಟಕದ ಪಾತ್ರಧಾರಿಯಾಗಿದ್ದ ಏಣಗಿ ಬಾಳಪ್ಪನವರೇ ಹಾಡುತ್ತಿದ್ದರು. ಅದೇ ಹಾಡು ಇಂದಿಗೂ ಅವರ ಬಾಯಲ್ಲಿ ಗುನುಗುತ್ತಿದೆ.

ಇನ್ನು ಬೆಳಗಾವಿಯಂತಹ ಮರಾಠಿ ಭಾಷಿಕರ ಪ್ರಭಾವ ಇರುವೆಡೆಯಲ್ಲಿ ಕರ್ನಾಟಕ ಕಲಾವೈಭವ ನಾಟ್ಯಸಂಘ ಕಟ್ಟಿಕೊಂಡು ಅದೇ ಫಲಕಗಳನ್ನು ಮಹಾರಾಷ್ಟ್ರದ ಹಳ್ಳಿ ಹಳ್ಳಿಗಳಲ್ಲಿ ಹಾಕಿಕೊಂಡು ಪ್ರೇಕ್ಷಕರಿಗೆ ರಂಗ ಸಿರಿ ಉಣಬಡಿಸಿದ ಕೀರ್ತಿ ಬಾಳಪ್ಪನವರಿಗೆ ಸಲ್ಲುತ್ತದೆ. ಗಡಿನಾಡಿನಲ್ಲಿ ಕನ್ನಡ ನೆಲಕಚ್ಚುವಾಗ ಕನ್ನಡ ನಾಟಕಗಳನ್ನೇ ಪ್ರದರ್ಶಿಸಿದ್ದು ಬಾಳಪ್ಪನವರ ಕನ್ನಡ ಪ್ರೇಮಕ್ಕೆ ಹಿಡಿದ ಕನ್ನಡಿ. ಕೊಲ್ಹಾಪುರದಲ್ಲಿ 1947ರ ಸಂದರ್ಭದಲ್ಲಿ ಕುಂಕುಮ ಎನ್ನುವ ಸಾಮಾಜಿಕ ನಾಟಕ ಎಲ್ಲರನ್ನು ಬೆಚ್ಚಿಬೀಳಿಸಿತು. ವಿಧವಾಪುನರ್ ವಿವಾಹ ನಾಟಕದ ವಸ್ತುವಾಗಿತ್ತು. ಜೊತೆಗೆ ಗಾಂಧೀಜಿಯ ಚಿಂತನೆಗಳನ್ನು ಇದಕ್ಕೆ ಸೇರಿಸಿ ನಾಟಕ ಮಾಡಿದ್ದರಿಂದ ಜನಮನ್ನಣೆ ಗಳಿಸಿತು.

### ದ್ವಿ ಪಾತ್ರ!

ಬಾಳಪ್ಪನವರ ವಿಶೇಷತೆ ಎಂದರೆ ಇವರು ಗಂಡು ಮತ್ತು ಹೆಣ್ಣು ಪಾತ್ರಧಾರಿ ಗಳಾಗಿದ್ದು. ರಾಮಾಯಣದಲ್ಲಿ ರಾಮ, ಮಹಾಭಾರತದಲ್ಲಿ ಕೃಷ್ಣ ಹರಿಶ್ಚಂದ್ರ ಪಾತ್ರಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದರು. ಅದೇ ರೀತಿ ಸೀತೆ, ದ್ರೌಪದಿ, ತಾರಾಮತಿ ಪಾತ್ರಗಳನ್ನು ಅಷ್ಟೇ ಲೀಲಾಜಾಲವಾಗಿ ಮಾಡಿ ಚಪ್ಪಾಳೆ ಗಿಟ್ಟಿಸುತ್ತಿದ್ದರು. ಇದು ಬಾಳಪ್ಪನವರ ಅಪ್ರತಿಮ ನಟನೆಗೆ ಸಾಕ್ಷಿ.

ಇಂದಿನ ಸಿನಿಮಾ ರಂಗ ಮತ್ತು ಕಿರುತೆರೆಯಿಂದ ನಾನು ಕಲಿಯುವುದು ಬಹಳಷ್ಟಿತ್ತು. ಆದರೆ ನಾನೀಗ ಅಭಿನಯಿಸುವಂತಿಲ್ಲ, ಟಿ.ವಿ. ಮತ್ತು ಸಿನಿಮಾಗಳು ಸಮೂಹ ಮಾಧ್ಯಮಗಳು. ಜನಮಾನಸವನ್ನು ಒಂದೇ ಸಮಯಕ್ಕೆ ತಲುಪಬಲ್ಲ ಶಕ್ತಿ ಅವುಗಳಿಗೆ ಇರುವುದರಿಂದಾಗಿ ಅವುಗಳ ಪ್ರಭಾವ ಸಹಜವಾಗಿಯೇ ನಾಟಕಕ್ಕಿಂತ ಹೆಚ್ಚು. ಆದರೆ

ನಾಟಕದ ಜೀವಂತಿಕೆ ಅವುಗಳಲ್ಲಿ ಇರಲಾರದು. ಹೀಗಾಗಿ ನನಗೆ ರಂಗಭೂಮಿಯೇ ಶ್ರೇಷ್ಠ ಎನಿಸಿತ್ತು ಎನ್ನುತ್ತಾರೆ ಬಾಳಪ್ಪ.

ಸಮಕಾಲಿನ ರಂಗಭೂಮಿಯಲ್ಲಿ ಅನೇಕ ವಿನೂತನ ಮಾರ್ಪಾಟುಗಳು ಬಂದಿವೆ. ಮೊದಲು ಇದ್ದಿದ್ದು ಬರೀ ವೃತ್ತಿ ರಂಗಭೂಮಿ. ಆದರೆ ಇದೀಗ ಹವ್ಯಾಸಿ ರಂಗಭೂಮಿ ಬೆಳೆದು ನಿಂತಿದೆ. ಆಧುನಿಕ ರಂಗಭೂಮಿ ಶಿಸ್ತು ಮತ್ತು ಸಂವೇದನಾಶೀಲತೆ ರೂಢಿಸಿ ಕೊಂಡಿದೆ. ರಂಗಕಲಾವಿದರೂ ಮೊದಲು ಅಭಿನಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರು, ಅಭಿನಯ ಪ್ರಧಾನ ಮತ್ತು ಸಂಗೀತ ಪ್ರಧಾನ ನಾಟಕಗಳು ಅಂದು ಹೆಚ್ಚು ಜನಪ್ರಿಯವಾಗಿದ್ದವು. ಆದರೆ ಇಂದು ಅವುಗಳ ಪ್ರಾಶಸ್ತ್ಯ ಕಡಿಮೆಯಾಗಿದೆ. ಅಂತಹ ಕಲಾ ಪ್ರಕಾರಗಳನ್ನು ಕನ್ನಡ ರಂಗಭೂಮಿ ಮತ್ತೆ ರೂಢಿಸಿಕೊಳ್ಳಬೇಕಿದೆ ಎಂದೂ ಹೇಳುತ್ತಾರೆ ಬಾಳಪ್ಪನವರು.

*(ಕೃಪೆ : ಉದಯವಾಣಿ, ದಿನಾಂಕ : 26-09-2013)*

■

**ಬಾಳಪ್ಪನವರು ತಮ್ಮ ನಾಟಕ ಕಂಪನಿಯ ಮೇಲೆ 'ಬೆಳಗಾವಿ-ಕರ್ನಾಟಕ' ಎಂದು ಬರೆಸಿದ್ದು ಮರಾಠಿಗರ ಕೆಂಗಣ್ಣಿಗೆ ಗುರಿಯಾಗಿತ್ತು. ಏನೇ ಬೆದರಿಕೆ ಬಂದರೂ ಜಗ್ಗದೇ ಕನ್ನಡತನ ಮೆರೆದರು. ಮಹಾಜನ್ ಕಮಿಟಿ ಮುಂದೆ ಹಾಜರಾಗಿ ಬೆಳಗಾವಿ ಕರ್ನಾಟಕದ್ದು ಎಂದು ಪ್ರತಿಪಾದಿಸಿದರು.**

*(ಏಣಗಿ ಬಾಳಪ್ಪ ನೆನಪುಗಳಿಂದ...)*



# ಸೋಲೊಪ್ಪದ ಛಲಗಾರ

● ಎಚ್ಚೆಸ್ಕೆ

> ಹಿಂದಿನ ದಿನ ಆ ಪಾತ್ರ ಮಾಡಿದ 'ಹೆಂಗಸೇ' ಬರಬೇಕೆಂದು ಕೂಗಿದಾಗ ಬಾಳಪ್ಪ ಮತ್ತೆ ಬಾಳಮ್ಮ!

ಇನ್ನೂ ಹದಿವಯಸ್ಸಿನ ಮೆಟ್ಟಿಲೇರಿದ ಹುಡುಗ ಮೂರನೆಯ ವಯಸ್ಸಿನಲ್ಲೇ ತಂದೆಯಿಲ್ಲದ ತಬ್ಬಲಿ. ಹೊಲಮನೆ ಕರಾವಿಗೆ ಬರವಿಲ್ಲ. ಹಾಡುತ್ತ ಕುಣಿಯುತ್ತ ಬದುಕಿನ ಲೋಕಕ್ಕೆ ಕಣ್ಣು ತೆರೆಯುತ್ತಿದ್ದ ಹುಡುಗನ ಊರು ಏಣಗಿ. ಸವದತ್ತಿಯ ಉಗ್ರಕೊಳ್ಳದ ಎಲ್ಲಮ್ಮನ ಉಪಾಸಕರ ವಂಶ.

ಹುಡುಗನ ಊರಿನಲ್ಲಿ ಲವ-ಕುಶ ಎಂಬ ದೊಡ್ಡಾಟ ನಡೆದಿತ್ತು. ಆಟದ ತಾಲೀಮು ನೋಡಿ ಹುಡುಗ ಅದಕ್ಕೆ ಮಾರುಹೋದ. ತಾನೂ ನಟನಾಗಬೇಕೆಂಬ ಕನಸು ಕಂಡ.

ಮೋಹಕ ಮುಖ, ಮಧುರ ಕಂಠ, ಮುಗ್ಧತೆಯ ಸಾಕಾರ. ಮೇಷ್ಟ್ರು ಆ ಹುಡುಗನನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಬಣ್ಣ ಹಚ್ಚಿ ವೇಷ ಹಾಕಿ ರಂಗಸ್ಥಳಕ್ಕೆ ತಂದೇಬಿಟ್ಟರು.

ಮೊದಲನೆಯದೇ ತಾಯಿಯ ಪಾತ್ರ; ರಾಮಾಯಣದ ಕೌಸಲ್ಯೆ. ಆಗವನಿಗೆ 10 ವರ್ಷ (1926). ಏಣಗಿ ಬಾಳಪ್ಪನವರ ನಾಟಕ ಜೀವನ ಹೀಗಾರಂಭ.

ಅಲ್ಲಿಂದ ಉದ್ದಕ್ಕೂ ಬೆಳಕಿನಿಂದ ಬೆಳಕಿಗೆ ಪ್ರಯಾಣ. ಚಿಕ್ಕೋಡಿ ಸಿದ್ಧಲಿಂಗಸ್ವಾಮಿಗಳ ಕಂಪನಿಯಲ್ಲಿ ಪ್ರಹ್ಲಾದ. ಅನಂತರ ಅಬ್ಬಿಗೇರಿ ಕಂಪನಿ. ಅಲ್ಲೂ ಬಾಲನಟನ ಪಾತ್ರ.

ಆ ಕಂಪನಿಯ ಕಿತ್ತೂರು ಚೆನ್ನಮ್ಮ ನಾಟಕ ಸುಪ್ರಸಿದ್ಧ. ರಾಷ್ಟ್ರಪ್ರೇಮದಿಂದ ಕೂಡಿದ ಆ ನಾಟಕದಿಂದಾಗಿ ಕಂಪನಿಯ ಮೇಲೆ ಬ್ರಿಟಿಷರ ಕ್ರೂರದೃಷ್ಟಿ ಬಿತ್ತು. ಕಂಪನಿಯ ಅಂತ್ಯ. ಅವರ ನಾಟಕದ ಬಾಳಿಗೆ ದೊಡ್ಡ ವಿಘ್ನ.

ಮಾರಿಕಾಂಬಾ ನಾಟಕ ಮಂಡಲಿಯಲ್ಲಿ ಆಶ್ರಯ. ಸಣ್ಣ ಪುಟ್ಟ ಪಾತ್ರ ಮಾಡುತ್ತಿದ್ದ ಬಾಳಪ್ಪನವರಿಗೆ ಒಮ್ಮೆಗೇ ಕೀರ್ತಿಶಿಖರ. ವೀರರಾಣಿ ರುದ್ರಮ್ಮನ ಪಾತ್ರ ಮಾಡುತ್ತಿದ್ದ ನಟಿ ಮುನಿಸಿಕೊಂಡು ಪಾತ್ರ ವಹಿಸಲೊಲ್ಲೆ ಎಂದಾಗ ಕಂಪೆನಿಯ ಮಾಲೀಕರು ಏಣಗಿಯವರಿಗೇ ರುದ್ರಮ್ಮನ ಪಾತ್ರ ನೀಡಿ ರಂಗಕ್ಕೆ ತಂದರು. ಬಾಳಪ್ಪನಿಗೆ ಪ್ರಶಂಸೆಯ ಸುರಿಮಳೆ.

ಆ ಕಂಪನಿಯೂ ಮುಳುಗಿಹೋಯಿತು. ಬಾಳಪ್ಪ ಎದೆಗುಂದಲಿಲ್ಲ. ಜೊತೆಗಾರರೊಡಗೂಡಿ ತಮ್ಮದೇ ಕಂಪನಿ ಕಟ್ಟಿದರು. ಗುರುಸೇವಾ ಸಂಗೀತ ನಾಟಕ ಮಂಡಳಿಯ (1932) ಹೇಮರೆಡ್ಡಿ ಮಲ್ಲಮ್ಮ ನಾಟಕ ಸುವಿಖ್ಯಾತ. ಅಲ್ಲೂ ಬಾಳಪ್ಪನವರದು ಹೆಣ್ಣು ಪಾತ್ರ. ಸ್ತ್ರೀಪಾತ್ರಗಳಿಗೆಲ್ಲ ಸ್ತ್ರೀಯರೇ ಬರಬೇಕೆಂಬ ಕಾಲ ಅದು. ಅಂತೆಯೇ ಬಾಳಪ್ಪನವರು ತಾವು ಮಾಡುತ್ತಿದ್ದ ಪಾತ್ರಕ್ಕೆ ಮಹಿಳೆಯೊಬ್ಬರನ್ನು ತಂದರು. ಮೆಚ್ಚುಗೆಯಾಗಲಿಲ್ಲ ಸಾಂಗ್ಲಿಯ ಜನಕ್ಕೆ. ಹಿಂದಿನ ದಿನ ಆ ಪಾತ್ರ ಮಾಡಿದ 'ಹೆಂಗಸೇ' ಬರಬೇಕೆಂದು ಕೂಗಿದಾಗ ಬಾಳಪ್ಪ ಮತ್ತೆ ಬಾಳಮ್ಮ!

ಆದರೆ ಆ ಕಂಪನಿಯೂ ಬಾಳಲಿಲ್ಲ. ನಮ್ಮ ಕನ್ನಡ ನಾಟಕ ಕಂಪನಿಗಳ ದೊಡ್ಡ ಕಾಯಿಲೆಯೆಂದರೆ ಒಳವಿರಸ. ಕಂಪನಿಯನ್ನು ಜೊತೆಗಾರರಿಗೆ ಬಿಟ್ಟುಕೊಟ್ಟು ಬಾಳಪ್ಪ ಹೊಸ ಬಾಳು ಅರಸಿದರು. ಕಿತ್ತೂರು ಸಂಗೀತ ನಾಟಕ ಮಂಡಳಿ ಜನ್ಮ ತಳೆಯಿತು; ಹಾಗೂ ಹೀಗೂ ನಡೆಯುತ್ತಿತ್ತು.

ಅವರು ಆಡುತ್ತಿದ್ದ ನಾಟಕವೊಂದರಲ್ಲಿ ಗುರುವರ್ಗದ ಟೀಕೆಯಿತ್ತೆಂಬ ಕಾರಣದಿಂದಾಗಿ ಹಲವರು ವಿರೋಧಿಸಿದರು. ನಾಟಕವನ್ನು ಬಹಿಷ್ಕರಿಸಿದರು. ಕಂಪನಿ ಕಣ್ಮುಚ್ಚಿತು.

ಸೋಲೊಪ್ಪದ ಛಲಗಾರ ಏಣಗಿ ಬಾಳಪ್ಪ ವೈಭವಶಾಲಿ ನಾಟ್ಯ ಸಂಘ, ಕಲಾವೈಭವ ನಾಟ್ಯ ಸಂಘ ಕಟ್ಟಿ ಆಡಿದರು, ಆಡಿಸಿದರು. ಕಂಪನಿ ನಾಟಕಗಳ ವೈಭವವನ್ನು ಜೀವಂತವಾಗಿಡಲು ಸದಾ ಶ್ರಮಿಸುತ್ತ ಬಂದ ಏಣಗಿ ಬಾಳಪ್ಪ ಅವರಿಗೆ ಇದೀಗ ಗುಬ್ಬಿ ವೀರಣ್ಣ ಪ್ರಶಸ್ತಿ. ಕಲೆಗೇ ಅರ್ಪಿತವಾದ ಬಾಳಿಗೆ ಸಮಾಜದ ಕೃತಜ್ಞತೆ.

*(ಕೃಪೆ : ಸುಧಾ, ದಿನಾಂಕ : 22-10-1995)*



# ಅವರು ಮರಾಠರ ಬೆದರಿಕೆಗೆ ಜಗ್ಗಲಿಲ್ಲ

● ಎಂ.ಕೆ. ಹೆಗಡೆ

ನಾಟಕ ಮುಗಿದ ನಂತರ ಯುವಕರ ಗುಂಪು ಬಾಳಪ್ಪನವರ ಬೆಂಗಾವಲಿಗೆ ಹೋಗುತ್ತಿತ್ತು. ಈ ಘಟನೆಗಳಿಂದ ಕನ್ನಡಿಗರ ಒಗ್ಗಟ್ಟು, ಛಲ ಹೆಚ್ಚುತ್ತ ಹೋಯಿತು.

ಸಾಮಾಜಿಕ ಸಮಸ್ಯೆಗಳ ವಿರುದ್ಧ ಮತ್ತು ಸಮಾಜದಲ್ಲಿ ಉಂಟಾಗುವ ಬದಲಾವಣೆಗಳಿಗೆ ಕನ್ನಡ ರಂಗಭೂಮಿ ಹಿಂದಿನಿಂದಲೂ ಸ್ಪಂದಿಸುತ್ತ ಬಂದಿದೆ. ಹಾಗೆಯೇ, 'ಕರ್ನಾಟಕ ಏಕೀಕರಣ' ಮತ್ತು 'ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ'ದಲ್ಲಿ ಕೂಡ ಕನ್ನಡ ರಂಗಭೂಮಿ ವಿಶಿಷ್ಟವಾಗಿ ಸ್ಪಂದಿಸಿತ್ತು.

ಭಾಷಾವಾರು ಪ್ರಾಂತ್ಯ ವಿಂಗಡಣೆಯ ಸಂದರ್ಭದಲ್ಲಿ ಏಣಗಿ ಬಾಳಪ್ಪನವರ ನಾಟಕ ತಂಡ 'ಏಕೀಕರಣ' ಮತ್ತು 'ಮಾವ ಬಂದ್ನಪ್ಪೋ ಮಾವ' ನಾಟಕದ ಮೂಲಕ ನೀಡಿದ ಕೊಡುಗೆಯ ಮೆಲುಕು 'ಸುವರ್ಣ ಕರ್ನಾಟಕ'ದ ಸಂದರ್ಭದಲ್ಲಿ.

'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ. ಅದು ಮಹಾರಾಷ್ಟ್ರಕ್ಕೆ ಸೇರಲು ಯಾವುದೇ

ಕಾರಣದಿಂದ ಸಾಧ್ಯವಿಲ್ಲ' ಎನ್ನುವುದನ್ನು ಭಾಷಾವಾರು ಪ್ರಾಂತ್ಯ ವಿಂಗಡಣೆಯ ಸಂದರ್ಭದಲ್ಲಿ ಹಾಗೂ ಗಡಿ ಅಧ್ಯಯನ ಸಮಿತಿ ರಚಿಸಲ್ಪಟ್ಟ ಸಂದರ್ಭದಲ್ಲಿ ಏಣಗಿ ಬಾಳಪ್ಪನವರ ನಾಟಕ ತಂಡ ಅತ್ಯಂತ ಮನೋಜ್ಞವಾಗಿ ಅಭಿನಯಿಸಿ ತೋರಿಸಿದೆ.

ವೃತ್ತಿ ರಂಗಭೂಮಿ ವಿಜೃಂಭಿಸುತ್ತಿದ್ದ ಅಂದಿನ ಕಾಲದಲ್ಲಿ, ಹಿರಿಯ ಕಲಾವಿದ ಏಣಗಿ ಬಾಳಪ್ಪನವರ ನೇತೃತ್ವ ಇತ್ತು. ಊರಿಂದೂರಿಗೆ ನಾಟಕ ತಂಡ ಸಂಚಾರ ನಡೆಸಿತ್ತು. ಬೆಳಗಾವಿಯಲ್ಲಿ ಕೂಡ ಅತ್ಯಂತ ಯಶಸ್ವಿಯಾಗಿ ನಾಟಕ ಪ್ರದರ್ಶನ ನಡೆಯುತ್ತಿತ್ತು. ಬಹು ದಿನಗಳ ಪ್ರದರ್ಶನದ ನಂತರ ಬೆಳಗಾವಿಯಿಂದ ನಾಟಕ ತಂಡ ಮುಂದಿನ ಊರಿಗೆ ಹೋಗುವುದಿತ್ತು. ಆಗ 'ಮಹಾಜನ ಆಯೋಗ ಗಡಿ ಸಮಸ್ಯೆಯ ಹಿನ್ನೆಲೆಯಲ್ಲಿ ಬೆಳಗಾವಿಗೆ ಬರಲಿದೆ' ಎಂದು ಯಾರೋ ಏಣಗಿ ಬಾಳಪ್ಪನವರಿಗೆ ತಿಳಿಸಿದರು.

ತಕ್ಷಣ ಬಾಳಪ್ಪನವರು ತಮ್ಮ ತಂಡದ ಮುಂದಿನ ಪ್ರಯಾಣವನ್ನು ರದ್ದುಪಡಿಸಿದರು. 'ಬೆಳಗಾವಿ ಕರ್ನಾಟಕದ್ದೇ' ಎಂದು ಮಹಾಜನ ಆಯೋಗಕ್ಕೆ ಮನವರಿಕೆ ಮಾಡಿ ಕೊಟ್ಟೇ ಇಲ್ಲಿಂದ ಹೋಗಬೇಕು ಎಂದು ನಿರ್ಧರಿಸಿದರು.

ಆದರೆ, ನಾಟಕ ತಂಡ ಇಲ್ಲಿಂದ ಮುಂದಿನ ಊರಿಗೆ ಹೋಗುತ್ತದೆ ಎನ್ನುವುದು ಆದಾಗಲೇ ಪ್ರಚಾರವಾಗಿದ್ದರಿಂದ ನಾಟಕಕ್ಕೆ ಪ್ರೇಕ್ಷಕರೇ ಇರಲಿಲ್ಲ. ಆದರೂ ಏಣಗಿ ಬಾಳಪ್ಪನವರು ಎದೆಗುಂದಲಿಲ್ಲ. ನಷ್ಟದಲ್ಲಿಯೇ ನಾಟಕ ಪ್ರದರ್ಶನವನ್ನು ಮುಂದುವರಿಸಿದರು. ಅವರ ಏಕೈಕ ಗುರಿ ಮಹಾಜನ ಆಯೋಗಕ್ಕೆ ಸಾಕ್ಷಿ ಹೇಳುವುದಿತ್ತು.

'ಇಲ್ಲಿ ಒಂದು ವರ್ಷ ಕನ್ನಡ ನಾಟಕ ಯಶಸ್ವಿಯಾಗಿ ನಡೆದಿದೆ. ಅಷ್ಟು ಪ್ರಮಾಣದಲ್ಲಿ ಇಲ್ಲಿ ಕನ್ನಡಿಗರಿದ್ದಾರೆ. ಇದು ಕನ್ನಡದ ಗಂಡು ಮೆಟ್ಟಿನ ಸ್ಥಳ. ಹಾಗಾಗಿ ಇದು ಕನ್ನಡ ನಾಡು. ಎಂದಿಗೂ ಮಹಾರಾಷ್ಟ್ರಕ್ಕೆ ಸೇರಲು ಸಾಧ್ಯವಿಲ್ಲ' ಎಂದು ಸಾಕ್ಷಿ ಹೇಳಿ ಮುಂದಿನ ಊರಿಗೆ ತಂಡವನ್ನು ತೆಗೆದುಕೊಂಡು ಹೋದರು ಏಣಗಿ ಬಾಳಪ್ಪ.

**ಭಾಷಾವಾರು ಪ್ರಾಂತ್ಯ :**

ಭಾಷೆಯ ಆಧಾರದ ಮೇಲೆ ಗಡಿ ನಿರ್ಧರಿಸುವ ಪ್ರಕ್ರಿಯೆ ನಡೆಯುತ್ತಿದ್ದಾಗ ಏಣಗಿ ಬಾಳಪ್ಪನವರ ಒಡೆತನದ ಕಲಾವೈಭವ ನಾಟ್ಯ ಸಂಘ ಸ್ಪಂದಿಸಿದ ರೀತಿ ಅತ್ಯಂತ ಶ್ಲಾಘನೀಯವಾಗಿತ್ತು.

ನಾಟ್ಯ ಸಂಘದ ನಾಮಫಲಕದ ಮೇಲೂ ಮರಾಠಿಗಳ ಕಣ್ಣು ಬಿದ್ದಿತ್ತು. ಫಲಕದ ಮೇಲೆ 'ಕಲಾವೈಭವ ನಾಟ್ಯ ಸಂಘ, ಬೆಳಗಾವಿ (ಕರ್ನಾಟಕ ರಾಜ್ಯ)' ಎಂದು ಏಣಗಿ ಬಾಳಪ್ಪನವರು ಬರೆಸಿದ್ದರು. ಇದರಿಂದ ಮರಾಠಿಗರು ಕೆರಳಿದರು. ಫಲಕವನ್ನು ನೋಡಿದ ಮರಾಠಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅವರು ಈ ಬಗ್ಗೆ ಸಭೆ ನಡೆಸಿ, ನಾಟಕದ ಫಲಕದಲ್ಲಿದ್ದ 'ಕರ್ನಾಟಕ ರಾಜ್ಯ' ಶಬ್ದವನ್ನು ತೆಗೆದುಹಾಕುವಂತೆ ಆಗ್ರಹಿಸಿದರು. ನಾಟಕದ ಜಾಹಿರಾತು ಫಲಕಗಳು ಮರಾಠಿಯಲ್ಲಿಯೇ ಇರಬೇಕು ಎಂದು ಎಚ್ಚರಿಕೆ ನೀಡಿದರು. ಆದರೆ ಬಾಳಪ್ಪನವರು ಇದಕ್ಕೆ ಕಿವಿಗೊಡಲಿಲ್ಲ.

ಬಾಳಪ್ಪನವರು ಉದ್ದೇಶಪೂರ್ವಕವಾಗಿಯೇ ಹಾಗೆ ಬರೆಸಿದ್ದರು. ಕನ್ನಡಿಗರಲ್ಲಿ ಹುಮ್ಮಸ್ಸು, ಧೈರ್ಯ ತುಂಬುವುದು ಮತ್ತು ಮರಾಠಿಗರ ಒಣ ಪ್ರತಿಷ್ಠೆ ಕರಗಿಸುವುದು ಬಾಳಪ್ಪನವರ ಉದ್ದೇಶವಾಗಿತ್ತು.

ಅದನ್ನು ಬದಲಾಯಿಸಲು ಬಾಳಪ್ಪನವರು ಒಪ್ಪದಿರುವುದನ್ನು ಕಂಡ ಮರಾಠಿ ಪುಡಾರಿಗಳು ಸಿಟ್ಟಿಗೆದ್ದು, ರಂಗಮಂದಿರದ ಮುಂದೆ ನಿಂತು ಪ್ರತಿಭಟನೆ ನಡೆಸಿದರು. ನಾಟಕ ನೋಡಲು ಬಂದಿದ್ದವರನ್ನು ಹೆದರಿಸಿ ವಾಪಸ್ ಕಳುಹಿಸಿದರು. ಬಾಳಪ್ಪನವರಿಗೆ ಜೀವ ಬೆದರಿಕೆಗಳೂ ಬಂದವು. ಆದರೆ ಇದ್ಯಾವುದಕ್ಕೂ ಬಾಳಪ್ಪ ಅಂಜಲಿಲ್ಲ. ತಾವು ಹಿಡಿದ ಪಟ್ಟನ್ನು ಸಡಿಲಿಸದೆ ಮುನ್ನಡೆದರು. ಕೇವಲ ಬೆರಳೆಣಿಕೆಯ ಜನರೆದುರು ನಾಟಕ ಪ್ರದರ್ಶನ ಮುಂದುವರಿಯಿತು.

ಕೆಲವು ಕನ್ನಡಿಗರೇ ಬಾಳಪ್ಪನವರಿಗೆ ಬುದ್ಧಿ ಹೇಳಲು ಬಂದರು. 'ನೀವು ಉದ್ಯೋಗ ಮಾಡಿಕೊಂಡು ತಿರುಗೋ ಜನ. ಯಾಕೆ ಸುಮ್ನೆ ಹಠ ಮಾಡಿಕೊಂಡು ಲುಕ್ಸಾನು ಮಾಡ್ಕೋತೀರಿ? 'ಕರ್ನಾಟಕ ರಾಜ್ಯ' ಅನ್ನೋ ಶಬ್ದ ತೆಗೆದು ಹಾಕಿದರೆ ಮುಗಿಲು ಹರಿದು ಬೀಳೋದಿಲ್ಲ. ಒಣಾ ಅಭಿಮಾನ ಇಟ್ಕೊಂಡು ಯಾಕೆ ಹಾಳಾಗ್ತೀರಾ?' ಎಂದು ಕೆಲವರು ಬಾಳಪ್ಪನವರಿಗೆ ಉಪದೇಶ ನೀಡಿದರು.

ಆದರೆ ಈ ಉಪದೇಶ ಅವರ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಮರಾಠಿಗರಿಗೆ ಹೆದರಿ ನಾಟಕ ನೋಡಲು ಬರುತ್ತಿದ್ದವರ ಸಂಖ್ಯೆ ಕಡಿಮೆಯಾದರೂ ಫಲಕದ ಶಬ್ದ ಮಾತ್ರ ಬದಲಾಗಲಿಲ್ಲ.

**ಬೆದರಿಕೆ ಪತ್ರಗಳು :**

ನಂತರ ನಾಟ್ಯ ಕಂಪನಿ ಅಳ್ನಾವರಕ್ಕೆ ಬಂದಾಗಲೂ ಇದೇ ಸಮಸ್ಯೆ ಎದುರಾಯಿತು. ಮರಾಠಿಗರು ಎಷ್ಟೇ ಉಪಟಳ ನೀಡಿದರೂ ಫಲಕವನ್ನು ಮಾತ್ರ ಬದಲಾಯಿಸಲಿಲ್ಲ. ಅವರಿಗೆ ಬರುತ್ತಿದ್ದ ಬೆದರಿಕೆ ಪತ್ರಗಳನ್ನು ನಾಟಕದ ಮಧ್ಯೆಯೇ ಓದಿ ಜನರನ್ನು ಎಚ್ಚರಿಸುವ ಕೆಲಸವನ್ನು ಬಾಳಪ್ಪ ಮಾಡತೊಡಗಿದರು. 'ಹೆಸರು ಹಾಕದೆ ಬೆದರಿಕೆ ಪತ್ರ ಬರೆಯುವವರು ಹೇಡಿಗಳು. ಕರ್ನಾಟಕದ ಸಲುವಾಗಿ ಇಂತವರಿಂದ ಜೀವ ಹೋದರೆ ನನ್ನ ಜೀವನ ಸಾರ್ಥಕವಾದಂತೆ' ಎಂದು ಬಾಳಪ್ಪ ಘೋಷಿಸುತ್ತಿದ್ದರು.

ನಾಟಕ ಮುಗಿದ ನಂತರ ಯುವಕರ ಗುಂಪು ಬಾಳಪ್ಪನವರ ಬೆಂಗಾವಲಿಗೆ ಹೋಗುತ್ತಿತ್ತು. ಈ ಘಟನೆಗಳಿಂದ ಕನ್ನಡಿಗರ ಒಗ್ಗಟ್ಟು, ಛಲ ಹೆಚ್ಚುತ್ತ ಹೋಯಿತು.

1956, ನವೆಂಬರ್ 1ರಂದು ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಾಗ ಮರಾಠಿಗರು ಬೆಳಗಾವಿ ಬಂದ್ ಕರೆ ನೀಡಿದರು. ಬಾಳಪ್ಪನವರು ಅಂದು ಕನ್ನಡ ನಾಟಕ ಪ್ರದರ್ಶಿಸಲೇಬೇಕೆಂದು ನಿರ್ಧರಿಸಿದರು. ಹಲವಾರು ಹಿರಿಯ ಸ್ವಾತಂತ್ರ್ಯ ಯೋಧರು ಬಾಳಪ್ಪನವರ ಬೆಂಬಲಕ್ಕೆ ನಿಂತರು. ನಾಟಕ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು.

ಮಹಾರಾಷ್ಟ್ರದವರು ಕನ್ನಡ ಮಾತೆಯನ್ನು ಒಡೆಯಲು ಯತ್ನಿಸಿದ ರೀತಿಯನ್ನು ಜನರಿಗೆ ಬಿಂಬಿಸುವ ಸಲುವಾಗಿ 'ಮಾವ ಬಂದ್ನಪ್ಪೋ ಮಾವ' ನಾಟಕವನ್ನು ಅವರು ಆಡಿ ತೋರಿಸಿದರು. ಗಡಿ ನಾಡಿನ ಜಗಳವನ್ನೇ ಪ್ರತಿನಿಧಿಸುವಂತಹ ನಾಟಕ ಅದಾಗಿತ್ತು. ಶಾಂತ ಸ್ವಭಾವದ ಕನ್ನಡದ ಸಭ್ಯ ಕುಟುಂಬಕ್ಕೆ ಹೆಣ್ಣು ಕೊಟ್ಟು ಮಹಾರಾಷ್ಟ್ರದ ಮಾವ ಮಗಳ ಮೂಲಕ ಮನೆ ಒಡೆಯಲು ಹಲವು ಷಡ್ಯಂತ್ರ ರೂಪಿಸುವ ಕತೆ ಇದು. ಮಹಾರಾಷ್ಟ್ರ ಏಕೀಕರಣ ಸಮಿತಿ ಕನ್ನಡ ನಾಡನ್ನು ಒಡೆಯಲು ಪ್ರಯತ್ನಿಸಿದ ರೀತಿ ಇದರಲ್ಲಿ ಪ್ರತಿಬಿಂಬಿತವಾಯಿತು.

ನಂತರ 'ಏಕೀಕರಣ' ನಾಟಕ ಕೂಡ ಇದೇ ಮಾದರಿಯಲ್ಲಿತ್ತು. ಕನ್ನಡ ತಾಯಿ, ಆಸ್ತಿಗಾಗಿ ಬಡಿದಾಡುತ್ತಿದ್ದ ಮಕ್ಕಳನ್ನು ಹೊಂದಿಸಿಕೊಂಡು ಹೋಗಲು ಹೆಣಗುತ್ತಿದ್ದ ರೀತಿ ಅತ್ಯಂತ ಮಾರ್ಮಿಕವಾಗಿತ್ತು.

*(ಕೃಪೆ: ಕನ್ನಡಪ್ರಭ, 03–12–2006)*

"

**ಬಾಳಪ್ಪನವರು ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಮಹಾರಾಷ್ಟ್ರದಲ್ಲೂ ಪ್ರಸಿದ್ಧರು. ಇಚಲಕರಂಜಿ, ಮಿರಜ್, ಸಾಂಗ್ಲಿ, ಕೊಲ್ಲಾಪುರ, ಸೊಲ್ಲಾಪುರ, ಗಡಿಹಿಂಗ್ಲಜದಲ್ಲಿ ಬಾಳಪ್ಪನವರ ಅಪಾರ ಅಭಿಮಾನಿಗಳಿದ್ದಾರೆ. ಮಹಾರಾಷ್ಟ್ರದ ಹೆಸರಾಂತ ಛೋಟಾ ಗಂಧರ್ವರ ಜೊತೆ ನಾಟಕವಾಡಿದ್ದಾರೆ.**

*(ಏಣಗಿ ಬಾಳಪ್ಪ ನೆನಪುಗಳಿಂದ...)*

"



# ವೃತ್ತಿ ರಂಗಭೂಮಿಯ ದಿವ್ಯ ಕುತೂಹಲ

● ಮಲ್ಲಿಕಾರ್ಜುನ ಕಡಕೋಳ

ಕಟ್ಟು ಹೊಡೆದು ಸುತ್ತಿದ ಬೆಳ್ಳನೆಯ ರುಮಾಲು, ಬಿಳಿ ಅಂಗಿಯೊಳಗೆ ಅಚ್ಚ ಬಿಳಿಯ ಒಳಾಂಗಿ, ಕಿಸೆಯಂಗಿ, ಬೆಳ್ಳನೆಯ ಧೋತರ, ಹೆಗಲಿಗೊಂದು ಶಾಲು,

ಮುಖದ ತುಂಬಾ ಸದಾ ಉಕ್ಕುವ ರಂಗ ಪಕ್ವತೆ...

ಏಣಗಿ ಬಾಳಪ್ಪ ಕನ್ನಡ ರಂಗಭೂಮಿ ಕಂಡ ದಿವ್ಯ ಕೌತುಕ. ವೃತ್ತಿ ರಂಗಭೂಮಿಯ ಗೌರೀಶಂಕರ ಸೇರಿದಂತೆ ಇವತ್ತಿನ ಇಳುವರಿ ವರೆಗೆ ಅತ್ಯಧಿಕೃತವಾಗಿ ಮಾತಾಡಬಲ್ಲ ರಂಗಾನುಭಾವಿ ಬಾಳಪ್ಪ. ಅದು ಅಷ್ಟು ಸರಳ ವರ್ತಮಾನವಲ್ಲ. ವೃತ್ತಿರಂಗ ಭೂಮಿಯದು ನೆತ್ತರು – ಕಣ್ಣೀರು – ಬೆವರುಗಳ ಐತಿಹ್ಯ. ಅಂತಹ ಐತಿಹ್ಯದೊಳಗೆ ಬಾಳಿ ಬಣ್ಣದ ಬೆಳಕು-ಬೆಡಗು-ಬವಣೆ ಕಂಡುಂಡವರು ನಮ್ಮ ಬಾಳಪ್ಪ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಏಣಗಿ ಎಂಬ ಪುಟ್ಟ ಊರು ಬಾಳಪ್ಪನವರಿಂದಾಗಿ ಲೋಕಪ್ರಸಿದ್ಧಿ. ಎಂಬತ್ತೇಳರ (1914) ಈ ಹಿರಿಯ ರಂಗ ಜೀವ ನಮ್ಮ ನಡುವಿನ ನಡೆ ದಾಡುವ ರಂಗಭೂಮಿಯೇ ಸೈ! ವೃತ್ತಿರಂಗ

ಭೂಮಿಯ ಭೂಮತ್ವವನ್ನು ಶಾಸ್ತ್ರೀಯ ನೆಲೆಗಳಲ್ಲಿ ಗುರುತಿಸುತ್ತಾ ಮಾತನಾಡುವ ಅವರ "ಅಂತರಂಗ ಪ್ರಜ್ಞೆ" ಅನನ್ಯವಾದುದು.

ಅಂದಿನ ಆ ಅಮೋಘ ಅಭಿನಯ, ರಂಗಸಂಗೀತ, ವೈಭವ ಸೇರಿದಂತೆ ಇಂದಿನ ರಂಗ ಸಂವೇದನೆಗಳೊಂದಿಗೆ ನಮ್ಮನ್ನೆಲ್ಲ ಅತ್ಯಾಪ್ತವಾಗಿ ತಾದಾತ್ಮ್ಯಗೊಳಿಸುವಲ್ಲಿ ಅವರೊಬ್ಬ ಮೋಡಿಕಾರ.

ಮೂರು ವರ್ಷದ 'ಬಾಳ' ಅಪ್ಪನನ್ನು, ಆಸ್ತಿಯನ್ನು ಕಳಕೊಂಡು ಅಂದು ಬೆಳೆದದ್ದು ಅವ್ವ ಬಾಳವ್ವ, ಅಣ್ಣ ಬಸಣ್ಣನ ಅಂತಃಕರುಣೆಯ ಅಂಗಳದಲ್ಲಿ. ಮೂರನೇ ಈಯತ್ತೆಯಿಂದಲೇ ಬಣ್ಣದ ಬದುಕಿನ ನಂಟು. ಅವರೊಳಗಿನ 'ಅಭಿಜಾತ' ಕಲಾವಿದರನ್ನು ತಲಾಷ್ ಮಾಡಿದ ಸಂಕೀರ್ತಿ ಚಿಕ್ಕೋಡಿಯ ಸಾವಳಗಿ ಮಠದ ಶಿವಲಿಂಗ ಶಾಸ್ತ್ರಿಗಳಿಗೆ ಸಲ್ಲಬೇಕು. ಆ ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹಂಗಾಮ. ಕ್ರಾಂತಿಕಾರಿ ನಾಟಕಗಳ ತುರ್ತು ಅಲವತ್ತು. ಅಂಥಲ್ಲಿ ಬಾಲಕ ಬಾಳನಿಗೆ ಅವಕಾಶ. ಅವರ ಕಂಪನಿಯಲ್ಲಿ ಮುಸ್ಲಿಂ ನಟಿ ಮರ್ದಾನವ್ವ ಬಾಳಪ್ಪರ ರಂಗಬಾಳಿಗೆ ಅವ್ವನಂತೆ. ಕಕ್ಕುಲತೆಯುಳ್ಳ ಅಕ್ಕನ ಅಕ್ಕರೆ ನೀಡಿ ಬೆಳೆಸಿದಾಕೆ.

ಅಂತೆಯೇ ಬಾಲನಟ ಬಾಳಪ್ಪ ಬಡ್ತಿ ಪಡೆದು "ಅಭಿನೇತ್ರಿ"ಯಾಗಿ ಹೆಸರುಗಳಿಸಿದ್ದುಂಟು. ಕಿತ್ತೂರು ರುದ್ರಮ್ಮ, ಹೇಮರೆಡ್ಡಿ ಮಲ್ಲಮ್ಮ ನಾಟಕಗಳು ಬಾಳಪ್ಪನೊಳಗಿನ 'ಅಭಿನೇತ್ರಿ'ಯನ್ನು ಸಾಕ್ಷಿಗೊಳಿಸಿದವು. ಜಗಜ್ಯೋತಿ ಬಸವೇಶ್ವರ ನಾಟಕದ ಬಸವಣ್ಣನ ಪಾತ್ರ ಅವರಿಗಾಗಿ ಹೇಳಿ ಮಾಡಿಸಿದಂತಿತ್ತು. ಬಸವಣ್ಣನೇ ಪರಕಾಯ ಪ್ರವೇಶಗೊಂಡಷ್ಟು ಅದರ ಪ್ರಖ್ಯಾತಿ. ಬಾಳಪ್ಪನವರ ಹೆಂಡತಿ ಲಕ್ಷ್ಮೀಬಾಯಿ ಈ ನಾಟಕದಲ್ಲಿ ನೀಲಾಂಬಿಕೆಯಾಗಿ ನಟಿಸುತ್ತಿದ್ದರೆ ನೋಡಬೇಕಿತ್ತು. ಈ ಅಮೋಘ ಜೋಡಿಯ ರಂಗಮೋಡಿ. ದ್ರುಪದ ಕನ್ಯಾ, ರಾಜಾ ಹರಿಶ್ಚಂದ್ರ, ಪಠಾಣಪಾಶಾ, ಉತ್ತರ ಭೂಪ, ಚಲೇಜಾವ್, ಲಂಕಾದಹನ ಮುಂತಾದ ನಾಟಕಗಳು ಜನಪ್ರಿಯವಾಗಿ ಪ್ರದರ್ಶನಗೊಂಡವು. ಆ ಪ್ರದರ್ಶನಗಳಿಗೆ ಪ್ರಯೋಗದ ಸಾರ್ಥಕ್ಯವಿತ್ತು.

ಸೂಡಿ ಹುಚ್ಚಪ್ಪನವರೊಂದಿಗೆ ಹಿಸ್ಸೆ ಮೇಲೆ ಗುರುಸೇವಾ ಸಂಗೀತ ನಾಟಕ ಮಂಡಳಿ ಕಟ್ಟಿದರು. 1947ರ ಸುಮಾರಿಗೆ 'ಕಲಾ ವೈಭವ ನಾಟ್ಯ ಸಂಘ' ಎಂಬ ಸ್ವಂತ ಕಂಪನಿ ಕಟ್ಟಿ ಅಂದಾಜು ನಾಲ್ಕು ದಶಕಗಳ ಕಾಲ ರಂಗ ವೈಭವ ಮೆರೆಸಿದರು.

ಮಹಾರಾಷ್ಟ್ರದಲ್ಲೂ ಇವರ ನಾಟಕಗಳು ಅಪಾರ ಜನಮನ್ನಣೆ ಗಳಿಸಿದವು. ಮರಾಠಿಯ ಪು.ಲ. ದೇಶಪಾಂಡೆ ಸೇರಿದಂತೆ ಕನ್ನಡದ ಅನೇಕ ಹೆಸರಾಂತ ನಾಟಕಕಾರರು ಬಾಳಪ್ಪನವರಿಗಾಗಿ ನಾಟಕ ರಚಿಸಿಕೊಟ್ಟರು. ಅಂದಾಜು ಆರೇಳು ದಶಕಗಳ ಕಾಲ ವೃತ್ತಿ ರಂಗದ ಕಳ್ಳುಬಳ್ಳಿಯಂತೆ ಬಾಳಿ ಬದುಕಿರುವ ಬಾಳಪ್ಪ

ಕಟ್ಟೀಮನಿಯವರ ಮಾಡಿಮಡಿದವರು ಹಾಗೂ ಗಾನಯೋಗಿ ಪಂಚಾಕ್ಷರಿ ಗವಾಯಿ ಮತ್ತು ಜನುಮದ ಜೋಡಿ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕೇಂದ್ರ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ ಪ್ರಶಸಿಗಳು ಅವರಿಗೆ ಪ್ರಾಪ್ತವಾಗಿವೆ. ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಪ್ರಥಮ ಹಿರಿಮೆ ಅವರದು. ಇಳಿ ವಯಸ್ಸಿನಲ್ಲೂ ಪುಟಿದೇಳುವ ಉತ್ಸಾಹಕ್ಕೆ ಎಳಮೆ ಇಲ್ಲ. ಅದಕ್ಕೆ ಹರೆಯದ ಹುರುಪಿದೆ. ಅವರು ಕಟ್ಟಿ ಬೆಳೆಸುತ್ತಿರುವ 'ಮ್ಯಾಳ' ಎಂಬ ರಂಗ ಸಂಸಾರ ಅದಕ್ಕೆ ಸಾಕ್ಷಿ. ಇದೆಲ್ಲಕ್ಕೂ ಅತಿಮುಖ್ಯವಾಗಿ ಅವರು ರಂಗಭೂಮಿಗೆ ನೀಡಿದ ಮಾಸ್ಟರ್ ಪೀಸ್ ಅಂದರೆ ಅವರ ಮಗ ನಟ ಏಣಗಿ ನಟರಾಜ. ತಾಯಿ ಲಕ್ಷ್ಮಿಬಾಯಿ, ಅಪ್ಪ ಬಾಳಪ್ಪಗೆ ಹೆಸರು ತಂದ ರಂಗನಟ.

ಕಟ್ಟು ಹೊಡೆದು ಸುತ್ತಿದ ಬೆಳ್ಳನೆಯ ರುಮಾಲು, ಬಿಳಿ ಅಂಗಿಯೊಳಗೆ ಅಚ್ಚ ಬಿಳಿಯ ಒಳಾಂಗಿ, ಕಿಸೆಯಂಗಿ, ಬೆಳ್ಳನೆಯ ಧೋತರ, ಹೆಗಲಿಗೊಂದು ಶಾಲು, ಮುಖದ ತುಂಬಾ ಸದಾ ಉಕ್ಕುವ ರಂಗ ಪಕ್ವತೆ... ಹೀಗಿರುವ ಅವರನ್ನು ನೋಡುವುದೇ ಒಂದು ಸೊಬಗು. ರಂಗಾವಿಷ್ಕಾರ ಕುರಿತು ಶಾಣೇತನದಿಂದ ಪೋಣಿಸಿದ ಅವರ ಮಾತು ಕೇಳುವುದೇ ಮತ್ತೊಂದು ಸೊಗಸು. ರಂಗ ಸಮನ್ವಯತೆಯ ಸುಳಿವಿನೆಳೆ ಅವರ ಬಿಳಿ ರುಮಾಲಿನೊಳಗೆ ಚುಳುಕಾಗಿರುತ್ತದೆ.

ಇಪ್ಪತ್ತೈದರ ಹರೆಯದ ಹೊಸ್ತಿಲಲ್ಲಿ ಕಾಲಿಟ್ಟ ಕರ್ನಾಟಕ ನಾಟಕ ಅಕಾಡೆಮಿ ನಾಳೆ (8–9–2001) "ಬಾ ಅತಿಥಿ" ಎಂಬ ಆಪ್ತ ಸಂವಾದ ಏರ್ಪಡಿಸಿದ್ದು, ಮುಂಜಾನೆ 10.30ಕ್ಕೆ ಏಣಗಿ ಬಾಳಪ್ಪನವರೊಂದಿಗೆ ಮನಸ್ಸು ಬಿಚ್ಚಿ ಮಾತಾಡುವ ಅವಕಾಶವನ್ನು ದಾವಣಗೆರೆಯ ಬಾಪೂಜಿ ಸಭಾಂಗಣದಲ್ಲಿ ಏರ್ಪಡಿಸಿದೆ. ಬನ್ನಿ ರಂಗ ಬದುಕಿನ ಸಂಧ್ಯಾ ಕಾಲದಲ್ಲಿರುವ ಬಾಳಪ್ಪನವರೊಂದಿಗೆ ರಂಗ ಮುಂಜಾನೆ ಸವಿಯೋಣ.

*(ಕೃಪೆ: ಜನತಾವಾಣಿ, 07–09–2001)*

■



# ತುಂಬು ಆರೋಗ್ಯದ ರಹಸ್ಯಗಳು

● ವೈ.ಬಿ. ಕಡಕೋಳ

ನಾನು ಅಭಿನಯಿಸಿದ ನಾಟಕದ ಎಲ್ಲ ಪಾತ್ರಗಳಲ್ಲಿಯ ನೈತಿಕ ಅಂಶಗಳು, ಸಂಭಾಷಣೆಗಳೂ ನನ್ನ ಮೇಲೆ ಪ್ರಭಾವ ಬೀರಿವೆ.

ಉತ್ತರ ಕರ್ನಾಟಕದ ರಂಗಕಲಾವಿದರಲ್ಲಿ 'ಏಣಗಿ ಬಾಳಪ್ಪ'ನವರ ಹೆಸರು ಚಿರಸ್ಥಾಯಿ. ನಾಟಕ ಕ್ಷೇತ್ರದಲ್ಲಿ ಬದುಕಿ-ಬಾಳಿ ಉನ್ನತಿಯ ಏಣಿಯನ್ನು ಹತ್ತಿದ ಇವರು ತಮ್ಮ 'ಏಣಗಿ ಬಾಳಪ್ಪ' ಎಂಬ ಹೆಸರಿಗೆ ಹೊಸ ಅರ್ಥವನ್ನೇ ನೀಡಿದರು. ರಂಗ ಕಲೆಯಲ್ಲಿ ನಿಷ್ಣಾತರಾದ ಇವರು ಉ.ಕ.ದಲ್ಲಿ ಜನಜನಿತರು. "ಜನುಮದ ಜೋಡಿ" ಚಿತ್ರದ **"ದೇಹವೆಂದರೆ ಓ ಮನುಜ ಮೂಳೆ ಮಾಂಸಗಳ ತಟಿಕೆ ನಿಜ"** ಡಾ॥ ರಾಜ್ ಹಿನ್ನೆಲೆ ಗಾಯನಕ್ಕೆ ಅಭಿನಯಿಸಿ, ಉತ್ತರ ಕರ್ನಾಟಕದ ಆಡುಮಾತಿನ ಸೊಗಡು ನೀಡಿದ್ದ ಜನಪ್ರಿಯ ರಂಗನಟ 'ಏಣಗಿ ಬಾಳಪ್ಪನವರು ಬೆಳಗಾಗುವುದರಲ್ಲಿ ದಕ್ಷಿಣ ಕರ್ನಾಟಕದಲ್ಲೂ ಖ್ಯಾತಿಯ ಉತ್ತುಂಗಕ್ಕೇರಿದ್ದರು.'

ಸ್ವಾತಂತ್ರ್ಯ ಪೂರ್ವದಲ್ಲಿ 'ರಂಗನಟ'ರಾಗಿ

ಗುರುತಿಸಿಕೊಂಡ ಬಾಳಪ್ಪನವರು ಇತ್ತೀಚೆಗೆ ಬೆಳಗಾವಿಯಲ್ಲಿ ಜರುಗಿದ 70ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಯಂಕಾಲ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದರು. 90ರ ಇಳಿವಯಸ್ಸಿನಲ್ಲಿಯೂ ಮಾಸದ ಅವರ ಈ ರಂಗ ಚಟುವಟಿಕೆ ಕಂಡು ಎಂಥವರಿಗೂ ಅಚ್ಚರಿಯಾಗುತ್ತದೆ.

ಏಣಗಿ ಬಾಳಪ್ಪನವರ ಅಭಿನಯದ ವಿಶೇಷವೆಂದರೆ ಅವರು ಬಹಳಷ್ಟು ನಾಟಕಗಳಲ್ಲಿ ಸ್ತ್ರೀ ಪಾತ್ರಧಾರಿ. ಹೇಮರೆಡ್ಡಿ ಮಲ್ಲಮ್ಮ, ವೀರರಾಣಿ ಕಿತ್ತೂರ ಚೆನ್ನಮ್ಮ, ರಾಣಿ ರುದ್ರಮ್ಮ, ಚಲೇಜಾವ್, ಸ್ತ್ರೀ ಮುಂತಾದ ನಾಟಕಗಳಲ್ಲಿ ಅವರ ಸ್ತ್ರೀ ಪಾತ್ರಾಭಿನಯ ಅಮೋಘ, ಅನನ್ಯ. ನಾಯಕ ಪ್ರಧಾನ ಪಾತ್ರಗಳಲ್ಲೂ ಅವರು ಮಿಂಚಿದ್ದಾರೆ. ಅವರ ಬಸವೇಶ್ವರ ಪಾತ್ರವಂತೂ ಅಪಾರ ಖ್ಯಾತಿಗಳಿಸಿತು. 'ಮಾವ ಬಂದ್ನಪೋ ಮಾವ'ದಲ್ಲಿ ಚೆನ್ನಪ್ಪ ಗೌಡನಾಗಿ, 'ದೇವರ ಮಗು' ನಾಟಕದಲ್ಲಿ ಕೇಶವರಾವ್, 'ಶಾಲಾ ಮಾಸ್ತರ' ನಾಟಕದ ನೀತಿವಂತ ಮಾಸ್ತರ್, ಗೋರಾಕುಂಬಾರ, ಕುಂಕುಮ, ಶ್ರೀ ಪದ್ಮಾವತಿ ಮಾತಾ ಮೊದಲಾದ ನಾಟಕಗಳಲ್ಲಿ ಇವರ ಅಭಿನಯ ವೈವಿಧ್ಯಮಯ.

ಕೇವಲ ನಾಲ್ಕನೆಯ ತರಗತಿಯವರೆಗೆ ಮಾತ್ರ ಓದಿದ ಬಾಳಪ್ಪನವರು ಸರಳತೆ, ಸೌಜನ್ಯತೆಯ ಸಾಕಾರಮೂರ್ತಿ. ಬಿಳಿ ಧೋತರ, ಅಂಗಿ ಪೇಟಾ ಧರಿಸುವ ಕರ್ನಾಟಕದ ಉದ್ದಗಲಕ್ಕೂ 'ನಾಟ್ಯ ಭೂಷಣ'ರಾಗಿ ಕೀರ್ತಿವಂತರು. ಅವರು ಸವದತ್ತಿ ತಾಲೂಕಿನ ಅಸುಂಡಿ ಗ್ರಾಮದಲ್ಲಿ ಪ್ರೌಢಶಾಲೆ, ಮಲಪ್ರಭಾ ಶಿಕ್ಷಣ ಸಂಸ್ಥೆ ಹುಟ್ಟುಹಾಕಿ ಕಳೆದ 27 ವರ್ಷಗಳಿಂದ ಅದರ ಅಧ್ಯಕ್ಷರಾಗಿದ್ದಾರೆ.

ಬೆಳಗಾವಿ ಸಾಹಿತ್ಯ ಸಮ್ಮೇಳನದ ಚಟುವಟಿಕೆಗಾಗಿ ಮಗ ಸುಭಾಶ್ ಬಳಿ ಬೆಳಗಾವಿಯಲ್ಲಿ ಉಳಿದುಕೊಂಡಿದ್ದ ಬಾಳಪ್ಪನವರನ್ನು 'ಜೀವನಾಡಿ'ಗಾಗಿ ಸಂಪರ್ಕಿಸಿದಾಗ ಅವರು ಮನಬಿಚ್ಚಿ ಮಾತನಾಡಿದರು.

'ನಾನು ಮೂಲತಃ ಸಸ್ಯಾಹಾರಿ. ತಾಯಿ ನನಗೆ ಬಾಲ್ಯದಿಂದಲೇ ಇದನ್ನು ರೂಢಿಸಿದ್ದಾರೆ. ನುಚ್ಚು ನವಣಕ್ಕಿ ನುಚ್ಚು, ರೊಟ್ಟಿ, ಬೆಣ್ಣೆ, ತರಕಾರಿ ಆಹಾರವೇ ನಿತ್ಯ ರೂಢಿ. ವಿವಾಹಾನಂತರ ಪತ್ನಿ ಸಾವಿತ್ರಿ ಕೂಡ ಇದಕ್ಕೆ ಹೊರತಾಗಲಿಲ್ಲ. ಇಂದು ನಾನು ಅವಳನ್ನು ನೆನೆಯಲೇಬೇಕು. ನಾಟಕ ಕಂಪನಿ ಕಟ್ಟಿದ ಮೇಲೆ ಹಗಲು ಹೊತ್ತು ಇತರ ವ್ಯವಹಾರದಲ್ಲಿ, ರಾತ್ರಿ ನಾಟಕ ಚಟುವಟಿಕೆ – ಹೀಗೆ ಎಡೆಬಿಡದೆ ಚಟುವಟಿಕೆಯಲ್ಲಿ ರಾತ್ರಿ–ಅಪರಾತ್ರಿಯಲ್ಲಿ ಮನೆಗೆ ಹೋದರೂ ಬೇಸರ ಮಾಡಿಕೊಳ್ಳದೆ ಬಿಸಿ ರೊಟ್ಟಿ, ತರಕಾರಿ, ಬೆಣ್ಣೆ ಉಣಬಡಿಸುತ್ತಿದ್ದಳು. ಹೀಗಾಗಿ ನನಗೆ ಅನಾರೋಗ್ಯ ಎಂದೂ ಕಾಡಿದ್ದೇ ಇಲ್ಲ.'

ಇನ್ನೊಂದು ಮುಖ್ಯ ಸಂಗತಿ ನನ್ನ ಗುರುಗಳಾದ ಚಿಕ್ಕೋಡಿಯ ಶಿವಲಿಂಗ ಸ್ವಾಮಿಗಳು ಹೇಳಿದ ಕಿವಿಮಾತು. 'ದುರ್ವ್ಯಸನಕ್ಕೆ ಬೀಳಬೇಡ, ದುಷ್ಟರ ಸಂಗ ಬೇಡ,

ಕಲಾದೇವಿಯ ಆರಾಧನೆ ಸಚ್ಚಾರಿತ್ರ್ಯದಲ್ಲಿರುವಂತೆ ನಡೆದುಕೊಳ್ಳು' ಎಂಬ ಅವರ ನುಡಿಗಳನ್ನು ಸದಾ ಪಾಲಿಸಿರುವೆ. ಇದು ನನ್ನ ಆರೋಗ್ಯದ ಮೇಲೆ ಪರಿಣಾಮ ಬೀರಿದೆ.

ನಾನು ಅಭಿನಯಿಸಿದ ನಾಟಕದ ಎಲ್ಲ ಪಾತ್ರಗಳಲ್ಲಿಯ ನೈತಿಕ ಅಂಶಗಳು, ಸಂಭಾಷಣೆಗಳೂ ನನ್ನ ಮೇಲೆ ಪ್ರಭಾವ ಬೀರಿವೆ. ನಾನು ಅಭಿನಯವನ್ನು ಕೇವಲ ಮನರಂಜನೆಗೆಂದು ಎಂದೂ ಭಾವಿಸಿಲ್ಲ. ಇದರೊಂದಿಗೆ ನೀತಿ, ನೈತಿಕತೆ, ಮಾನವೀಯತೆಯ ಪ್ರಭಾವ ರೂಢಿಸಬಹುದು ಎಂದು ನಾನು ಅಭಿನಯಿಸಿದ ಎಲ್ಲ ಪಾತ್ರಗಳಲ್ಲೂ ಅಳವಡಿಸಿಕೊಂಡೆ.

*(ಕೃಪೆ: ಜೀವನಾಡಿ, ಮೇ 2003)*

■



# ಈ ಶತಮಾನದ ಸ್ಮರಣೀಯ ವ್ಯಕ್ತಿ

● ಶೂದ್ರ ಶ್ರೀನಿವಾಸ್

ಏಣಗಿ ಬಾಳಪ್ಪನವರು ಈಗಲೂ ಚಿರ ಯುವಕರಂತೆ

ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ಓಡಾಡಿ ಕೊಂಡಿರುವುದು ನಮ್ಮೆಲ್ಲರ ಭಾಗ್ಯ.

ಕರ್ನಾಟಕದ ಸಾಂಸ್ಕೃತಿಕ ಬದುಕಿಗೆ ಉತ್ತರ ಕರ್ನಾಟಕದ ಕೊಡುಗೆ ಅಪಾರವಾದದ್ದು. ಈ ಅಪಾರತೆಯಲ್ಲಿ ಎಂಬತ್ತೊಂದು ವರ್ಷದ ಏಣಿಗೆ ಬಾಳಪ್ಪನವರು ಸೇರುತ್ತಾರೆಂಬುದು ಸಂತೋಷದ ಸಂಗತಿ. ಲಕ್ಷಾಂತರ ಮಂದಿಯನ್ನು ರಂಜಿಸಿದ ಮತ್ತು ಭಾವುಕ ಸಂಬಂಧಗಳನ್ನುಳಿಸಿದ ವೃತ್ತಿರಂಗಭೂಮಿಯ ಘಟನೆಗಳೇ ಸ್ಮರಣೀಯವಾದದ್ದು. ಅಲ್ಲಿಯ ನಟರ ಬಗ್ಗೆ, ಸಂಗೀತಗಾರರ ಬಗ್ಗೆ ಬಣ್ಣಬಣ್ಣದ ಕಥೆಗಳು ಹರಡಿಕೊಂಡಿರುತ್ತವೆ. ಅವು ಎಷ್ಟು ಉಲ್ಲಾಸದಾಯಕವೋ ಅಷ್ಟೇ ವಿಷಾದನೀಯವೂ ಕೂಡ. ಈ ಪರಂಪರೆಯಲ್ಲಿ ಬೆಳೆದು ಬಂದ ಬಾಳಪ್ಪನವರು ತಮ್ಮ ಎಂಬತ್ತೊಂದು ವರ್ಷಗಳ ದೀರ್ಘ ಬದುಕಿನಲ್ಲಿ ಎಪ್ಪತ್ತು ವರ್ಷ ರಂಗದ ಮೇಲೆ ವಿವಿಧ ರೂಪಗಳಲ್ಲಿ ರಂಜಿಸಿದ್ದಾರೆ.

ಬಾಲ್ಯದಲ್ಲಿಯೇ ಶಾಲೆಯನ್ನು ತೊರೆದು

ಬಯಲಾಟಗಳಲ್ಲಿ ತಮ್ಮ ನಟನೆಯನ್ನು ರೂಪಿಸಿಕೊಂಡವರು. ಬಾಲ್ಯದಲ್ಲಿ ಯೌವನದಲ್ಲಿ ನದಿಯಾಗಿ ಪ್ರೇಕ್ಷಕರ ಮನಸ್ಸಿನಲ್ಲಿ ಕಾಣಿಸಿಕೊಂಡಂತೆ ಸುಮಾರು ಎರಡು ದಶಕಗಳಿಗೂ ಮೇಲ್ಪಟ್ಟು ಕರ್ನಾಟಕದ ಉದ್ದಗಲಕ್ಕೂ 'ಜಗಜ್ಯೋತಿ ಬಸವೇಶ್ವರ'ರ ಪಾತ್ರದಲ್ಲಿ ಕಾಣಿಸಿಕೊಂಡವರು. ಕೇವಲ ಕಾಣಿಸಿಕೊಳ್ಳುವುದು ಮಾತ್ರವಲ್ಲ, ಲಕ್ಷಾಂತರ ಮಂದಿಯ ಸಾಂಸ್ಕೃತಿಕ ಅಭಿರುಚಿಯನ್ನು ಕಾಪಾಡಿಕೊಂಡು ಬಂದವರು. ಹಾಗೆಯೇ ಆ ಜನರಿಂದ ಮನಮಿಡಿಯುವಂತೆ 'ಬಾಳು ಅಪ್ಪ' ಎಂಬ ಅಭಿಮಾನದ ಮಾತುಗಳನ್ನು ಪಡೆದು ಇಲ್ಲಿಯವರೆವಿಗೆ ಬಂದಿದ್ದಾರೆ. ಮತ್ತು ಈಗಲೂ ರಂಗಭೂಮಿಯ ಬೆಳವಣಿಗೆಯ ಬಗ್ಗೆ ಯಾರೇ ಉತ್ತಮ ಕೆಲಸ ಮಾಡಿದರೂ, ಮಾತಾಡಿದರೂ ಕಣ್ಣರಳಿಸಿ, ಕಿವಿಯರಳಿಸಿ ಆನಂದಪಡುತ್ತಾ ಬದುಕುತ್ತಿರುವ ಏಣಗಿ ಬಾಳಪ್ಪನವರಿಗೆ ಪ್ರತಿಷ್ಠಿತ "ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ 94" ದೊರಕಿದೆ. ಇದಕ್ಕೆ ನಾವೆಲ್ಲ ಸಂತೋಷಪಡಬೇಕಾದ ಸಂಗತಿ.

ಕರ್ನಾಟಕ ಸರ್ಕಾರ ಮೊದಲನೆಯ ಬಾರಿಗೆ ಈ ಪ್ರಶಸ್ತಿಯನ್ನು ಪ್ರಾರಂಭಿಸಿದೆ. ಅರ್ಹರಾದವರಿಗೆ ಕೊಟ್ಟಿದೆ. ಪ್ರಶಸ್ತಿಗಳು ಅದರ ಘನತೆ ಮತ್ತು ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ ಸಮಯದಲ್ಲಿ; ಅಲ್ಲಲ್ಲಿ ಅರ್ಹರಾದವರಿಗೆ ಸಿಕ್ಕಿದಾಗ; ಮಿಕ್ಕ ಕೊಳಕನ್ನೆಲ್ಲ ಮರೆಯಲು ಪ್ರಯತ್ನಿಸುತ್ತೇವೆ. ಅದೇನೆ ಆಗಿರಲಿ ಬಾಳಪ್ಪನವರು ಬೆಳಗಾವಿ ಜಿಲ್ಲೆಯ ಒಂದು ರೈತ ಕುಟುಂಬದಿಂದ ಬಂದು ತಮ್ಮ ವಿದ್ಯಾಭ್ಯಾಸವನ್ನು ತೊರೆದು ಬಾಲ್ಯದಲ್ಲಿಯೇ ನಾಟಕದ ಗೀಳನ್ನು ಬೆಳೆಸಿಕೊಂಡಿದ್ದು ವಿಚಿತ್ರ ಎಂದು ಕರೆಯುವುದಕ್ಕಿಂತ ಅದ್ಭುತ ಎನ್ನುವುದು ವಾಸಿ. ಇಂಥ ಅದ್ಭುತ ವ್ಯಕ್ತಿತ್ವ ಇದ್ದುದರಿರಿದಲೇ ವೃತ್ತಿರಂಗಭೂಮಿಯನ್ನು ಕಟ್ಟಿ ಅರ್ಧ ಶತಮಾನ ಅದನ್ನು ಕಾಪಾಡಿಕೊಂಡು ಬಂದವರು. ಕೇವಲ ಪ್ರೇಕ್ಷಕರನ್ನು ಮತ್ತು ನಟನಟಿಯರನ್ನು ಬೆಳೆಸಿಕೊಂಡು ಬರುವುದು ಎಷ್ಟು ಮುಖ್ಯವೋ ವೃತ್ತಿ ರಂಗಭೂಮಿಯ ವಾತಾವರಣ ನಂದಿ ಹೋಗದಂತೆ ದುಡಿದವರು.

ಸುಮಾರು ಹತ್ತು ವರ್ಷಗಳ ಹಿಂದೆ ಶಿವರಾತ್ರಿಯ ದಿವಸ ಮಧ್ಯರಾತ್ರಿಯಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಜಗಜ್ಯೋತಿ ಬಸವೇಶ್ವರ' ನಾಟಕವಿತ್ತು. ಕಲಾಕ್ಷೇತ್ರದ ಪಕ್ಕದ ಪುರಭವನದಲ್ಲಿ ಸ್ವಲ್ಪ ಸಮಯ ಕವಾಲಿಯನ್ನು ಕೇಳಿಕೊಂಡು ನಾಟಕ ನೋಡಲು ನಾವು ಒಂದಷ್ಟು ಗೆಳೆಯರು ಹೋಗಿದ್ದೆವು. ಸಂಭಾಷಣೆಗಿಂತ ಹೆಚ್ಚಾಗಿ ಹಾಡುಗಳಿಂದಲೇ ತುಂಬಿರುವ 'ಬಸವೇಶ್ವರ' ನಾಟಕ ಅದು. ಏಣಗಿ ಬಾಳಪ್ಪನವರು ತಮ್ಮ ನಟನೆ ಮತ್ತು ಮಾಧುರ್ಯದ ಹಾಡುಗಳಿಂದ ಎಂಟು ನೂರು ವರ್ಷಗಳ ಹಿಂದಿನ ಬಸವಣ್ಣನ ಲವಲವಿಕೆಯ ಮತ್ತು ದುರಂತದ ವ್ಯಕ್ತಿತ್ವ ನಮ್ಮ ಮುಂದೆ ನಿಂತಂತಿತ್ತು. ಉತ್ತರ ಕರ್ನಾಟಕದ ಬಿಸಿಯ ನೆಲದಲ್ಲಿ ಹತ್ತಾರು ಬಾರಿ ಈ ಪಾತ್ರವನ್ನು ನೋಡಿರುವ ಮಂದಿ ತಮ್ಮ ಹೃದಯ ಮತ್ತು ಮನಸ್ಸುಗಳಲ್ಲಿ ಬಸವಣ್ಣನ ಆರಾಧ್ಯ ಸ್ವರೂಪವನ್ನು ಚಿತ್ರಿಸಿಕೊಳ್ಳುವುದು ಸ್ವಾಭಾವಿಕವಾದದ್ದು. ಈ ಕಾರಣಕ್ಕಾಗಿಯೇ ಪ್ರಶಸ್ತಿ ಸಮಾರಂಭದಲ್ಲಿ ಅಭಿನಂದನಾ ಭಾಷಣ ಮಾಡಿದ ಡಾ. ಕೆ. ಮರುಳಸಿದ್ದಪ್ಪನವರು "ಇಂದು ಏಣಗಿ

ಬಾಳಪ್ಪನವರು ಧಾರವಾಡದ ಬೀದಿಗಳಲ್ಲಿ ಓಡಾಡುತ್ತಿದ್ದರೆ ಜನ ತಮ್ಮ ಮನೆಗಳ ಮುಂದೆ ಬಸವಣ್ಣ ನಡೆದುಹೋದರು ಎನ್ನುವಂತೆ ರೋಮಾಂಚನದ ಅನುಭವದ ಮನಸ್ಥಿತಿಯಲ್ಲಿ ತಮ್ಮನ್ನು ಕಂಡುಕೊಳ್ಳುತ್ತಾರೆ" ಎಂದಿದ್ದು ಅರ್ಥಪೂರ್ಣವಾಗಿತ್ತು.

ಶ್ರೀಮಂತಿಕೆಯನ್ನು ಕಾಣದ ಬಾಳಪ್ಪನವರು ಸರ್ಕಾರದ ಈ ಪ್ರಶಸ್ತಿಯನ್ನು ಮತ್ತು ಒಂದು ಲಕ್ಷ ರೂಪಾಯಿ ಪಡೆದಿದ್ದಾರೆ. ಇದು ಇವರ ವೃದ್ಧಾಪ್ಯದಲ್ಲಿ ನೆಮ್ಮದಿಯ ಕ್ಷಣಗಳನ್ನು ನೀಡಬಹುದು. ಇಲ್ಲಿ ಮತ್ತೊಂದು ಸಂತೋಷದ ಸಂಗತಿಯೆಂದರೆ ಇದೇ ವರ್ಷ ಬಾಳಪ್ಪನವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಬಂದಿದೆ. ಇದರಿಂದ ನೆಮ್ಮದಿಯಿಂದ ತಮ್ಮ ಶ್ರೀಮಂತ ಅನುಭವಗಳನ್ನು ಮೆಲುಕು ಹಾಕಲು ಸಹಕಾರಿಯಾಗಬಹುದು. ಕೆಲವು ವರ್ಷಗಳ ಹಿಂದೆ ಕೂಡಲಸಂಗಮದಲ್ಲಿ ಪ್ರತಿದಿನ ಸಂಜೆ ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್ ಮತ್ತು ಸಿದ್ಧರಾಮ ಜಂಜಲದಿನ್ನಿ ಮುಂತಾದವರು ಹಾಡುತ್ತಿದ್ದಾಗ ಏನೇನೋ ಚರ್ಚೆ ಮಾಡುತ್ತಿದ್ದೆವು. ಆಗ ಶಾಂತರಸರವರು "ಶೂದ್ರ, ಸಿದ್ಧರಾಮ ಜಂಜಲದಿನ್ನಿಯವರನ್ನು ಏಣಗಿ ಬಾಳಪ್ಪನವರು ರಂಗಭೂಮಿಗೆ ಪರಿಚಯಿಸಿದರು. ಬಾಳಪ್ಪನವರಿಗೆ ಜಂಜಲದಿನ್ನಿಯವರನ್ನು ಗರುಡ ಸದಾಶಿವರಾಯರು ಪರಿಚಯಿಸಿದ್ದು" ಎಂದಾಗ ಸಿದ್ಧರಾಮ ಜಂಜಲದಿನ್ನಿಯವರು ತಮ್ಮ ಅನಾರೋಗ್ಯದ ಮಧ್ಯೆಯೂ ಕೆಮ್ಮುತ್ತ ಹಾಡುತ್ತಿದ್ದುದನ್ನು ನೆನಪು ಮಾಡಿಕೊಂಡೆ. ಹಾಗೆಯೇ ವೃತ್ತಿರಂಗಭೂಮಿಯಲ್ಲಿ ಸಂಗೀತಗಾರರ ಪ್ರಾಬಲ್ಯವಿದ್ದಾಗ ಜಂಜಲದಿನ್ನಿಯವರು ಬಾಳಪ್ಪನವರು ನೀಡಿದ ಸಲಹೆಯನ್ನು ಅನುಸರಿಸಿ ಸಂಗೀತ ನೀಡುವ ಸೌಜನ್ಯವನ್ನು ಪಡೆದಿದ್ದರಂತೆ. ಬಾಳಪ್ಪನವರ ಸಾಮಾಜಿಕ ಮತ್ತು ಐತಿಹಾಸಿಕ ನಾಟಕಗಳಿಗೆ ಇವರ ಸಂಗೀತವನ್ನು ಇಂದಿಗೂ ಉತ್ತರ ಕರ್ನಾಟಕದ ಪ್ರೇಕ್ಷಕರು ನೆನಪು ಮಾಡಿಕೊಳ್ಳುತ್ತಾರೆ.

ಗುಬ್ಬಿ ವೀರಣ್ಣನವರು ಬಾಳಪ್ಪನವರನ್ನು ನಾಟಕ ಅಕಾಡೆಮಿಯ ಸದಸ್ಯರನ್ನಾಗಿ ಮಾಡಿದ್ದನ್ನು ಯಾವಾಗಲೂ ಸ್ಮರಿಸಿಕೊಳ್ಳುತ್ತಾರೆ. ಯಾಕೆಂದರೆ ವೀರಣ್ಣನವರ ಜೊತೆಯಲ್ಲಿ ಹಾಗೂ ಬಿ. ಪುಟ್ಟಸ್ವಾಮಯ್ಯ, ಅ.ನ.ಕೃ. ಜೋಳದರಾಶಿ ದೊಡ್ಡನಗೌಡರು ಮುಂತಾದ ಘಟಾನುಘಟಿಗಳ ಮಧ್ಯೆ ಕೂತಿದ್ದೆ ಎನ್ನುವುದೇ ಸ್ಮರಣೀಯವಾದದ್ದು. ಈ ಎಲ್ಲ ಸ್ಮರಣೆಗಳಲ್ಲಿ ಎಂಬತ್ತೊಂದು ವರ್ಷದ ಬಾಳಪ್ಪನವರು ನಮ್ಮ ನಡುವೆ ಇದ್ದಾರೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ವೈ.ಕೆ. ಮುದ್ದುಕೃಷ್ಣರವರು "ಏಣಗಿ ಬಾಳಪ್ಪನವರು ಈಗಲೂ ಚಿರ ಯುವಕರಂತೆ ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ಓಡಾಡಿಕೊಂಡಿರುವುದು ನಮ್ಮೆಲ್ಲರ ಭಾಗ್ಯ" ಎಂದಾಗ ಸಭಿಕರು ಆತ್ಮೀಯತೆಯಿಂದ ಚಪ್ಪಾಳೆ ತಟ್ಟಿ ಸ್ವಾಗತಿಸಿದರು.

ಪ್ರಶಸ್ತಿಗೆ ಹೃದಯ ತುಂಬಿ ಮಾತಾಡಿದ ಬಾಳಪ್ಪನವರು ಜೋಳದರಾಶಿ ದೊಡ್ಡನಗೌಡರ ರಚನೆಯಾದ "ಹೋಗಿ ಬರ್ತೀವರಯ್ಯ ನಮ್ಮೂರಿಗೇ..... ನಾವು

ವಾಸಿಸುತ್ತಿದ್ದ ಮನೆ ಹಳೆಯದಾಯಿತು" ಎಂಬ ಹಾಡನ್ನು ಹಾಡಿದಾಗ ಎಲ್ಲರ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ವಿಷಾದವನ್ನು ತುಂಬಿದ್ದರು. ಬಾಳಪ್ಪನವರು ನಮ್ಮ ಸಾಂಸ್ಕೃತಿಕ ನೆಲದಲ್ಲಿ ಇನ್ನು ಒಂದಷ್ಟು ಕಾಲ ನಗುನಗುತ್ತಾ ಜೀವನ ಸಾಗಿಸಲಿ. ಬಾಳಪ್ಪನವರಷ್ಟೇ ಪ್ರತಿಭಾವಂತ ನಟನಾದ ಅವರ ಮಗ ಏಣಗಿ ನಟರಾಜ ತಂದೆಯ ಶಿಸ್ತನ್ನು ರೂಢಿಸಿಕೊಂಡು ವೃತ್ತಿರಂಗಭೂಮಿಯ ವೃಕ್ಷವನ್ನು ನಟಿಸಿ, ನಿರ್ದೇಶಿಸಿ ರಕ್ಷಿಸಲಿ ಎಂದು ಆಶಿಸುವೆ.

*(ಕೃಪೆ: ಲಂಕೇಶ ಪತ್ರಿಕೆ, 08–11–1995)*

■



# ಪರಾಕಯ ಪ್ರವೇಶ ಮಾಡುವ ನಟಸಾಮ್ರಾಟ

● ರಾಜು ಉಸ್ತಾದ್

ತಮಗೇ ಜೀವನವಿಡೀ ಸಾಥ್ ನೀಡಿದ ಇಬ್ಬರು ಪತ್ನಿಯರನ್ನು ಮನದುಂಬಿ ಹರಸುತ್ತಾರೆ. ಸಾವಿತ್ರಮ್ಮ ಆರೋಗ್ಯ, ಆಸ್ತಿ ಕಾಯ್ದರೆ; ಲಕ್ಷ್ಮೀಬಾಯಿ ಕಲೆಯನ್ನು ಕಂಪನಿಯನ್ನು ಉಳಿಸಿದರು. ತಾಯಿ ಬಾಳಮ್ಮ ಇದಕ್ಕೆ ಬೆನ್ನೆಲುಬಾಗಿ ನಿಂತರು. ಹೀಗಾಗಿ ಬಾಳಪ್ಪ ಬದುಕಿದ ಎನ್ನುತ್ತಾರೆ.

**ಧೋ** ಎಂದು ಒಂದೆ ಸಮನೇ ಸುರಿದ ಮಳೆ ಅದೇ ತಾನೇ ನಿಂತಿತ್ತು. ಊರ ಮುಂದಿನ ಕಾಲುವೆ ಭರ್ತಿ ತುಂಬಿ ಹರಿಯುತ್ತಿತ್ತು. ಅದೇ ವೇಳೆ ಐದಾರು ವರ್ಷದ ಮಗುವೊಂದು ಬೈಲಹೊಂಗಲ ಸಂತೆಗೆ ಹೋಗಿದ್ದ ತನ್ನ ತಾಯಿ ಬರುವ ದಾರಿಕಾಯುತ್ತ ಮಟ್ಟ ಹೆಜ್ಜೆ ಹಾಕುತ್ತಾ ಜಾರಿ ಪಕ್ಕದ ಕಾಲುವೆಗೆ ಬಿದ್ದು ತೇಲಿ ಹೊರಟಿತ್ತು. ಆ ಬಾಲಕ ಕೊಚ್ಚಿ ಹೋಗುವುದನ್ನು ಕಂಡ ಜನ ಆತನನ್ನು ಸಾಹಸಪಟ್ಟು ಕಾಪಾಡಿದರು. ನಂತರ ಏಣಗಿ ಬಾಳಪ್ಪ ನೀನು ನೂರ್ಕಾಲ ಬಾಳಪ್ಪ ಎಂದು ಹರಸಿದರು.

ಅಂದು ಸಾವಿನೊಡನೆ ಸೆಣಸಿ ಬಂದ ಬಾಲಕ ಊರಿನ ಜನರ ಹರಕೆಯಂತೆ ನೂರ್ಕಾಲ ಬಾಳುವುದಷ್ಟೇ ಅಲ್ಲ ನೂರಾರು ಕಾಲ ಬಾಳುವಂತೆ ಕೀರ್ತಿಶೇಷನಾದ ನಟ ಸಾಮ್ರಾಟನಾದ. ತನ್ನ

ಹೆಸರಿನೊಂದಿಗೆ ಹುಟ್ಟೂರಿನ ಕೀರ್ತಿಯನ್ನೂ ರಂಗಭೂಮಿಯನ್ನೂ ಬೆಳಗಿಸಿ ಶತಮಾನದ ಹೊಸ್ತಿಲಲ್ಲಿರುವ ಏಣಗಿ ಬಾಳಪ್ಪನವರದು ನಿಜವಾಗಿಯೂ ಸಾರ್ಥಕ ಬಾಳು.

ಬೆಂಕಿಯಲ್ಲಿ ಅರಳಿದ ಬದುಕು ಬಾಳಪ್ಪನವರದು. ತುಟಿ ಬಿಚ್ಚಿ ಅಮ್ಮಾ ಎನ್ನುವ ಮೊದಲೇ ಅಪ್ಪನ ಸಾವು. ಲೋಕಜ್ಞಾನ ಬರುವ ಮೊದಲೇ ಒಡಹುಟ್ಟಿದ ಅಣ್ಣ-ಅಕ್ಕನ ಸಾವು. ಕಿತ್ತು ತಿನ್ನುವ ಬಡತನ, ತಾಯಿ ಮತ್ತು ತಾನು ಇಬ್ಬರೂ ಕೂಡಿ ದುಡಿದರೂ ಒಬ್ಬರ ಕೂಲಿ ಕೊಡಲು ನಿರಾಕರಿಸಿದ ಸಾಹುಕಾರ ಅರೆಹೊಟ್ಟೆಯಲ್ಲೇ ದಿನದೂಡಿ, ಸಮಸ್ಯೆಗಳನ್ನು ಮೆಟ್ಟಿ ನಿಂತು ರಂಗಕ್ಷೇತ್ರದಲ್ಲಿ ಪರ್ವತದೆತ್ತರಕ್ಕೆ ಬೆಳೆದು ನಿಂತ ಬಾಳಪ್ಪ 'ನಾಟ್ಯ ಭೂಷಣ'ರಾದರು.

'ಕಲಾವೈಭವ ನಾಟ್ಯ ಸಂಘ ಬೆಳಗಾವಿ (ಕರ್ನಾಟಕ)' ಹೆಸರಿನ ಸ್ವಂತ ನಾಟಕ ಕಂಪನಿ ಕಟ್ಟಿದ ಬಾಳಪ್ಪನವರು ನವ್ಯ ಪ್ರಯೋಗಗಳ ಮೂಲಕ ರಂಗಭೂಮಿಗೆ ಹೊಸ ಆಯಾಮ ನೀಡಿದರು. ಭೋಟಾ ಗಂಧರ್ವರ ಜತೆಗೆ ಕಲಾ ಪ್ರದರ್ಶನದ ಅವಕಾಶ ಪಡೆದರು. ಬಣ್ಣದ ಬದುಕಿನಲ್ಲಿ ಅನೇಕ ಕಷ್ಟ-ನಷ್ಟ ಸ್ತುತಿ-ನಿಂದೆಗಳನ್ನು ಜೀರ್ಣಿಸಿಕೊಂಡರು. ನಂಬಿದವರಿಂದಲೇ ಅಪವಾದ, ಆರೋಪಕ್ಕೊಳಗಾದರು. ಆದರೂ ಬೇಸರಿಸಿಕೊಳ್ಳದೇ ರಂಗಭೂಮಿಯಲ್ಲಿ ಅಪಾರ ಎತ್ತರಕ್ಕೇರಿದರು. ಈ ಎತ್ತರಕ್ಕೇರಲು ಪ್ರೋತ್ಸಾಹಿಸಿದ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳನ್ನು ಮನಸಾರೆ ಸ್ಮರಿಸುತ್ತಾರೆ. ಒಮ್ಮೆ ಅವರ ಕಂಪನಿ ನಿಂತಾಗ ಸಂಭಾವನೆ ನೀಡಲಾಗದ್ದಕ್ಕೆ ಅನ್ನ ಮಾಡುವ ತಪೇಲಿ ಕೊಟ್ಟರು. ಅದು ಮುಂದೆ ಅಕ್ಷಯ ಪಾತ್ರೆಯಾಯಿತು ಎಂದು ನೆನಪಿಸಿಕೊಳ್ಳುತ್ತಾರೆ.

### ಮೂರು ಮದುವೆ

ತಾಂತ್ರಿಕವಾಗಿ ಬಾಳಪ್ಪನವರದ್ದು ಮೂರು ಮದುವೆ. ಒಬ್ಬ ಪತ್ನಿ ಚಿಕ್ಕವರಿರುವಾಗಲೇ ಮೃತಪಟ್ಟಿದ್ದರು. ವಯಸ್ಸಿಗೆ ಬಂದಾಗ ಸಾವಿತ್ರಮ್ಮನ ಜತೆಗೆ ಸಪ್ತಪದಿ ತುಳಿದರು. ಮುಂದೆ ಲಕ್ಷ್ಮೀಬಾಯಿಯವರನ್ನು ಮನೆ ತುಂಬಿಸಿಕೊಂಡರು. ಒಟ್ಟು 9 ಮಕ್ಕಳು, ಮೊಮ್ಮಕ್ಕಳು-ಮರಿಮಕ್ಕಳು ಒಳಗೊಂಡ ತುಂಬು ಪರಿವಾರ ಅವರದ್ದು. ಪತ್ನಿ ಸಾವಿತ್ರಮ್ಮ ಮತ್ತು ಇತ್ತೀಚೆಗೆ ಮಗ ನಟರಾಜನನ್ನು ಕಳೆದುಕೊಂಡ ನೋವು ಇದೆ.

### ನಿಗರ್ವಿ ವ್ಯಕ್ತಿತ್ವ

ಬಾಳಪ್ಪನವರನ್ನು ಕಡುಬಡತನ ಕಿತ್ತು ತಿಂದಂತೆ ಸುಖದ ಸುಪತ್ತಿಗೆಯ ಅನುಭವವೂ ಆಗಿದೆ. ಆದರೆ ಒಂದಿಷ್ಟೂ ಗರ್ವವನ್ನು ಹತ್ತಿರ ಸುಳಿಯಗೊಡದ ಅವರು ರಂಗದ ಗುಂಗಿನಲ್ಲಿ ಸಾಂಸಾರಿಕ ಕರ್ತವ್ಯ ಮರೆತಿರಲಿಲ್ಲ.

ತಮಗೇ ಜೀವನವಿಡೀ ಸಾಥ್ ನೀಡಿದ ಇಬ್ಬರು ಪತ್ನಿಯರನ್ನು ಮನದುಂಬಿ ಹರಸುತ್ತಾರೆ. ಸಾವಿತ್ರಮ್ಮ ಆರೋಗ್ಯ, ಆಸ್ತಿ ಕಾಯ್ದರೆ; ಲಕ್ಷ್ಮೀಬಾಯಿ ಕಲೆಯನ್ನು ಕಂಪನಿಯನ್ನು ಉಳಿಸಿದರು. ತಾಯಿ ಬಾಳಮ್ಮ ಇದಕ್ಕೆ ಬೆನ್ನೆಲುಬಾಗಿ ನಿಂತರು. ಹೀಗಾಗಿ ಬಾಳಪ್ಪ ಬದುಕಿದ ಎನ್ನುತ್ತಾರೆ.

ಪಾಲುದಾರನೊಮ್ಮೆ ಇವರನ್ನು ಕಂಪನಿಯಿಂದ ಹೊರಹಾಕಲು ಸಂಚು ಮಾಡಿ ಮೂರು ದಿನ ಕೋಣೆಯಲ್ಲಿ ಉಪವಾಸ ಕೂಡಿ ಹಾಕಿದ್ದ ಸಂದರ್ಭದಲ್ಲಿ ಹಾಗೂ ಕಂಪನಿಗೆ ಹಣ ಹೂಡಿದ್ದವರು ಕೊಟ್ಟ ನೋಟಿಸ್‌ನಿಂದ ಕಂಪಿಸಿಹೋದ ಆಪತ್ಕಾಲದಲ್ಲಿ ಸಾವಿತ್ರಮ್ಮ ತೋರಿದ ಧೈರ್ಯ, ತವರಿನ ಆರ್ಥಿಕ ನೆರವು, ಅಂದು ಮಾನ ಕಾಪಾಡಿದ ಸಂಗಾತಿಯ ಬೆಂಬಲವನ್ನು ಬಹುವಾಗಿ ಸ್ಮರಿಸುತ್ತಾರೆ.

ಹಾಡಬೇಕು ಹೌದೆನ್ನಿಸಿಕೊಳ್ಳಬೇಕೆಂಬ ಹುಚ್ಚುಹುರುಪು, ಶಭಾಷ್‌ಗಿರಿ–ಒನ್ಸ್‌ಮೋರ್‌ಗಳ ಒತ್ತಾಸೆಯಲ್ಲೇ ಬದುಕಿನೆಲ್ಲ ನೋವುಗಳನ್ನು ಮರೆತಿದ್ದಾರೆ. ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡುವ ಅವರು ನಡೆದಾಡುವ ರಂಗಭೂಮಿಯಾಗಿ ಗೋಚರಿಸುತ್ತಿದ್ದಾರೆ.

ಯಶಸ್ಸಿನ ಶಿಖರಕ್ಕೇರಿದರೂ ಬಾಳಪ್ಪನವರು ನಂಬಿಕೊಂಡಿದ್ದ ಮೌಲ್ಯಗಳನ್ನು ಎಂದೂ ಬಿಟ್ಟುಕೊಟ್ಟಿರಲಿಲ್ಲ. ಇಳಿ ವಯಸ್ಸಿನಿಂದಾಗಿ ಇನ್ನು ಕಂಪನಿ ನಡೆಸುವುದು ಕಷ್ಟಸಾಧ್ಯವೆನಿಸಿದ ತಕ್ಷಣ 1983ರಲ್ಲಿ ಕಲಾವಿದರಿಗೆ ಕೊಡಬೇಕಾದ್ದನ್ನು ಕೊಟ್ಟು ತಮ್ಮ ನಾಟಕ ಕಂಪನಿಯ ಅಂಕದ ಪರದೆ ಎಳೆದರು. ಅಲ್ಲಿಗೆ ಮಹತ್ವದ ರಂಗ ಅಧ್ಯಾಯವೊಂದು ನೇಪಥ್ಯಕ್ಕೆ ಸರಿಯಿತು.

ಬಾಳಪ್ಪನವರು ಪ್ರೇಕ್ಷಕರ ಮೇಲೆ ಬೀರಿದ ಪ್ರಭಾವ ಅಗಾಧ. 1942ರಲ್ಲೊಮ್ಮೆ ಬೈಲಹೊಂಗಲ ತಾಲೂಕಿನ ಎಂ.ಕೆ. ಹುಬ್ಬಳ್ಳಿಯ ಸಂಕ್ರಮಣ ಜಾತ್ರೆಯಲ್ಲಿ 'ಪಠಾಣಿ ಪಾಶ' ನಾಟಕ ಪ್ರದರ್ಶನ ನಡೆದಿತ್ತು. ಬಾಳಪ್ಪನವರು ವೃಂದಾ ಹೆಸರಿನ ಸ್ತ್ರೀ ವೇಷದಲ್ಲಿದ್ದರು. ಬ್ರಿಟಿಷ್ ವಿರೋಧಿ ಚಟುವಟಿಕೆ ನಡೆಯುತ್ತಿದೆ ಎಂದು ಆಗಿನ ಪೊಲೀಸರು ಒಮ್ಮೆಲೇ ನುಗ್ಗಿ ಪ್ರದರ್ಶನ ನಿಲ್ಲಿಸಿದರು. ಕಂಗಾಲಾದ ಬಾಳಪ್ಪನವರು ವೇಷದಲ್ಲಿಯೇ ಠಾಣೆಗೆ ಹೋಗಿ ಸಬ್ ಇನ್‌ಸ್ಪೆಕ್ಟರರನ್ನು ಕಂಡು ನಾಟಕ ಆಡಲು ಅನುಮತಿ ಕೇಳಿದರು. ತಂಗಿ, ಹಂಗ ಮಾಡಕ ಬರೂದಿಲ್ಲ ಎಂದು ನಿರಾಕರಿಸಿದರು. ಎಷ್ಟೋ ಹೊತ್ತಿನವರೆಗೆ ಮನವರಿಕೆ, ಸಂಭಾಷಣೆ ನಡೆಸಿದರೂ ಸ್ತ್ರೀ ವೇಷದ ಬಾಳಪ್ಪ ಪುರುಷ ಎಂಬುದು ಅಧಿಕಾರಿಗೆ ಗೊತ್ತೇ ಆಗಲಿಲ್ಲ. ಕೊನೆಗೆ ಆತವ್ವಾ ನಾಟಕ ಆಡೋಗ್ರಿ ಎಂದು ಹುಕುಂ ಕೊಟ್ಟ.

**ಪರದೆ ಹಿಂದಿನ ಸೀನರಿ**

* ಸ್ವಾತಂತ್ರ್ಯ ಹೋರಾಟಗಾರರಿಗೆ ಬಾಳಪ್ಪನವರ ನಾಟಕ ಕಂಪನಿ ಆಶ್ರಯ ತಾಣ. ರಾತ್ರಿ ಬ್ರಿಟಿಷ್ ಪೊಲೀಸರು ಬೆನ್ನು ಹತ್ತಿದರೆ ಅವರೆಲ್ಲ ಬಾಳಪ್ಪನವರ ನಾಟಕ ಹೊಕ್ಕು ಬಣ್ಣ ಬಳಿದು, ಗಡ್ಡ–ಮೀಸೆ ಹಚ್ಚಿಕೊಂಡು ಪಾತ್ರದವರಾಗಿ ಆಕ್ಷಣದ ಸಂಕಷ್ಟದಿಂದ ಪಾರಾಗುತ್ತಿದ್ದರು. ಹೀಗಾಗಿ ಬ್ರಿಟಿಷ್ ಸರಕಾರದ ಒಂದು ಕಣ್ಣು ಇವರ ಮೇಲಿತ್ತು. ವಾಲಿ ಚೆನ್ನಪ್ಪರಂಥ ಘಟಾನುಘಟಿ ಇದರ ಲಾಭ ಪಡೆದಿದ್ದಾರೆ.
* ಬಾಳಪ್ಪನವರು ಅಯಾ ಕಾಲದ ಸನ್ನಿವೇಶಗಳ ಮೇಲೆ ಪ್ರಭಾವ ಬೀರಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಿತ್ತೂರು ಚನ್ನಮ್ಮ ಮತ್ತು ಚಲೇಜಾವ್, ಕರ್ನಾಟಕ ಏಕೀಕರಣದಲ್ಲಿ ಏಕೀಕರಣ ನಾಟಕ ಆಡಿದ್ದಾರೆ. ಗೋಕಾಕ ಚಳವಳಿಯಲ್ಲಿ

ಡಾ. ರಾಜಕುಮಾರ್ ಚಿತ್ರರಂಗದಿಂದ ನುಗ್ಗಿದರೆ, ಬಾಳಪ್ಪನವರು ರಂಗಭೂಮಿಯಿಂದ ನುಗ್ಗಿ ಜೈಲುವಾಸ ಅನುಭವಿಸಿದ್ದಾರೆ.

* 1931ರಲ್ಲಿ ಕಂಪನಿಯೊಂದು ಹಾನಿಗೀಡಾಗಿ ಮುಚ್ಚಿದಾಗ, ಹಿರಿಯ ಕಲಾವಿದರು ಇವರನ್ನು ಬಳಸಿಕೊಂಡು ಬೇರೆ ರೀತಿಯಲ್ಲಿ ನಾಟಕ ಪ್ರದರ್ಶನ ನೀಡಿ ಊರಿಗೆ ಹೋಗಲು ಹಣ ಹೊಂದಿಸಿಕೊಂಡರು. ಇವರಿಗೆ ಏನನ್ನೂ ಕೊಡದೇ ಟಿಕೇಟ್‌ಗೆ ರೊಕ್ಕ ನೀಡಿರುವುದಾಗಿ ಹೇಳಿ ರೈಲು ಹತ್ತಿಸಿದರು. ಚಕ್ಕರ್ ಬಂದು ಹಿಡಿದಾಗಲೇ ಅವರಿಗೆ ವಾಸ್ತವ ಗೊತ್ತಾಗಿತ್ತು. ಸತ್ಯ ಹೇಳಿ ಕಣ್ಣೀರಿಟ್ಟರು. ಪ್ರಯಾಣಿಕರು ನೆರವಿಗೆ ಬಂದು ಹಾಡು ಹೇಳಿಸಿದರು. ಜತೆಗೆ ರೊಕ್ಕ ಕೊಟ್ಟರು. ಅದನ್ನೇ ತಂದು ತಾಯಿಗೆ ಕೊಟ್ಟರೆ ಅವರು ಬಿಕ್ಷೆ ಬೇಡಿದೆ ಎಂದು ಕೆಂಡಮಂಡಲವಾದರು. ಊರವರು ಸೇರಿ ಸಮಾಧಾನ ಪಡಿಸಬೇಕಾಯಿತು.
* ಬಾಳಪ್ಪನವರು ಕರ್ನಾಟಕದಲ್ಲಷ್ಟೇ ಅಲ್ಲ, ಮಹಾರಾಷ್ಟ್ರದಲ್ಲೂ ಪ್ರಸಿದ್ಧರು. ಇಚಲಕರಂಜಿ, ಮಿರಜ್, ಸಾಂಗ್ಲಿ, ಕೊಲ್ಲಾಪುರ, ಸೊಲ್ಲಾಪುರ, ಗಡಹಿಂಗ್ಲಜದಲ್ಲಿ ಇವರ ಅಪಾರ ಅಭಿಮಾನಿ ಬಳಗವಿದೆ. ಮಹಾರಾಷ್ಟ್ರದ ಹೆಸರಾಂತ ಛೋಟಾ ಗಂಧರ್ವರ ಜತೆಗೆ ನಾಟಕವಾಡಿದ್ದಾರೆ. ಇವರ 300 ರಂಗಗೀತೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧ್ವನಿಮುದ್ರಣ ಮಾಡಿಕೊಂಡಿದೆ. ಸಾಕ್ಷ್ಯಚಿತ್ರಗಳು ಬಂದಿವೆ. ಇವರ ಕುರಿತು ಹಲವು ಪುಸ್ತಕಗಳು ಪ್ರಕಟವಾಗಿವೆ.

*(ಕೃಪೆ: 'ನಮ್ಮ ಬೆಳಗಾವಿ', 28-07-2012)*



# ಬಣ್ಣದ ಬದುಕಿನ ಲೋಕೂರು ಬಾಳಪ್ಪನವರು

● ಡಾ. ಶಿವಗೌಡಾ ಬಾ. ಪಾಟೀಲ

ಜೀವನದಲ್ಲಿ ಅನೇಕ ರೀತಿಯ ಕಷ್ಟನಷ್ಟವನ್ನು ಅನುಭವಿಸಿದ ಬಾಳಪ್ಪನವರು ವ್ಯವಹಾರದಲ್ಲಿ ಅತ್ಯಂತ ಚತುರರು.

ಇತಿಹಾಸವನ್ನು ಬರೆಯಬೇಕು. ಇಲ್ಲವೇ ಇತಿಹಾಸ ಪುರುಷರಾಗಬೇಕೆಂದು ಬಲ್ಲವರು ಹೇಳುತ್ತಾರೆ. ಅದರಂತೆ ಈ ಶತಮಾನದ ಇತಿಹಾಸ ಪುರುಷರಾದವರು ಲೋಕೂರು ಶ್ರೀ ಬಾಳಪ್ಪನವರು.

ನೆಲೆ : ಸದಾ ಬರಗಾಲವನ್ನೇ ಕಂಡುಂಡ ಬೆಳವಲನಾಡನ್ನು ಹಸಿರುಗೊಳಿಸಲು ಮಲಾಪಹಾರಿ ಜಲಾಗಾರ ಉಂಟಾಯಿತು. ಈ ಜಲಾಗಾರದಲ್ಲಿ ಮಲಾಪಹಾರಿಯ ಅಕ್ಕಪಕ್ಕದ ಅದೆಷ್ಟೋ ಭೂಮಿಸ್ಥಿತಿ (ಮನೆಮಾರು) ಊರು ಕೇರಿಗಳೆಲ್ಲ ಜಲಸಮಾಧಿಯಾದವು. ಅಂತಹ ಜಲಸಮಾಧಿಯಾದ ಊರುಗಳಲ್ಲಿ ಒಂದಾದ "ಏಣಗಿ". ಈ ಹೆಸರಿನ ಹಿಂದೆ ಪುರಾಣ ಕಾಲದ ಅನೇಕ ಐತಿಹ್ಯಗಳಿವೆ. ಇದು ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲೂಕಿನ ಒಂದು ಚಿಕ್ಕ ಕುಗ್ರಾಮ.

ದೊಡ್ಡ ಪಟ್ಟಣಗಳಿಂದ ಯಾವುದೇ ರೀತಿಯ ಸಂಪರ್ಕ ಸಾಧನೆಯಿಂದಲೂ ಜೀವನಾವಶ್ಯಕತೆಗಳ ಅನುಕೂಲತೆಯಿಂದಲೂ ವಂಚಿತವಾದ ಶಾಪಗ್ರಸ್ಥ ಗ್ರಾಮ. ಇಲ್ಲಿ ಲೋಕೂರು ಮನೆತನದ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದ ಬಾಳಪ್ಪನವರು ಚಿಕ್ಕಂದಿನಿಂದಲೇ ಹಾಡುವ, ಅಭಿನಯಿಸುವ ಗೀಳು ಅಂಟಿಸಿಕೊಂಡವರು. ಇದೇ ಕಲೆಯನ್ನು ಬೆಳೆಸಿಕೊಂಡು ನಾಡಿನ ಉದ್ದಗಲಕ್ಕೂ ಚಿರಪರಿಚಿತರಾಗಿ ಬಾಳಿದರು. ಬಾಳಪ್ಪನವರು ತಮ್ಮೊಂದಿಗೆ ತಮ್ಮ ಹುಟ್ಟೂರಾದ ಏಣಿಗೆಯನ್ನೂ ಇತಿಹಾಸ ಪುಟದಲ್ಲಿ ಸೇರಿಸಿ "ಏಣಿಗಿ ಬಾಳಪ್ಪರೆಂದೇ ಖ್ಯಾತಿ ಪಡೆದರು. ಕಲಾಸೇವೆ : ತಮ್ಮ ಬಾಳ ಬಟ್ಟೆಯ ಪಥದ ಏರಿಳಿತದಲ್ಲಿ ಅದೆಷ್ಟೋ ನೋವು ನಲಿವು ಆಘಾತ ಹಾಗೂ ಪ್ರೋತ್ಸಾಹಗಳನ್ನು ಕಂಡುಂಡು ಜೀವನದಲ್ಲಿ ಸಾಫಲ್ಯಕಂಡ ಸಂಘಜೀವಿ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ನಾಟಕದಲ್ಲಿ ಸ್ತ್ರೀಪಾತ್ರ ಮಾಡಿದ ಬಾಳಪ್ಪನವರಿಗೆ ಗಂಡಸೆಂದು ಗುರುತಿಸಿದವರಿಗೆ ಬಹುಮಾನ ಕೊಡುವಷ್ಟರ ಮಟ್ಟಿಗೆ ಸ್ತ್ರೀ ಪಾತ್ರದಲ್ಲಿ ಒಬ್ಬ ಮಹಿಳೆಯ ಪಾತ್ರಮಾಡಿ ರಂಗಮಂಟಪದ ಮೇಲೆ ಬಂದಾಗ "ನೀನು ಬೇಡ ನಿನ್ನೆ ಬಂದ ಹೆಂಗಸೇ ಬರಲಿ" ಎಂದು ಪ್ರೇಕ್ಷಕರು ಆಕ್ಷೇಪಿಸಿದರಂತೆ. ಅಷ್ಟೊಂದು ಸ್ತ್ರೀ ಪಾತ್ರದಲ್ಲಿ ವಾಸ್ತವತೆ ಇರುತ್ತಿತ್ತು. ಮಹಿಳೆಯರಲ್ಲಿ ಇರಬೇಕಾದ ನಯ ನಾಜೂಕು, ಹಾವ ಭಾವ, ಅದಕ್ಕೆ ತಕ್ಕ ಧ್ವನಿಯಿಂದಾಗಿ ಹೆಂಗಸರನ್ನೇ ದಂಗು ಬಡಿಸುವ ಅಭಿನಯ.

**ಅಭಿನಯ :** ಸ್ತ್ರೀ ಪಾತ್ರವನ್ನಷ್ಟೇ ಕರಗತ ಮಾಡಿಕೊಂಡರೂ ಪುರುಷ ಪಾತ್ರದಲ್ಲಿಯೇನು ಪ್ರತಿಭೆ ಇಲ್ಲದಿಲ್ಲ. ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಎಲ್ಲ ರೀತಿಯ ನಾಟಕಗಳಲ್ಲಿಯೂ ಆಯಾ ಪಾತ್ರಕ್ಕೆ ತಕ್ಕಂತೆ ಅಭಿನಯ. ಒಂದರಂತೆ ಒಂದಿಲ್ಲ.

ಬಸವಣ್ಣನವರ ಬಗ್ಗೆ ಓದದ, ಕೇಳದ, ಕಾಣದ, ಮುಗ್ಧ ಜನ ಬಸವಣ್ಣನೆಂದರೆ ನಾಲ್ಕು ಕಾಲಿನ "ಎತ್ತು" ಎಂದೇ ತಿಳಿದವರಿದ್ದರು. ಬಸವಣ್ಣನೆನ್ನುವನೊಬ್ಬ ಕ್ರಾಂತಿಕಾರಕ ವ್ಯಕ್ತಿ, ಕನ್ನಡನಾಡಿನ ಒಬ್ಬ ಪ್ರವಾದಿ, ಸಮಾಜ ಸುಧಾರಕ, ಮಂತ್ರಿಯಾಗಿದ್ದರೆಂದು ತಿಳಿಸಿ ಕೊಡುತ್ತ ಅನುಭವ ಮಂಟಪವನ್ನು ಸ್ಥಾಪಿಸಿ ಆ ಪೀಠಕ್ಕೆ ಅಲ್ಲಮಪ್ರಭುಗಳನ್ನು ಪ್ರಥಮ ಪೀಠಾಧೀಶರನ್ನಾಗಿ ಮಾಡಿ ಲಿಂಗಭೇದ, ವರ್ಣಭೇದ, ವರ್ಗಭೇದವಿಲ್ಲದೇ ವಿಚಾರ ಮಂಥನಕ್ಕೆ ಸಮಾನ ಹಕ್ಕು ಕಲ್ಪಿಸಿಕೊಟ್ಟು ಪ್ರಪ್ರಥಮ ಸಮಾಜವಾದಿ ಬಸವಣ್ಣನವರು ನಾಡಿನ ಪ್ರೇಕ್ಷಕರಿಗೆ ತೋರಿಸಿಕೊಟ್ಟ ಪುಣ್ಯ ಬಾಳಪ್ಪನವರಿಗೆ ಸಲ್ಲಬೇಕು. ಬಾಳಪ್ಪನವರು ಬಸವಣ್ಣನವರ ಪಾತ್ರಧರಿಸಿ ರಂಗಮಂಟಪದ ಮೇಲೆ ಪ್ರವೇಶಿಸುತ್ತಲೇ ಪ್ರೇಕ್ಷಕರಿಗೆಲ್ಲ ಭಕ್ತಿಭಾವದಿಂದ ಮನದಲ್ಲಿ ನಮನ ಹೇಳುತ್ತ ಬಸವಣ್ಣನವರ ಬಾಯಿಯಿಂದ ಬರುವ ನುಡಿಮುತ್ತುಗಳನ್ನೇ ಕೇಳುತ್ತಿದ್ದರು. ಬಿಜ್ಜಳನ ಓಲಗ, ಕೊಂಡಿಮಂಚಯ್ಯರ ಕಾರಸ್ಥಾನ, ಬಸವಣ್ಣನವರ ಮೇಲೆ ಆರೋಪಗಳ ಸುರಿಮಳೆ, ಬಸವಣ್ಣನವರು ಆರೋಪಗಳಿಂದ ಮುಕ್ತ – ಈ ದೃಶ್ಯಗಳನ್ನು ನೋಡುತ್ತಿದ್ದಂತೆ ರೋಮಾಂಚನಗೊಳ್ಳಬೇಕು. ಅನುಭವ

ಮಂಟಪದ ದೃಶ್ಯ ಇಂದಿನ ಪ್ರಜಾಪ್ರಭುತ್ವದಲ್ಲಿರಬೇಕಾದ ಸಮಾನತೆಯನ್ನು ಅಂದೇ ಪ್ರತಿಪಾದಿಸಿದ್ದನ್ನು ಕಂಡು ಆನಂದ ಭಾಷ್ಪಗಳು ಉದುರುತ್ತವೆ.

ಶಾಲಾಮಾಸ್ತರರ ನಾಟಕದಲ್ಲಿ ಆದರ್ಶ ಶಿಕ್ಷಕನೊಬ್ಬನ ಜೀವನವನ್ನು ವಾಸ್ತವತೆಗೆ ಹತ್ತಿರವಾಗಿ ನಮ್ಮ ಮುಂದೆ ಇಡುತ್ತಾರೆ. ಯಾವುದೇ ಪಾತ್ರ ತಕ್ಕೊಳ್ಳಿರಿ, ಎಲ್ಲವೂ ಸಿದ್ಧಹಸ್ತ. ತಮ್ಮ ತನವನ್ನು ಬಿಡದೇ ಪರಕಾಯ ಪ್ರವೇಶ ಮಾಡಿ ಜನಮನವನ್ನು ಗೆದ್ದಿದ್ದಾರೆ. ಪಾತ್ರದ ಭಾವಕ್ಕೆ ತಕ್ಕಂತೆ ನವರಸಗಳನ್ನು ಕರಗತಮಾಡಿಕೊಂಡು ಬಣ್ಣದ ಬದುಕಿನ ಸಾರ್ಥಕ ಸೇವೆ ಮಾಡಿದ್ದಾರೆ. ಹಾಸ್ಯದಲ್ಲಿ ಅಶ್ಲೀಲತೆಯ ನೆರಳಿಲ್ಲ. ತಿಳಿಹಾಸ್ಯದಿಂದ ಪ್ರೇಕ್ಷಕರ ಮನಗೆದ್ದು ಮತ್ತೊಮ್ಮೆ ಮೊಗದೊಮ್ಮೆ ನೋಡಬೇಕೆಂದು ಕಲಾ ರಸಿಕನಿಗಷ್ಟೇ ಅಲ್ಲದೇ ಎಲ್ಲರಿಗೂ ರಸಿಕತೆ ಮೂಡಿಸುವ ನಟನೆ.

**ಮಾಲೀಕರು :** ಏಣಗಿಯ ಬಾಳಪ್ಪನವರು ನಾಟಕ ಕಂಪನಿ ಕಟ್ಟಿ ಅದರಲ್ಲಿಯ ಪಾತ್ರ ವರ್ಗದವರಿಗೆ ಅಷ್ಟೇ ಮಾಲೀಕರಾಗದೇ ಏಣಗಿಯ ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳವರಿಗೂ ಇವರು ಮಾಲೀಕರು. ಏಣಗಿ ಸುತಗಟ್ಟಿ, ಅಸುಂಡಿ, ಕರೀಕಟ್ಟಿ, ಹಿಟ್ಟಣಿಗಿ ಹೀಗೆ ಸುತ್ತಲಿನ ಎಲ್ಲಾ ಹಳ್ಳಿಯವರೂ ಇವರಿಗೆ ಮಾಲೀಕರು ಎಂದೇ ಸಂಭೋದಿಸುತ್ತಾರೆ. ಅಂದರೆ ಅಷ್ಟೊಂದು ಸುತ್ತಲಿನ ಜನಕ್ಕೆಲ್ಲ ಬೇಕಾದವರಾಗಿದ್ದಾರೆ.

**ವ್ಯವಹಾರ ಚತುರ :** ಜೀವನದಲ್ಲಿ ಅನೇಕ ರೀತಿಯ ಕಷ್ಟನಷ್ಟವನ್ನು ಅನುಭವಿಸಿದ ಇವರು ವ್ಯವಹಾರದಲ್ಲಿ ಅತ್ಯಂತ ಚತುರರು. ಒಂದು ಊರಲ್ಲಿ ನಾಟಕದ ಗುತ್ತಿಗೆದಾರರು ಹಾನಿಗೊಳಗಾಗಿ ಇವರಿಂದ ಮುಖ ಮರೆಸಿಕೊಳ್ಳುತ್ತಿದ್ದರೂ ಅಂತಹ ಕಾಲದಲ್ಲಿ ಗುತ್ತಿಗೆದಾರರನ್ನು ಕರೆಸಿ "ಬನ್ನಿರಿ ಲಾಭಕ್ಕೆ ಅಷ್ಟೇ ನಾವು ನೀವು ಭಾಗಿಗಳಲ್ಲ. ಈಗ ನಾವು ಹಾನಿಯನ್ನು ಹಂಚಿಕೊಳ್ಳೋಣ" ಎಂದು ಗುತ್ತಿಗೆದಾರನಿಗೆ ಜೀವದಾನ ಮಾಡಿದ ವ್ಯವಹಾರ ಚತುರ. ಇಂತಹ ಉದಾಹರಣೆಗಳನ್ನು ಹೇಳುತ್ತ ಹೋದರೆ ಅದೇ ಒಂದು ಉದ್ಗ್ರಂಥವಾಗಬಹುದು.

ಶ್ರೀ ಬಾಳಪ್ಪನವರ ಮೇರು ವ್ಯಕ್ತಿತ್ವವನ್ನು ನನ್ನಿಂದ ವಿವರಿಸಲು ಅಸಾಧ್ಯವೆಂದು ನಾನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡು ಅವರಿಗೆ ಆಯುರಾರೋಗ್ಯ ಭಾಗ್ಯ ಲಭಿಸಿ ಅವರಿಂದ ಇನ್ನೂ ಕಲಾಸೇವೆಯಾಗಲೆಂದು ಹಾರೈಸುತ್ತೇನೆ.

*(ಕೃಪೆ: ಕನ್ನಡಮ್ಮ, 01–04–1996)*



# ಇಂಥ ಪುಣ್ಯಾತ್ಮನಿಗೆ ಇನ್ನೂ ಪದ್ಮಪ್ರಶಸ್ತಿ ಇಲ್ಲ–ದುರಂತ

● ಮಾಸ್ಟರ್ ಹಿರಣ್ಣಯ್ಯ

ಒಂದು ಆದರ್ಶವಾದ ವೃತ್ತಿ ನಾಟಕ ಕಂಪನಿಯ ಮಾಲೀಕ ಹೇಗಿರಬೇಕೆಂದು ತೋರಿಸಿ ಕೊಟ್ಟವರು.

ಆ ಕಾಲದಲ್ಲಿ ವೃತ್ತಿ ನಾಟಕ ಕಂಪನಿಗಳು ಹಲವು ಸಂಖ್ಯೆಯಲ್ಲಿದ್ದ ಕಾರಣ ಒಂದೇ ಕಡೆ ಎರಡು ಮೂರು ಕಂಪನಿಗಳು ಪ್ರದರ್ಶನ ಕೊಡುತ್ತಿದ್ದ ಸಂದರ್ಭಗಳೂ ಇತ್ತು. ಇದರಿಂದ ಸಂಪಾದನೆ ಕಡಿಮೆಯಾಗುತ್ತಿತ್ತು. ಹಾಗಾಗಿ ಏಣಗಿ, ಚಿತ್ತರಗಿ ಗಂಗಾಧರ ಶಾಸ್ತ್ರಿಗಳೆಂಬ ಶ್ರೇಷ್ಠ ಹರಿಕಥೆ ವಿದ್ವಾಂಸರು ಮತ್ತು ನಾನು ಸೇರಿ ಒಂದು ನಿರ್ಧಾರಕ್ಕೆ ಬಂದು ಇಡೀ ಕರ್ನಾಟಕವನ್ನು ಮೂರು ಭಾಗವಾಗಿ ಹಂಚಿಕೊಂಡು ತಿರುಗಾಟ ನಡೆಸಿದೆವು. ಊರಿನ ಜಾತ್ರೆಗಳನ್ನೂ ಹಂಚಿ ಕೊಂಡು ನಾಟಕ ಪ್ರದರ್ಶಿಸುವ ಒಪ್ಪಂದಕ್ಕೆ ಬಂದಿದ್ದೆವು. ನಡೆದಾಡುವ ಬಸವಣ್ಣನಂತೆ ಇರುವವರು ಏಣಗಿ. ಒಂದು ಆದರ್ಶವಾದ ವೃತ್ತಿ ನಾಟಕ ಕಂಪನಿಯ ಮಾಲೀಕ ಹೇಗಿರಬೇಕೆಂದು ತೋರಿಸಿಕೊಟ್ಟವರು. ತನ್ನ ಮೇಲೆ ಎಷ್ಟೇ ಸಾಲಸೋಲಗಳಿದ್ದರೂ ರಂಗಕ್ಕೆ

ಬಂದ ಮೇಲೆ ಪಾತ್ರದೊಳಗೆ ಪರಕಾಯ ಪ್ರವೇಶಿಸುತ್ತಿದ್ದವರು. ತನ್ನ ನೋವು, ಸಂಕಷ್ಟಗಳನ್ನು ಪ್ರೇಕ್ಷಕರೆದುರು ಅವರೆಂದೂ ಪ್ರದರ್ಶಿಸುತ್ತಿದ್ದವರಲ್ಲ. ಏಣಗಿ ಹೇಗೆ ಶ್ರೇಷ್ಠ ನಟ, ನಿರ್ದೇಶಕನೋ, ತೂಕದ ಹಾಡುಗಾರಿಕೆಯೂ ಅವರದ್ದಾಗಿತ್ತು. ರಾಗಸಂಚಾರದಲ್ಲಿ ಒಂದು ಭಾವ ಇತ್ತು. ಬಹುಶಃ ಇದೆಲ್ಲಾ ನಮ್ಮ ಕಾಲದ ಕಲಾವಿದರ ಒಂದು ವಿಶೇಷತೆ. ಇಂಥ ಪುಣ್ಯಾತ್ಮನಿಗೆ ಇನ್ನೂ ಪದ್ಮಪ್ರಶಸ್ತಿ ಸಿಗದಿರುವುದು ದುರಂತ. ಎಂತೆಂಥವರಿಗೋ ಪ್ರಶಸ್ತಿ ಕೊಡ್ತಾರೆ ಸ್ವಾಮೀ, ಇಡೀ ಬದುಕನ್ನೇ ರಂಗಭೂಮಿಗಾಗಿ ಅರ್ಪಿಸಿದ, ಎಷ್ಟೋ ಕಲಾವಿದರನ್ನು ರಂಗಕ್ಕೆ ತಂದ, ಅನೇಕರಿಗೆ ಬದುಕು ಕೊಟ್ಟ ಏಣಗಿಯವರಿಗೆ ಪದ್ಮ ಪ್ರಶಸ್ತಿ ಕೊಡಲೇಬೇಕು.

■



# ವೃತ್ತಿ, ಹವ್ಯಾಸಿ ಕೊಂಡಿ 'ಮ್ಯಾಳ'

● ಪ್ರೊ. ಚಂದ್ರಶೇಖರ ಪಾಟೀಲ

> ಬಾಳಪ್ಪನವರ ಪುತ್ರ ಹಾಗೂ ಕನ್ನಡ ರಂಗಭೂಮಿಯ ಭರವಸೆದಾಯಕ ನಟ ಏಣಗಿ ನಟರಾಜ ಇದರ ಕ್ರಿಯಾಶಕ್ತಿ ಆಗಿದ್ದ.

ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಮಧ್ಯೆ ಇರುವ ಕಂದಕವನ್ನು ಮುಚ್ಚಿಹಾಕಬೇಕೆನ್ನುವ ಏಣಗಿ ಬಾಳಪ್ಪನವರ ಕನಸನ್ನು ನನಸು ಮಾಡುವ ಉದ್ದೇಶದಿಂದಲೇ 1990ರ ದಶಕದಲ್ಲಿ ಧಾರವಾಡದಲ್ಲಿ 'ಮ್ಯಾಳ' ನಾಟಕತಂಡ ಹುಟ್ಟುಹಾಕಿದೆವು. ಬಾಳಪ್ಪನವರ ಪುತ್ರ ಹಾಗೂ ಕನ್ನಡ ರಂಗಭೂಮಿಯ ಭರವಸೆದಾಯಕ ನಟಏಣಗಿ ನಟರಾಜ ಇದರ ಕ್ರಿಯಾಶಕ್ತಿಯಾಗಿದ್ದ. ಜಾನಪದ ಸಣ್ಣಾಟ 'ಶ್ರೀ ಕೃಷ್ಣ ಪಾರಿಜಾತ' ಮ್ಯಾಳದ ಮೊದಲ ನಾಟಕ. ನಟರಾಜರ ನಿರ್ದೇಶನಕ್ಕೆ ಬಸವಲಿಂಗಯ್ಯ ಹಿರೇಮಠ ಸಂಗೀತ ನಿರ್ದೇಶನ ಮಾಡಿದ್ದರು.

ಎರಡನೇ ನಾಟಕ ವೃತ್ತಿರಂಗಭೂಮಿಯ ಪ್ರಖ್ಯಾತ ನಾಟಕಕಾರ ಎಚ್.ಟಿ.ಮಹಾಂತೇಶ ಶಾಸ್ತ್ರಿ ಅವರ 'ಕುಂಕುಮ'. ಈ ನಾಟಕದಲ್ಲಿ ಸ್ವತಃ ಬಾಳಪ್ಪ ಹಾಗೂ ಹೆಸರಾಂತ ಕಲಾವಿದೆಯಾದ ಅವರ ಪತ್ನಿ

ಏಣಗಿ ಲಕ್ಷ್ಮೀಬಾಯಿ ತಮ್ಮ ಇಳಿವಯಸ್ಸಿನಲ್ಲೂ ಮನೋಜ್ಞವಾಗಿ ಅಭಿನಯಿಸಿದರು. ಮೂರನೇಯದಾಗಿ ಹವ್ಯಾಸಿ ನಾಟಕವೊಂದನ್ನು ಪ್ರಯೋಗಿಸಿ ನಂತರ ಮೊಲಿಯರ್‌ನ ಫ್ರೆಂಚ್ ನಾಟಕದ ಅನುವಾದ 'ಬಾರ್ಜ್ವಾ ದಿ ಜಂಟಲ್‌ಮನ್' ಅಭಿನಯಿಸಿದೆವು. ಮುಂದೆ ಬಹಳ ಕಾಲ ಮ್ಯಾಳ ಉಳಿಯಲಿಲ್ಲವಾದರೂ ಹವ್ಯಾಸಿ ಮತ್ತು ವೃತ್ತಿಯ ಮಧ್ಯೆ ಒಂದು ಕೊಂಡಿಯಾಗಿ ಕಾರ್ಯನಿರ್ವಹಿಸಬೇಕೆನ್ನುವ ಅಲ್ಪಕಾಲದ ಪ್ರಾಯೋಗಿಕ ತಂಡವಾಗಿ ಇತಿಹಾಸದಲ್ಲಿ ದಾಖಲಾಯಿತು.

■



# ಸಾಷ್ಟಾಂಗ ಮಾಡಿದ ಸ್ವಾಮೀಜಿ!

● ಏಣಗಿ ಬಾಳಪ್ಪ

ಗಣೇಶ ಅಮೀನಗಡ ನಿರೂಪಿಸಿರುವ 'ಬಣ್ಣದ ಬದುಕಿನ ಚಿನ್ನದ ದಿನಗಳು' ಆತ್ಮಕತೆಯಿಂದ ಆಯ್ದ ಭಾಗ

ಧಾರವಾಡ ಜಿಲ್ಲೆಯ ಗುಡ್ಡದಮಲ್ಲಾಪುರ ಊರಲ್ಲಿ ಬಸವಣ್ಣನ ಜಾತ್ರೆಯಲ್ಲಿ ನಮ್ಮ ಮುಕ್ಕಾಮು ಇತ್ತು. ಧಾರವಾಡದ ಮುರುಘಾ ಮಠದ ಮೃತ್ಯುಂಜಯ ಸ್ವಾಮಿಗಳು ಜಾತ್ರೆಗೆ ಬಂದಿದ್ದರು. ಬಸವೇಶ್ವರ 'ನಾಟಕ ನೋಡಲು ಬರ್ರಿ' ಅಂತ ಕೇಳಿಕೊಂಡೆ. ಸ್ವಾಮಿಗಳು ಆಗಿದ್ದರಿಂದ ರಂಗದ ಬದಿಗೆ ಅವರನ್ನು ಕೂಡಿಸಿದ್ದೆ. ಅನುಭವ ಮಂಟಪದ ಸನ್ನಿವೇಶ ನಡೆಯುತ್ತಿರುವಾಗಲೇ ಸ್ವಾಮಿಗಳು ಬಸವೇಶ್ವರ ಪಾತ್ರ ಮಾಡಿದ ನನಗೆ ಸಾಷ್ಟಾಂಗ ನಮಸ್ಕಾರ ಹಾಕಿದ್ರು. ಗಾಬರಿಯಾಯಿತು. ಉಳಿದವರಿಗೂ ಗಾಬರಿ. ಪ್ರೇಕ್ಷಕರಿಗೆ ಆಶ್ಚರ್ಯ. ಕೂಡಲೇ ನಾಟಕ ನಿಲ್ಲಿಸಿದೆವು. ಅವರನ್ನು ಆಸನದ ಮ್ಯಾಲೆ ಕೂಡಿಸಿ 'ಇದು ನಾಟಕ್ರೀ, ಇದು ನಾಟಕ' ಅಂದಾಗ ಅವರು ಹ್ಞಾಂ ಹ್ಞಾಂ ಅಂದರು. ಅಷ್ಟು

ಭಾವಪರವಶರಾಗಿದ್ದರು. ಇದನ್ನು ಯಾಕೆ ಹೇಳಿದೆ ಅಂದ್ರೆ ನಾಟಕದೊಳಗೆ ಪ್ರೇಕ್ಷಕರು ಅಷ್ಟು ತಲ್ಲೀನರಾಗಿರುತ್ತಿದ್ದರು.

ಹುಬ್ಬಳ್ಳಿಯಲ್ಲಿ ಬಸವೇಶ್ವರ ನಾಟಕದ 150ನೇ ಪ್ರಯೋಗಕ್ಕ ಧಾರವಾಡ ನವಕಲ್ಯಾಣಮಠದ ಕುಮಾರಸ್ವಾಮಿಗಳನ್ನು ಕರೀಲಿಕ್ಕೆ ಹೋದೆ.

'ನಾನು ಯಾವ ನಾಟಕ ನೋಡೂದಿಲ್ಲ. ಸ್ವಾಮಿಗಳು ನಾಟಕಕ್ಕೆ ಹೋಗಬಾರ್ದು' ಅಂದ್ರು.

ಈ ಹಿಂದೆ ಬಂದ ಗಣ್ಯರ ಹೆಸರು ಹೇಳಿ ಬರಬೇಕೆಂದೆ. ಅದಕ್ಕವರು 'ಪತ್ರಿಕೆಗಳಲ್ಲಿ ಬಂದಿದ್ದನ್ನು ಓದಿರುವೆ. ಮಠದ ಸ್ವಾಮಿಗಳು ಮಾಡದ ಕೆಲಸವನ್ನು ನೀ ಮಾಡಿರುವೆ' ಅಂದ್ರು.

'ಇದನ್ನ ನಾಟಕಕ್ಕ ಬಂದು ನೋಡಿ ಹೇಳ್ರಿ ಬುದ್ಧಿ' ಅಂದೆ.

ಆದರೂ ಅವರು ಒಪ್ಪಲಿಲ್ಲ. ಯಾಕಂದ್ರ ನಾಟಕದ ಬಗ್ಗೆ ಅವರಿಗೆ ಅಷ್ಟು ಒಳ್ಳೆ ಅಭಿಪ್ರಾಯ ಇರಲಿಲ್ಲ.

'ಸ್ವಾಮಿಗಳು ಇಂಥಾ ನಾಟಕ ನೋಡದಿದ್ರ ಮತ್ಯಾರು ನೋಡ್ತಾರ? ನೀವು ಬಂದು ನೋಡ್ರಿ. ರಂಗಭೂಮಿಯಂದ್ರ ಕೀಳಲ್ಲ. ಅಂತಿಂಥ ನಾಟಕಕ್ಕ ಕರೀತಾಯಿಲ್ಲ. ಬಸವೇಶ್ವರ ನಾಟಕಕ್ಕೆ ಕರೀತಾ ಇದ್ದೀನಿ. ಅದು 150ನೇ ಪ್ರಯೋಗಕ್ಕ' ಅಂದೆ.

ಇಷ್ಟ ಅಲ್ದ ಹರಳಯ್ಯ – ಮಧುವರಸರ ಮಕ್ಕಳ ಮದುವೆ ಮಾಡಿದ ಬಸವಣ್ಣ, ಹರಳಯ್ಯ ಮತ್ತ ಅವರ ಹೆಂಡತಿ ಕಲ್ಯಾಣಮ್ಮ ತಮ್ಮ ತೊಡೆಯ ಚರ್ಮದಿಂದ ಮಾಡಿದ ಪಾದರಕ್ಷೆಗಳನ್ನು ಬಸವಣ್ಣ ಮೆಟ್ಟದೆ ತಮ್ಮ ತಲೆ ಮೇಲೆ ಹೊತ್ತರು... ಇಂಥದನ್ನೆಲ್ಲ ನೋಡ್ದ ಇದ್ರ ಹೆಂಗ ಬುದ್ದಿ? ಅಂತ ಕೇಳಿದೆ.

ಅವರು ಮನಸು ಬದಲಾಯಿಸಿಕೊಂಡು 'ನನ್ನ ಸೋಲಿಸಿದಿ. ನಿಯಮ ಬದಲಾಯಿಸಿ ಬರ್ತೀನಿ ಹೋಗು' ಅಂದ್ರು.

ನಾಟಕದ ಆರಂಭಕ್ಕೆ ಮುನ್ನ ಅತಿಥಿಗಳು, ಅಧ್ಯಕ್ಷರಿಂದ ರಂಗಕ್ಕೆ ಹೂವನ್ನು ಎರಚಿದ ಕೂಡಲೇ ನಾಟಕ ಆರಂಭಿಸುತ್ತಿದ್ದೆವು. ಹಿಂಗ ನಾಟಕ ಉದ್ಘಾಟನೆ ಮಾಡಿಸ್ತಿದ್ದೆವು. ನಾಟಕದ ಕೊನೆಯ ಸನ್ನಿವೇಶವಿರುವಾಗ ಅವರನ್ನು ವೇದಿಕೆಗೆ ಕರೆದು ಭಾಷಣ ಮಾಡಿಸುತ್ತಿದ್ದೆವು. ಇದನ್ನು ನಾವು ರೂಢಿಸಿಕೊಂಡಿದ್ದೆವು. ಕುಮಾರಸ್ವಾಮಿಗಳು ಮಾತಾಡಿದ ಕೂಡಲೇ ಜನರು ಪ್ರಭಾವಿತರಾದರು. 'ಮಾತು ಮುಗಿಸ್ತೀನಿ' ಅಂದಾಗ ಪ್ರೇಕ್ಷಕರು ನಿಲ್ಲಿಸಬ್ಯಾಡ್ರಿ, ಮಾತಾಡ್ರಿ ಅಂದ್ರು. ಮತ್ತರ್ಧ ಗಂಟೆ ಮಾತಾಡಿದ್ರು. ಹಿಂಗಾಗಿ ಒಟ್ಟು ಒಂದು ತಾಸು ಅವರು ಮಾತಾಡಿದ್ರು. ನಾನವತ್ತ ಹೇಳಿದೆ 'ಇನ್ನೊಂದು

ಪ್ರಯೋಗದೊಂದಿಗೆ ಬಸವೇಶ್ವರ ನಾಟಕ ಕೊನೆಗೊಳಿಸಿ ಬ್ಯಾರೆ ನಾಟಕ ಆಡ್ತೀವಿ' ಅಂದಾಗ 'ಹಂಗನ್ನಬ್ಯಾಡ್ರಿ. ಇದ ನಾಟಕ ಇನ್ನಷ್ಟು ಪ್ರಯೋಗ ಆಗ್ಬೇಕು' ಅಂದ್ರು ಪ್ರೇಕ್ಷಕರು. ಅದನ್ನೇ ಮುಂದುವರೆಸಿದೆವು. ಮರುದಿನ ಅಂದ್ರ 151ನೇ ಪ್ರಯೋಗಕ್ಕ ರಾಜ್ಯದ ಆಗಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರನ್ನು ಕರೆ ತಂದೆವು. ಒಟ್ಟು 208 ಪ್ರಯೋಗಗಳು ಹುಬ್ಬಳ್ಳಿಯಾಗ ಅದವು.

ಧಾರವಾಡ ನವಕಲ್ಯಾಣ ಮಠದ ಕುಮಾರಸ್ವಾಮಿಗಳು, ಸೊಲ್ಲಾಪುರ ಕಿರೀಟಮಠದ ಮೃತ್ಯುಂಜಯ ಸ್ವಾಮಿಗಳು, ಧಾರವಾಡ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳು ನಮ್ಮ ಬಸವೇಶ್ವರ ನಾಟಕದ ಮೂಲಕ ವಚನಗಳು ಪ್ರಚಾರ ಆಗೂದನ್ನ ಗಮನಿಸಿದ್ರು. ಇದನ್ನು ಗುರುತಿಸಿದ ಸ್ವಾಮಿಗಳು ನನ್ನನ್ನು ಸನ್ಮಾನಿಸಿದ್ರು. ಇದರ ಜೊತೆಗೆ ಇನ್ನೊಂದು ಮಾತು; ಅರವತ್ತರ ದಶಕದಲ್ಲಿ ಧರ್ಮವೀರ ಎಂಬವರು ರಾಜ್ಯಪಾಲರಾಗಿದ್ದಾಗ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದೊಳಗ ಅವರ ಸೂಚನೆ ಮೇರೆಗೆ ಬಸವೇಶ್ವರ ನಾಟಕ ಆಡಿದ್ವಿ.

* * *

**ಬಸವಣ್ಣ ಚಾ ಕುಡ್ಯಾಕ ಹತ್ಯಾನ...**

ಹುಬ್ಬಳ್ಳಿಯಲ್ಲಿ ಬಸವೇಶ್ವರ ನಾಟಕ ಯಶಸ್ವಿಯಾಗಿ ನಡೆಯುತ್ತಿದ್ದಾಗ ಆಯಾ ಊರಿನ ಗೆಳೆಯರು ಬರುವುದು ಸಾಮಾನ್ಯವಾಗಿತ್ತು. ನಾಟಕದ ಬಗ್ಗೆ, ಪಾತ್ರದ ಬಗ್ಗೆ ಮೆಚ್ಚಿಗೆಯಾಡುವಾಗ ಸಹಜವಾಗಿ ಚಾದಂಗಡಿಗೆ ಹೋಗುತ್ತಿದ್ದೆವು.

ಒಮ್ಮೆ ಚಹಾದಂಗಡಿಗೆ ಹೋದಾಗ ಹಿಂದಿನ ರಾತ್ರಿ ಬಸವೇಶ್ವರ ನಾಟಕ ನೋಡಿದ ಕೆಲ ಪ್ರೇಕ್ಷಕರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುವುದು ಕಿವಿಗೆ ಬಿತ್ತು. ನಾಟಕ ಮತ್ತು ಪಾತ್ರಾಭಿನಯದ ಬಗ್ಗೆ ಮಾತಾಡತಾ 'ಬಸವಣ್ಣ ಇಲ್ಲೇ ಅದಾನ. ಚಾ ಕುಡ್ಯಾಕ ಹತ್ಯಾನ' ಅಂದ್ರು. ಅಂದಿನಿಂದ ಚಹಾದಂಗಡಿಗೆ ಹೋಗೂದು ಬಿಟ್ಟೆ. ಜೊತೆಗೆ ಚಹಾ ಕುಡಿಯುವುದನ್ನೂ ಬಿಟ್ಟೆ. ಕಾರಣವೆಂದರೆ ಪ್ರೇಕ್ಷಕರು ನಾಟಕವನ್ನು ನೋಡಿ ನಟರ ಬಗ್ಗೆ ಎಂಥಾ ಭಾವನೆ ಇಟ್ಟುಕೊಂಡಿರುತ್ತಾರೆ ಎನ್ನುವುದಕ್ಕೆ ಈ ಘಟನೆ ಸಾಕ್ಷಿ.

ಇದರೊಂದಿಗೆ ಬಸವಣ್ಣನ ಪಾತ್ರ ಮಾಡೋದರಿಂದ ನಾನೂ ಬದಲಾವಣೆಯಾದೆ. ಏನಂದರೆ ಸೌಮ್ಯ ಸ್ವಭಾವ ಬಂತು. ನಡೆನುಡಿಯೊಳಗೂ ಬದಲಾತು. ಭಕ್ತಿ ಅನ್ನೋದು ಏನು ಕೆಲಸ ಮಾಡತ್ತೈತಿ ಅಂತ ಒಂದು ಉದಾಹರಣೆ ಹೇಳ್ತೀನಿ. ನಾನಾಗ ಬಸವೇಶ್ವರ ನಾಟಕವಾಡ್ತಿದ್ದಾಗ ನನ್ನ ಚಿಕ್ಕ ಮಗಳಿಗೆ ಹುಷಾರಿರಲಿಲ್ಲ. ಉಳಿತಾಳೋ ಇಲ್ಲೋ ಅನ್ನುವಂಗಿದ್ಲು. ಆದ್ರೂ ನಾವು ನಾಟಕ ಆಡಿದ್ವಿ. ಹರಳಯ್ಯ, ಬಸವಣ್ಣನ ಮನೆಗೆ ಬಂದು ಪಾದರಕ್ಷೆಗಳನ್ನು ಕೊಟ್ಟಾಗ ತಲಿ ಮ್ಯಾಲಿಟ್ಟುಕೊಂಡು 'ನನಗಲ್ಲ ಇವು ಸಂಗಮನಾಥನಿಗೆ ಸಲ್ಲಬೇಕು. ಅವನಿಗೆ ಮುಟ್ಟಿಸಿರಿ' ಅಂತ ಬಸವಣ್ಣನ ಪಾತ್ರಧಾರಿಯಾಗಿದ್ದ ನಾನು ಹೇಳ್ತೀನಿ.

ಆಗ ಹರಳಯ್ಯ ಅಂತಾನ 'ಸಂಗಮನಾಥನಿಗೆ ಸಲ್ಲಬೇಕಾದ ಇವನ್ನು ನಾನು ತಲಿ ಮ್ಯಾಲೆ ಹೊರ್ತೀನಿ' ಅಂತ. ಆಗ ಆತ

ಕರುಣಾಳು ಸಂಗಮದೇವ
ಮುಕ್ತಿ ಪಥವ ತೋರಿಸು ದೇವ
ದೇವಾದಿದೇವ...

ಹಾಡಿಕೊಂತ ಹರಳಯ್ಯ ಹೊರಟಾಗ ಅವರ ಭಾವಾವೇಶಕ್ಕ ಪರವಶನಾದ ಬಸವಣ್ಣ ಅದೇ ಹಾಡು ಹಾಡ್ತಾ ನಿಲ್ತಾನ. ಈ ಸನ್ನಿವೇಶ ನಡೆದಾಗ ವಿಂಗ್‌ನಿಂದ ದೊಡ್ಡ ಮಗಳು ಬಂದು 'ಅಪ್ಪಾ, ಬಾಳಮ್ಮಗ ಜೋರಾಗೇತಿ' ಅಂದ್ಲು. ಆಗ ನಾನು ವಾಸ್ತವ ಸ್ಥಿತಿಗೆ ಬಂದೆ. ಆದರೆ ಅಂತರಂಗದಲ್ಲಿ ನೀನೆ ಮಗಳನ್ನು ರಕ್ಷಿಸು ಅಂತಿದ್ದೆ. ಅವನನ್ನ ಭಜನಿ ಮಾಡಿದೆ ಹೊರತು ಅಲ್ಲಿಂದ ಓಡಿ ಹೋಗಲಿಲ್ಲ. ಆದ್ರ ಮ್ಯಾನೇಜರ್ ವಿರೂಪಾಕ್ಷಪ್ಪ ಬಳ್ಳಾರಿಗೆ ಗೊತ್ತಾಗಿ ಕೂಡಲೇ ಪರದೆ ಇಳಿಸಿಬಿಟ್ರು.

ಆಮೇಲೆ ಎಲ್ಲಾರೂ ಮನೀಗೆ ಹೋದ್ವಿ. ಬಾಳಮ್ಮನನ್ನು ನೋಡಿದೆ. ನನ್ನ ಭಕ್ತಿ ದೇವರಿಗೆ ಮುಟ್ಟಿತೇನೋ! ಅಂತ್ಯಾವಸ್ಥೆಯಲ್ಲಿದ್ದ ಮಗಳು ಕಣ್ಣುಬಿಟ್ಟು. ಕಾಯಕ ಯಾವುದೇ ಇರಲಿ. ಭಕ್ತಿಗೆ ದೇವರು ಒಲಿತಾನ ಅನ್ನೂದಕ್ಕ ಇದಕ್ಕಿಂತ ಬ್ಯಾರೆ ಉದಾಹರಣೆ ಬೇಕಿಲ್ಲ. ನಾಟಕ, ನಾಟಕದ ಪಾತ್ರ, ಹಾಡು ಎಲ್ಲ ನಿಜ. ಆದರೆ ಭಕ್ತಿಯಿಂದ ಬಾಳಪ್ಪ ಹಾಡಿದ ಅಂತ ಮುಧೋಳದ ಮೃತ್ಯುಂಜಯ ಸ್ವಾಮಿಗಳು ಅಂದ್ರು.

* * *

**ಜೋಳಿಗೆ ಹಿಡಿದು**

ಕಂಪನಿಗೆ ಪುಂಡ ಪೋಕರಿಂದ ಕಿರುಕುಳ ಉಂಟಾದಾಗ ಬಗಲಿಗೆ ಬಂದೂಕು ಹಾಕಿ ಅವರನ್ನು ಹೆದರಿಸಲಿಲ್ಲ. ಕೈ ಮುಗಿದು ವಿನಂತಿಸಿಕೊಳ್ಳುವುದೇ ನನ್ನ ದೊಡ್ಡ ಅಸ್ತ್ರವಾಗಿತ್ತು. ನನ್ನ ಸೌಜನ್ಯಶೀಲ ವರ್ತನೆ ಕಂಪನಿಗೆ ರಕ್ಷಾ ಕವಚವಾಗಿತ್ತು. ಇದರಿಂದ ಎಲ್ಲಿ ಹೋದರೂ ಜನ ನನ್ನವರಾಗುತ್ತಿದ್ದರು. ನನ್ನ ಕಂಪನಿ ಅವರ ಕಂಪನಿಯಾಗುತ್ತಿತ್ತು. ಕಲಾಯಾತ್ರೆಗೆ ದಾರಿ ಸುಗಮಗೊಳ್ಳುತ್ತಿತ್ತು. ಮುಕ್ಕಾಮು ಮಾಡಿದ ಬಹಳಷ್ಟು ಕಡೆಗೆ ಸಾರ್ವಜನಿಕರಿಂದ ಮಾನ–ಸನ್ಮಾನಗಳು ಲಭಿಸಿವೆ. ಅದಕ್ಕೆ ಪ್ರತಿಯಾಗಿ ಸಾರ್ವಜನಿಕ ದೇವಸ್ಥಾನ, ಮಠ, ಮಂದಿರ, ಶಾಲೆ–ಕಾಲೇಜುಗಳಿಗೆ ಉದಾರ ದೇಣಿಗೆಯನ್ನಿತ್ತು ಕೃತಜ್ಞತೆ ಸಲ್ಲಿಸಿದ್ದೇನೆ. 'ಬಸವೇಶ್ವರ' ನಾಟಕಕ್ಕೆ ಮಂಗಲವಾಗುತ್ತಿದ್ದಂತೆಯೇ ನಾನು ಬಸವೇಶ್ವರ ವೇಷದಲ್ಲಿಯೇ ಜೋಳಿಗೆ ಹಿಡಿದು ಮುಖ್ಯ ದ್ವಾರದ ಬಳಿ ನಿಲ್ಲುತ್ತಿದ್ದೆ. ಪ್ರೇಕ್ಷಕರು ಹೋಗುವಾಗ ಭಕ್ತಿಯ ಕಾಣಿಕೆ ಅರ್ಪಿಸುತ್ತಿದ್ದರು. ಹೀಗೆ ಜೋಳಿಗೆಯಲ್ಲಿ ಸಂಗ್ರಹಿಸಿದ ಒಟ್ಟು ಎಂಟು ಸಾವಿರ ರೂಪಾಯಿಗಳನ್ನು ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ಬಸವೇಶ್ವರ ದೇವಸ್ಥಾನಕ್ಕೆ ಸಲ್ಲಿಸಿದೆ. ಫ.ಗು. ಹಳಕಟ್ಟಿಯವರು ಹಾಗೂ ಧಾರವಾಡದ ಉತ್ತಂಗಿ ಚೆನ್ನಪ್ಪ

ಅವರು ಆರ್ಥಿಕ ತೊಂದರೆಯಲ್ಲಿದ್ದಾಗ ನೆರವಾದೆ. ಹುಬ್ಬಳ್ಳಿಯಲ್ಲಿ ಕಂಪನಿಯ ಮುಕ್ಕಾಮು ಇದ್ದಾಗ ಇಬ್ಬರನ್ನೂ ಕರೆಸಿ ಸತ್ಕರಿಸಿದೆ. ದೊಡ್ಡಸ್ತಿಕೆಯೆಂದು ಈ ಘಟನೆಗಳನ್ನು ನೆನಪಿಸುತ್ತಿಲ್ಲ. ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದ ಪ್ರಸಂಗದಂತೆ ಎಂದು ಸ್ಮರಿಸಿಕೊಳ್ಳುತ್ತಿದ್ದೇನೆ.

ಹೀಗೆ ಜೋಳಿಗೆ ಹಿಡಿಯಲು ಕಾರಣವೆಂದರೆ ನಾನು ಮುಂಬಯಿಗೆ ನಾಟಕದ ಸಾಮಾನುಗಳನ್ನು ಖರೀದಿಸಲು ಹೋದಾಗ ಪೃಥ್ವಿರಾಜ್ ಕಪೂರ್ ಅವರ ನಾಟಕ ನೋಡಲು ಹೋದೆ. ನಾಟಕ ಮುಗಿದ ನಂತರ ಅವರು ಜೋಳಿಗೆ ಹಿಡಿದು ನಿಂತರು. ಏಕೆಂದು ಕೇಳಿದಾಗ ದೇಶದ ಯಾವುದಾದರೂ ಪರಿಹಾರಕ್ಕೆ ಹೀಗೆ ಅವರು ಜೋಳಿಗೆ ಹಿಡಿಯುತ್ತಾರೆಂದು ತಿಳಿಯಿತು. ಹೀಗೆ ನಾನು ಬಸವಣ್ಣನ ಪಾತ್ರಧಾರಿಯಾಗಿದ್ದಾಗಲೇ ಜೋಳಿಗೆ ಹಿಡಿಯಲು ಆರಂಭಿಸಿದೆ.

■



# ಪ್ರಚಾರದಿಂದ ಪರದಾಟ!

● ಏಣಗಿ ಬಾಳಪ್ಪ

**ದು.ನಿಂ. ಬೆಳಗಲಿ ನಿರೂಪಿಸಿರುವ 'ನನ್ನ ಬಣ್ಣದ ಬದುಕು' ಆತ್ಮಕತೆಯಿಂದ ಆಯ್ದ ಭಾಗ**

ಮಹಾರಾಷ್ಟ್ರದ ಸಾಂಗಲಿಯಲ್ಲಿ ನಮ್ಮ ಪ್ರಥಮ ನಾಟಕವಾಗಿ ವೀರರಾಣಿ ರುದ್ರಮ್ಮ ಪ್ರಾರಂಭಿಸಿದೆವು. ನಮ್ಮ ಸಂಘದ ಪ್ರಚಾರದಲ್ಲಿ ಒಂದು ಗತ್ತುಗಾರಿಕೆಯನ್ನು ಪ್ರಯೋಗಿಸಿದ್ದು, ಅದು ನನಗೆ ತಿಳಿದಿರಲಿಲ್ಲ. ಪ್ರಚಾರ ಪ್ರಕಟಣೆಯಲ್ಲಿ ನಾನು ಮಹಾರಾಷ್ಟ್ರದ ಸುಪ್ರಸಿದ್ಧ ಗಾಯಕರಾದ ಮಾಸ್ಟರ್ ದೀನಾನಾಥರ ಪದ್ಧತಿ ಯಲ್ಲಿ ಹಾಡುವೆನೆಂದು ಮರಾಠಿಯಲ್ಲಿ ಮುದ್ರಿಸಿ ಹಂಚಿದ್ದರು. ಇದು ಒಂದು ಪ್ರಚಾರದ ಗತ್ತಾಗಿದ್ದರೂ ಈ ಮಾದರಿಯ ಪ್ರಚಾರ ಒಳ್ಳೆಯದಲ್ಲ ಎಂದು ಅವರಿಗೆ ತಿಳಿದಿರಲಿಲ್ಲ. ನಾಟಕದ ಭಾಷೆ ಬಹಳ ಜನಕ್ಕೆ ಅರ್ಥವಾಗದಿದ್ದರೂ ಸಂಗೀತ ಭಕ್ತರು ನಾಟಕಕ್ಕೆ ಬರಬಹುದೆಂಬ ಉದ್ದೇಶದಿಂದ ಅವರು ಹಾಗೆ ಮಾಡಿದ್ದರು. 1935ರಲ್ಲಿ ಮಾಸ್ಟರ್ ದೀನಾನಾಥ ಸಾಂಗಲಿಯಲ್ಲಿಯೇ ಒಂದು ಫಿಲ್ಮ್ ಸ್ಟುಡಿಯೋ

ಸ್ಥಾಪಿಸಿಕೊಂಡಿದ್ದರು. ಇಂದಿನ ಸುವಿಖ್ಯಾತ ಹಿನ್ನೆಲೆ ಗಾಯಕಿಯರಾದ ಲತಾ ಮಂಗೇಶ್ಕರ್, ಆಶಾಭೋಸ್ಲೆ, ಉಷಾ ಮಂಗೇಶ್ಕರ್, ಮೀನಾ ಮಂಗೇಶ್ಕರ್ ಮತ್ತು ಸಂಗೀತ ದಿಗ್ದರ್ಶಕರಾದ ಹೃದಯನಾಥ ಮಂಗೇಶ್ಕರ್ ಇವರ ತಂದೆಯೇ ಮಾಸ್ಟರ್ ದೀನಾನಾಥ. ಗಣಪತಿ ದೇವಾಲಯದ ಹಿಂದೆ ಅವರ 'ಬಲವಂತ' ಫಿಲ್ಮ್ ಸ್ಟುಡಿಯೋ ಇತ್ತು. ಅದಾಗಲೇ ಅವರು ಕೃಷ್ಣಾರ್ಜುನ ಯುದ್ಧ ಚಲನಚಿತ್ರ ತೆಗೆದು ಹಾನಿಗೊಂಡಿದ್ದರು. ಈ ಪ್ರಕರಣ ಜರುಗಿದ ಸಂದರ್ಭದಲ್ಲಿ ಅವರು ಭಕ್ತ ಪುಂಡಲೀಕ ಚಿತ್ರದ ನಿರ್ಮಾಣ ಕೈಗೊಂಡಿದ್ದರು.

ನಮ್ಮ ನಾಟಕದ ಪ್ರಕಟಣೆ ಅದು ಹೇಗೋ ಅವರ ಕಣ್ಣಿಗೆ ಬಿದ್ದು, ಅವರು ಒಂದಿಷ್ಟು ಕೋಪಗೊಂಡಿರಬೇಕು. ತಕ್ಷಣ ಅವರು ನಮ್ಮ ಸಂಘಕ್ಕೆ ನಿರೂಪ ಕಳಿಸಿದರು. "ನನ್ನ ರೀತಿಯಲ್ಲಿ ಹಾಡುವೆನೆಂದು ಹೇಳಿದ ನಿಮ್ಮ ಸಂಘದ ಗಾಯಕ ನಟ, ನನ್ನ ಶಿಷ್ಯನೂ ಅಲ್ಲ, ಅವನನ್ನು ನೋಡಿಯೂ ಇಲ್ಲ. ನನ್ನ ಹೆಸರಿನ ಅಪಪ್ರಚಾರ ಹೀಗಾಗಬಾರದು. ಇದರ ವಿಚಾರಣೆಗಾಗಿ ನಾನೇ ಈ ದಿನ ನಾಟಕಕ್ಕೆ ಬರುವೆ" ಎಂದು ಅವರು ಒಬ್ಬ ಕಲಾವಿದನಿಗೆ ಸಲ್ಲತಕ್ಕ ರೀತಿಯಲ್ಲಿ ಹೇಳಿ ಕಳಿಸಿದರು. ಸಿಟ್ಟಿನ ಭರದಲ್ಲಿ ಮತ್ತೇನನ್ನೂ ಮಾಡದೆ, ಪ್ರತ್ಯಕ್ಷ ಪರಿಸ್ಥಿತಿಯನ್ನರಿತುಕೊಂಡು ನಮ್ಮ ತಪ್ಪಿನ ವಿಚಾರಣೆ ಮಾಡುವುದಾಗಿ ಅವರು ತಿಳಿಸಿದ್ದು, ಅವರ ದೊಡ್ಡತನಕ್ಕೆ ತಕ್ಕ ನಡವಳಿಕೆಯಾಗಿತ್ತು.

ಹೇಳಿದಂತೆ ಸರಿಯಾಗಿ ಮಾ॥ ದೀನಾನಾಥರು ತಮ್ಮ ಮಕ್ಕಳನ್ನು ಕರೆದುಕೊಂಡು ನಾಟಕಕ್ಕೆ ಬಂದರು. ಅವರನ್ನು ಮರ್ಯಾದೆಯಿಂದ ಸ್ವಾಗತಿಸಿ ಕೂರಿಸಲಾಯಿತು. ನಾಟಕದ ಪೂರ್ವಾರ್ಧದಲ್ಲಿ ನನ್ನ ಮೂರು ಹಾಡುಗಳನ್ನು ಲಕ್ಷ್ಯಗೊಟ್ಟು ಆಲಿಸಿದರು. ಆಗ ನಾವು ಹಿಂದಿ ಚೀಜುಗಳನ್ನೇ ಕನ್ನಡಕ್ಕೆ ಅಳವಡಿಸಿಕೊಂಡು ಹಾಡುತ್ತಿದ್ದೆವು. ನಾಟಕದ ಮಧ್ಯಂತರದ ಸುಮಾರಿಗೆ ನಾನು ಮಾಂಡರಾಗದ ಹಾಡನ್ನು ಪ್ರಾರಂಭಿಸಿದೆ. ಮಾಂಡರಾಗದ ಮೂಲಕ ಅತ್ಯಂತ ಜನಪ್ರಿಯ ಹಾಡು, 'ನರವರ ಕೃಷ್ಣಸಮ....' ಈ ಪದಕ್ಕೆ ನಿತ್ಯದಂತೆ ಒನ್ಸ್‌ಮೋರ್ ಬಿದ್ದಿತು. ಮತ್ತೆ ಅದನ್ನೇ ಹಾಡುತ್ತಿದ್ದೆ. ದೀನಾನಾಥರಿಗೆ ಅದು ತೃಪ್ತಿ ಇತ್ತಿರಬೇಕು. ಹಾಡು ಮುಗಿದ ತಕ್ಷಣ ವಿಂಗಿಗೆ ಧಾವಿಸಿದರು. ಅಲ್ಲಿಯೇ ಒಂದು ಹೊಸ ರಾಗ ಸೂಚಿಸಿ. ಅದನ್ನು ಕೂಡಲೇ ಹಾಡುವಂತೆ ಕೇಳಿಕೊಂಡು ಸ್ವಸ್ಥಾನಕ್ಕೆ ತೆರಳಿದರು. ಧೈರ್ಯದಿಂದ ಹಾಡಲು ಪ್ರಾರಂಭಿಸಿದೆ. ನನ್ನ ಕಂಠದಿಂದ ರಾಗದ ಹೊನಲು ಸಲಿಲವಾಗಿ ಹೊಮ್ಮುತ್ತಿತ್ತು. ತಮ್ಮದೇ ಆದ ತಾನ ಕೇಳುತ್ತಿದ್ದ ದೀನಾನಾಥರು ಮಂತ್ರ ಮುಗ್ಧರಾಗಿದ್ದರು. ಆನಂದದ ಭರದಲ್ಲಿ ಅವರೇ ಒನ್ಸ್‌ಮೋರ್ ಹಾಕಿದರು. ಕೇಳುವುದೇನು? ನನ್ನ ಹೆಮ್ಮೆಗೆ ಪಾರವಿಲ್ಲ! ಅವರು ಹೇಳಿಕೊಟ್ಟ ತಾನವನ್ನೇ ಮಾಂಡರಾಗದಲ್ಲಿ ಹಾಡಿದೆ. ಅದನ್ನೂ ಕೇಳಿ ತಲೆದೂಗಿದರು.

ಮಕ್ಕಳ ಜತೆ ನೇಪಥ್ಯಕ್ಕೆ ಬಂದು ತುಂಬು ಹೃದಯದಿಂದ ನನ್ನನ್ನು ಅಭಿನಂದಿಸಿದರು. ನನಗೆ ಮರಾಠಿ ಬರುತ್ತಿರಲಿಲ್ಲ. ದೀನಾನಾಥರಿಗೆ ಕನ್ನಡ ತಿಳಿಯದು. ನಮ್ಮ ತಬಲಾಜಿ

ಗೋವಿಂದರಾವ ಬಸರಗಿ ಇವರು ನಮ್ಮ ಮಧ್ಯ ದ್ವಿಭಾಷಿಗಳಾಗಿ ಕಾರ್ಯನಿರ್ವಹಿಸಿದರು. ಕನ್ನಡ ಕಲಾವಿದರ ಸಂಗೀತ, ಅಭಿನಯದ ಬಗ್ಗೆ ದೀನಾನಾಥರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು, ಬಿಡುವು ಮಾಡಿಕೊಂಡು ತಮ್ಮ ಸ್ಟುಡಿಯೋಕ್ಕೆ ಬರಲು ಆಮಂತ್ರಣ ವಿತ್ತರು. ಒಂದು ದಿನ ಬಿಡುವು ಮಾಡಿಕೊಂಡು ನಾನೂ ದೀನಾನಾಥರ ಬಲವಂತ ಫಿಲ್ಮ್ ಸ್ಟುಡಿಯೋಕ್ಕೆ ಹೋಗಿ ಬಂದೆ.

ಇಂದಿನ ಸದಾಸುಖ ಚಿತ್ರಮಂದಿರವಾದ ಥೇಟರಿನಲ್ಲಿ ನಮ್ಮ ನಾಟಕಗಳು ನಡೆಯುತ್ತಿದ್ದವು. ವಾರದಲ್ಲಿ ಮೂರೇ ಪ್ರಯೋಗಗಳು. ದೀನಾನಾಥರ ಸಖ್ಯ ಬೆಳೆದದ್ದು ಇನ್ನೂ ಒಂದು ಅನುಕೂಲವಾಯಿತು. ನಮ್ಮ ರಂಗಮಂದಿರದಲ್ಲಿಯೇ ಬಿಡುವಿನ ದಿನಗಳಲ್ಲಿ ತಮ್ಮ ಮರಾಠಿ ನಾಟಕಗಳನ್ನು ಆಡಲು ದೀನಾನಾಥರು ಅನುಮತಿ ಕೇಳಿದರು. ನಾವು ಸಂತೋಷದಿಂದ ಒಪ್ಪಿದೆವು.

ದೀನಾನಾಥರ ಅಭಿನಯ ಹಾಗೂ ಸಂಗೀತವನ್ನೂ ಪ್ರತ್ಯಕ್ಷ ಆಸ್ವಾದಿಸಲು ಇದರಿಂದ ನಮಗೆ ಸಾಧ್ಯವಾಯಿತು.

■



# ಅಪ್ರತಿಮ ಚೆಲುವೆಯ ಹಿತಮಿತ ಅಭಿನಯ

● *ಗುಡಿಹಳ್ಳಿ ನಾಗರಾಜ*

ಲಕ್ಷ್ಮೀಬಾಯಿ ಅಪ್ರತಿಮ ಚೆಲುವೆ, ಹಿತಮಿತ ನಟನೆಯ ಅಭಿನೇತ್ರಿ.

ಮೂರೂವರೆ ದಶಕಗಳ ಕಾಲ ಕಲಾವೈಭವ ನಾಟ್ಯ ಸಂಘದ ಅವಿಭಾಜ್ಯ ಅಂಗವಾಗಿದ್ದವರು.

ಶತಾಯುಷಿ ಏಣಗಿ ಬಾಳಪ್ಪನವರ ಪ್ರಖರ ತೇಜಸ್ಸಿನಲ್ಲಿ ಅವರ ಪತ್ನಿ ಲಕ್ಷ್ಮೀಬಾಯಿ ಅಷ್ಟಾಗಿ ಬೆಳಕಿಗೆ ಬಾರದೇ ಹೋದರೆ?

ಲಕ್ಷ್ಮೀಬಾಯಿ ಅಪ್ರತಿಮ ಚೆಲುವೆ, ಹಿತಮಿತ ನಟನೆಯ ಅಭಿನೇತ್ರಿ. ಮೂರೂವರೆ ದಶಕಗಳ ಕಾಲ ಕಲಾವೈಭವ ನಾಟ್ಯ ಸಂಘದ ಅವಿಭಾಜ್ಯ ಅಂಗವಾಗಿದ್ದವರು. ನಾಟ್ಯರಾಣಿ ಆಗಿ ಮೆರೆದವರು. ಕಲಾವೈಭವ ನಾಟ್ಯ ಸಂಘ ಕನ್ನಡ ವೃತ್ತಿ ರಂಗಭೂಮಿಯ ಪ್ರಮುಖ ನಾಟಕ ಕಂಪನಿಗಳಲ್ಲಿ ಒಂದು. ಅದನ್ನು ಮುನ್ನಡೆಸಿ ಕೊಂಡು ಬಂದ ದಾಖಲೆ ಬಾಳಪ್ಪನವರ ಹೆಸರಿನಲ್ಲೇ ಉಳಿಯುವುದಾದರೂ; ಕಂಪನಿ ಶುರುವಾದ ಮರುವರ್ಷ 1948ರಲ್ಲಿ ರಂಗಪ್ರವೇಶ ಮಾಡಿದ ಲಕ್ಷ್ಮೀಬಾಯಿ ಮುಂದೆ

ಅದರ ಅವಿಭಾಜ್ಯ ಅಂಗವಾಗಿ ಬೆಳೆದುಬಂದರು. ಹೆಚ್ಚಾಗಿ ನಾಯಕಿ ಪಾತ್ರಗಳೇ ಅವರಿಗೆ ಮೀಸಲಾಗಿದ್ದವು.

ಲಕ್ಷ್ಮೀಬಾಯಿಯವರ ಪಾತ್ರಗಳನ್ನು ನೋಡಿದವರು ಈಗ ಅಷ್ಟಾಗಿ ಯಾರೂ ಉಳಿದಿಲ್ಲ. ಕಂಪನಿ ನಿಂತ ನಂತರ ಹವ್ಯಾಸಿ ತಂಡಗಳಲ್ಲಿ ಬಾಳಪ್ಪನವರೊಂದಿಗೆ ಅವರು 'ಬಸವೇಶ್ವರ', 'ಕುಂಕುಮ' ಮುಂತಾದ ನಾಟಕಗಳಲ್ಲಿ ವಯಸ್ಸಾದ ತಾಯಿ ಪಾತ್ರ ವಹಿಸಿದ್ದಾರೆ. ಆ ಪಾತ್ರಗಳನ್ನು ನೋಡಿದವರು ಸಾಕಷ್ಟು ಮಂದಿ ಇದ್ದಾರೆ. ಸಿನಿಮಾ, ಧಾರಾವಾಹಿಗಳಲ್ಲಿ ಅವರ ಕೆಲವು ಪಾತ್ರಗಳನ್ನು ನೋಡಿದವರಿದ್ದಾರೆ. ಆದರೆ ವೃತ್ತಿ ರಂಗಭೂಮಿಯ ವೈಭವದ ದಿನಗಳಲ್ಲಿ ಅವರ ಅಭಿನಯ ವಿಶೇಷತೆ ಕಂಡವರಲ್ಲಿ ಈಗ ಉಳಿದಿರುವವರು ಕೆಲವರು ಮಾತ್ರ. ಅಂತಹವರ ಪೈಕಿ ಒಬ್ಬರಾದ ಹಿರಿಯ ನಾಟಕಕಾರ ಸಂಗಮೇಶ ಗುರುವ ಅವರು ಹೀಗೆ ಹೇಳುತ್ತಾರೆ. 'ಲಕ್ಷ್ಮೀಬಾಯಿ ಒಬ್ಬ ಯೋಗ್ಯ ನಟಿ, ಅದ್ಭುತ ನಟಿ. ರಂಗದ ಮೇಲೆ ಏನಾದರೂ ಜಾದು ಮಾಡಿಬಿಡುವ 'ಬೆರಕಿ' ಮಂದಿ ಇರಬಹುದು. ಆದರೆ ಲಕ್ಷ್ಮೀಬಾಯಿ ಮುಗ್ಧರಿದ್ದರು. ನಟನೆಯೂ ಹಾಗೇ ಇತ್ತು. ವೃತ್ತಿ ರಂಗಭೂಮಿಯ 'ಕಿತ್ತೂರು ಚೆನ್ನಮ್ಮ' ನಾಟಕ ಎಂದರೆ ಎಚ್.ಪಿ. ಸರೋಜ, ಸತ್ಯಭಾಮ, ಜಿ.ವಿ. ಶಾರದಾ, ಸರೋಜಮ್ಮ ಧುತ್ತರಗಿ ಮುಂತಾದ ದೈತ್ಯ ನಟಿಯರು ಚೆನ್ನಮ್ಮನ ಪಾತ್ರಕ್ಕೆ ನೆನಪಿಗೆ ಬರುತ್ತಾರೆ. ಅವರಲ್ಲಿ ಕೆಲವರ ಅಭಿನಯ ಬಿರುಸಾಗಿರುತ್ತಿತ್ತು, ಅಬ್ಬರ ಇರುತ್ತಿತ್ತು, ಒರಟಾಗಿರುತ್ತಿತ್ತು. ಆದರೆ ಲಕ್ಷ್ಮೀಬಾಯಿಯವರ ನಟನೆ ಔಚಿತ್ಯದ ಗಡಿ ದಾಟುತ್ತಿರಲಿಲ್ಲ. 'ಶಾಲಾ ಮಾಸ್ತರ್', 'ಪತಾಣ ಪಾಶ', 'ಮಾವ ಬಂದ್ನಪೋ ಮಾವ' ಮುಂತಾದ ಅವರ ಅಭಿನಯದ ನಾಟಕಗಳನ್ನು ನೋಡಿದ್ದೇನೆ. ಪಾತ್ರ ಚೆಂದ ಮಾಡುತ್ತಿದ್ದರು. ಯಾವುದೂ ಅತಿರೇಕ ಇರ್ತಿರಲಿಲ್ಲ. ಪ್ರೇಕ್ಷಕರಿಗೆ ಆಕರ್ಷಣೆ ಆಗಿಬಿಡ್ತಿದ್ದವು.'

ಹಲವು ಹಿರಿಯರಿಂದ ಹೆಚ್ಚು ಕಡಿಮೆ ಇದೇ ರೀತಿಯ ಅಭಿಪ್ರಾಯ ವ್ಯಕ್ತವಾದವು. 'ವಧೂವರ' ನಾಟಕದ ವಾಸಂತಿ, 'ಕುಂಕುಮ'ದ ಅನುರಾಧ, 'ಹರಿಶ್ಚಂದ್ರ'ದ ತಾರಾಮತಿ, 'ಬಸವೇಶ್ವರ'ದ ನೀಲಾಂಬಿಕಾ, 'ಕರ್ನಾಟಕ ಏಕೀಕರಣ' ನಾಟಕದ ಭುವನಾ, 'ಚಲೇಜಾವ್'ನ ಆಶಾ, 'ಕುರುಕ್ಷೇತ್ರ'ದ ದ್ರೌಪದಿ, 'ಲಂಕಾದಹನ'ದ ಸೀತೆ, 'ಅಕ್ಕಮಹಾದೇವಿ', 'ಹೇಮರೆಡ್ಡಿ ಮಲ್ಲಮ್ಮ'ದಲ್ಲಿ ನಾಯಕಿ ಪಾತ್ರಗಳು– ಎಲ್ಲವೂ ಹಿತಮಿತ.

ಬಾಳಪ್ಪ ಬಾಲ್ಯದಲ್ಲೇ ನಾಟಕ ಕಂಪನಿ ಅರಸಿ ಹೋಗಿದ್ದರೆ, ಲಕ್ಷ್ಮೀಬಾಯಿ ಜನಿಸಿದ್ದೇ ನಾಟಕ ಕಂಪನಿಯಲ್ಲಿ. ಗುಬ್ಬಿ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದ ವಿರುಪಾಕ್ಷಪ್ಪ–ವೀರಮ್ಮ ದಂಪತಿಗೆ 1928ರಲ್ಲಿ ಜನಿಸಿದ ಲಕ್ಷ್ಮೀಬಾಯಿ ನಾಟಕದ ಕಣ್ಣಿನಿಂದಲೇ ಹೊರಜಗತ್ತನ್ನು ಗ್ರಹಿಸಿದವರು. ಮುದ್ದಾಗಿ ಕಾಣುತ್ತಿದ್ದ ಈ ಬಾಲಕಿಯನ್ನು ಗುಬ್ಬಿ ಕಂಪನಿಯ ಬಿ. ಜಯಮ್ಮ ಅತಿಯಾಗಿ ಪ್ರೀತಿಸುತ್ತಿದ್ದರಂತೆ.

ತಂದೆ ಗುಬ್ಬಿ ಕಂಪನಿ ತೊರೆದು ಅಥಣಿ ಭೀಮರಾಯರ ಭಾಗ್ಯೋದಯ ಕಂಪನಿ

ಸೇರಿದಾಗ ಲಕ್ಷ್ಮೀಬಾಯಿಗೆ ಆಗಿನ್ನೂ 7–8 ವರ್ಷ. 'ರಾಜಾ ಭರ್ತೃಹರಿ'ಯ ನಾಟಕದ ದತ್ತಪ್ರಸಾದ ಎಂಬ ರಾಜಕುಮಾರನ ಪಾತ್ರಕ್ಕೆ ಮುದ್ದಾದ ಬಾಲಕ ಅಥವಾ ಬಾಲಕಿಯೊಬ್ಬರು ಬೇಕಿದ್ದರು. ಲಕ್ಷ್ಮೀಬಾಯಿಗೆ ಬಣ್ಣ ಹಚ್ಚಿ ರಂಗಸ್ಥಳಕ್ಕೆ ಕಳಿಸಿದರೆ ಸಾಕ್ಷಾತ್ ರಾಜಕುಮಾರನಂತೆಯೇ ಕಂಗೊಳಿಸಿದರಂತೆ. ಆಗಿನ ನಾಟಕ ಕಂಪನಿಗಳಲ್ಲಿ ನಿತ್ಯವೂ ನಾಟಕ ರಿಹರ್ಸಲ್ ನಡೆಯಲೇಬೇಕಿತ್ತು. ಅಂತಹ ಶ್ರದ್ಧೆ ಇತ್ತು. ಪಾತ್ರಗಳ ಮಾತುಗಳೇ ಲಕ್ಷ್ಮೀಬಾಯಿಯವರಿಗೆ ಕಲಿಕೆಯ ಅಕ್ಷರಗಳಾದವು. 'ನಾಟಕದ ಪ್ರಾಕ್ಟೀಸ್ ಹಚ್ಚಿದಾಗ ಪಾತ್ರಧಾರಿಗಳು ಎರಡುಮೂರು ಸಲ ಮಾತು ಹೇಳಿದ ಕೂಡಲೇ ಬಾಲಕಿಯಾಗಿದ್ದ ನನ್ನ ತಲಿಯಾಗ ಅವು ಕುಂದರತಿದ್ದವು' ಎಂದು ಬಾಲ್ಯದ ತಮ್ಮ ಕಲಿಕೆಯ ದಿನಗಳನ್ನು ಅವರು ಸ್ಮರಿಸಿಕೊಳ್ಳುತ್ತಾರೆ. ಮಾತು, ಮಾತಿನಿಂದ ಅಕ್ಷರ, ಅಕ್ಷರದಿಂದ ಅಭಿನಯ ಎಲ್ಲವೂ ಒಂದಾಗಿ ಎಂಬಂತೆ ಅರಿವು ಹಾಗೂ ಅಭಿನಯದ ಧೀಕ್ಷೆ ಪಡೆದೇಬಿಟ್ಟರು. ಅಂತೆಯೇ ಅವರು 16–18ನೇ ವಯಸ್ಸಿನ ಹೊತ್ತಿಗೆ ಎಂತಹದೇ ಪಾತ್ರ ನಿರ್ವಹಿಸಲು ಮಾನಸಿಕವಾಗಿ ಸಜ್ಜಾದರು. ತಂದೆ ಮತ್ತೂ ಒಂದೆರಡು ನಾಟಕ ಕಂಪನಿಗಳಲ್ಲಿ ಮ್ಯಾನೇಜರ್ ಆಗಿದ್ದರು. ಸರಿ ಹೊಂದಲಿಲ್ಲ. ಗರುಡ ಸದಾಶಿವರಾಯರನ್ನು ಆಶ್ರಯಿಸಲು ಗದಗದ ಅವರ ಮನೆಗೆ ಬಂದರು. ಆದರೆ ಆಗ ಗರುಡರ ಕಂಪನಿ ಬಂದಾಗಿತ್ತು. ಏಣಗಿ ಬಾಳಪ್ಪನವರ ಕಲಾವೈಭವ ಬೈಲಹೊಂಗಲ ಕ್ಯಾಂಪ್ ಮಾಡಿತ್ತು. ಅವರಿವರ ಸಲಹೆ ಮೇರೆಗೆ ವಿರುಪಾಕ್ಷಪ್ಪ ಪತ್ನಿ ಮಕ್ಕಳನ್ನು ಕರೆದುಕೊಂಡು ಬಾಳಪ್ಪನವರ ಕಂಪನಿಗೆ ನಡೆದರು. ಅಲ್ಲಿಯೇ ತಮ್ಮ ಮಗಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಆಗ ಅವರು ಎಣಿಸಿರಲಿಕ್ಕಿಲ್ಲ.

### ಮಹಿಳೆಯ ಹಾವಭಾವ ಹೇಳಿಕೊಟ್ಟ ಬಾಳಪ್ಪ

ಕಲಾವೈಭವದಲ್ಲಿ ಆಗ ಹೆಚ್ಚಾಗಿ ನಟಿಯರಿರಲಿಲ್ಲ. ಕೆಲವರು ಹೋಗಿ ಬಂದು ಮಾಡುತ್ತಿದ್ದರು. ಅದಾಗಲೇ ಸ್ತ್ರೀ ಪಾತ್ರಗಳಲ್ಲಿ ದೊಡ್ಡ ಹೆಸರು ಮಾಡಿದ್ದ ಬಾಳಪ್ಪನವರೇ ತಮ್ಮ ಕಂಪನಿಯ ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಈ ಮುಂಚೆಯೇ ಬೇರೆ ನಾಟಕ ಕಂಪನಿಗಳಲ್ಲಿ ಪಾತ್ರಗಳಿಗೆ ಸಣ್ಣದೊಂದು ಸಿದ್ಧತೆ ಮಾಡಿಕೊಂಡಿದ್ದ ಲಕ್ಷ್ಮೀಬಾಯಿಗೆ ಕಲಾವೈಭವದಲ್ಲಿ ಬಾಳಪ್ಪ ಅಭಿನಯಿಸುತ್ತಿದ್ದ ಪಾತ್ರಗಳು ವರ್ಗಾವಣೆ ಯಾದವು. 1951ರಲ್ಲಿ ಬಾಳಪ್ಪನವರೊಂದಿಗೆ ವಿವಾಹವಾಯಿತು. ಮಹಿಳೆ ಪಾತ್ರದ ಮತ್ತಷ್ಟು ಹಾವಭಾವಗಳನ್ನು ಸ್ವತಃ ಪತಿ ಬಾಳಪ್ಪ ಅವರೇ ಪತ್ನಿ ಲಕ್ಷ್ಮೀಬಾಯಿಗೆ ಹೇಳಿಕೊಟ್ಟರು. ಗಂಡು ಹೆಣ್ಣಾದ, ಹೆಣ್ಣು ಹೆಣ್ಣಾದ 'ಹೆಣ್ಣು ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ' ಎಂಬಂತೆ ಮುಂದಿನದೆಲ್ಲ ಅವರದು ಇಚ್ಛೆಯರಿತು ನಡೆದ ರಂಗಸಂಸಾರ. 'ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬಂತೆ ಅಭಿನಯದ ಜತೆಗೆ ಕಲಾವೈಭವದ ಸಮಸ್ತ ಹೊಣೆಗಾರಿಕೆಯನ್ನು ಬಾಳಪ್ಪ ವಹಿಸಿ ಕೊಂಡರೆ, ಪ್ರಮುಖ ಪಾತ್ರ ನಿರ್ವಹಣೆ ಜತೆಗೆ ಕಂಪನಿಯ ಆಂತರಿಕ ಜವಾಬ್ದಾರಿಯನ್ನು ನಿಭಾಯಿಸಿದವರು ಲಕ್ಷ್ಮೀಬಾಯಿ ಅವರು. ಸಾಗರ ಮಂಜುಳಾ, ರತ್ನಾಬಾಯಿ ಬ್ರಹ್ಮಾವರ,

ಹೀರಾಬಾಯಿ ಪಾಟೀಲ, ಸುಭದ್ರಮ್ಮ ಮನ್ಸೂರ ಮುಂದಿನ ದಿನಗಳಲ್ಲಿ ಕಲಾವೈಭವದ ಮಹಿಳಾ ಪಾತ್ರಧಾರಿಗಳಾಗಿ ಹೆಚ್ಚು ಕಾಲ ಉಳಿದರು.

ಮುಂದಿನ ಮೂರು ದಶಕಗಳಿಗೂ ಹೆಚ್ಚು ಕಾಲ ನಟನೆ, ಸಂಸಾರ ಎಲ್ಲವನ್ನೂ ಸಮಚಿತ್ತದಿಂದ ನಿರ್ವಹಿಸಿದರು ಲಕ್ಷ್ಮೀಬಾಯಿ. ನಟರಾಜ ಜನಿಸಿದ. ನೋಡ ನೋಡುತ್ತಲೇ ಕನ್ನಡ ಹವ್ಯಾಸಿ ರಂಗಭೂಮಿಯ ದಿಗ್ಗಜ ನಟನಾಗಿ ಬೆಳೆದುಬಿಟ್ಟ. ಬಾಳಪ್ಪ, ಲಕ್ಷ್ಮೀಬಾಯಿ, ನಟರಾಜ ಎಲ್ಲರದೂ ಒಂದೇ ತದ್ರೂಪು. ಮತ್ತೊಬ್ಬ ಮಗಳು ಭಾಗ್ಯಳನ್ನು ಮಹಾರಾಷ್ಟ್ರದ ಈಚಲಕರಂಜಿಗೆ ಲಗ್ನ ಮಾಡಿಕೊಟ್ಟಿದ್ದಾರೆ. ಬಾಳಪ್ಪನವರ ಮೊದಲ ಪತ್ನಿ ಸಾವಿತ್ರಮ್ಮಗೆ ಜನಿಸಿದ ಏಳು ಮಕ್ಕಳ ಅಷ್ಟಿಷ್ಟು ಜವಾಬ್ದಾರಿಯನ್ನೂ ನಿಭಾಯಿಸಿ ಸೈ ಎನಿಸಿಕೊಂಡರು ಲಕ್ಷ್ಮೀಬಾಯಿ. ತಮ್ಮ ಕೃಷ್ಣಚಂದ್ರ ಬಳ್ಳಾರಿ ಅವರೂ ಹೆಸರಾಂತ ನಟರು.

ನಟರಾಜನ ಏಳಿಗೆಯನ್ನು ಕಣ್ತುಂಬಿಕೊಂಡೇ ತಮ್ಮ ಉಳಿದ ಜೀವಮಾನವನ್ನು ಸವೆಸಬೇಕೆಂದುಕೊಂಡಿದ್ದ ಲಕ್ಷ್ಮೀಬಾಯಿಯವರಿಗೆ ಅಕಾಲಿಕ ಸಾವು ತುಂಬಲಾರದ ನೋವು ತಂದಿದೆ.

'ನನ್ನ ಮಗ ದೊಡ್ಡ ವ್ಯಕ್ತಿ ಆಗಿದ್ದ. ಧಾರವಾಡ ರಂಗಾಯಣದ ಬಗ್ಗೆ ಬಹಳ ಕನಸು ಇಟಗೊಂಡಿದ್ದ. ನಾನು ಸಾಯೋತನಕ ಅವನ ನೆನಪು ತಪ್ಪಿದ್ದಲ್ಲ. ಅವನ ನೆನಪು ಅಳಸೋದಿಲ್ಲ...' ಎಂದು ಹನಿಗಣ್ಣಾಗುತ್ತಾರೆ.

ಸೊಸೆ ಲತಾ, ಅಮೋಘ, ಆದೇಶ ಎಂಬ ಇಬ್ಬರು ಮೊಮ್ಮಕ್ಕಳೊಂದಿಗೆ ಧಾರವಾಡದಲ್ಲಿ ನಿವೃತ್ತ ಜೀವನ ನಡೆಸುತ್ತಿರುವ 86 ವರ್ಷ ವಯಸ್ಸಿನ ಲಕ್ಷ್ಮೀಬಾಯಿ ಯವರಿಗೆ ಕೊನೆಗೂ ಎಂಬಂತೆ ಕನ್ನಡ ರಂಗಭೂಮಿಯ ಅತ್ಯುನ್ನತ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಇತ್ತೀಚೆಗಷ್ಟೇ ಪ್ರದಾನ ಮಾಡಲಾಗಿದೆ.

*(ಕೃಪೆ: ಪ್ರಜಾವಾಣಿ, 25–05–2014)*

■



# ನಟನೆಂದರೆ ನೀನೇ 'ನಟರಾಜ'

● *ನಾಗು*

ವೃತ್ತಿಯ ಶೈಲೀಕೃತ ಮತ್ತು ಹವ್ಯಾಸಿಯ ಪ್ರಯೋಗಶೀಲತೆ ಸಮ್ಮಿಳನಗೊಂಡ ಹದವಾದ ಮಿಶ್ರಣ ನಟರಾಜನ ಅಭಿನಯದಲ್ಲಿತ್ತು. ಅಂತೆಯೇ 'ಹದ' ಎಂಬ ಪದ ನಟರಾಜನ ಬಾಯಲ್ಲಿ ಯಾವಾಗಲೂ ಅನುರಣಿಸುತ್ತಿತ್ತು.

'ನಟನೆಂದರೆ ನೀನೇ ನಟ, ನಟಸಾರ್ವಭೌಮ! ದಿಗ್ದರ್ಶಕನನ್ನು ದಂಗು ಬಡಿಸುವ ನಟನಾ ಚಾತುರ್ಯ ನಿನ್ನದು' – 'ರಕ್ತರಾತ್ರಿ' ನಾಟಕದಲ್ಲಿ ಶಕುನಿ ದುರ್ಯೋಧನನಿಗೆ ಹೇಳುವ ಮಾತಿದು.

2012 ಜೂನ್ 9ರಂದು ವಿಧಿವಶರಾದ ಏಣಗಿ ನಟರಾಜ ಅಂತಹ ನಟರಾಗಿದ್ದರು. ತಮ್ಮ ನಟನಾ ಚಾತುರ್ಯದಿಂದ ನಿರ್ದೇಶಕರನ್ನೇ ಅವರು ದಂಗುಬಡಿಸುತ್ತಿದ್ದರು! ಅವಕಾಶ ಸಿಕ್ಕರೆ ಸಾಕು ತಿಂದು ಹಾಕಿಬಿಡುತ್ತಾನೆ ಅಂತಾರಲ್ಲ, ಅಂತಾ ನಟ– ನಟರಾಜ.

ಸಹಕಲಾವಿದರು ಮಾತು ತಪ್ಪಿದರೆ ಕೂಡಲೇ ಅವರ ಮಾತುಗಳನ್ನು ತನ್ನ ಮಾತುಗಳೊಂದಿಗೆ ಸೇರಿಸಿಕೊಂಡು ಹೇಳಿ ಸನ್ನಿವೇಶವನ್ನು ಮುಂದಕ್ಕೊಯ್ಯುವ ಚತುರತೆ ನಟರಾಜನಿಗಿತ್ತು. ನಟರಾಜನ ವೃತ್ತಿ ಜೀವನದಲ್ಲಿ

ಇಂತಹ ಹತ್ತಾರು ಪ್ರಕರಣಗಳು ಜರುಗಿವೆ. ವೃತ್ತಿ ನಾಟಕಗಳಲ್ಲಿ ಈ ರೀತಿಯ ಉದಾಹರಣೆಗಳನ್ನು ಕೇಳಿದ್ದೇವೆ. ಯಾಕೆಂದರೆ ಅದು ನಟ ಪರಂಪರೆಯ ರಂಗಭೂಮಿ. ನಟ-ನಟಿಯರೇ ಅಲ್ಲಿ ಪ್ರಧಾನ. ನಾಟಕವನ್ನು ಉಳಿಸುವವನೂ ಕೆಡಿಸುವವನೂ ಅಲ್ಲಿ ನಟನೇ. ಆದರೆ ಹವ್ಯಾಸಿಯಲ್ಲಿ ತನ್ನ ಅಭಿನಯ ಸಾಮರ್ಥ್ಯದಿಂದ ಇಡೀ ನಾಟಕವನ್ನೇ ಸರಿದೂಗಿಸಿಕೊಂಡು ಹೋಗುವ ಸಾಮರ್ಥ್ಯ ರಂಗಭೂಮಿಯ ವಿಸ್ಮಯಗಳಲ್ಲಿ ಒಂದು.

ವೃತ್ತಿಯ ಶೈಲೀಕೃತ ಮತ್ತು ಹವ್ಯಾಸಿಯ ಪ್ರಯೋಗಶೀಲತೆ ಸಮ್ಮಿಳನಗೊಂಡ ಹದವಾದ ಮಿಶ್ರಣ ನಟರಾಜನ ಅಭಿನಯದಲ್ಲಿತ್ತು. ಅಂತೆಯೇ 'ಹದ' ಎಂಬ ಪದ ನಟರಾಜನ ಬಾಯಲ್ಲಿ ಯಾವಾಗಲೂ ಅನುರಣಿಸುತ್ತಿತ್ತು.

ನೂರು ಸಮೀಪಿಸುತ್ತಿರುವ ಅಪ್ಪ ಏಣಗಿ ಬಾಳಪ್ಪ ವೃತ್ತಿರಂಗಭೂಮಿಯ ಹೆಸರಾಂತ ನಟರು. ಕಲಾವೈಭವ ನಾಟ್ಯ ಸಂಘವನ್ನು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನಡೆಸಿಕೊಂಡು ಬಂದವರು. ತೊಂಬತ್ತರ ಅಂಚಿನಲ್ಲಿರುವ ತಾಯಿ ಲಕ್ಷ್ಮೀಬಾಯಿ - ಅವರೂ ದೊಡ್ಡ ಕಲಾವಿದೆ. ಊರಿಂದೂರಿಗೆ ಸದಾ ಕ್ಯಾಂಪ್ ಮಾಡುವ ನಾಟಕ ಕಂಪನಿ ದಾವಣಗೆರೆಯಲ್ಲಿದ್ದಾಗ ಜನಿಸಿದ (1958) ನಟರಾಜನಿಗೆ ತೊಟ್ಟಿಲು ತೂಗಿ ಜೋಗುಳ ಹಾಡಿದ್ದು ರಂಗಮಂಚದ ಮೇಲೆ. ರಂಗ ಮತ್ತು ಶಿಕ್ಷಣವನ್ನು ಪ್ರತ್ಯೇಕಿಸದ ತಂದೆ ಬಿ.ಕಾಂ. ನಂತರ ತಮ್ಮ ಕಲಾವೈಭವ ನಾಟ್ಯಸಂಘದ ಉಸ್ತುವಾರಿಯನ್ನು (1981) ಮಗನಿಗೆ ವಹಿಸಿಕೊಟ್ಟರು. ವೃತ್ತಿ ನಾಟಕ ಕಂಪನಿಯ ಸಂಕಷ್ಟದ ದಿನಗಳವು. ಹೊಸ ಪ್ರಯೋಗಗಳನ್ನು ಮಾಡಬೇಕೆನ್ನುವ ಯುವಕ ನಟರಾಜನ ಪ್ರಯತ್ನಕ್ಕೆ ಅಂತಹ ಯಶಸ್ಸೇನೂ ಸಿಗಲಿಲ್ಲ. ಮಗ ಆಧುನಿಕ ರಂಗ ಶಿಕ್ಷಣ ಪಡೆಯಲಿ. ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಒಳ್ಳೆಯ ಅಂಶಗಳನ್ನು ಮೇಳೈಸಿಕೊಂಡು ಹೊಸ ಪ್ರಯೋಗಗಳನ್ನು ಮಾಡಲಿ ಎಂಬ ಅಪೇಕ್ಷೆ ತಂದೆಯದಾಗಿತ್ತು. ಹಾಗಾಗಿ ನಟರಾಜ ಹೆಗ್ಗೋಡಿನ ನೀನಾಸಂ ರಂಗಶಿಕ್ಷಣ ಶಾಲೆಯ ಮೊದಲ ವರ್ಷದ (1985) ವಿದ್ಯಾರ್ಥಿಯಾದರು. 1986, 87, 89ರ ತಿರುಗಾಟದ ನಾಟಕಗಳ ತಮ್ಮ ಅಭಿನಯದಿಂದ ನಟರಾಜ ರಾಜ್ಯದ ರಂಗಾಸಕ್ತರ ಗಮನವನ್ನು ಮಿಂಚಿನಂತೆ ಸೆಳೆದರು.

ನಂತರ ಕೇರಳದ ತ್ರಿಶ್ಶೂರು, ಮೈಸೂರು ರಂಗಾಯಣದ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡುವ ಜತೆಗೆ ರಾಜ್ಯದಾದ್ಯಂತ ನಾಟಕಗಳಲ್ಲಿ ಭಾಗವಹಿಸುತ್ತಿದ್ದ ನಟರಾಜ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಾಟಕ ವಿಭಾಗದ ಸಂಯೋಜಕರಾಗಿ ಸೇರಿಕೊಂಡ ನಂತರ ಧಾರವಾಡದಲ್ಲೇ ನೆಲೆನಿಂತರೂ, ನಾಟಕ, ಸಿನಿಮಾ, ಕಿರುತೆರೆ ಎಂದು ಊರೂರು ಸುತ್ತುತ್ತಲೇ ಇದ್ದರು. 'ಮ್ಯಾಳ' ಎಂಬ ರಂಗತಂಡವನ್ನು ಚಂದ್ರಶೇಖರ ಪಾಟೀಲರ ಸಹಕಾರದಲ್ಲಿ ಧಾರವಾಡದಲ್ಲಿ ಶುರುಮಾಡಿ 'ಕೃಷ್ಣ ಪಾರಿಜಾತ', 'ಕುಂಕುಮ', 'ಬೂರ್ಜ್ವಾ ಜಂಟಲಮನ್' ಮುಂತಾದ ನಾಟಕಗಳ ನಿರ್ದೇಶನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಾಜಿ ಸಚಿವ ಎಂ.ಪಿ. ಪ್ರಕಾಶ್ ಅವರು ನಟರಾಜ

ಸಾರಥ್ಯದಲ್ಲಿ ತಮ್ಮ ರಂಗಭಾರತಿ ತಂಡದಿಂದ ಒಂದು ರೆಪರ್ಟರಿ ಆರಂಭಿಸಿ ಒಂದು ವರ್ಷ ನಡೆಸಿದರು. ರೆಪರ್ಟರಿಯೊಂದಕ್ಕೆ ಬೇಕಾದ ಸಿದ್ಧತೆ ಇಲ್ಲದೆ ಆ ಪ್ರಯತ್ನ ಅರ್ಧದಲ್ಲೇ ನಿಂತುಹೋಯಿತು.

ನಟರಾಜನ ಅದ್ಭುತ ನಟನಾ ಪ್ರತಿಭೆಯ ಒಳಗೇ ಒಬ್ಬ ನಿರ್ದೇಶಕ ಇದ್ದ. ಅವರೊಳಗಿನ ನಟ – ನಿರ್ದೇಶಕ ಪೈಪೋಟಿಗೆ ಬೀಳುತ್ತಿದ್ದರು. 'ಹಳ್ಳಿಹುಡುಗಿ', 'ಹಣ್ಣೆಲೆ ಹಸಿರೆಲೆ', 'ತದ್ರೂಪಿ', 'ಜಗಜ್ಯೋತಿ ಬಸವೇಶ್ವರ' ಮುಂತಾದ ಹತ್ತಾರು ನಾಟಕಗಳನ್ನು ನಟರಾಜ ನಿರ್ದೇಶಿಸಿದ್ದರು. 'ಇದು ಎಂತಾ ಲೋಕವಯ್ಯಾ', 'ಕಿನ್ನರಿ' ಧಾರಾವಾಹಿಗಳನ್ನು ಕಿರುತೆರೆಗಾಗಿ ನಿರ್ದೇಶಿಸಿದರು. ಚಿತ್ರ ನಿರ್ದೇಶಕ ನಾಗಾಭರಣರ 'ನಾಗಮಂಡಲ', 'ವಿಮೋಚನೆ', 'ನೀಲಾ', 'ಸಿಂಗಾರೆವ್ವ ಮತ್ತು ಅರಮನೆ' ಸೇರಿದಂತೆ ಹತ್ತಾರು ಚಲನಚಿತ್ರಗಳ ಸಹ ನಿರ್ದೇಶಕರಾಗಿ ದುಡಿದರು. ನಿರ್ದೇಶಕ, ನೇಪಥ್ಯ ರಂಗಕರ್ಮಿಯಾಗಿ ದುಡಿದರೂ ಅವರೊಳಗಿನ ನಟನೇ ಒಂದು ಕೈ ಮಿಗಿಲಾಗಿಬಿಡುತ್ತಿದ್ದ.

'ವಿಗಡ ವಿಕ್ರಮರಾಯ', 'ಮ್ಯಾಕ್‌ಬೆತ್', 'ತದ್ರೂಪಿ', 'ನಾ ತುಕಾರಾಮ ಅಲ್ಲ', 'ನಟಸಾಮ್ರಾಟ' ನಾಟಕಗಳ ಅವರ ಅಭಿನಯ ಅವರಿಗೇ ಸಾಟಿ. 'ಸಂಕ್ರಾಂತಿ' ಧಾರಾವಾಹಿಯ ಶೇಷಪ್ಪನ ಪಾತ್ರ, 'ಮಹಾನವಮಿ' ಧಾರಾವಾಹಿಯ ದೇಸಾಯಿ ಧಣಿಗಳ ಪಾತ್ರದ ಅಭಿನಯ ಕಿರುತೆರೆ ವೀಕ್ಷಕರಿಗೆ ಅಚ್ಚಳಿಯದ ನೆನಪು.

ರಾಜ್ಯ ಸರ್ಕಾರ ಕಳೆದ ವರ್ಷ ಧಾರವಾಡದಲ್ಲಿ ರಂಗಾಯಣ ಆರಂಭಿಸಿದಾಗ ಅದರ ನಿರ್ದೇಶಕರಾಗಿ ನಟರಾಜರನ್ನು ನೇಮಕ ಮಾಡಿತ್ತು. ಧಾರವಾಡದ ರಂಗಾಯಣದ ಗಡಿ ಎಲ್ಲಿಯವರೆಗೆ ಎಂಬುದು ನಿಗದಿಯಾಗಿಲ್ಲ ಎಂದು ಹೇಳುತ್ತಲೇ ಹಲವು ಕನಸುಗಳನ್ನು ನಟರಾಜ ಕಟ್ಟಿಕೊಂಡಿದ್ದರು.

ಉತ್ತರ ಕರ್ನಾಟಕ ಭಾಗದೊಳಗೆ ಜಿಲ್ಲಾ ನಾಟಕೋತ್ಸವಗಳನ್ನ ಮಾಡಬೇಕು. ಹಂಗ ಮಾಡುವಾಗ ಆಯಾ ಜಿಲ್ಲೆ ರಂಗಕರ್ಮಿಗಳನ್ನು, ನಾಟಕಕಾರರನ್ನು ಒಳಗೊಳ್ಳಬೇಕು... ರಂಗಶಿಕ್ಷಣ ಕೇಂದ್ರಗಳು ಹಳೇ ಮೈಸೂರು ಭಾಗಕ್ಕ ಹೆಚ್ಚು ಸೀಮಿತ ಆಗ್ಯಾವು... ಅಗದೀ ಅವಶ್ಯವಾಗಿ ಧಾರವಾಡ ಅಥವಾ ಬೆಳಗಾವಿಗೆ ಒಂದು ರಂಗಶಿಕ್ಷಣ ಕೇಂದ್ರ ಆಗಬೇಕು... ಮಹಾರಾಷ್ಟ್ರದೊಳಗೆ ಶಿವಾಜಿ ಕುರಿತು 'ಜಾಣತಾರಾಜ' ಅನ್ನೊ ಬೃಹತ್ ನಾಟಕ ಮಾಡತಾರ. ಅದು ರಂಗಮಂದಿರದಾಗ ಪ್ರಯೋಗ ಆಗೂದಿಲ್ಲ, ಬಯಲೊಳಗೆ ಆಗತೈತಿ. ಜೀವಂತ ಆನಿ, ಕುದುರಿ ರಂಗದ ಮ್ಯಾಲ ತರತಾರ. 'ಕಿತ್ತೂರು ಚೆನ್ನಮ್ಮ'ನ ಬಗ್ಗೆ ಇಲ್ಲಿ ಅಂತಾದೊಂದು ಪ್ರಯೋಗ ಮಾಡಬೇಕು... ಮಕ್ಕಳ ನಾಟಕೋತ್ಸವ, ಜಾನಪದ ನಾಟಕೋತ್ಸವ ಮಾಡಬೇಕು... ವೃತ್ತಿರಂಗಭೂಮಿಯ ಅತಿರೇಕಗಳನ್ನು ಕೈಬಿಟ್ಟ ನಾಟಕೋತ್ಸವಗಳು ಆಗಬೇಕು...'

–ಹೀಗೇ ಹತ್ತಾರು ಕನಸುಗಳನ್ನು ರಂಗಾಯಣದ ಬಗ್ಗೆ ಕಟ್ಟಿಕೊಂಡಿದ್ದ ಈ ಕನಸುಗಾರ ಏಕೆ ಅರ್ಧಕ್ಕೆ ಎದ್ದು ಹೋಗಿಬಿಟ್ಟ. ಅಕಾಲ ಮರಣವಪ್ಪಿದ್ದು ಏಕೆ?

ರಂಗದ ಮೇಲೆ ತೋರುತ್ತಿದ್ದ ಶಿಸ್ತು, ಶ್ರದ್ಧೆ ಅವರ ವೈಯಕ್ತಿಕ ಜೀವನದಲ್ಲಿ ಇರಲಿಲ್ಲ. ಹಾಗಾಗಿಯೇ ನಟರಾಜ ಅಕಾಲ ಮರಣವನ್ನೊಪ್ಪಿದರೆ? ಹಾಗಂತ ಬಹುತೇಕರು ಹೇಳುತ್ತಾರೆ. ಆದರೆ ಅದಕ್ಕೆ ಎರಡು ದಿನ ಹಿಂದೆ ನಿಧನರಾದ ಕೊಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯ ಕನ್ನಡ ವಿಭಾಗದ ಮುಖ್ಯಸ್ಥ ಜಿ. ಕುಮಾರಪ್ಪ ಬಸಾಪುರ ಅವರು ತಮ್ಮ ಖಾಸಗಿ ಜೀವನದಲ್ಲಿ ಅಪಾರ ಶಿಸ್ತನ್ನು ಅಳವಡಿಸಿಕೊಂಡಿದ್ದವರು. ಕಾಫಿ ಚಹಾವನ್ನೂ ಕೂಡಾ ಮುಟ್ಟುತ್ತಿರಲಿಲ್ಲ. ನಟರಾಜ ತೀರಿಕೊಂಡ ಎರಡು ದಿನ ಹಿಂದೆಯಷ್ಟೇ ಅವರೂ ತಮ್ಮ 55ರ ವಯಸ್ಸಿನಲ್ಲಿ ತೀರಿಕೊಂಡರು.

ನಟರಾಜರ ಅಕಾಲ ಮರಣಕ್ಕೆ ಚಲನಚಿತ್ರ, ಕಿರುತೆರೆ ನಿರ್ದೇಶಕ ಬಿ. ಸುರೇಶ್ ಹೀಗೆ ಹೇಳುತ್ತಾರೆ: 'ನಟರಾಜನ ಅಭಿನಯ ಸಾಮರ್ಥ್ಯ ಎಂತಹ ಅಗಾಧವಾದುದೆಂದರೆ ಅವನ ನಟನೆಗೆ ಸಾಟಿಯಾದ ನಾಟಕಗಳ, ಪ್ರದರ್ಶನಗಳ ಕೊರತೆ ಉಂಟಾಯಿತು. ಇದರಿಂದ ನಟರಾಜನಲ್ಲಿ ಭ್ರಮನಿರಸನ ಉಂಟಾಯಿತು.' ಈ ಫ್ರಸ್ಟ್ರೇಶನ್ ಕೂಡ ಸಾವಿಗೆ ಕಾರಣ ಇರಬಹುದಲ್ಲವೆ?

ಅಕಾಲ ಸಾವಿಗೆ ಕಾರಣಗಳನ್ನು ಹುಡುಕುವುದು ಹೇಗೆ? ಅದಕ್ಕೊಂದು ನೆಪ ಇರಬಹುದು, ಅಷ್ಟೆ. ಆದರೆ ಇಂತದ್ದಕ್ಕೇ ಸತ್ತರು ಎಂಬುದಕ್ಕೆ ಕಾರಣಗಳಿಲ್ಲ! ಸಾವು ಸಾವು ಅಷ್ಟೇ!

ನೂರು ಸಮೀಪಿಸುತ್ತಿರುವ ಬಾಳಪ್ಪ 54 ವಯಸ್ಸಿನ ತಮ್ಮ ಮಗನ ಮಣ್ಣು ಮಾಡಬೇಕಾಯಿತಲ್ಲ? ಬಾಳಪ್ಪನವರ ಇತರ ಮಕ್ಕಳು ಬದುಕಿನಲ್ಲಿ ಭದ್ರವಾಗಿ ನೆಲೆನಿಂತಿದ್ದಾರೆ. ಅಭಿನಯ ಲೋಕದ ಅನಿಶ್ಚಿತತೆಯನ್ನು ಅಪ್ಪಿಕೊಂಡ ನಟರಾಜನ ಜೀವನದ ಭದ್ರತೆ ಬಗ್ಗೆ ತಂದೆ ಹೃದಯ ಸದಾ ಮಿಡಿಯುತ್ತಿತ್ತು. ಪುತ್ರಶೋಕ ನಿರಂತರ ಎಂದರೆ ಇದೇ ಇರಬೇಕು.

* * *

ಜವರಾಯ ಬಂದರೆ ಬರಿಗೈಲಿ ಬರಲಿಲ್ಲ.. ಒಳ್ಳೊಳ್ಳೆ ಮರನ ಕಡಿಬಂದ...

*(ಕೃಪೆ: ಸುಧಾ, ಜುಲೈ 2012)*

■

# ಶಕ ಪುರುಷ ! ಅತೀ ಹರುಷ

● *ಕೆ.ಜಗುಚಂದ್ರ*

ಶತಮಾನ ಕಂಡ ಶಕ ಪುರುಷ
ಇದ ಕಾಣ್ವ ಕಂಗಳಿಗೆ ಹರುಷ ..ಪ..
ಶಕ ಪುರುಷ ! ಅತೀ ಹರುಷ ॥ ಅ.ಪ ॥

ರಂಗ ಲೋಕದ ರಂಗನು ಬರಿಸಿ
ರಸ ರುಷಿಯ ಮೆರಗು ಹರಿಸಿ
ಭವ ಭಾಗ್ಯ ಬಾಂಧವ್ಯ ಇರಿಸಿ
ಜನ ಮನದ ಸಂತೋಷ ಕರಿಸಿ
ಶಕ ಪುರುಷ ! ಅತೀ ಹರುಷ ॥ 1 ॥

ತೊಟ್ಟಿಲೊಳು ತೂಗವ ಕಂದನಂತೆ
ಚಂದನದ ಪರಿಮಳ ಸೂಸುವಂತೆ
ಧರೆಯೊಳಗೆ ಮೆರೆದ ದೇವನಂತೆ
ಬಸವಾದಿ ಶರಣರ ಕಾಣುವಂತೆ
ಶಕ ಪುರುಷ ! ಅತೀ ಹರುಷ ॥ 2 ॥

ತಾಯಿಯ ತಾಳ್ಮೆ ಅಭಿನಯ ಜಾಣ್ಮೆ
ವೃತಿ ಪರದೆಯ ಮಂಚದ ಮೇಲೆ
ಗಾಯನ ಗುಂಗು ಮಾತಿನ ಮೋಡಿ
ಇಂದಿಗೂ ಅಮರ ಮರೆಯದ ಸಮರ
ಶಕ ಪುರುಷ ! ಅತೀ ಹರುಷ ॥ 3 ॥

ನೂರರ ಅಂಕ ಎಲ್ಲಿದೆ ಬಿಂಕ
ಸವಿದಂತೆ ಸವಿ ಜೇನಿನಾಮೃತ
ವಿನಯಕೆ ಮೂಲ ಬೀಸಿದ ಜಾಲ
ಹೃದಯದಿ ಹರಿಯುವ ಮಧುಪಾನ
ಶಕ ಪುರುಷ ! ಅತೀ ಹರುಷ ॥ 4 ॥

■

# ನಾಡು ಕಂಡ ನಾಟಕ ರತ್ನ

● ಎಸ್.ಎಸ್. ಚಿಕ್ಕಮಠ

ಜಗಜ್ಯೋತಿ ಬಸವಣ್ಣನ ಖ್ಯಾತಿ
ಈ ಶತಮಾನದ ಕಲಾ ಜ್ಯೋತಿ
ನಾಟ್ಯ ರಂಗದ ಮಹಾ ದಂತ ಕಥಿ
ತಾನಾಗಿ ಬಾಳುಂಡ ಬಾಳಪ್ಪ ಏಣಗಿ

ಎತ್ತರಲ್ಲದ ಎತ್ತರದ ನಿಲುವು
ಎತ್ತೆತ್ತರ ರಂಗ ಸಾಧನೆಯ ಗೆಲವು
ಚಿತ್ತಾರ ಬರೆದಂತೆ ಆ ಮುಗ್ಧನಗುವು
ಮತ್ತ್ಯಾರಿಗಿಲ್ಲಾ ರಂಗ ನೂರರಾ ಸಂಭ್ರಮವು .

ಬಿಳಿ ಅಂಗಿ ಬಿಳಿ ಧೋತರ
ಬಿಳಿ ರುಮಾಲು ಗರಿ ಗರಿ
ಕಳೆದೆಲ್ಲಾ ವರು ವರುಷಗಳು
ರಂಗ ಸಂಘದ ಸಿರಿ ಗರಿಗಳು

ಒಂದಲ್ಲಾ ಎರಡಲ್ಲಾ ನೂರಾರು ಪಾತ್ರಾ
ಬಂದಲ್ಲಾ ನೋಡಿದಾ ಕಣ್ಗಳೇ ಪವಿತ್ರಾ
ನಂದಲ್ಲಾ ನಿಂದಲ್ಲಾ ಸರ್ವರಾ ಅಭಿಮತಾ
ಅಂದಲ್ಲಾ ಇಂದಲ್ಲಾ ಎಂದೆಲ್ಲಾ ಸಹಮತಾ

ನೂರರಾ ಸಂಭ್ರಮದಾ ಈ ಅಜ್ಜ ಬಾಳಪ್ಪ
ಆರ್ಕೋಟಿ ಕನ್ನಡಿಗರ ಕಣ್ಮಣಿ ಈ ಬಾಳಪ್ಪ
ನಾಟ್ಯ ರಂಗದ ಭೀಷ್ಮ ನಮ್ಮ ಈ ಬಾಳಪ್ಪ
ನಾಡು ಕಂಡ ನಾಟಕ ರತ್ನ ಈ ಬಾಳಪ್ಪ

■



# Tower amid crumbling theatre companies

● *G.N. Mohan*

***A firm believer that drama should never impose any message, Balappa's plays always attempted to analyse social happenings.***

YENAGI, a sleepy village in Belgaum district bordering Dharwar has contributed enormously to the Kannada professional theatre. Of all its contributions stands out the towering figure of Yenagi Balappa.

"I am from Belgaum, where Kittur Chennamma's determination and courage has left an indelible impression on every household. I think it was this determination which helped me manage my drama troupe all these days," says Yenagi Balappa. In his more than 50 years of association with professional theatre, Balappa has tasted both its ups and downs.

Dharwar, Hubli, Gadag, and Belgaum have contributed enormously

to the growth of Kannada professional theatre. In its history pioneered by Sakkari Balacharya's Krithapura Nataka Mandali, Gadag stands out as a milestone.

When professional theatre with its elaborate sets and emphasis on realism was in danger of extinction, Yenagi Balappa attempted to rejuvenate it by trying to bridge the gap between it and amateur theatre. It was sheer guts which made him run his company for 37 long years.

In the early forties Balappa was running Vaibhavashali Nataka Sangha in association with N.S. Jaagirdar. It was in 1947 that he started his own troupe, Kalavaibhava Natya Sangha. *Jagajyothi Basaveshwara, Kittur Chennamma, and Shala Master* were some of his famous plays.

A versatile actor, Yenagi Balappa was also a good singer. His female roles were legendary. During the freedom struggle, Balappa's company was staging *Kittur Chennamma* in Belgaum when the play had to be stopped halfway due to police interference. Immediately an enraged Kittur Chennamma in her regal attire, fuming with rage, visited the police station followed by a mob which had trickled out of the auditorium. When the woman took the police officer to task, he had to hastily retreat as he could not recognise the woman who was Balappa himself.

A firm believer that drama should never impose any message, Balappa's plays always attempted to analyse social happenings. During the notorious Emergency period of 1975-77 when the Government had successfully browbeaten every sort of media, Balappa was not one to be easily cowed down. His *Kittur Chennamma* which exhorted the people to fight injustice enraged the authorities, who successfully managed to stall his troupe from performing for a few months.

Balappa downed his company's shutters in 1983. Even now, at the ripe age of 101, his love for professional theatre is an passionate as it was decades ago. It takes him even now to every nook and corner of the State. In an interview with Deccan Herald, Yenagi Balappa threw light on some of the problems ailing Kannada professional theatre.

**GNM - Why is professional theatre slowly disappearing?**

YB - Amateur theatre has grown into a very influential movement. The content, direction and performance of these plays have a fresh appeal.

The audience, most of them young, found professional theatre stale and drifted away from it. Professional theatre could not even retain the elderly audience which expected the same old mythological and historical plays.

Aiming at profits, professional theatre created a fantasy-filled aura, thereby relegating freshness to the background. With investments increasing, the returns never remained the same. With other media like cinema and television weaning away audience, the companies inevitably began crumbling.

**GNM - What made your company, with a 40 year history, close down?**

YB - Our company pursued the orthodox path. Attempting to change the outlook of professional theatre we experimented a lot. As in amteur theatre, grand "sceneries" gave way to cut-outs. But the audience never accepted these experiments. Nataraj Yenagi from our company, a diploma holder from Neenasam of Heggodu, directed *Athani Shivayogi* in the experimental style. Our audience could not digest this.

**GNM - What do you think of your new experiments?**

YB - Amatuer theatre has always staged experimental plays. With theatre not being their profession the harm they in the process is negligible. But hteatre being our profession, the effect it has on us is crucial.

We could have waited for our experiments to create a new audience, but we faced hurdles in our company itself. Even the actors did not accept the change. Theatre was their sole breadwinner. It was a clash between heritage and experimentation. There are no chances to wait and see, in professional theatre.

**GNM - What do you say about street theatre?**

YB - I believe that theatre should never impose a message. It was only when experimental drama lost its audience did the concept of taking theatre to the streets originate. Only if messages are carried amidst glitter and colourful scenery is the audience ready to accept them. A message should be like a quinine pill, with plenty of sugar coating.

■



# The grand old man of Kannada theatre

● *Shubha Srikanth*

*Balappa was greatly appreciated by many leading singers of the day such as Deenanath Mangeshkar (father of Lata Mangeshkar).*

ENAGI Balappa is perhaps little known to those outside the niche world of Kannada theatre. Even within theatre circles, he has not been much heard or seen since he wound up his theatre company in 1983 after a glorious existence for 36 years. He is the grand old man of Kannada theatre and the last living link to the century old hoary theatre tradition that began in Karnataka with an all time great league of actors such as AV Varadachar, Garud Sadashiva Rao, T Raghavachar and Mohammad Peer.

The unrelenting enthusiasm he exudes, his upright, graceful gait, sharp sight, sonorous voice that modulates to

the dramatic variations of pitch of complex musical notes only belie the fact that he has almost touched 90.

As he journeyed down memory lane to unfold his experiences as a professional stage actor and director for seven decades and owner of several theatre companies in North Karnataka, he also gave a glimpse into the world of Kannada theatre as it evolved over the past century in North Karnataka.

Balappa who hails from Enagi, in Belgaum district, even as a young boy, used to attend several *bhajane, bayalata* and *harikatha* sessions in his village. When he was studying in the third grade, the village folks were practicing to perform the *Bhakta Markandeya bayalata.* Balappa accompanied his brother, who had secured the role of Ganesha, to the practice sessions. When his brother's absence at one of the practice sessions provoked the hire of the elders, Balappa offered to enact the role. He performed with such elan and delivered the dialogues with ease and efficiency that the initial scorn of the elders turned to awe and admiration. "This incident severed my borther's ties with theatre and marked the beginning of a life-long association with it for me," points out Balappa. Though he was forced to discontinue studies after class three, to which he was to never return, he continued to perform child roles in various plays.

Young Balappa was once offered the female role of Kausalya in Lava-Kusha. Consequently, Kausalya happened to be younger than the lead actors Lava and Kusha! "This might sound funny today. During those days, roles were assigned not based on age, but on merit and capability," explains Balappa. Henceforth, he played several female roles such as Taramati, Draupadi, Rudramma and Chennamma. The role of Hemareddy Mallamma brought him fame. Until almost the 1930s, no woman would perform on stage. The leading male actors of the day also performed the female roles.

When he was eleven, he performed the role of Bharat's servant in the play *Paduka Pattabhisheka* staged by a theatre company in the neighbouring village.

Impressed with the play, Balappa carried a copy of the book back to

his village. He gathered a troupe of actors, assumed the role of Bharata and directed the play, besides composing music! When staged, the play received rave reviews from his village and the neighbouring ones.

His tenure with professional theatre began when the actor in the lead role of Bharata in *Paduka Pattabhisheka* did not run turn up. The director, Shivalinga Swami had Balappa brought from Enagi to perform the role. Later, Shivalinga Swami established his own company, and Balappa performed in such productions as *Chandra Grahana, Kitturu Chennamma* and *Jagajyothi Basaweshwara.*

Like all professional theatre actors of yesteryears, acting and singing were innate to Balappa. Plays were essentially musicals and a good singer would automatically qualify as an actor. Despite being a good singer, Balappa paled in comparison to qualified singers, primarily because of a lack of professional training. Recalling the incident that prompted him to take music lessons, he says, "During the performance of *Hemareddy Mallamma,* Badshah Master, a fellow-actor, received applause for his songs whereas I received none. I felt insulted. Immediately I started taking lessons from Badshah Master himself."

Thereafter, Balappa was greatly appreciated by many leading singers of the day such as Deenanath Mangeshkar (father of Lata Mangeshkar). Recounting an interesting episode that attracted Mangeshakar's appreciation Balappa says "withour my knowledge, the promotions for *Veerarani Rudramma* claimed that I would sing in the style of the famous singer of Maharashtra, Deenanath Mangeshkar. On hearing this, he got angry as I had never been his student. He informed us that he would attend the play to verify the facts. However, eventually he was very impressed and acknowledged my talent."

Shivalinga Swami played an important role in moulding the actor in Balappa. About Swami, Balappa says, "he was an able actor and director, with an unrelenting quest to experiment and always churned out revolutionary plays. When the struggle for Indian independence was gaining momentum in the 30s and 40s, he contributed to the struggle by attacking the British and their policies in an oblique and sublte manner through his plays."

Balappa set up 'Kittur Nataka Sangeetha Mandali' in 1936, 'Vaibhavashali Natya Sangha' in 1941 and finally 'Kalavaibhava Natya Sangha' in 1947, which staged productions until almost 1980s. Interestingly, during the early 1950, productions of Kalavaibhava Natya Sangha had posed a threat to cinema, which otherwise had begun to cause substantial damage to theatre companies.

Like any sensitive artist, Balappa also responded to the socio political milieu of his times. He espoused several social causes through his plays. His greatest contribution thoguh, was towards the Indian independence movement itself. During the pre-independence period, theatre was widely used as a medium of disseminating patriotic fervour and vital infomation regarding revolutionary activities, and the companies often gave refuge to revolutionaries in times of crisis.

Balappa recounts an incident when he protected Chennappa Vali and fellow revolutionaries who had planned to rob the police of their arms during the 1942 Quit India Movement. The police were somehow tipped off and were in search of them. During the performance of *Pathani Pasha,* the revolutionaries entered the theatre seeking protection. "Though we knew that protecting them would be very dangerous, we nevertheless hid some of them in the huge trunks meant for costumes and sets, dressed up others, complete with makeup and costume. The police came, searched, and left."

In the guise of historical plays, Balappa often made pointed political statements. Historic haracters were equated with political leaders. For instance, the Pandavas and Kauravas were equated with the Indians and the British; Krishna was Gandhi and so on. After the country gained independence, it was the cause of unification of Karnataka that found expression through his plays *Karnataka Ekikarana* and *Mava Bandanappo Mava.*

However, it was his lead role in *Jagajyothi Basaveshwara* that took him to the peak of success in his career. His performance was appreciated by the likes of General Kariappa, S Nijalingappa and G P Rajaratnam. Attributing his success to Shivalinga Swami Balappa notes, "I still

remember what he told me. An actor while performing must internalise the role he is playing and become the role itself."

With 208 performances to its credit in Hubli, *Jagajyothi Basaveshwara* broke records of professional Kannada theatre those days, as the longest running play in a single location. It was also during the period that he was conferred the title 'Natya Bhushana' by the 'Rasika Vrinda' of Hubli.

Balappa is the recipient of the State and Central Sangeetha Natak Academy awards, the first Gubbi Veeranna award and the National Award in 1994.

Though Balappa has retired from active theatre, he is now engaged with bringing out casettes of *Ranga Sangeetha,* a project undertaken by the Department of Kannada and Culture. It is amazing to learn that even at the age of 90 he is able to sing from memory more than 350 songs of the bygone era. This project will be a unique archival treasure that will serve the continuity of the tradition of Kannada theatre.

**Shubha Srikanth**

journeys down memory lane with Enagi Balappa to unfold his experiences as a professional stage actor and director for seven decades and glimpses into the world of Kannada theatre as it evolved over the past century in North Karnataka

*(Courtesy: Deccan Herald, 28-9-2003)*

■



# Portrait of the artist as a young woman

● *Gudihalli Nagaraja*

*The company theatre will not go to seed because the middle class could still patronise it.*

In well over six decades as an actor and drama company proprietor, Enagi Balappa represented the best in Kannada company drama. Excelling in singing and playing female roles (it was then taboo to employ women in drama), he became in course of time a legendary actor and a theatre company owner. Unlike many of his peers, Balappa's monumental contribution to drama has now been recognised by the Central Sangeet Natak Academy through its most prestigious Gubbi Veeranna Award.

It was during the halcyon days of company drama in the second decade of this century the Balappa was born

into a peasant family in Enagi village in Saundatti taluk of Belgaum district. Fascinated by company drama at the tender age of seven, Balappa left school and put himself in the hands of Shivalinga Shastry, who was directing plays for company drama troupes. In those days, no one could become an actor unless he had a good voice. As a matter of fact, it was through company drama that Hindhusthani music became popular in north Karnataka. Balappa had a supple body and a tender, melliflous voice.

When he was working in Shastry's Sirsi Marikamba Company, Balappa, who was just 15, got a change to play the female lead in a play entitled *Kittur, Rudramma.* With his singing skills, lithe body and simulated feminine charms and grace, he earned for sometime the nickname of Rudramma. In later plays too, he got stereotyped in female roles.

Shastry's company folded up one not-so-fine day. Balappa was just 17 years old at the time. Undeterred, he, along with Sudi Channappa, started a company called Guru Seva Sangeetha Nataka Mandali. After three years, this company too went out of business. Balappa then worked in the famous drama companies of Gokak and Jamakhandi. In several historical, mythological and social plays he played female roles very competently. Though by then drama, some companies continued to use male actors for female roles. The companies that Balappa for all women for female roles. But in the 1950s, capable actresses like Subhadramma Mansur and Lakshmibai entered the field and Balappa stopped playing female roles. He later played the lead roles in several plays. The most memorable among them was Basaveshwara, which was written by Joshi. The play incorporated elements from the works of PhaGu Halakatt, Chikkodi Shivalinga Shastry and Joladarashi Doddanagouda. Balappa immersed himslef so completely in the pious role of Basaveshwara, the 12th century *vachanakara,* that the play was staged innumerable times and he earned for himself the title "Kaligaalada Basaveshwara".

Another important play was *Kumkuma,* which dealt with the then sensitive theme of widowhood. He had got the play specially written by Mahathesh Shastry, a noted writer who wrote plays on social problems.

Balappa played the female lead in this play also. During the freedom struggle Balappa gave shelter to political fugitives in his company by passing them off as his employee. When the Mahajan Comission on the border dispute visited Belgaum, Balappa repeatedly staged Kannada plays in Belgaum to strengthen karnataka's case for the inclusion of Belgaum. He also staged Kannada plays for over a year in Ichalakaranji in Maharashtra. However, he burnt his fingers when he put on stage an experimental play called *School Master.* Unlike many of his contemporaries, he did not go into a shell after cinema dealt a body blow to company drama. He continued to move with the times through his association with Sriranga, the stalwart of modern Kannada theatre.

Apart from his modernist concerns which were unsusal for a company drama practitioner, one of his central concern was of course to help creat a Vishala Karnataka incoroporating all Kannada speaking regions that had been torn as under and merged in Bombay, Hyderabad and Madras regions. Being a native of Belgaum as his mite towards Karnataka cause, he staged a curiously titled play called *Mava Bandnapo Mava* speaking man trying a break a Kannadiga family by marrying off his daughter into it. But the young husband realises the nefarious design of his *Mava* (father-in-law) and manages to keep his family intact. Whatever the merits of the play, it proved to be a big hit with the Kannadigas.

Apart from his rare aptitude for feminine roles, Balappa was a remarkable singer. He had learnt classical music and never abandoned the traditional *alapanes.* In a sense, he was last link of a forgotten tradition of theatre.

Balappa is now well over 80 years of age but has retained his action of theatre enthusiasts of Hubli and Dharwad. Like his younger friends in the organis-seminars, workshops and discussions. When he starts talking, he comes up with rare gems from his wide experience. It can safely be presumed that there is no one else in Karnataka who can relate theatre anecdotes about his contemporaries the way he does. But there is no one talk about Balappa in the same way. It is for this reason that he is often called a mobile encyclopaedia of drama.

For all his enthusiasm and generosity of heart, Balappa has always been a strict discliplinarian. In fact, he never gave room for any indisciplined actor in his company. Unlike many contemporary drama company owners, he is not bankrupt today. His son Nataraja Enagi is a good theatre actor. The latter now works in the drama department of the Kannada University at Hampi.

The '70s and '80s were indeed a period of decay for company theatre. Those who saw company dramas then would have wondered if all dramas had double meaning dialogue and obscene gestures. But Balappa never stooped to such demeaning levels. As he grew old, he handed over charge of his company drama to his son Nataraj. But his son could not manage the company in the changed circumstances and it up in 1962. This coincided with the beginning of the decline of the grand company theatre.

One of the most fascinating things about Kannada drama is the association between the vetern modern playwright Sriranga and Balappa. Sriranga too had started writing plays to try and achieve something worthwhile in company drama. The two stalwarts chalked out a three-point programme for avoiding unhealthy competition among drama companies and for revitalising drama. They were: the kavis should write plays for only the company at a time (in north Karnataka play wrights are commonly called kavis); actors and actresses of a company should be allowed to move to other companies only with the written permission of the proprietors of their company and there should be a drama company every 40 miles.

Needless to say, the idealistic programme did not work and Sriranga concluded that nothing could be achieved by trying to revitalise company drama. He even wrote a play entitled *Kattale Belaku* (Darkness and Light) ridiculing professional company theatre and associated himself with amateurs to strike a new ground. But since Sriranga's plays relied more on dialogue than on grand scenery, singing and acting, he too came to the conclusion that it was not possible to build an alternative theatre with amateurs, says Balappa, who saw a lot of Sriranga over his traumatic years.

Balappa comes up with interesting ideas about theatre. According to him, the company dreams of yore were not always relevant. Many of them dealt with burning issues. But by the '60s the company dramas went intellectually and financially bankrupt. In their frustration, the company artistes degenerated and became indisciplined. on the other hand, amateur theatre enthusiasts thought they had a monopoly of modern ideas and because of that, came to grief. All their high flown ideas went well over the heads of the peopld and so theatre has become a weaking among the arts. Asked for the remedy, Balappa says the old roots and the new sprouts should go together. The amateurs, who have new ideas, should work in tandem with company drama people.

Balappa also has interesting things to say about different aspects of drama. According to him, the onset of the cinema led to the notion that background music and character singing songs without reason would click. The company theatre also abandoned grand sets. But if satellite television is posing a threat to anything. It is to amateur theatre and not company theatre. The company theatre will not go to seed because the middle class could still patronise it. Company theatre was after all entertainment as well as education of the people, he says. He also points out that there is no unnatural dichotomy between amateur and professional drama in Maharashtra. Also, those who want mere entertainment in Maharashtra buy tickets and go to *tamasha* the same way as the people of our coastal disctricts go to yakshagana. At one time tamasha was regarded as a sub-occupation. But now it has attained the status of a discipline.

*(Courtesy: Deccan Herald, 1996)*



# 25 years on, 96-yr-old commands the stage

*Balappa had always played the role of Basaveshwara, so famously that people in the northern parts of the state still bow to him with folded hands: its Basavanna himself in front of them.*

Legends do not need aplause. When life is a manifestation of art, appreciation is rather relative. When it is the doyen, Yenagi Balappa, on stage, a standing ovation is not surprising; it is almost mandatory. A full 25 years later, the legendary Balappa, rather frail at 96 years of age, donned the greasepaint again to revive his own production of *Jagajyoti Basaveshwara* at the Ranga Shankara theatre festival.

With no faltering steps, not one hint of the frailties of age, Balappa's performance made the audience sit up in nothing but awe. The sheer brilliance of experience and talent could only evoke inspiration, and a salute.

The play, directed by Balappa's son Yenagi Nataraj, follows the life of the saint-poet Basavanna from birth, to his rise to the post of chief minister in king Bijjala's *darbar*, his reforms and renunciation. The play is peppered with his 'vachanas', thoughts and reform measures that he tried to introduce. The story culminates in a marriage between the children of Haralayya, of a low caste, and a former minister, a Brahmin. The social conditions are not such that a revolution of this gravity can be accepted; Basavanna has to renounce his post.

Balappa had always played the role of Basaveshwara, so famously that people in the northern parts of the state still bow to him with folded hands: its Basavanna himself in front of them. Quarter of a century later, when he agreed to perform once again, he wanted Haralayya's part, a role he had always wanted to play.

A little into the play, he walks in and there is a standing ovation. He starts singing in a brilliant high pitch and all other sounds become immaterial. The stage has no microphones, not that Balappa needs any. He is a different persons there: his steps are steady, voice modulation, perfect. Every time he is on stage, the awestruck audience simply has to applaud; his performance almost demands it. A stellar performance - 25 years after he last commanded the stage, and running a fever, not that it could stop him from acting.

After the play ends, another ovation. Yenagi Balappa suddenly looks frail, sitting in a chair in the middle of the stage with the rest of the cast around him. He bends over, with a third-generation Yenagi boy, also in the cast, leaning on to his chair. There is still that awe that hangs around the auditorium. The legend gets some fresh air, dips cream biscuits into a hot cup of tea. He is tired but the next show has to go on and he has to don the make-up again. When passion inspires, even age stands on the sidelines and watches, again in awe.

*(Courtesy: Times of India, 2009)*

■

# ಪ್ರಮುಖ ಘಟನಾವಳಿಗಳು

| | | |
|---|---|---|
| ಹೆಸರು | : | ಬಾಳಪ್ಪ ಕರಬಸಪ್ಪ ಏಣಗಿ |
| ತಂದೆ–ತಾಯಿ | : | ಕರಬಸಪ್ಪ ಮತ್ತು ಬಾಳಮ್ಮ |
| ಹುಟ್ಟೂರು | : | ಸವದತ್ತಿ ತಾಲೂಕಿನ ಏಣಗಿ |
| ಜನ್ಮದಿನ | : | **1914 ಜನವರಿ ತಿಂಗಳು** |
| ಶಿಕ್ಷಣ | : | **ಕನ್ನಡ 3ನೇ ಇಯತ್ತೆ** |
| ಹವ್ಯಾಸ | : | ಈಗಲೂ ಪತ್ರಿಕೆ, ಪುಸ್ತಕ ಓದು, ಸಂಗೀತ ಕೇಳುವುದು, ಸರಳ ವಿಹಾರ, ಮೊಮ್ಮಕ್ಕಳು, ಮರಿಮಕ್ಕಳೊಂದಿಗೆ ಸಮಯ ಕಳೆಯುವುದು. |
| ಪತ್ನಿ | : | ಸಾವಿತ್ರಮ್ಮ ಮತ್ತು ಲಕ್ಷ್ಮೀಬಾಯಿ |
| ಮಕ್ಕಳು | : | ಮೊದಲ ಪತ್ನಿ ಸಾವಿತ್ರಮ್ಮ ಅವರಿಂದ ಡಾ. ಬಸವರಾಜ ಏಣಗಿ, ಎಂಜಿನಿಯರ್ ಸುಭಾಷ್ ಏಣಗಿ, ನ್ಯಾಯವಾದಿ ಮೋಹನ ಏಣಗಿ, ಬಿಎಸ್‌ಸಿ ಅಗ್ರಿ ಮಾಡಿರುವ ಅರವಿಂದ ಏಣಗಿ, ರುದ್ರಮ್ಮ, ಶಕುಂತಲಾ, ಪುಷ್ಪ; ಎರಡನೇ ಪತ್ನಿ ಲಕ್ಷ್ಮೀಬಾಯಿಯವರಿಂದ ನಟ ದಿ. ಏಣಗಿ ನಟರಾಜ ಮತ್ತು ಭಾಗ್ಯಶ್ರೀ. |

## ಪ್ರಮುಖ ಪ್ರಶಸ್ತಿಗಳು

| | | |
|---|---|---|
| ನಾಟ್ಯ ಭೂಷಣ | – | 1963 |
| ನಾಟ್ಯ ಗಂಧರ್ವ | – | 1968 |
| ಬಸವತತ್ವ ಭೂಷಣ | – | 1969 |
| ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ | – | 1970 |
| ರಾಜ್ಯೋತ್ಸವ ಪ್ರಶಸ್ತಿ | – | 1973 |
| ಕರ್ನಾಟಕ ಸಾಹಿತ್ಯ ಪರಿಷತ್ ಪ್ರಶಸ್ತಿ 'ನಾಟಕ ಕಲಾ ನಿಪುಣ' | – | 1978 |

| | | |
|---|---|---|
| ಕೇಂದ್ರ ಸಂಗೀತ ನಾಟಕ ಅಕಾಡೆಮಿ | – | 1994 |
| ಡಾ. ಗುಬ್ಬಿವೀರಣ್ಣ ಪ್ರಶಸ್ತಿ | – | 1994 |
| ಹಂಪಿ ವಿವಿಯಿಂದ ನಾಡೋಜ ಪ್ರಶಸ್ತಿ | – | 2005 |
| ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ | – | 2006 |
| ಧಾರವಾಡ ಕವಿವಿಯಿಂದ ಗೌರವ ಡಾಕ್ಟರೇಟ್ | – | 2006 |
| ಆಳ್ವಾಸ್ ನುಡಿಸಿರಿ ಪ್ರಶಸ್ತಿ | – | 2007 |
| ಜೀ ಕನ್ನಡ ವಾಹಿನಿ – ಜೀವಮಾನ ಸಾಧನೆ | – | 2007 |
| ನಾಗನೂರು ಮಠದ ಸೇವಾರತ್ನ ಪ್ರಶಸ್ತಿ | – | 2010 |
| ಚಂದನವಾಹಿನಿ, ರಂಗಭಂಡಾರಿ ಪ್ರಶಸ್ತಿ | – | 2012 |
| ಸುಬ್ಬಯ್ಯನಾಯ್ಡು ಪ್ರಶಸ್ತಿ | – | 2013 |
| ರಂಭಾಪುರ ಶ್ರೀ, ಸುತ್ತೂರು | | |
| ಶ್ರೀ ಸಿದ್ಧಗಂಗಾ ಶ್ರೀಗಳಿಂದ ಸನ್ಮಾನ | – | 2013 |

**ಈ ಪ್ರಶಸ್ತಿಗಳು ಸೇರಿದಂತೆ ನೂರಾರು ಗೌರವ, ಸನ್ಮಾನ ಪ್ರಶಸ್ತಿಗಳು ಏಣಗಿ ಬಾಳಪ್ಪನವರಿಗೆ ಸಂದಿವೆ.**

## ನಾಟಕ ಕಂಪನಿ

| | |
|---|---|
| ಗುರು ಸೇವಾ ಸಂಗೀತ ನಾಟಕ ಮಂಡಲಿ | –1935–1947 |
| ವೈಭವಶಾಲಿ ನಾಟ್ಯ ಸಂಘ (ಪಾಲುದಾರಿಕೆಯಲ್ಲಿ) | |
| ಕಲಾವೈಭವ ನಾಟ್ಯ ಸಂಘ (ಸ್ವಂತ ನಾಟಕ ಕಂಪನಿ) | –1947–1983 |

## ಅಭಿನಯಿಸಿದ ಪ್ರಮುಖ ನಾಟಕಗಳು

ಜಗಜ್ಯೋತಿ ಬಸವೇಶ್ವರ
ಹಳ್ಳಿ ಹುಡುಗಿ
ಪಟಾಣಿ ಪಾಶ
ಹೇಮರೆಡ್ಡಿ ಮಲ್ಲಮ್ಮ
ಸತ್ಯ ಹರಿಶ್ಚಂದ್ರ
ಶಾಲಾ ಮಾಸ್ತರ
ಚಲೇಜಾವ್
ದೇವರ ಮಗು
ಮಾವ ಬಂದ್ನಪ್ಪೋ ಮಾವ
ಕರ್ನಾಟಕ ಏಕೀಕರಣ
ಲಂಕಾದಹನ
ಚಿತ್ರಾಂಗಧ
ಕಿತ್ತೂರು ಚೆನ್ನಮ್ಮ
ಜೈ ಪದ್ಮಾವತಿ ಮಾತಾ

20 ಸಾವಿರಕ್ಕೂ ಅಧಿಕ ಪ್ರದರ್ಶನ ಸೇರಿದಂತೆ 100ಕ್ಕೂ ಅಧಿಕ ನಾಟಕಗಳು

❖ ❖ ❖





ತಾಯಿ ಬಾಳಮ್ಮ




ನಾಟಕ ಗುರು
ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು



ಏಣಗಿ ಬಾಳಪ್ಪ



ಪತ್ನಿ ಸಾವಿತ್ರಮ್ಮ



ಏಣಗಿ ಬಾಳಪ್ಪ ವಂಶವೃಕ್ಷ



ಪುತ್ರ ಸುಭಾಷ್ ಏಣಗಿ ಪರಿವಾರ




ಪತ್ನಿ ಲಕ್ಷ್ಮೀಬಾಯಿ ಏಣಗಿ ಹಾಗೂ ಪಾಟೀಲ ಪುಟ್ಟಪ್ಪ ಅವರೊಂದಿಗೆ



ಪಂ. ಶಿವಾನಂದ ಪಾಟೀಲ, ಗಂಗೂಬಾಯಿ ಹಾನಗಲ್,
ಅಮೋಲ್ ಪಾಲೇಕರ್ ಜೊತೆ ರಂಗಗೀತೆಯ ಮಾತುಕತೆ






ಸ್ತ್ರೀ ಪಾತ್ರಗಳಲ್ಲಿ ಏಣಗಿ ಬಾಳಪ್ಪನವರು







ಯುವಕನಾಗಿದ್ದಾಗ




ಬಸವೇಶ್ವರನಾಗಿ



ಸತ್ಯ ಹರಿಶ್ಚಂದ್ರನಾಗಿ



ಮಲ್ಲಿಕಾರ್ಜುನನಾಗಿ



ಅಪ್ಪ, ಮಗ, ಮೊಮ್ಮಗ ಬಸವೇಶ್ವರ ನಾಟಕದಲ್ಲಿ



ಹರಳಯ್ಯನಾಗಿ




ಕಿನ್ನರಿ ಧಾರಾವಾಹಿಯಲ್ಲಿ
ದಿ॥ ಏಣಗಿ ನಟರಾಜ



ಮುಖ್ಯಮಂತ್ರಿ ದೇವರಾಜ ಅರಸು ಅವರಿಂದ ರಾಜ್ಯೋತ್ಸವ ಪ್ರಶಸ್ತಿ



ಗುಬ್ಬಿ ವೀರಣ್ಣನವರು ರಾಜ್ಯಪಾಲ ಧರ್ಮವೀರ ಅವರಿಗೆ ಬಾಳಪ್ಪನವರನ್ನು ಪರಿಚಯಿಸುತ್ತಿರುವುದು



ಜನರಲ್ ಕಾರ್ಯಪ್ಪನವರು ಬಸವೇಶ್ವರನ ಪಾತ್ರಕ್ಕೆ ಮೆಚ್ಚುಗೆ ಸೂಚಿಸಿದಾಗ



ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಮಾಸ್ತಿಯವರಿಂದ ಸನ್ಮಾನ



ರಾಷ್ಟ್ರಪತಿ ಶಂಕರ್‌ದಯಾಳ್ ಶರ್ಮಾ ಅವರು
ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದಾಗ



ಮುಖ್ಯಮಂತ್ರಿ ದೇವೇಗೌಡ ಅವರಿಂದ ಗುಬ್ಬಿವೀರಣ್ಣ ಪ್ರಶಸ್ತಿ ಸ್ವೀಕಾರ




ಧರ್ಮಸ್ಥಳ ವೀರೇಂದ್ರ ಹೆಗ್ಗಡೆ ಅವರಿಂದ ಆಳ್ವಾಸ್ ನುಡಿಸಿರಿ ಪ್ರಶಸ್ತಿ



ಕರ್ನಾಟಕ ರಂಗಜಾಗೃತಿ ಪರಿಷತ್ ವತಿಯಿಂದ ಬೆಂಗಳೂರಿನಲ್ಲಿ ರಂಗಭಂಡಾರಿ ಪ್ರಶಸ್ತಿ
'ಮುಖ್ಯಮಂತ್ರಿ' ಚಂದ್ರು, ಶ್ರೀನಿವಾಸ್ ಜಿ. ಕಪ್ಪಣ್ಣ, ಚಂದ್ರಶೇಖರ ಕಂಬಾರ
ಸಿ.ಆರ್. ಸಿಂಹ, ಮಲ್ಲಿಕಾರ್ಜುನ ಮಹಾಮನೆ ಇದ್ದಾರೆ



ಶತಾಯುಷಿ ಸಿದ್ದಗಂಗಾ ಶ್ರೀಗಳಿಂದ ಮತ್ತೊಬ್ಬ ಶತಾಯುಷಿಗೆ ಸನ್ಮಾನ



ದಾವಣಗೆರೆಯಲ್ಲಿ ಗುಬ್ಬಿವೀರಣ್ಣ ಪ್ರಶಸ್ತಿ ಪುರಸ್ಕೃತರ ಮೆರವಣಿಗೆ. ಏಣಗಿ ಬಾಳಪ್ಪ ಮೇಲೆ ಕುಳಿತಿರುವುದು ಬಿ.ಆರ್. ಅರಿಷಿಣ ಗೋಡಿ, ಚಿಂದೋಡಿ ಲೀಲಾ, ಮುರುಗೋಡು ರೇಣಮ್ಮ




ಬೆಳಗಾವಿ ಜಿಲ್ಲಾಡಳಿತ ಸನ್ಮಾನಿಸಿದಾಗ : ಮಾಸ್ಟರ್ ಹಿರಣ್ಣಯ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ
ಖ್ಯಾತ ಹಿಂದಿ ನಟ ಅಮೋಲ್ ಪಾಲೇಕರ್, ನಾಗನೂರು ಶ್ರೀಗಳು ಇದ್ದಾರೆ



ಸಂಗೀತಾ ಕಟ್ಟಿ ಮತ್ತಿತರ ಕಲಾವಿದರಿಗೆ ರಂಗಸಂಗೀತದ ಪಾಠ



ಡಾ॥ ರಾಜ್‌ಕುಮಾರ್ ಅವರೊಂದಿಗೆ



ಬಾಳಪ್ಪನವರಿಗೆ ನಮಸ್ಕರಿಸುತ್ತಿರುವ ಡಾ॥ ರಾಜ್





ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರೊಂದಿಗೆ



ಮಾಸ್ಟರ್ ಹಿರಣ್ಣಯ್ಯ ಅವರೊಂದಿಗೆ

'ಏಣಗಿ ಬಾಳಪ್ಪನವರು
ಸಮಕಾಲೀನ ಕನ್ನಡ
ರಂಗಭೂಮಿಯ ಭೀಷ್ಮ' ಎಂಬುದು
ಕ್ಲೀಷೆಯ ಮಾತಲ್ಲ. ಎರಡು
ಯುಗಗಳ ಕೊಂಡಿಯಾಗಿ, ಎರಡು
ರಂಗ ಪರಂಪರೆಯ
ಸಮನ್ವಯತೆಯ ಪ್ರತಿಪಾದಕರಾಗಿ
ಅವರು ನಮ್ಮೊಂದಿಗಿದ್ದಾರೆ. ಶ್ರೇಷ್ಠ
ನಟರಾಗಿ, ಬದುಕಿದ್ದಾಗಲೇ
ದಂತಕತೆಯಾಗಿರುವ ಅವರು
ನೂರು ವರ್ಷಗಳನ್ನು
ದಾಟಿರುವುದು ಕನ್ನಡ
ರಂಗಭೂಮಿಯ ಭಾಗ್ಯವೆನ್ನಬೇಕು.
ರಂಗಭೂಮಿಯಲ್ಲಿ ಶ್ರೇಷ್ಠತೆಗೆ
ಹಂಬಲಿಸುತ್ತಲೇ ಜನಪ್ರಿಯತೆಯನ್ನು
ಬಿಟ್ಟುಕೊಡದೆ, ಕನ್ನಡ ಸಂಸ್ಕೃತಿಯ
ಉಜ್ವಲತೆಯನ್ನು ತಮ್ಮ ಕಂಪನಿಯ
ನಾಟಕಗಳ ಮೂಲಕ ಎತ್ತಿಹಿಡಿದು,
ಕರ್ನಾಟಕವನ್ನು ಸಾಂಸ್ಕೃತಿಕವಾಗಿ
ಕಟ್ಟಿಬೆಳೆಸಿದ ಚೇತನಗಳಲ್ಲಿ ಅವರು
ಅಗ್ರಗಣ್ಯರು.
ಪ್ರಸಕ್ತ ಕರ್ನಾಟಕ ನಾಟಕ
ಅಕಾಡೆಮಿಯು ಏಣಗಿ
ಬಾಳಪ್ಪನವರ ಕುರಿತು ಆಕರ
ಗ್ರಂಥದ ಮಾದರಿಯಲ್ಲಿ ಈ ಪುಸ್ತಕ
ಹೊರತಂದಿರುವುದು
ಸ್ತುತ್ಯರ್ಹವಾಗಿದೆ.

ಡಾ. ಕೆ.ಮರುಳಸಿದ್ದಪ್ಪ



ಕರ್ನಾಟಕ ನಾಟಕ ಅಕಾಡೆಮಿ